
ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಆಗಸ್ಟ್, ೨೦೨೦ : ವಾರ್ಷಿಕ ವಿಶೇಷ ಸಂಚಿಕೆ

ಯುವಾಲ್ ನೊಹ ಹರಾರಿ
ರಾಬಿನ್ ಅರಿಯಾನ್‌ರೋಡ್
ಚೆನ್ನವೀರ ಕಣವಿ
ಸುಬ್ರಾಯ ಚೊಕ್ಕಾಡಿ
ವೈದೇಹಿ
ಬಿ.ಎ. ವಿವೇಕ ರೈ
ಲಕ್ಷ್ಮೀಶ ತೋಳ್ಪಾಡಿ
ಓ.ಎಲ್ ನಾಗಭೂಷಣಸ್ವಾಮಿ
ಹನೂರು ಕೃಷ್ಣಮೂರ್ತಿ
ಸತೀಶ ಕುಲಕರ್ಣಿ
ಡಿ.ಎಸ್. ನಾಗಭೂಷಣ
ರಾಜೇಂದ್ರ ಚೆನ್ನಿ
ದಿನೇಶ್ ಅಮೀನ್‌ಮಟ್ಟು
ಜಿ.ಪಿ. ಬಸವರಾಜು
ಎಚ್.ಎಸ್. ಶಿವಪ್ರಕಾಶ
ಎಲ್.ಸಿ. ಸುಮಿತ್ರಾ
ಕೆ. ಪದ್ಮಾಕ್ಷಿ
ಅಮರೇಶ ನುಗಡೋಣಿ
ಪಿ. ಶೇಷಾದ್ರಿ
ಸವಿತಾ ನಾಗಭೂಷಣ
ಸಂತೋಷ್ ಕೌಲಗಿ
ತಾರಿಣಿ ಶುಭದಾಯಿನಿ
ವಿನಯಾ
ಸುಜಾತಾ ಎಚ್.ಆರ್
ಸಬಿತಾ ಬನ್ನಾಡಿ
ಗೀತಾ ವಸಂತ
ಅವಿನಾಶ್ ಟಿ.
ಜ.ನಾ. ತೇಜಶ್ರೀ
ಎಂ. ರಾಜು
ಟಿ.ಎಲ್ ರೇಖಾಂಬ
ಬಿ.ಜಿ. ಗುಜ್ಜಾರಪ್ಪ
ವಿಜಯಶ್ರೀ ಹಾಲಾಡಿ



ಲೌಕಿಕ-ಅಲೌಕಿಕ: ಒಂದು ಜಿಜ್ಞಾಸೆ

ನಮ್ಮ ಕಾಲದ ಮುವ್ವರು ಮುಖ್ಯ ಮಹಿಳಾ ಹೋರಾಟಗಾರ್ತಿಯರು

ಸತ್ಯಜಿತ್ ರೇ: ಶತಮಾನದ ನೆನಪು

ಬೆಲೆ
ರೂ.೨೫

‘ಹೊಸಮನುಷ್ಯ’ದ ವಾರ್ಷಿಕ ವಿಶೇಷಾಂಕಕ್ಕೆ
ಹಾರ್ದಿಕ ಶುಭಾಷಯಗಳು

ಡಾ.ಜ್ಯೋತೀಸ್ ಹೆಲ್ತ್ ಕೇರ್ ಪ್ರೈ. ಲಿ.

#22, 8ನೇ ಬ್ಲಾಕ್, ಡಾ.ರಾಜ್‌ಕುಮಾರ್ ರಸ್ತೆ, ಜೆ.ಎಸ್.ಎಸ್.ಬಡಾವಣೆ,
ಶಕ್ತಿನಗರ ಅಂಚೆ, ಮೈಸೂರು-570029
ದೂ: 0821-2475869/ 2475890
ಈ-ಮೇಲ್: drjyothishealthcare@yahoo.com



Dr.Jyothi's Health Care Pvt. Ltd.
21st Century Women Hospital

ಆರೋಗ್ಯ ರಕ್ಷಣೆಗಾಗಿ
ಲಭ್ಯವಿರುವ ಸೌಲಭ್ಯಗಳು

- Pregnancy & Delivery Painless Labour (Labour Analgesia) • Laparoscopic Surgeries
- Gynaec Surgeries (Uterus removal, Tumour removal) • Post natal care • Hyseroscopy
- Ultrasound scanning (TAS, TVS, Breast Scanning) • Family Planning counseling & surgeri
- Hi-tech Laboratory • Karyotyping • Hysterosalphingography • Cancer Screening
- Menopause Clinic • Obesity Clinic Health Club • Ambulance Services

ಪುಸ್ತಕ ಪ್ರಕಾಶನ
ನಂ. 91, 9ನೇ ಮುಖ್ಯ ರಸ್ತೆ
ಸರಸ್ವತಿಪುರಂ, ಮೈಸೂರು -570 009
ಫೋನ್: 0821-2545 774

ಪುಸ್ತಕ ಪ್ರಕಾಶನ
ಬುಕ್‌ಪೋಸ್ಟ್ ಸರ್ವೀಸ್, ಪಿ.ಬಿ.ನಂ. 58
ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ – 577 132
ಮೊಬೈಲ್/ವ್ಯಾಟ್ಸ್‌ಆ್ಯಪ್: +91 94482 03730

ಪುಸ್ತಕ ಬೆಲೆ ಪಟ್ಟಿ –೨೦೨೦*

ಶ್ರೀ ಕೆ.ಪಿ.ಪೂರ್ಣಚಂದ್ರ ತೇಜಸ್ವಿ:

ಕಿರಗೂರಿನ ಗಯ್ಯಾಳಿಗಳು	..೯೦.೦೦
ಕರ್ವಾಲೊ	...೧೦೫.೦೦
ಚಿದಂಬರ ರಹಸ್ಯ	..೨೧೬.೦೦
ಸಹಜ ಕೃಷಿ	..೬೦.೦೦
ಪರಿಸರದ ಕತೆ	...೧೦೫.೦೦
ಮಿಸ್ಸಿಂಗ್ ಲಿಂಕ್	..೯೦.೦೦
ಅಲೆಮಾರಿಯ ಅಂಡಮಾನ್ ಹಾಗೂ ಮಹಾನದಿ ನೈಲ್	...೧೧೪.೦೦
ಜುಗಾರಿ ಕ್ರಾಸ್	..೨೧೬.೦೦
ಪರೋಪ್ಷೇನ್ ಚಿಟ್ಟೆ ಮತ್ತು ಇತರ ಕತೆಗಳು	..೮೭.೦೦
ಫ್ಲೈಯಿಂಗ್ ಸಾಸರ್ಸ್ (೧)	..೮೭.೦೦
ಫ್ಲೈಯಿಂಗ್ ಸಾಸರ್ಸ್ (೨)	..೮೭.೦೦
ಕಾಡಿನ ಕತೆಗಳು(೧) – ಬೆಳ್ಳಂದೂರಿನ ನರಭಕ್ಷಕ	..೭೫.೦೦
ಕಾಡಿನ ಕತೆಗಳು(೨) – ಪೆದ್ದಚೆರುವಿನ ರಾಕ್ಷಸ	..೭೫.೦೦
ಕಾಡಿನ ಕತೆಗಳು(೩) – ಜಾಲಹಳ್ಳಿಯ ಕುರ್ಕ	..೭೫.೦೦
ಕಾಡಿನ ಕತೆಗಳು(೪) – ಮುನಿಸಾಮಿ ಮತ್ತು ಮಾಗಡಿ ಚಿರತೆ	..೭೫.೦೦
ರುದ್ರಪ್ರಯಾಗದ ಭಯಾನಕ ನರಭಕ್ಷಕ	...೧೦೫.೦೦
ಕನ್ನಡನಾಡಿನ ಹಕ್ಕಿಗಳು(೧)–ಮಿಂಚುಳ್ಳಿ	...೧೦೨.೦೦
ಕನ್ನಡನಾಡಿನ ಹಕ್ಕಿಗಳು(೨)– ಹೆಜ್ಜೆ ಮೂಡದ ಹಾದಿ	..೯೬.೦೦
ಪಕ್ಕಿ – ಪುಕ್ಕ	..೪೧೧.೦೦
ಅಣ್ಣನ ನೆನಪುಗಳು	..೨೨೫.೦೦
ಪುಲಿಯೂರಿನ ಸರಹದ್ದು	...೧೦೫.೦೦
ಅಬಚೂರಿನ ಪೋಸ್ಟಾಫೀಸು	..೯೦.೦೦
ಮಿಲೆನಿಯಮ್ (೧) – ಪುದುಕಾಟ	..೮೭.೦೦
ಮಿಲೆನಿಯಮ್ (೨) – ಜೀವನ ಸಂಗ್ರಾಮ	..೮೭.೦೦
ಮಿಲೆನಿಯಮ್ (೩) – ಪೆಸಿಫಿಕ್ ದ್ವೀಪಗಳು	..೮೭.೦೦
ಮಿಲೆನಿಯಮ್ (೪) – ಚಂದ್ರನ ಚೂರು	..೮೭.೦೦
ಮಿಲೆನಿಯಮ್ (೫) – ನೆರೆಹೊರೆಯ ಗೆಳೆಯರು	..೮೭.೦೦
ಮಿಲೆನಿಯಮ್ (೬) – ಮಹಾಯುದ್ಧ(೧)	..೮೭.೦೦
ಮಿಲೆನಿಯಮ್ (೭) – ಮಹಾಯುದ್ಧ(೨)	..೮೭.೦೦
ಮಿಲೆನಿಯಮ್ (೮) – ಮಹಾಯುದ್ಧ(೩)	..೮೭.೦೦
ಮಿಲೆನಿಯಮ್ (೯) – ದೇಶ ವಿದೇಶ(೧)	..೮೭.೦೦
ಮಿಲೆನಿಯಮ್ (೧೦) – ದೇಶ ವಿದೇಶ(೨)	..೮೭.೦೦
ಮಿಲೆನಿಯಮ್ (೧೧) – ದೇಶ ವಿದೇಶ(೩)	..೮೭.೦೦
ಮಿಲೆನಿಯಮ್ (೧೨) – ದೇಶ ವಿದೇಶ(೪)	..೮೭.೦೦
ಮಿಲೆನಿಯಮ್ (೧೩) – ವಿಸ್ಮಯ ವಿಶ್ವ(೧)	..೮೭.೦೦
ಮಿಲೆನಿಯಮ್ (೧೪) – ಮಹಾ ಪಲಾಯನ	..೮೭.೦೦
ಮಿಲೆನಿಯಮ್ (೧೫) – ವಿಸ್ಮಯ ವಿಶ್ವ(೨)	..೮೭.೦೦
ಮಿಲೆನಿಯಮ್ (೧೬) – ಅಡ್ವೆಂಚರ್	..೮೭.೦೦
ಮಾಯಾಲೋಕ–೧	..೨೧೬.೦೦
ಪಾಕ ಕ್ರಾಂತಿ ಮತ್ತು ಇತರ ಕತೆಗಳು	..೮೭.೦೦
ವ್ಯಕ್ತಿ ವಿಶಿಷ್ಟ ಸಿದ್ಧಾಂತ ಮತ್ತು ಯಮಳ ಪ್ರಶ್ನೆ	..೬೦.೦೦
ಬೃಹನ್ನಳೆ ಸೋಮುವಿನ ಸ್ವಗತ ಲಹರಿ ಮತ್ತು ಇತರ ಕವನಗಳು	..೬೦.೦೦
ವಿಮರ್ಶೆಯ ವಿಮರ್ಶೆ	..೧೫೩.೦೦
ಮಾಯೆಯ ಮುಖಗಳು(ಚಿತ್ರ–ಲೇಖನ)	..೬೯೦.೦೦
ಹೊಸ ವಿಚಾರಗಳು	..೪೮೦.೦೦
ಕಾಡು ಮತ್ತು ಕ್ರೌರ್ಯ	..೧೨೦.೦೦

ಶ್ರೀ ಕೆ.ಪಿ.ಪೂರ್ಣಚಂದ್ರ ತೇಜಸ್ವಿ–ಶ್ರೀ ಪ್ರದೀಪ ಕೆಂಜಿಗೆ:

ವಿಸ್ಮಯ(೧), (೨), (೩) ಪ್ರತಿಯೊಂದು	..೮೭.೦೦
ಪ್ಯಾಪಿಲಾನ್(೧), (೨), (೩) ಪ್ರತಿಯೊಂದು	..೧೬೨.೦೦

ಶ್ರೀ ಕೆ.ಪಿ.ಪೂರ್ಣಚಂದ್ರ ತೇಜಸ್ವಿ – ಡಾ. ವಿ.ವಿ.ಬೆಳವಾಡಿ

ನಡೆಯುವ ಕಡ್ಡಿ ಹಾರುವ ಎಲೆ!	...೮೭.೦೦

ಶ್ರೀ ಪ್ರದೀಪ ಕೆಂಜಿಗೆ : ಬರ್ಮುಡಾ ಟ್ರ್ಯಾಂಗಲ್

ಬರ್ಮುಡಾ ಟ್ರ್ಯಾಂಗಲ್	...೮೭.೦೦
ಅದ್ಭುತ ಯಾನ	..೧೦೮.೦೦
ಹೆಬ್ಬಾವಿನೊಡನೆ ಹೋರಾಟ	..೧೨೦.೦೦

ಶ್ರೀ ಎಮ್. ಶಿವಕುಮಾರ್:

ಕಂಪ್ಯೂಟರ್ ಕಲಿಯಿರಿ	..೧೪೭.೦೦
ಗಣಿಯಾರ ವಿಕಾಸದ ಹಾದಿಯಲ್ಲಿ	..೬೬.೦೦

ವಿದ್ವಾನ್ ಶ್ರೀ ಕೊಳಂಬೆ ಪುಟ್ಟಣ ಗೌಡರು:

ಅಬ್ಬಿಗನ್ನಡ ನುಡಿಕೋಶ	..೩೬೦.೦೦

ಶ್ರೀ ನರೇಂದ್ರ ರೈ ದೇರ್ಲ: ಸಾವಯವ ಕೃಷಿ

ಸಾವಯವ ಕೃಷಿ	...೬೦.೦೦
ತೇಜಸ್ವಿ ಪತ್ರಗಳು	..೪೫೦.೦೦

ಶ್ರೀ ಕೃಪಾಕರ – ಸೇನಾನಿ:

ಸೆರೆಯಲ್ಲಿ ಕಳೆದ ಹದಿನಾಲ್ಕು ದಿನಗಳು	..೧೦೮.೦೦
ಕೆನ್ನಾಯಿಯ ಜಾಡಿನಲ್ಲಿ	..೧೬೨.೦೦

ಡಾ.ಎಸ್.ಎಂ. ವೃಷಭೇಂದ್ರಸ್ವಾಮಿ:

ತರಗತಿಗಳಲ್ಲಿ ಕುವೆಂಪು	..೧೯೮.೦೦

ಶ್ರೀ ದೇವನೂರು ಮಹಾದೇವ: ಕುಸುಮಬಾಲೆ

ಕುಸುಮಬಾಲೆ	....೯೦.೦೦
ದ್ಯಾವನೂರು ಹಾಗೂ ಒಡಲಾಳ	..೯೬.೦೦

ಶ್ರೀಮತಿ ತಾರಿಣಿ ಚಿದಾನಂದ:

ಮಗಳು ಕಂಡ ಕುವೆಂಪು	..೩೬೦.೦೦

ಶ್ರೀಮತಿ ಪದ್ಮಾ ಶ್ರೀರಾಮ:




ಗಿಡಗಂಟೆಯಾ ಕೊರಳು	..೭೮.೦೦


ಡಾ. ಕೆ.ಚಿದಾನಂದ ಗೌಡ:


ಬದುಕು... ಬೆಳಕು... ಚುಟುಕು...! – ಭಾಗ ೧	..೮೯.೦೦
ಬದುಕು... ಬೆಳಕು... ಚುಟುಕು...! – ಭಾಗ ೨	..೯೦.೦೦

ಶ್ರೀಮತಿ ರಾಜೇಶ್ವರಿ ತೇಜಸ್ವಿ: ನನ್ನ ತೇಜಸ್ವಿ

ನನ್ನ ತೇಜಸ್ವಿ	..೩೬೯.೦೦















*ಹೊಸ ಆವೃತ್ತಿ (Edition)
ಬರುಗಡೆಗೊಂಡಾಗ್ಯೂ ಮುಖಪುಟ ಬೆಲೆಯಲ್ಲಿ ವ್ಯತ್ಯಾಸವಿರಬಹುದು.

ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಆಗಸ್ಟ್ (ವಿಶೇಷ ಸಂಚಿಕೆ), ೨೦೨೦ ಸಂಪಾದಕ : ಡಿ.ಎಸ್. ನಾಗಭೂಷಣ ಸಂಪುಟ: ೯ ಸಂಚಿಕೆ: ೭

ಚಂದಾ ರೂ. ೩೫೦/- (೨೦೨೦ರ ಮಾರ್ಚ್‌ನಿಂದ ೨೦೨೧ರ ಸೆಪ್ಟಂಬರ್‌ವರೆಗೆ) ಪುಟ: ೭೨ ಬೆಲೆ: ರೂ. ೭೫/-

ವಿಳಾಸ: ಎಚ್.ಐ.ಜಿ.-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ *ಈ ಮೇಲ್:* dsnagabhushana@gmail.com

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,



ಪತ್ರಿಕೆಯ ಎಂಟನೇ ವಾರ್ಷಿಕ ವಿಶೇಷ ಸಂಚಿಕೆಯನ್ನು ಹೆಮ್ಮೆ ಮತ್ತು ಸಂತೋಷಗಳಿಂದ ಕೈಗಿಡುತ್ತಿದ್ದೇವೆ. ನಾಲ್ಕೈದು ವರ್ಷಗಳ ಹಿಂದೆ, ಕಷ್ಟಪಟ್ಟು ಪತ್ರಿಕೆ ಮಾಡಿ ಏನೂ ಪ್ರಯೋಜನ ಕಾಣುತ್ತಿಲ್ಲವಲ್ಲ ಎಂಬ ಜಿಗುಪ್ಸೆ ಮತ್ತು ಬಹುಶಃ ಅದರಿಂದಾಗಿ ಉಂಟಾದ ಕೊಂಚ ಅನಾರೋಗ್ಯದ ಕಾರಣದಿಂದಾಗಿ ಪತ್ರಿಕೆಯನ್ನು ಆರು ತಿಂಗಳುಗಳ ಕಾಲ ಸ್ಥಗಿತಗೊಳಿಸಿರದಿದ್ದರೆ, ಈ ಸಂಚಿಕೆ ನಮ್ಮ ಹತ್ತನೇ ವರ್ಷದ ಪದಾರ್ಪಣೆಗೆ ಮುನ್ನುಡಿ ಬರೆಯುವ ಸಂಚಿಕೆಯಾಗಿರುತ್ತಿತ್ತು. ಅದೀಗ ಆರು ತಿಂಗಳು ಮುಂದೆ ಹೋಗಿದೆ. ಆದರೆ ಜಗತ್ತನ್ನು ಕರೋನಾ ಆವರಿಸುತ್ತಿರುವ ಗತಿ ನೋಡಿದರೆ ಪತ್ರಿಕೆ ಈ ಮುಂದಿನ ಆರು ತಿಂಗಳುಗಳನ್ನು ತಡೆದುಕೊಳ್ಳುವುದೋ ಎಂಬ ಆತಂಕ ನನ್ನನ್ನು ಕಾಡುತ್ತಿದೆ. ಕರೋನಾ ಬಂದು ಆರು ತಿಂಗಳುಗಳಾದರೂ, ದೇಶಾದ್ಯಂತ ತಿಂಗಳುಗಟ್ಟಲೆ ಲಾಕ್‌ಡೌನ್ ಸಾರಿದ್ದರೂ ನಮ್ಮ ಪತ್ರಿಕೆ, ಮಾರ್ಚ್‌ನ ಲಾಕ್‌ಡೌನ್‌ನಿಂದಾಗಿ ಮುದ್ರಣಾಲಯಗಳೆಲ್ಲವೂ ಮುಚ್ಚಿದ್ದರಿಂದಾಗಿ ಏಪ್ರಿಲ್ ಸಂಚಿಕೆಯನ್ನು ಮುದ್ರಿಸಲಾಗದೆ ಅದನ್ನು ಪಿಡಿಎಫ್ ರೂಪದಲ್ಲಿ ಓದುಗರಿಗೆ ಒದಗಿಸಿದ ಹೊರತಾಗಿ, ಎಡೆಬಿಡದೆ ಪ್ರಕಟವಾಗುತ್ತಿದೆ. ಈ ಸಮಯದಲ್ಲಿ ಎಷ್ಟೋ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳ ಇಂಗ್ಲಿಷ್ ನಿಯತಕಾಲಿಕೆಗಳು ಆನ್‌ಲೈನ್ ಆವೃತ್ತಿಗೆ ಮೊರೆ ಹೋಗಿವೆ ಎಂಬುದನ್ನು ಓದುಗರು ಗಮನಿಸಬಹುದು.

ಪತ್ರಿಕೆಯ ಈ ಬದ್ಧತೆ ಸಾಧ್ಯವಾಗಿರುವುದು, ನೀವು ಹಲವರು ಪತ್ರ ಮತ್ತು ದೂರವಾಣಿ ಕರೆಗಳ ಮೂಲಕ ತಿಳಿಸಿದಂತೆ ನನ್ನ ಶ್ರದ್ಧೆಯಿಂದ ಮಾತ್ರವಲ್ಲ, ಪತ್ರಿಕೆ ಕುರಿತ ನಿಮ್ಮ ನಂಬಿಕೆ ಮತ್ತು ಆಸಕ್ತಿಗಳಿಂದ ಕೂಡ. ಹಾಗೆ ನೋಡಿದರೆ ನನ್ನ ಬದ್ಧತೆ ನಿಂತಿರುವುದೇ ನಿಮ್ಮ ನಂಬಿಕೆ ಮತ್ತು ಆಸಕ್ತಿಗಳ ಮೇಲೆ. ಏಕೆಂದರೆ, ನಾನು ಗಮನಿಸಿದಂತೆ ಈ ನಮ್ಮ ಪುಟ್ಟ ಪತ್ರಿಕೆಗೆ ಬರುವಷ್ಟು ಪ್ರಮಾಣದ (ಅದೆಷ್ಟೇ ಕಡಿಮೆ ಇರಲಿ) ಮತ್ತು ಮೌಲಿಕವಾದ ಪ್ರತಿಸ್ಪಂದನ ಸಾವಿರಾರು ಸಂಖ್ಯೆಯ ಪ್ರಸಾರವಿರುವ ಇನ್ನಾವ ಕನ್ನಡ ಪತ್ರಿಕೆಗೂ ಬರುತ್ತಿರುವಂತೆ ಕಾಣುತ್ತಿಲ್ಲ. ಮುಕ್ತ ಮಾರುಕಟ್ಟೆಯ ಈ ಕಾಲವೇ ಹಾಗೆ: ಬೌದ್ಧಿಕ ಅಥವಾ ಶೈಕ್ಷಣಿಕ ಸಂವಾದಗಳಿಗೆ ಜನಕ್ಕೆ ಆಸಕ್ತಿಯೂ ಇಲ್ಲ, ಸಮಯವೂ ಇಲ್ಲ. ಅವನ ಆಸಕ್ತಿ ಎಲ್ಲವೂ ಆದಷ್ಟು ಹೆಚ್ಚು ಅನುಭೋಗದ ಕಡೆಗೆ. ನಮ್ಮ ಪತ್ರಿಕೆ ತಾನು ನಂಬಿದ ಸಮಾಜವಾದದ ಭಾಗವಾಗಿಯೇ ಈ ಪ್ರವೃತ್ತಿ ಮನುಷ್ಯರನ್ನು ಮನುಷ್ಯರನ್ನಾಗಿ ಬಹಳ ಕಾಲ ಉಳಿಸುವುದಿಲ್ಲ ಎಂಬ ಎಚ್ಚರಿಕೆಯನ್ನು ವಿವಿಧ ದಿಕ್ಕುಗಳ ವಿಶ್ಲೇಷಣೆಗಳ ಮೂಲಕ ಜನರಿಗೆ ತಲುಪಿಸುವ ಉದ್ದೇಶದಿಂದಲೇ ಹುಟ್ಟಿಕೊಂಡಿದ್ದರಿಂದ ಇದು ಕೆಲ ಹತಾಶ ಕ್ಷಣಗಳ ನಡುವೆಯೂ, ಅವನ್ನು ದಾಟಿ., ನಡೆವ ಸ್ಥೈರ್ಯ ತೋರಿದೆ. ನಮ್ಮ ಈ ವಿಶೇಷ ಸಂಚಿಕೆಯ ಕನ್ನಡದ ಮುಖ್ಯ ಲೇಖಕ-ಲೇಖಕಿಯರನ್ನು, ಕಲಾವಿದರನ್ನು ಮಾತ್ರವಲ್ಲ, ಪೋಷಕ ನಿಧಿ ನೀಡಿರುವ ಜನರ ವೈವಿಧ್ಯವನ್ನು ನೋಡಿದರೇ ಈ ಸ್ಥೈರ್ಯ ಎಲ್ಲಿಂದ ಹುಟ್ಟಿದೆ ಎಂದು ತಿಳಿಯಬಹುದು.

ಆದರೆ ಒಂದು ಮಾತು. ಕರೋನಾ ನಮ್ಮನ್ನು ಆವರಿಸುತ್ತಿರುವ ಬಗೆಯನ್ನಾಗಲೀ, ಅದನ್ನು ನಮ್ಮ ಸರ್ಕಾರಗಳಾಗಲೀ, ಜನಸಾಮಾನ್ಯರಾಗಲೀ ಎದುರಿಸುತ್ತಿರುವ ರೀತಿ-ನೀತಿಗಳನ್ನಾಗಲೀ ಗಮನಿಸಿದರೆ ಎಂಥದೇ ಸ್ಥೈರ್ಯ ಉಡುಗಿ ಹೋಗುವಂತಿದೆ. ಕರೋನಾ ಬಿಡಿ ಬಿಡಿ ದೇಶಗಳಿಗಾಗಲೀ, ಬಿಡಿ ಬಿಡಿ ವ್ಯಕ್ತಿಗಳಾಗಲೀ ಅಂಟಿಕೊಂಡಿರುವ ಒಂದು ಸಾಮಾನ್ಯ ರೋಗವಾಗಿರದೆ, ಇಡೀ ಜಗತ್ತಿಗೆ ಅನ್ವಯವಾಗುತ್ತಿರುವ ಒಂದು ರೋಗ ಲಕ್ಷಣವಾಗಿದೆ ಎಂಬ ಮೂಲಭೂತ ಅರಿವೇ ಸರ್ಕಾರದ ನೀತಿಯಲ್ಲಾಗಲೀ, ಜನರ ಧೋರಣೆಯಲ್ಲಾಗಲೀ ಕಾಣೆಯಾಗಿದೆ. ನಮ್ಮ ಪತ್ರಿಕೆಯ ಕಳೆದ ಮೂರ್‍ನಾಲ್ಕು ಸಂಚಿಕೆಗಳಲ್ಲಿ ಪ್ರಕಟವಾದ ಜಗತ್ತಿನ ವಿವಿಧ ಕ್ಷೇತ್ರಗಳ ವಿದ್ವಜ್ಜನರ ಸಂಶೋದನೆ, ಸಮೀಕ್ಷೆ ಮತ್ತು ಅಭಿಪ್ರಾಯಗಳನ್ನಾಧರಿಸಿದ ಜಾಗತಿಕ ಅಭಿಪ್ರಾಯಗಳನ್ನು ಬಿಂಬಿಸುವ ಹಲವು ಲೇಖನಗಳೂ ಸೂಚಿಸುವಂತೆ ಕೋವಿಡ್-೧೯ ಎಂಬ ಈ ಕರೋನಾ ವೈರಾಣು ಮಹಾಮಾರಿಯಂತೆ ನಮ್ಮೆಲ್ಲರ ಬದುಕನ್ನು ದಿಕ್ಕಾಪಾಲಾಗಿ ಮಾಡಿ ಅನಿಶ್ಚಿತತೆಗೆ ದೂಡಿರಲು ಕಾರಣ, ನಾವು ಪ್ರಗತಿ ಅಥವಾ ಅಭಿವೃದ್ಧಿಯ ಹೆಸರಿನಲ್ಲಿ ಅನುಸರಿಸುತ್ತಿರುವ ಹೆಚ್ಚೆಚ್ಚು ಸುಖಗಳ ಹಂಬಲದ ಜೀವನ ಕ್ರಮದಲ್ಲಿ. ಇದರ ಹಿಂದೆ ಇರುವುದು ನಾವು ಮನುಷ್ಯರು ಭೂಮಿಯ ಮೇಲಿನ ಇತರೆಲ್ಲ ಜಡ-ಚೇತನಗಳ ಒಡೆತನದ ಹಕ್ಕುಳ್ಳವರಾಗಿ ಅವುಗಳಿಂದ ದೊರೆಯುವ ಎಲ್ಲ ಸುಖಗಳಿಗೂ ಹಕ್ಕುದಾರರು ಎಂಬ ನಂಬಿಕೆ. ಇದರಿಂದಾಗಿ ಅವಿಭಾಜ್ಯವಾಗಿದ್ದ ಜಡ-ಚೇತನಗಳನ್ನು ವಿಭಜಿಸಿದ್ದಲ್ಲದೆ, ನಮ್ಮ ವಿಕಾಸಕ್ಕೆ ಕಾರಣವಾಗಿದ್ದ ನಮ್ಮ ಜೀವಪರಿಸರದ ಪೊರೆಯನ್ನು ಹರಿದು ಚಿಂದಿ ಚಿಂದಿ ಮಾಡಿದ್ದು. ನಮ್ಮ ಭಾಷೆ ಮಾತಾಡದ ಈ ಜಡ ಚೇತನಗಳ ನಿಧಾನ ಮತ್ತು ಮಂದ್ರ ಸ್ತರದ ಆರ್ತನಾದವನ್ನು ಕೇಳಲಾಗದಷ್ಟು ಅವುಗಳ ಸೂರೆಯ ಗದ್ದಲ್ಲದಲ್ಲಿ ತೊಡಗಿದ್ದ ಮನುಷ್ಯನ ಮೇಲೆ ಇಂದು ನಿರ್ಣಾಯಕವಾಗಿ ಈ ಮೂಕ ಜಡಚೇತನಗಳು ದಾಳಿ ಇಟ್ಟಿವೆ. ಮನುಷ್ಯ ಕಂಗಾಲಾಗಿದ್ದಾನೆ.

ಇದೇನೂ ಅನಿರೀಕ್ಷಿತವಲ್ಲ. ಸ್ಪ್ಯಾನಿಷ್ ಜ್ವರ, ಎಬಲೋ, ಎಚ್೧ಎನ್೧, ಎಚ್ಐವಿ ರೋಗಗಳು ಇದಕ್ಕೆ ಮುನ್ನೆಚ್ಚರಿಕೆಯ ಘಂಟೆಯಾಗಿದ್ದವು. ಆದರೆ ಇವೆಲ್ಲ ಬಂದು ಹೋಗುವ, ಲಸಿಕೆಗಳ ಮೂಲಕ ನಿವಾರಿಸಿಕೊಳ್ಳಬಹುದಾದ ತೊಂದರೆಗಳು ಎಂದು ಪ್ರಗತಿಯ ದಾಂಗುಡಿಯ ಮನುಷ್ಯ ಭಾವಿಸಿದ್ದ. ಆದರೆ ನಮ್ಮ ಪ್ರಗತಿಯ ಪ್ರತಿಯೊಂದು ಹೆಜ್ಜೆಯೂ ಮನುಷ್ಯ ಮಾರಕ ವೈರಾಣುವಿನ ಆಗಮನಕ್ಕೆ ಕಾರಣವಾಗುತ್ತದೆ ಎಂಬ ಅರಿವೇ ಅವನಿಗಾಗಿಲ್ಲ. ಇದಕ್ಕೆ ಕಾರಣ, ಈ ಸದ್ಯದ ಬದುಕಿನ ಹೊರತಾಗಿ ಬೇರೆ ಮಾದರಿಯೇ ಇಲ್ಲ ಎಂಬ ವಿಸ್ಮೃತಿಗೆ ಇಂದಿನ ಮನುಷ್ಯ ಒಳಗಾಗಿರುವುದು. ಈ ಬದುಕಿನ ದಿಕ್ಕಿನ ಅಪಾಯಗಳ ವಿರುದ್ಧ ಮಾತಾಡಿ ಪರ್ಯಾಯ ಸೂಚಿಸಿದ ಎಲ್ಲ ದಾರ್ಶನಿಕರನ್ನೂ, ಚಿಂತಕರನ್ನೂ ಅವಪ್ರಗತಿವಾದಿಗಳು, ಆದರ್ಶವಾದಿ ಭೋಳೆ ಜನ ಎಂದೆಲ್ಲ ಕರೆದು ಅವರನ್ನು ಉಪೇಕ್ಷಿಸಿದ್ದು. ಇವರೆಲ್ಲ ಕರೋನಾ ಲಸಿಕೆಗೆ ಈಗ ಕಾಯುತ್ತಿದ್ದಾರೆ. ಆದರೆ ಅದು ಬರುವ ಹೊತ್ತಿಗೆ ಆಗಬಹುದಾದ ಅನಾಹುತದ ಬಗ್ಗೆ ಇವರಿಗೆ ಚಿಂತೆ ಇದ್ದಂತಿಲ್ಲ. ವಿಪತ್ತು ನಿರ್ವಹಣೆಗೆ ಕಾದಿರಿಸಿದ್ದ ಹಣ ಎಷ್ಟು ದಿನ ಬಂದೀತು? ಎಷ್ಟು ದಿನ ಎಷ್ಟು ಜನಕ್ಕೆ ಉಚಿತ ಆಹಾರ ಮತ್ತು ಕೆಲಸವಿಲ್ಲದೆ ಸಂಬಳ ನೀಡಲು ಸಾಧ್ಯ? ಹಣ ಸಂಪಾದನೆಯ ಮಾದರಿಗಳನ್ನು, ಅಂದರೆ ಆರ್ಥಿಕ ಚಕ್ರದ ಚಲನಶೀಲತೆಯನ್ನು ನಾವು ಹೇಗೆ ರೂಪಿಸಿಕೊಂಡಿದ್ದೇವೆಂದರೆ ಅ ಚಕ್ರ ಆರಂಭವಾದರೆ ಕರೋನಾ ಚಕ್ರವೂ ಇನ್ನಷ್ಟು ವೇಗವಾಗಿ ತಿರುಗಲಾರಂಭವಾಗುವಂತಿದೆ. ಒಂದು ದಿನ ಲಸಿಕೆ ಬರಬಹುದು. ಆದರೆ ನಮ್ಮ ಬದುಕಿನ ಚಕ್ರ ಹೀಗೇ ಮುಂದುವರೆದರೆ ಅದು ತತ್ಕಾಲೀನ ಪರಿಹಾರವನ್ನು ಮಾತ್ರ ಒದಗಿಸೀತು: ಇನ್ನೊಂದು ಲಸಿಕೆಯ ಅಗತ್ಯಕ್ಕೆ ದಾರಿ ತೆರಯಬಹುದಷ್ಟೆ.

ಕರೋನಾವನ್ನು ಎದುರಿಸುತ್ತಿರುವ ಭೀತೀಯಲ್ಲೋ, ತಲ್ಲಣದಲ್ಲೋ ಸರ್ಕಾರ ಮತ್ತು ಜನ ಇದು ಏಕೆ ಆರಂಭವಾಯಿತೆಂಬುದರ ವಿಚಾರ ಮಾಡುವ ವ್ಯವಧಾನವನ್ನೇ ಕಳೆದುಕೊಂಡಿದ್ದಾರೆ. ಹಾಗೆ ಅದನ್ನು ಕಳೆದುಕೊಳ್ಳದಿದ್ದರೆ ಅವರಿಗೆ ಈ ಬಗೆಯ ಚಿಂತನೆಗೆ ತಮ್ಮ ಬದುಕನ್ನೇ ಮುಡಿಪಿಟ್ಟ ಗಾಂಧಿಯವರ ಬದುಕು ಮತ್ತು ಸಂದೇಶ ನೆನಪಾಗುತ್ತಿತ್ತು. ಆಧುನಿಕ ಬದುಕಿನ ಎರಡು ಮುಖ್ಯ ಲಕ್ಷಣಗಳಾದ ಅತಿ ಕೈಗಾರಿಕೀಕರಣ ಮತ್ತು ನಗರೀಕರಣಗಳ ವಿರುದ್ಧ ಅವರು ನೀಡಿದ ಎಚ್ಚರಿಕೆಗಳೂ

ನೆನಪಾಗುತ್ತಿದ್ದವು. ಇಂದು ಕರೋನಾದ ಸಮಸ್ಯೆಗೆ ಇವೆರಡೂ ಕಾರಣವಾಗಿವೆ ಎಂಬುದೂ ಅರಿವಿಗೆ ಬರುತ್ತಿತ್ತು. ಈ ಕರೋನಾದ ಮೂಲ ಈ ಎರಡರ ಅತ್ಯುಚ್ಚ ಮಾದರಿ ಎನಿಸಿದ ಚೀನಾದ ವುಹಾನ್ ಎಂಬ ನಗರ ಎಂಬ ಸಂಗತಿ ನಮಗೆ ಅಚ್ಚರಿಯನ್ನೇನೂ ಉಂಟು ಮಾಡಬಾರದು.

ಆದರೆ ನಮಗೆ, ನಮ್ಮ ಸರ್ಕಾರಗಳಿಗೆ 'ಪ್ರಗತಿ'ಯ ರೋಗ ಹತ್ತಿದೆ. ಜಗತ್ತಿನಲ್ಲಿ ಇತರರೆದುರು ಬದುಕುಳಿಯಲು ಇದು ಅನಿವಾರ್ಯ ಎಂದು ನಂಬಿದೆ. ಆದರೆ ಈ ಸಂಚಿಕೆಯಲ್ಲಿನ ವಂದನಾ ಶಿವ ಅವರನ್ನು ಕುರಿತ ಲೇಖನವೊಂದರಲ್ಲಿ ಉಲ್ಲೇಖಿತವಾಗಿರುವ ಆದಿವಾಸಿಯೊಬ್ಬನ ಈ ಮಾತು ಮಾರ್ಮಿಕವಾಗಿದೆ: 'ಪ್ರಗತಿಯಿಂದ ನಮಗೆ ಸುಸ್ತಾಗಿದೆ. ನಾವು ಈಗ (ಸುಮ್ಮನೆ) ಬದುಕಬೇಕಿದೆ.' ಈ ಆದಿವಾಸಿ ವಿವೇಕ ನಮ್ಮೆಲ್ಲರಲ್ಲಿ ಉದಿಸಬೇಕಿದೆ. ಸರ್ಕಾರವನ್ನು ಮುಟ್ಟಬೇಕಿದೆ. ಈ ಕರೋನಾ ಕರಾಳ ದಿನಗಳನ್ನು ಸರ್ಕಾರ ದುರ್ಬಳಕೆ ಮಾಡಿಕೊಳ್ಳುತ್ತಿರುವ ರೀತಿ ನೋಡಿದರೆ ಮನುಷ್ಯನ ದುಷ್ಟತನ ಎಂದೂ ಕೊನೆಯಾಗದೇನೋ ಎಂಬ ಚಿಂತೆ ಹುಟ್ಟಿಸುತ್ತದೆ. ಪ್ರಜಾಪ್ರಭುತ್ವದ ಎಲ್ಲ ಚಲನೆಗಳೂ ಸ್ಥಗಿತಗೊಂಡಿರುವ ಈ ಹೊತ್ತಿನಲ್ಲಿ ಸರ್ಕಾರ ಎಪಿಎಂಸಿ ಕಾಯಿದೆ, ಕಾರ್ಮಿಕ ಕಾಯಿದೆ ಮತ್ತು ಭೂ ಸುಧಾರಣಾ ಕಾಯಿದೆಗಳಿಗೆ ಸುಗ್ರೀವಾಜ್ಞೆಗಳ ಮೂಲಕ ತಿದ್ದುಪಡಿ ತರುವ ಮತ್ತು ಬ್ಯಾಂಕುಗಳ ಖಾಸಗೀಕರಣ ಮಾಡುವ ನಿರ್ಧಾರಗಳನ್ನು ಪ್ರಕಟಿಸುತ್ತಿರುವುದು ಈ ಸರ್ಕಾರಗಳನ್ನು ನಡೆಸುತ್ತಿರುವ ಪಕ್ಷಗಳ ಪ್ರಜಾಪ್ರಭುತ್ವೀಯ ಗುಣವನ್ನೇ ಶಂಕಿಸುವಂತೆ ಮಾಡಿದೆ. ಅಲ್ಲದೆ ಈ ಸರ್ಕಾರಗಳ ಆಸಕ್ತಿಗಳು ಯಾವ ಶಕ್ತಿಗಳ ಪರವಾಗಿವೆ ಎಂಬುದನ್ನೂ ಸೂಚಿಸುತ್ತಿದೆ. ಈ ಸುಧಾರಣೆಗಳು ಸರ್ಕಾರ ಪ್ರತಿಪಾದಿಸುತ್ತಿರುವಂತೆ ಜನಹಿತಕ್ಕಾಗಿಯೇ ಇವೆಯಾದರೆ ಅದನ್ನು ವಿವಿಧ ಅಭಿಪ್ರಾಯಗಳನ್ನು ಪ್ರತಿನಿಧಿಸುವ ಪಕ್ಷಗಳ ನಡುವಣ ಚರ್ಚೆಯ ಮೂಲಕ ಜನತೆಗೆ ಮನದಟ್ಟು ಮಾಡಬಹುದಿತ್ತು.

ಸರ್ಕಾರದ ಈ ಧೈರ್ಯಕ್ಕೆ ಮುಖ್ಯ ಕಾರಣ, ಪ್ರಜಾಪ್ರಭುತ್ವದ ಎರಡು ಗಾಲಿಗಳಲ್ಲಿ ಒಂದಾಗಿರಬೇಕಿದ್ದ ವಿರೋಧ ಪಕ್ಷವೆಂಬುದೇ ಈಗ ನಮ್ಮಲ್ಲಿ ಹೆಚ್ಚೂಕಡಿಮೆ ಇಲ್ಲವಾಗಿರುವುದು. ಕಾಂಗ್ರೆಸ್‌ಗೆ ಹೀಗೇಕಾಯಿತು ಎಂಬುದನ್ನು ಹಲವು ಬಾರಿ ಚರ್ಚಿಸಲಾಗಿದೆ. ಆದರೆ ಜನ ಅದನ್ನು ಅದರ ಈ ಹಿಂದಿನ ಪಾಪಗಳಿಗಾಗಿ ಕ್ಷಮಿಸಿ ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸ್‌ಘಡ ಮತ್ತು ಪಂಜಾಬ್‌ಗಳ ಚುನಾವಣೆಗಳು ಸೂಚಿಸಿದಂತೆ ಅದನ್ನು ಪುನರುಜ್ಜೀವನಗೊಳಿಸಲು ಬಯಸಿದರಾದರೂ ಅದೇಕೆ ಎದ್ದು ನಿಲ್ಲಲು ನಿರಾಕರಿಸುತ್ತಿದೆ ಎಂದು ಆಶ್ಚರ್ಯವಾಗುತ್ತಿದೆ. ಇದಕ್ಕೆ ಮುಖ್ಯ ಕಾರಣವೆಂದು ತೋರುವುದು ಅದು ಒಂದು ರಾಷ್ಟ್ರೀಯ ರಾಜಕೀಯ ಪಕ್ಷವಾಗಿ ಉಳಿಯುವ ಎಲ್ಲ ಗುಣಗಳನ್ನೂ ಕಳೆದುಕೊಂಡಿರುವುದು. ಅದರ ಸದಸ್ಯರು ಚುನಾವಣೆಗಳ ಮುನ್ನ ಮತ್ತು ಆನಂತರವೂ ಯಾವ ಎಗ್ಗೂ ಇಲ್ಲದೆ ಹಣಕ್ಕಾಗಿಯೋ, ಅಧಿಕಾರಕ್ಕಾಗಿಯೋ ಆಡಳಿತ ಪಕ್ಷಕ್ಕೆ ಹಾರುವ ವೈಖರಿಗಳನ್ನು ನೋಡಿ. ಅಂದರೆ ಅವರಿಗೆ ಆ ಪಕ್ಷ ಚುನಾವಣೆ ಎದುರಿಸಲು ಸಿಕ್ಕ ಒಂದು ವೇದಿಕೆ ಅಷ್ಟೆ. ಅವರನ್ನು ಆ ಪಕ್ಷಕ್ಕೆ ಬಂಧಿಸುವ ತತ್ವ ಸಿದ್ಧಾಂತವೆಂಬ ಯಾವ ಭಾವ ಸಂಬಂಧವೂ ಇಲ್ಲ. ಇದಕ್ಕೆ ಮುಖ್ಯ ಕಾರಣ ಕಾಂಗ್ರೆಸ್ ಮೂಲತಃ ಜನಾಂದೋಲನವಾಗಿದ್ದು, ರಾಜಕೀಯ ಅಧಿಕಾರಕ್ಕೆಂದೇ ಕಟ್ಟಲ್ಪಟ್ಟ ಪಕ್ಷವಾಗಿರಲಿಲ್ಲ. ಸ್ಥಾಪನೆಯ ಕಾಲದಿಂದಲೂ ಅದು ಬರಿಯ ಅಧಿಕಾರವೂ ಸೇರಿದಂತೆ ಹಲವು ತತ್ವಗಳ ಅನುಯಾಯಿಗಳಿದ್ದ ಸಡಿಲ ಪಕ್ಷವೇ ಆಗಿತ್ತು. ಅದರ ಈ ಗುಣ ಆ ಪಕ್ಷದ ಜನನಾಯಕರಾಗಿದ್ದ ಗಾಂಧಿಯವರ ಅಂತ್ಯ ಕಾಲಕ್ಕೇ ನಿಧಾನವಾಗಿ ಬಯಲಾಗತೊಡಗಿತ್ತು. ಹಾಗಾಗಿಯೇ ಗಾಂಧಿ ತಮ್ಮ ಸಾವಿನ ಕೊನೆಯ ದಿನದವರೆಗೂ ಈ ಪಕ್ಷವನ್ನು ರಾಜಕೀಯದಿಂದ ಹೊರಗಿಡುವ ರೀತಿಯಲ್ಲಿ ಅದರ ಅಂಗರಚನೆಯ ಕರಡನ್ನು ಸಿದ್ಧಗೊಳಿಸುವುದರಲ್ಲಿ ವ್ಯಸ್ತರಾಗಿದ್ದರು. ಆದರೆ ಗಾಂಧಿ ರಾಜಕಾರಣಕ್ಕೆ ವಿರುದ್ಧವಾಗಿ, ಗಾಂಧಿ ಕಾಲದಲ್ಲೇ ಎದ್ದಿದ್ದ ಮತ್ತು ಅವರ ಕೊಲೆಗೂ ಕಾರಣವಾದ ಧ್ವನಿ, ನಿಧಾನವಾಗಿ ಮತ್ತು ಸುಯೋಜಿತವಾಗಿ ಬೆಳೆದು ಅದಕ್ಕೊಂದು ವಿಶ್ವಾಸಾರ್ಹ ಸವಾಲು ಹಾಕುವವರೆಗೆ, ತನ್ನ ಒಳಗುಂಪುಗಳೇ ಹಲವು ವಿರೋಧ ಪಕ್ಷಗಳಾಗಿ ಮೂಡಿ ತಾನೇ ಕಲಿಸಿದ ಪಟ್ಟುಗಳೊಡನೆ ಹಾಕುತ್ತಿದ್ದ ಸವಾಲುಗಳನ್ನಷ್ಟೇ ಎದುರಿಸಿ ಗೊತ್ತಿದ್ದ ಕಾಂಗ್ರೆಸ್‌ಗೆ ರಾಜಕೀಯ ಪಕ್ಷವಾಗಿ ನಿಜವಾದ ಹೋರಾಟ ಮಾಡಿಯೇ ಗೊತ್ತಿರಲಿಲ್ಲ. ಏಕೆಂದರೆ ಮೊದಲೇ ಹೇಳಿದ ಹಾಗೆ ಗಾಂಧಿ–ನೆಹರೂ ಹೆಸರುಗಳ ಉಲ್ಲೇಖ ಮಾಡುವುದರ ಹೊರತಾಗಿ ಅದಕ್ಕೆ ರಾಜಕೀಯ ಪಕ್ಷದ ತರಬೇತಿ ಎಂಬುದೇ ಇರಲಿಲ್ಲ.

ಆದರೆ ಈಗಲಾದರೂ ಕಾಂಗ್ರೆಸ್ ಈ ಕಾಲದ ಸಮರ ಸಜ್ಜಿನ ರಾಜಕೀಯಕ್ಕೆ ಅಗತ್ಯವಾದ ಒಂದು ಸುಸಜ್ಜಿತ ರಾಜಕೀಯ ಪಕ್ಷವಾಗಿ ಬೆಳೆಯುವ ಛಾತಿ ತೋರಿಸುತ್ತಿದೆಯೆ? ಜನರನ್ನು, ವಿಶೇಷವಾಗಿ ಯುವ ಜನರನ್ನು ಸೆಳೆಯುವ ಒಂದು ಸ್ಪಷ್ಟ ತಾತ್ವಿಕ ಪ್ರಣಾಳಿಕೆಯನ್ನು ಅದು ರೂಪಿಸಿಕೊಳ್ಳುವ ಪ್ರಯತ್ನದಲ್ಲಿದೆಯೆ? ಉಹುಂ ಕಳೆದ ಹತ್ತು ಹದಿನೈದು ವರ್ಷಗಳಲ್ಲಿ ಈ ಪಕ್ಷ ಯಾವ ಹೊಸ ನಾಯಕ ಮುಖವನ್ನಾದರೂ ಕಂಡಿದೆಯೆ? ಈ ಪಕ್ಷದ ಕಾರ್ಯಕರ್ತರೆಂದರೆ ಅದರ ಮುದಿ ನಾಯಕರ ಹಿಂದೆ ಚೇಲಾಗಿರಿ ಮಾಡುತ್ತಾ ತಿರುಗುವ ಪ್ರಾರಬ್ಧಗಳಷ್ಟೆ. ಮೊನ್ನೆ ರಾಜ್ಯದಲ್ಲಿ ನಡೆದ ವಿಧಾನ ಪರಿಷತ್ ಮತ್ತು ರಾಜ್ಯ ಸಭಾ ಚುನಾವಣೆಗಳಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಆರಿಸಿದ ಅಭ್ಯರ್ಥಿಗಳ ಪರಿಯೇ ಇಂದಿನ ರಾಜಕಾರಣದ ದುರಂತವನ್ನು ಹೇಳುವಂತಿದೆ. ಒಂದು ದಿನ ಜನ ಕಾಂಗ್ರೆಸ್‌ನ್ನು ಗೆಲ್ಲಿಸುವ ರಾಜಕೀಯ ಪರಿಸ್ಥಿತಿ ಉಂಟಾದರೂ ಅದಕ್ಕೆ ಪಕ್ಷ ಸಿದ್ಧವಾಗಿರುವ ಯಾವ ಲಕ್ಷಣಗಳೂ ಸದ್ಯಕ್ಕೆ ಕಾಣುತ್ತಿಲ್ಲ. ಅದು ಬಿಜೆಪಿ ಭೀಮ ಬಲ ಪ್ರದರ್ಶನದೆದುರು ನಿಶ್ಚೇಷ್ಟಿತಗೊಂಡಂತಿದೆ. ಅದಕ್ಕೆ ತಲೆಯೇ ಓಡದಂತಾಗಿದೆ.

ಕಾಂಗ್ರೆಸ್ ಈ ಬಿಕ್ಕಟನ್ನು ದಾಟಲು ಕರೋನಾದ ಬಿಕ್ಕಟ್ಟಿನಿಂದ ಪಾಠ ಕಲಿಯಬಹುದಾಗಿದೆ. ಪರ್ಯಾಯ ಬದುಕಿನ ಮಾದರಿಯ ಪ್ರತಿಪಾದಕನಾಗಿ, ಮತ್ತೆ ಗಾಂಧಿಗೆ ಮರುಭೇಟಿ ನೀಡುವ ಮೂಲಕ ಹೊಸ ಆರಂಭ ಮಾಡಬಹುದಾಗಿದೆ. ಇದರಿಂದ ಅದಕ್ಕೊಂದು ಖಚಿತ ಪ್ರಣಾಳಿಕೆ ಮತ್ತು ಮುಖ ದೊರೆಯಲಿದೆ. ಆದರೆ ಆ ವಿವೇಕ ಮತ್ತು ಸಂಕಲ್ಪ ಶಕ್ತಿ ಅದರ ಒಡಲಲ್ಲಿ ಇನ್ನೂ ಉಳಿದಿದೆಯೇ? ಉಳಿದಿರಬಹುದೆಂದು ಆಸೆ ಪಡುವವರಲ್ಲಿ ನಾನೂ ಒಬ್ಬ. ಅಥವಾ ಒಬ್ಬ ಮಾತ್ರವಾ? ಹಾಗೇನಿರಲಾರದು. ಒಂದಿಷ್ಟು ವೈಯಕ್ತಿಕ ನೆಲೆಯ ಮಾತುಗಳನ್ನಾಡುವುದಾದರೆ, ನಾನು ಬರೆದ 'ಗಾಂಧಿ ಕಥನ' ನಮ್ಮ ಓದುವ, ಚಿಂತಿಸುವ ಜನರ ಮಧ್ಯೆ ಉಂಟು ಮಾಡಿರುವ ಸಂಚಲನ ಮತ್ತು ಗಾಂಧಿ ಕುರಿತು ಹುಟ್ಟಿರುವ ಹೊಸ ಆಸಕ್ತಿ ಮತ್ತು ಹುರುಪು ನನ್ನ ಆಸೆ ಹೆಚ್ಚುವಂತೆ ಮಾಡಿದೆ. ಪ್ರಕಟವಾದ ಮೂರು ತಿಂಗಳಲ್ಲಿ ಮೂರು ಮುದ್ರಣಗಳನ್ನು ಕಂಡಿರುವ ಈ ಪುಸ್ತಕ ಕರೋನಾ ಇಲ್ಲದಿದ್ದರೆ ಕನಿಷ್ಠ ಇನ್ನೆರಡು ಮುದ್ರಣಗಳನ್ನು ಕಾಣುತ್ತಿದ್ದುದರಲ್ಲಿ ಸಂಶಯವಿಲ್ಲ. ಈ ಪುಸ್ತಕ ಉಂಟು ಮಾಡಿರುವ ಪ್ರಭಾವದ ಹಿನ್ನೆಲೆಯಲ್ಲಿ ನನಗನ್ನಿಸಿದ್ದೆಂದರೆ ಗಾಂಧಿಯನ್ನು ಅವರ ಜೊತೆ ಅಂಟಿಕೊಂಡುಬಿಟ್ಟಿರುವ ಸತ್ಯ–ಅಹಿಂಸೆಗಳ ಕ್ಲೀಷೆಯಿಂದ ಬಿಡಿಸಿ ಇಡಿಯಾಗಿ ಅವರನ್ನು ಅವರಿದ್ದಂತೆ ಮಂಡಿಸಿದರೆ ಜನ ಖಂಡಿತ ಅವರಿಗೆ ಮಿಡಿಯುತ್ತಾರೆ. ದ.ಕ.ದ ಒಂದು ಮಹಿಳಾ ತಂಡ ಈ ಕೃತಿಯನ್ನು ಒಂದು ಆಚರಣೆಯಂತೆ ಓದಿ ಚರ್ಚಿಸಿರುವ ಪರಿ ಈ ದೆಸೆಯಲ್ಲಿ ಹೊಸ ಆಸೆ ಹುಟ್ಟಿಸುವಂತಿದೆ. ಆ ಕುರಿತ ಒಂದು ಬರಹವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಅಂದ ಹಾಗೆ ಸಿದ್ಧರಾಮಯ್ಯನವರೂ ಸೇರಿದಂತೆ ಸಾಕಷ್ಟು ಜನ ಕಾಂಗ್ರೆಸ್ಸಿಗರು ಗಾಂಧಿ ಕಥನವನ್ನು ಓದಿದ್ದಾರೆ. ಕೆಲವರು ಕರೆ ಮಾಡಿ ಸಂಭ್ರಮಿಸಿದ್ದಾರೆ. ಸಿದ್ಧರಾಮಯ್ಯನವರ ಕಾರ್ಯದರ್ಶಿ ಈ ಬಗ್ಗೆ ಕರೆ ಮಾಡಿದಾಗ ನಾನು ಸಿದ್ಧರಾಮಯ್ಯನವರೊಂದಿಗೆ ಮಾತಾಡಿದೆ. ಅವರು ೬೭೧ ಪುಟವನ್ನೂ ಬಿಡದೆ ಓದಿದ್ದೇನೆ ನಾಗಭೂಷಣ ಎಂದಾಗ ನನಗೆ ಎಲ್ಲಿಲ್ಲದ ಸಡಗರವೇ ಅಯಿತು. ಆದರೂ ನಾನು 'ಬರೀ ಓದಿ ಸಂತೋಷ ಪಟ್ಟರೆ ಪ್ರಯೋಜನವಿಲ್ಲ ಸಿದ್ಧರಾಮಯ್ಯನವರೇ, ನಿಮ್ಮ ರಾಜಕಾರಣ ಬದಲಾಗಿ ಹೊಸ ನಾಯಕತ್ವ ನಮಗೆ ದೊರೆತರೆ ಮಾತ್ರ ನೀವು ಓದಿದ್ದು, ನಾನು ಬರೆದದ್ದು ಸಾರ್ಥಕ ಎಂದೆ. ಸಿದ್ಧರಾಮಯ್ಯ ಸುಮ್ಮನೆ ನಕ್ಕರು.

ನನ್ನ ಈ ಮೇಲಿನ ಮಾತುಗಳೆಲ್ಲ ಮೂಡಿದ್ದು ಈ ವಿಶೇಷ ಸಂಚಿಕೆಯನ್ನು ಆಯೋಜಿಸಿ ಸಿದ್ಧಪಡಿಸುತ್ತಿದ್ದಾಗ ನನ್ನ ಮನದಲ್ಲಿ ಹಾದು ಹೋದ ಆಲೋಚನಾ ಲಹರಿಯಿಂದ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಹಾಗಾಗಿ ಈ ಮಾತುಗಳ ಹಿಂದೆ ಹಲವರ ಮಾತುಗಳಿವೆ, ವಿಶೇಷವಾಗಿ ಇಲ್ಲಿನ ಲೇಖನಗಳನ್ನು ಬರೆದವರದ್ದು. ಅವರಿಗೆ ಮತ್ತು ಅನುವಾದಕರಿಗೆ ನನ್ನ ಕೃತಜ್ಞತೆಗಳು. ಹಾಗೇ ರೇಖಾ ಚಿತ್ರಗಳನ್ನು ಒದಗಿಸಿದ ಕಲಾವಿದರೆಇಗೂ. ಇನ್ನು ಈ ಸಾಹಸದ ಹಣಕಾಸಿನ ಭಾರವನ್ನು ತಮ್ಮ ಪ್ರೀತಿಯ ಪೋಷಕ ನಿಧಿಗಳ ಮೂಲಕ ಮತ್ತು ಶುಭಾಶಯ ಜಾಹೀರಾತುಗಳ ಮೂಲಕ ಕಡಿಮೆ ಮಾಡಿದ ಗೆಳೆಯರೆಲ್ಲರಿಗೆ ನನ್ನ ಧನ್ಯವಾದಗಳು. ವಿಶೇಷವಾಗಿ ಈ ಪತ್ರಿಕೆ ತಮ್ಮದೆಂದೇ ಪೋಷಿಸುತ್ತಿರುವ ಎಂ.ಸಿ. ನರೇಂದ್ರ, ಆರ್ ಉಮೇಶ್, ಮತ್ತು ಜಿ.ಬಿ. ಶಿವರಾಜು ಅವರಿಗೆ. ಹಾಗೇ ಮುದ್ರಕರಾದ ದಯಾನಂದ ಮತ್ತು ರವಿಯವರ ಸಹಕಾರಕ್ಕೆ ಧನ್ಯವಾದಗಳು.

–ಸಂಪಾದಕ

ಈ ಸಂಚಿಕೆ

ರಕ್ಷಾಪುಟ ವಿನ್ಯಾಸ: **ರವಿಪ್ರಸಾದ್ ಎಚ್. ಆರ್.**

ರೇಖಾ ಚಿತ್ರಗಳು: **ಟಿ.ಬಿ. ಗುಜ್ಜಾರಪ್ಪ ಮತ್ತು ವಿಜಯಶ್ರೀ ಹಾಲಾಡಿ**

ಸಂಪುಟ ವಿನ್ಯಾಸ ಮತ್ತು ಸಂಪಾದನೆ:

ಡಿ.ಎಸ್. ನಾಗಭೂಷಣ

ನೆರವು: **ಸವಿತಾ ನಾಗಭೂಷಣ, ಕೆ.ಶ್ರೀದೇವಿ**

ವರ್ಷದ ವಿಶೇಷ ಪತ್ರಗಳು

ಪ್ರಿಯ ಸಂಪಾದಕರೇ,

ಹರಿಯುವ ನದಿಯಂಥ ಪತ್ರಿಕೆ

'ಹೊಸ ಮನುಷ್ಯ ಪತ್ರಿಕೆ'ಯಿಂದ ನಾನು ಪಡೆದುದೆಷ್ಟು, ಕಳೆದುಕೊಂಡದ್ದೆಷ್ಟು ಎಂಬುದನ್ನು ಆಲೋಚಿಸುತ್ತಿದ್ದೇನೆ.

ಕಾವ್ಯವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗದಾಗಲೂ ಒಂದು ಅನುಭವದ ಧನ್ಯತೆಯನ್ನು ಪಡೆಯುತ್ತೇವಲ್ಲ, ಇದು ಕೂಡ ಅಂಥ ಲೆಕ್ಕವೇ. ಹರಿಯುವ ನದಿ ಬಂಡೆಗಲ್ಲುಗಳನ್ನು ಹಾಸುಗಲ್ಲಾಗಿಸಲು ಶತಮಾನಗಳನ್ನೇ ತೆಗೆದುಕೊಳ್ಳುತ್ತದಲ್ಲ,ಬಹುಶಃ ಇದೂ ಹಾಗೇ. ಅಂಥ ಅನುಭವವೇ ಇದಾಗಿರುವುದರಿಂದ ಪತ್ರಿಕೆಯಿಂದ ಈ ಅವಧಿಯಲ್ಲಾದ ಪರಿಣಾಮವೂ ಅದೇ ಮಾದರಿಯದು.

ಕಲ್ಲುಗಳು ದೀರ್ಘಕಾಲದ ನದಿಯ ಹರಿಯುವಿಕೆಯಿಂದ ನುಣುಪಾಗಿ, ನುಣುಪಾದ ಸ್ವಚ್ಛ ಕಲ್ಲಿನ ಮೇಲೆ ಏನೋ ಹೇಳಬಯಸುವ ಚಿತ್ರ ಮೂಡುವುದನ್ನು ನೋಡುತ್ತೇವೆ. ಓಡುವ ರೈಲಿನಲ್ಲಿ ಸಿಕ್ಕುವ ನದಿ ಕಾಡುಗಳ ಆಕರ್ಷಣೆಯ ಕರೆಯನ್ನು ಮನ್ನಿಸಿ ಅವುಗಳ ಬಳಿ ತೆರಳಲು ಸಾವಿರ ಜನರಲ್ಲಿ ಒಬ್ಬನಿಗಾದರೂ ಕ್ರಮೇಣ ಸಾಧ್ಯವಾದೀತು. ಈ ಲಾಭ–ನಷ್ಟದ ಪ್ರಶ್ನೆಗೆ ಕಂಡುಕೊಳ್ಳಬಹುದಾದ ಉತ್ತರ ಆಶಾಭಾವದ ಬೆಳಕಿನದ್ದೇ ಆಗಿರುತ್ತದೆ. 'ಈ ಪ್ರಚಂಡ ಪ್ರವಾಹದ ವಿರುದ್ಧ ನಾನೆಷ್ಟು ದೂರ ಈಜಬಲ್ಲೆ' ಎಂದು ಕೈ ಚಲ್ಲಿದವಗೆ ಈಜುವ ಪ್ರಾತ್ಯಕ್ಷಿಕೆ ಮಾಡಿ ತೋರಿಸಿದಂತೆ, ಜಾಗತೀಕರಣದ ಕಾಲದಲ್ಲಿ ಈ ಪತ್ರಿಕೆ ದಾರಿಸೂಚಕವಾಗಬಹುದೇನೋ.

ನಿರಂತರ ಕಾರ್ಯ ಮಾಡುವ ವಾಸ್ತವಿಕ ಪರಿಣಾಮಗಳ ಕುರಿತಂತೆ ಕೆಲವು ಮಾತು ಹೇಳಬಹುದು .ಉದಾಹರಣೆಗೆ, ಆಚಾರ್ಯ ನರೇಂದ್ರ ದೇವ ಅವರ ಬಗ್ಗೆ ಒಂದು ಲೇಖನ ಬಂದು ಹೋದರೆ ಒಂದು ಸಣ್ಣ ಪರಿಣಾಮ ಉಂಟಾದೀತಷ್ಟೇ. ಆದರೆ ಲೋಹಿಯಾ, ಜೇಪಿ, ಗೋರೆ, ಫರ್ನಾಂಡೀಸ್, ಕಮಲಾದೇವಿ ಮುಂತಾದವರ ಬಗೆಗಿನ ಮತ್ತು ಅವರ ಮಹತ್ವ ಕುರಿತ ಲೇಖನಗಳು ನಿಯಮಿತವಾಗಿ ಬರುತ್ತಲೇ ಇದ್ದರೆ ಓದುಗರಿಗೆ ಸಮಾಜವಾದ–ಸಮಾಜವಾದಿಗಳ ಕುರಿತಾದ ಒಂದು ಅರಿವು, ಆ ಪರಂಪರೆಯ ರುಚಿ ತಂತಾನೆ ಹುಟ್ಟಿಕೊಳ್ಳುತ್ತದೆ. 'ಹೊಸ ಮನುಷ್ಯ' ತಾನು ಏತಕ್ಕಾಗಿ ಹುಟ್ಟಿತು ಎಂಬುದನ್ನು ಸಾಬೀತು ಪಡಿಸುವಂತೆ ಈ ನಿಟ್ಟಿನಲ್ಲಿ ನಮಗೆಲ್ಲ ಒಂದು ಪ್ರಶಿಕ್ಷಣವನ್ನೇ ಒದಗಿಸಿದೆ ಎಂದು ಧಾರಾಳವಾಗಿ ಹೇಳಬಹುದು.

ಪತ್ರಿಕೆಯ ಧೋರಣೆ ಜಾಗತೀಕರಣ ಕಾಲದ ಒಂದು ಸಾಹಸ ಎಂಬುದನ್ನು ಇಲ್ಲಿ ಗುರುತಿಸಬಹುದು. ಬಂಡವಾಳಶಾಹಿ ತಂದ ದುರಂತ, ಅದರಿಂದ ಪಾರಾಗುವ ಬಗೆ, ಆಡಳಿತಗಾರರ ಮತ್ತು ವಿರೋಧಿ ಪಕ್ಷದವರ ತಪ್ಪುಗಳು; ಜೊತೆಗೆ ನಮ್ಮ ಸಾಮಾನ್ಯ ಮತ್ತು ವಿಶೇಷ ಜನರು ಮಾಡುವ ಮೂರ್ಖತನದ ಕೆಲಸಗಳನ್ನು ಕೂಡ ಪತ್ರಿಕೆ ನಿರ್ಭಿಡೆಯಿಂದ ಸಾರಿ ಹೇಳಿದೆ. ಅನೇಕ ಸಾಹಿತಿ–ರಾಜಕಾರಣಿಗಳ ಸಣ್ಣತನ, ಒಳ್ಳೆಯತನಗಳನ್ನೂ ನಾವಿಲ್ಲಿ ಕಾಣುವಂತಾಗಿದೆ.

ವಿಭಿನ್ನವಾದ ಆಲೋಚನೆಯನ್ನು ಪತ್ರಿಕೆ ಪ್ರತಿ ಸಂಚಿಕೆಯಲ್ಲಿ ಪ್ರತಿಪಾದಿಸುತ್ತ ಬಂದದ್ದು ನದಿಯ ಹರಿವಿನ ಪರಿಣಾಮದಂತೆಯೇ ನನಗೆ ಕಂಡಿದೆ. ಇಲ್ಲಿ ಬಂದ ಅಸಂಖ್ಯ ಲೇಖನಗಳನ್ನು ಉಲ್ಲೇಖಿಸುವುದಾದರೂ ಹೇಗೆ? ಗಾಂಧಿ, ಅಂಬೇಡ್ಕರ್, ಲೋಹಿಯಾ ಅವರನ್ನು ಕುರಿತಾದ ಲೇಖನಗಳು ಆದ ಚರ್ಚೆಗಳು ಖಂಡಿತವಾಗಿಯೂ ಓದುಗರಲ್ಲಿ ಕೆಲವರ ಮೇಲಾದರೂ ಪ್ರಭಾವ ಬೀರಿಯೇ ಇರುತ್ತದೆ. ವಿಶೇಷವಾಗಿ ಗಾಂಧಿಯವರ 'ಹಿಂದ್ ಸ್ವರಾಜ್' ಬಗೆಗಿನ ಲೇಖನ ಸಮೂಹ ಪತ್ರಿಕೆಯ ಒಂದು ಪ್ರಮುಖ ಘಟ್ಟವೇ ಹೌದು. ಇಂದಿರಾ ಕೃಷ್ಣಪ್ಪ ಬರೆದ ದಿ.ಕೃಷ್ಣಪ್ಪನವರ ಜೀವನ ಚರಿತ್ರೆ, ಅನೇಕರ ಜೀವನಕ್ಕೆ ಹೋಲಿಕೆಯಾಗಿಯೋ, ವ್ಯತಿರಿಕ್ತವಾಗಿಯೋ ಪ್ರಭಾವವನ್ನಂತೂ ಬೀರಿಯೇ ಇರುತ್ತದೆ. ಇಂದಿಗೂ ನಾನು ಮೊದಲು ಓದುವ ಸಂಪಾದಕೀಯ ಒಳನೋಟ, ಮುನ್ನೋಟ, ವಿಶ್ಲೇಷಣೆಗಳ ಮೂಲಕ ನಮ್ಮ ಮೇಲೆ ಪ್ರಭಾವ ಬೀರದೆ ಇರುವುದಿಲ್ಲ. ಹೀಗೆ, ಪತ್ರಿಕೆ ದೊಡ್ಡವರ ಸ್ಪರ್ಶದ ಅನುಭೂತಿಯಾಗಿ, ಕಾಣದಂತೆ ನಮ್ಮಲ್ಲಿ ಉಳಿದು ಬಿಡುತ್ತದೆ.

ಇನ್ನೊಂದು ವಿಷಯ.ಪತ್ರಿಕೆ ಬೆಳೆದ ಹಾಗೆ ನಾಗಭೂಷಣ ಕೂಡ ಒಳಗಿನಿಂದಲೇ ಸಾಕಷ್ಟು ಬೆಳೆದರು. ಸಿಟ್ಟು, ಪಂಥಗಳ ಜಗಳಗಳಲ್ಲಿಯ ಅಸಹನೆ, ಕೆಣಕುವ ಭಾಷೆ ಮುಂತಾದ ಅವರ ಗುಣಗಳು ಸಹನೆ– ತಿಳುವಳಿಕೆಯಲ್ಲಿ ಬದಲಾದವು ಎಂದು ನನ್ನ ಅನಿಸಿಕೆ. ಇದನ್ನು ನನ್ನ, ಅವರ ಮತ್ತು ಅವರ ಸಂಪರ್ಕದ ಎಲ್ಲರಿಗಾದ ಲಾಭ ಎಂದುಕೊಳ್ಳುತ್ತೇನೆ.

ವೈಯಕ್ತಿಕವಾಗಿ,ನ 'ನಗೆ ಆದ ಲಾಭವೆಂದರೆ ಸಂಭಾವನೆ ಸಹಿತ ನನ್ನ ೪–೫ ಲಲಿತ ಪ್ರಬಂಧಗಳನ್ನು, ಕಿರು ಲೇಖನಗಳನ್ನು ಪ್ರಕಟಿಸಿದ್ದು...! ಈ ಮೂಲಕ ಒಂದು " ಗುರುತಿನ ಕಾರ್ಡು" ದೊರಕಿದ್ದು...!



ಪತ್ರಿಕೆಯಿಂದಾದ ನಷ್ಟಗಳನ್ನು ದಾಖಲಿಸಬೇಕೆಂದರೆ ನಾಗಭೂಷಣ ಅವರು ಮೊದಲಿನಂತೆ ಫೋನಿನ ಪುಷ್ಕಳ ಹರಟೆಗೆ ಒದಗಿಬರುತ್ತಿಲ್ಲ. ಜೊತೆಯ ಪ್ರವಾಸ ಸಾಧ್ಯವಾಗುತ್ತಿಲ್ಲ. ಅವರ ಓದು– ಬರೆಹಗಳಿಗಾಗಿ ವೇಳೆ ಸಿಗುತ್ತಿಲ್ಲ. ಅವರ ಆರೋಗ್ಯಕ್ಕೆ ತೊಂದರೆಯಾಗಿದೆ.ಇವು ನಮಗಾಗುವ ನಷ್ಟ ಕೂಡ.ನನಗನಿಸುವುದೇನೆಂದರೆ ಅವರು ಪತ್ರಿಕೆಯನ್ನು ರಕ್ಷಿಸುವ ಕೆಲಸ ಮಾಡುತ್ತಲೇ ಇರಲಿ. ಪತ್ರಿಕೆ ಅವರನ್ನು ರಕ್ಷಿಸುತ್ತಲೇ ಇರುತ್ತದೆ....!

–ವಿಜಯೇಂದ್ರ ಪಾಟೀ, ನಿವೃತ್ತ ಬ್ಯಾಂಕ್ ಮೇನೇಜರ್ ಮತ್ತು ಲೇಖಕರು, ಧಾರವಾಡ

ಲೋಕಜ್ಞಾನದ ಸೂಕ್ಷ್ಮಗಳನ್ನು ಗಮನಕ್ಕೆ ತಂದ ಪತ್ರಿಕೆ

ಹೊಸ ಮನುಷ್ಯ' ದಂತಹ ಸಮಾಜಮುಖೀ ಪತ್ರಿಕೆಗಳಿಗೆ ವಿಶೇಷವಾಗಿ ತನ್ನ ಓದುಗರ ಆಂತರಂಗಿಕ ಮತ್ತು ಬಾಹ್ಯ ಸಮಸ್ಯೆಗಳ ಕುರಿತಾದ ಕಾಳಜಿಯಿರುತ್ತದೆ. ಮೂವತ್ತು–ಮೂವತ್ತೈದು ವರ್ಷಗಳ ಹಿಂದೆ 'ಲಂಕೇಶ್ ಪತ್ರಿಕೆ'ಯ ಓದು ನನ್ನೊಳಗೆ ಇಂಥ ಚಿಂತನೆಗಳಿಗೆ ಬೀಜ ಬಿತ್ತಿತ್ತು, ಅದರ ಮುಂದುರಿಕೆಯಂತೆ ಇಂದು 'ಹೊಸ ಮನುಷ್ಯ' ಆ ಬೀಜಕ್ಕೆ ನೀರುಗೊಬ್ಬರ ಒದಗಿಸಿ ಮೊಳಕೆಯೊಡೆಯುವಂತೆ ಪ್ರೇರೇಪಿಸುತ್ತಿದೆ ಅನಿಸುತ್ತಿದೆ. ನನ್ನೊಳಗಿದ್ದ ಹಲವು ಸಂಶಯಗಳಿಗೆ ಪತ್ರಿಕೆ ಔಷಧಿಯಂತೆ ಒದಗಿ ಬಂದಿದೆ. ಇಂಥ ತಿಳಿವಿನ ಪರಿಣಾಮವಾಗಿ ನೀಗುವ ನೆಮ್ಮದಿ ಅದು ವೈಯಕ್ತಿಕ ಅಥವಾ ಸಮುದಾಯಿಕ ನೆಲೆಯಲ್ಲೂ ಆಗಿದೆ. ಈ ಸಂಸ್ಕೃತಿ ಸಂಪ್ರದಾಯ ನಂಬಿಕೆ ಎಲ್ಲವನ್ನೂ ಮೀರಿ ನಿಂತು ಯಾವುದು ಮಾನವೀಯ ಯಾವುದು ಅಮಾನವೀಯ ಎಂಬ ಪರಿಜ್ಞಾನವನ್ನು ನನಗೆ ಕೊಟ್ಟದ್ದು 'ಹೊಸ ಮನುಷ್ಯ' ಪತ್ರಿಕೆಯ ಓದು.

ಓದು ಯಾವಾಗಲೂ ನಮಗರಿವಿಲ್ಲದೆ ನಮ್ಮ ಮನಸ್ಥಿತಿಗಳನ್ನು ಯೋಚಿಸುವ ದಾರಿಯನ್ನೂ ಹಂತ ಹಂತವಾಗಿ ಬದಲಾಯಿಸುತ್ತ ಸಾಗುತ್ತಿರುತ್ತದೆ. ಜೊತೆಗೆ ಯಾವುದಾದರೊಂದು ಸಂಗತಿಯ ಕುರಿತು ಇರುವ ಅಜ್ಞಾನವನ್ನು ಹೊಡೆದೋಡಿಸುತ್ತ ನಮ್ಮೊಳಗೊಂದು ಅರಿವಿನ ಕಿಡಿಯನ್ನು ಹೊತ್ತಿಸುತ್ತಿರುತ್ತದೆ. ಸ್ವಂತಕ್ಕೆ ಒಂದು ನಿರಾಳದ ಬದುಕನ್ನು ಹಾಗೂ ಸಾಮಾಜಿಕವಾಗಿ ಅನೇಕ ಸತ್ಯಗಳನ್ನು ತೆರೆದು ತೋರಿಸಿದ್ದು 'ಹೊಸ ಮನುಷ್ಯ'ದಂತಹ ಪತ್ರಿಕೆಗಳು. ಅದು ಕೌಟುಂಬಿಕ ಮತ್ತು ದಾಂಪತ್ಯದ ನೆಲೆಯಲ್ಲಿ ಮದುವೆ ಎಂಬ ಸಂಸ್ಥೆ ನಿರ್ಮಿಸಿದ ಅಸಮಾನತೆ, ಮನುವಾದದ ವರ್ಣಾಶ್ರಮ ಪದ್ಧತಿಯಿಂದುಂಟಾದ ಸಾಮಾಜಿಕ ಅಸಮತೋಲ, ಸಂವಿಧಾನ ಸಿಂಧುವಾದ ಮೀಸಲಾತಿ ಪದ್ಧತಿಯ ಮಹತ್ವ, ದೇಶವನ್ನು ಪಾತಾಳಕ್ಕೆ ತಳ್ಳುತ್ತಿರುವ ಭ್ರಷ್ಟಾಚಾರ, ಕೇವಲ ತನ್ನ ಧಾರ್ಮಿಕ ಕಲ್ಪನೆಗಳಿಂದ ಸತ್ಯ ಮರೆ ಮಾಚುತ್ತಿರುವ ಇಂದಿನ ರಾಜಕಾರಣ, ಬಂಡವಾಳಶಾಹಿಗರ ಆಟಾಟೋಪ, ಜಾಗತೀಕರಣದ ಒಡಲಲ್ಲಿ ಸಿಕ್ಕಿಬಿದ್ದಿರುವ ದುರಾಸೆಯ ಮನು ಕುಲದ ದುರಂತ, ಇದೇ ಎಂದು ಒಂದೆರಡೇ ಸಂಗತಿಯ ಕುರಿತು ಬೆರಳಿಟ್ಟು ತೋರಲು ಆಗದೇ ಇರುವಷ್ಟು ಅನೇಕಗಳನ್ನು ಮತ್ತು ಅವೆಲ್ಲದರ ಕುರಿತು ನನ್ನ ಒಟ್ಟಾರೆ ಯೋಚನೆಯ ದಿಕ್ಕನ್ನೇ ಬದಲಾಯಿಸಿದ ಅರಿವು ಅದು.

ಮಾನವನ ದುರಾಸೆಗೆ ಕಡಿವಾಣ ಹಾಕುವ ಎಚ್ಚರಿಕೆಯ ಸಂದೇಶ ಸಾರುವ ಸಂಪಾದಕೀಯಗಳಂತೂ ನಾನು ಇತ್ತೀಚೆಗೆ 'ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ' ಗಳಂತಹ ಹಲವು ಸಮಾಜಮುಖೀ ಸಂಘಟನೆಗಳಲ್ಲಿ ತೊಡಗಿಕೊಳ್ಳಲು ಅಪ್ರತ್ಯಕ್ಷವಾಗಿ ಧೈರ್ಯ ತುಂಬಿವೆ. ಇಂಥ ಲೋಕಜ್ಞಾನದ ಸೂಕ್ಷ್ಮಗಳು ನಮ್ಮ ಕತೆ–ಕಾದಂಬರಿಗಳಿಗೇನೂ ವಿರೋಧಿಗಳಲ್ಲ, ಕೇವಲ ಬರೆಯುತ್ತಾ ಕೂತರೆ ದಂತಗೋಪುರದಲ್ಲಿ ಕೂತಂತೆ ಆದೀತು, ಅದರೊಟ್ಟೊಟ್ಟಿಗೆ ಸಾಮಾಜಿಕವಾಗಿ ತೊಡಗಿಕೊಳ್ಳುವ ಹುಮ್ಮಸ್ಸನ್ನು ಇಲ್ಲಿಯ ಓದು ನೀಡಿದೆ ಅಂದರೆ ಅತಿಶಯೋಕ್ತಿಯಲ್ಲ. ಸಿದ್ಧಮಾದರಿಯನ್ನು ಒಪ್ಪಿಕೊಂಡು ಕೂಡುವ, ಯಾವುದೇ ಒಂದು ವಿಷಯದ ಕುರಿತು ಹಿಂದಿನವರು ಹೇಳಿದ್ದನ್ನೇ ಸ್ವೀಕರಿಸಿ, ಏನನ್ನೂ ಪ್ರಶ್ನಿಸದ ನನ್ನ ಮುಂಚಿನ ಮನಸ್ಥಿತಿಯನ್ನು ಗಟ್ಟಿಗೊಳಿಸಿ, ಪ್ರಶ್ನಿಸುವ ಸ್ವಭಾವವನ್ನು ನೀಡಿ, ಭವಿಷ್ಯದ ಕುರಿತು ಇದ್ದ ಭೀತಿಯನ್ನು ಹೋಗಲಾಡಿಸಿದ್ದು ಅಕ್ಷರಶಃ ಈ ಪತ್ರಿಕೆಯ ಓದು. ಸಾಮಾಜಿಕವಾಗಿ ಮಾತ್ರವಲ್ಲ ಕೌಟುಂಬಿಕವಾಗಿ ಕೂಡ ಪತ್ರಿಕೆಯ ವಿಚಾರಧಾರೆಗಳು ಮನಸ್ಸನ್ನು ಪ್ರಭಾವಿಸಿ ವಿಶಾಲಗೊಳಿಸಿವೆ.

ಈ ಯುಗದ ಚಹರೆಯನ್ನೇ ಬದಲಿಸಿದ ಅಂಬೇಡ್ಕರ್, ಮಾರ್ಕ್ಸ್, ಲೋಹಿಯಾ, ಗಾಂಧಿ ಹಾಗೂ ಸ್ತ್ರೀವಾದಗಳೆಂಬ ವಿಚಾರವಾದಗಳ ಬಗ್ಗೆಯಂತೂ ಒಂದು



ವಿಸ್ತೃತ ಅರಿವು, ಎಚ್ಚರ, ತಿಳಿವಳಿಕೆಗಳನ್ನು ನನ್ನಲ್ಲಿ ಉಂಟುಮಾಡುವಲ್ಲಿ 'ಹೊಸ ಮನುಷ್ಯ' ದೊಡ್ಡ ಪಾತ್ರವಹಿಸಿದೆ. ಬದಲಾವಣೆಗೆ ಪೂರಕವಾದ ರೀತಿಯಲ್ಲಿ ನಮ್ಮ ಭಾಷೆಯನ್ನೂ ಯೋಚನೆಯ ದಾರಿಯನ್ನೂ ಪ್ರಜ್ಞಾಪೂರ್ವಕ ಬದಲಾಯಿಸಿಕೊಳ್ಳಬೇಕೆಂಬ ಅರಿವು ಮೂಡಿಸಿದ್ದು ಇಲ್ಲಿಯ ಒಟ್ಟಾರೆ ಓದು. ಇದು ಐವತ್ತರ ಗಡಿ ದಾಟಿದ ನನ್ನಂಥವರಿಗೆ ಒಂದು ಬಹುಮುಖ್ಯ ಘಟ್ಟ ಎಂದೇ ನಾನು ನಂಬಿದ್ದೇನೆ. ಇಂದಿನ ಭೀಷಣ ಕಾಲದಲ್ಲಂತೂ ನಮ್ಮ ಸುತ್ತಲಿನ ಹಸಿರು ಪರಿಸರವನ್ನು ಉಳಿಸಿ ಬೆಳೆಸಿ ಶುದ್ಧವಾಗಿಟ್ಟುಕೊಂಡು ಹೋಗಲೇಬೇಕಾದ ಅನಿವಾರ್ಯತೆ ಹಾಗೂ ಅಗತ್ಯಗಳನ್ನಂತೂ 'ಹೊಸ ಮನುಷ್ಯ' ಹಲವರ ವಿಚಾರ, ವಿಮರ್ಶೆ, ಸಂದರ್ಶನ, ಅನುಸಂಧಾನಗಳ ಮೂಲಕ ನಮಗೆ ಪ್ರತಿ ಸಂಚಿಕೆಯಲ್ಲೂ ನೀಡುತ್ತ ಬಂದಿದೆ. ಇವೆಲ್ಲಕ್ಕಾಗಿ ನಾನು 'ಹೊಸ ಮನುಷ್ಯ' ದ ನಿರಂತರ ಓದುಗಳು.

–ಸುನಂದ ಕಡಮೆ, ಕವಯತ್ರಿ, ಕಥೆಗಾರ್ತಿ ಮತ್ತು ಸಂಘಟಕಿ, ಹುಬ್ಬಳ್ಳಿ

ಸಾಮಾಜಿಕ ಸ್ವಾಸ್ಥ್ಯ ಸಂರಕ್ಷಣೆಯ ಕೇಂದ್ರದಂತಿರುವ ಪತ್ರಿಕೆ


'ಹೊಸಮನುಷ್ಯ'ನ ಎಂಟನೇ ವಿಶೇಷಾಂಕಕ್ಕೆ ಪ್ರೀತಿಯ ಸ್ವಾಗತ. ಹಠಾತ್ ನಿಂತೇ ಹೋಗಿ ಹತಾಶೆ ಮೂಡಿಸಿದ್ದ ಪತ್ರಿಕೆ ಮರುಹುಟ್ಟುಪಡೆದು, ೯ ರಿಂದ ೧೦ನೇ ವಸಂತದೆಡೆ ಸಾಗಿರುವುದು ಹೆಮ್ಮೆ ಮೂಡಿಸುತ್ತಿದೆ.

'ಹೊಸಮನುಷ್ಯ' ಕೇವಲ ಒಂದು ಪತ್ರಿಕೆಯಾಗಿರದೆ ವಿಚಾರವಂತರು, ಸಂವೇದನಾಶೀಲರು, ಸಾಮಾಜಿಕ ಕಳಕಳಿ ಇರುವ ಸಹೃದಯರನ್ನು ಒಟ್ಟಾಗಿ ಬೆಸೆದಿರುವ ಆತ್ಮೀಯ ವಿಚಾರ ವೇದಿಕೆಯಾಗಿದೆ. ಇಲ್ಲಿ ಮೂಡಿಬರುತ್ತಿರುವ ಪ್ರತಿಯೊಂದು ಬರಹವೂ ಚಿಂತನಶೀಲ ವಿಚಾರಧಾರೆಯಂತಿದ್ದು, ಇವೆಲ್ಲ 'ನಮ್ಮೆಲ್ಲರ ಸ್ವಂತ ಅಭಿಪ್ರಾಯಗಳೇ' ಎಂಬ ಭಾವನೆ ಮೂಡಿಸುತ್ತಾ ಪತ್ರಿಕಯು ಒಂದು ಸಾಮಾಜಿಕ ಸ್ವಾಸ್ಥ್ಯ ಸಂರಕ್ಷಣೆಯ ಕೇಂದ್ರದಂತಿದೆ. ಆದ್ದರಿಂದ ಇದು ಪ್ರತೀ ಮಾಸವೂ ಪ್ರೀತಿಯಿಂದ ನಿರೀಕ್ಷಿಸುವ ಆಪ್ತ ಸಂಗಾತಿಯೇ ಆಗಿದೆ.

ನಮ್ಮ ಆಲೋಚನೆಗಳನ್ನು ತಿದ್ದುತ್ತಾ, ಚಿಂತೆಗಳನ್ನು ವಿಮರ್ಶೆಗೆ ಒಳಪಡಿಸುತ್ತಾ, ನಮ್ಮ ಜೀವನಕ್ರಮ ನಡೆನುಡಿಗಳನ್ನು ಪೋಷಿಸುವಲ್ಲಿ ಪತ್ರಿಕೆಯ ಪ್ರಭಾವ ಗಮನಾರ್ಹವಾಗಿದೆ. ಸಂಪಾದಕೀಯ ಲೇಖನ, ರಾಜಕೀಯ, ಶಿಕ್ಷಣ, ವಿಜ್ಞಾನ, ಭಾಷೆ, ಸಾಹಿತ್ಯ-ಸಂಸ್ಕೃತಿ, ಪರಿಸರ, ಹಾಸ್ಯ ಕುರಿತು ಪ್ರತಿಯೊಂದು ಲೇಖನಗಳೂ ಒಂದು ಪುಟ್ಟ ಪತ್ರಿಕೆಯಲ್ಲಿ ಗುಣಮಟ್ಟ ತಪ್ಪದೆ, ರಾಜಿ-ಮುಲಾಜುಗಳಿಗೆ ಒಳಪಡದೆ, ಗಂಭೀರತೆ ಕಳೆದುಕೊಳ್ಳದೆ, ಸಂಚಿಕೆಯಿಂದ ಸಂಚಿಕೆಗೆ ಹೊಸತನ ಕಳೆದುಕೊಳ್ಳದೆ ಹೊರಬರುತ್ತಿರುವ ಪರಿಯೇ ಒಂದು ಅಚ್ಚರಿಯಾಗಿದೆ.

ಕಳೆದ ಒಂದು ವರ್ಷದ ಪತ್ರಿಕೆಯನ್ನು ಅವಲೋಕಿಸಿದಲ್ಲಿ ರಾಷ್ಟ್ರೀಯತೆ ಪೌರತ್ವ ತಿದ್ದುಪಡಿ, ಹಿಂದೂತ್ವ, ನ್ಯಾಯಾಂಗದ ನಡೆಗಳ ಕುರಿತಾದ ಲೇಖನಗಳು, ನಮ್ಮ ರಾಜಕೀಯದ ಕರಾಳತೆಯನ್ನು, ತೋರಿಸಿ ನಮ್ಮ ಸಂವಿಧಾನದ ಆಶಯಗಳ ಉಳಿವಿನ ಬಗ್ಗೆ ಆತಂಕ ಮೂಡಿಸುತ್ತಿವೆ. ಹರ್ಷಮಂದರ್ ಅವರ 'ಒಂದು ಬಹಿರಂಗ ಪತ್ರ' ನಮ್ಮ ವ್ಯವಸ್ಥೆಯ ಬಗ್ಗೆ ಆಕ್ರೋಶ ಮೂಡಿಸುತ್ತದೆ. ಗಾಂಧಿ, ನೆಹರು, ಲೋಹಿಯಾ ವಿಚಾರಧಾರೆಗಳ ಲೇಖನ, ಆಧ್ಯಾತ್ಮಿಕ ಮತ್ತು ಧರ್ಮಗಳ ಕುರಿತ ವಿಚಾರಗಳು ಮನಸ್ಸಿಗೆ ಹಿತ ನೀಡಿವೆ.

'ದೇವರು ಅತ್ತ', 'ನಿಲ್ದಾಣಪಾದಗಳ ಮೇಲೆ ಬರೆದ ಋಣದ ಸಾಲು', 'ಅಗ್ನಿ ಪರ್ವತಗಳ ಭೂಮಿ ಅವಳು', 'ಹೊಟ್ಟೆ ಸಂಕಟ', 'ಚಾಕು ಜಾದೂಗಾರ' ಕವನಗಳು, 'ಚುಕ್ಕೆ ಮತ್ತು ಬಯಲು' 'ಮುದುಕ ಮತ್ತು ಮಗು', 'ಹಸಿವು' ಕಥೆಗಳು ಸೂಕ್ಷ್ಮ ಸಂವೇದನೆಗಳಿಂದ ಗಂಭೀರ ಚಿಂತನೆಗೆ ತೊಡಗಿಸುವಲ್ಲಿ ಗಮನೀಯವಾಗಿವೆ. 'ಬೋಟಿಗೊಜ್ಜು' ಲಲಿತ ಪ್ರಬಂಧ ನೆನೆಸಿಕೊಂಡಷ್ಟು ಮುದ ನೀಡುತ್ತದೆ. ಈ ಹಲವು ಉದಾಹರಣೆ ಹೊರತುಪಡಿಸಿ ಉಳಿದೆಲ್ಲ ಬರಹಗಳೂ ತಮ್ಮ ವೈಚಾರಿಕತೆ, ವಸ್ತು ನಿಷ್ಠತೆಗಳಿಂದ ನಮ್ಮ ಭ್ರಮೆಗಳನ್ನು ಅಳಿಸಿ, ಅರಿವನ್ನು ವಿಸ್ತರಿಸುವ ಸಮರ್ಥ ಲೇಖನಗಳಾಗಿವೆ.



ನಿರಂತರ ಪಕ್ವತೆಯತ್ತ ಸಾಗುತ್ತಿರುವ 'ಹೊಸಮನುಷ್ಯ'ನಲ್ಲಿ 'ಮುದ್ರಣ ದೋಷ'ದ ಲೋಪವನ್ನು ಗಮನಿಸಲು ಸೂಚಿಸುತ್ತಾ, ಪತ್ರಿಕೆಯ ಯಶಸ್ಸಿಗೆ ಕಾರಣರಾದ ನಿಷ್ಠುರ ಸಂಪಾದಕರನ್ನೂ, ಬದ್ಧತೆಯ ಬರಹಗಾರರನ್ನೂ ಅಭಿನಂದಿಸಿ ಶುಭಕೋರುತ್ತೇನೆ.

–ಆರ್. ಶಾಂತಮೂರ್ತಿ, ಪ್ರೌಢಶಾಲಾ ಮುಖ್ಯೋಪಾಧ್ಯಾಯರು, ನಾಗಸಂದ್ರ, ತುಮಕೂರು ಜಿ)

'ಹೊಸ ಮನುಷ್ಯ' ಒಂದು ಓಯಸಿಸ್‌ನಂತಿದೆ

ಕನ್ನಡದ ಮಾಸ ಪತ್ರಿಕೆಗಳಲ್ಲಿ ಬದ್ಧತೆ, ನಿಷ್ಠುರತೆ, ಬಹುತ್ವದ ಪರವಿರುವ ಒಂದೆರೆಡು ಪತ್ರಿಕೆ ಗಳಲ್ಲಿ ' ಹೊಸ ಮನುಷ್ಯ ' ಸಹ ಒಂದು. ಸಮಾಜವಾದದ ಸತ್ವದ ಮೇಲೆ ಹೊರಬರುವ ಈ ಪತ್ರಿಕೆ ಕೃಷಿ, ಆರ್ಥಿಕತೆ, ಸಾಹಿತ್ಯ, ರಂಗಭೂಮಿ, ರಾಜಕೀಯದ ಬಗ್ಗೆ ಹಲವು ಗಹನವಾದ ಎಂದೆಂದಿಗೂ ನಿಲ್ಲಬಲ್ಲ ಬರಹಗಳನ್ನು ಪ್ರಕಟಿಸಿದೆ. ಬೇರಾವುದೇ ಪತ್ರಿಕೆಗಳಲ್ಲಿ ಕಂಡುಬರದ ನಿಜವಾದ ಆಧ್ಯಾತ್ಮಿಕ ಒಲವು, ನಿಲುವು ಈ ಪತ್ರಿಕೆಗಿದೆ. ಪತ್ರಿಕೆ ನಡೆಸುವುದೇ ಕಷ್ಟವಾಗಿರುವ ಈ ದಿನಗಳಲ್ಲಿ ನಮಗೆಲ್ಲ ತಿಳಿದಿರುವ ಹಲವು ಸಮಸ್ಯೆಗಳ ನಡುವೆಯೇ ಪತ್ರಿಕೆಯನ್ನು ಸಂಪಾದಕರು ಮತ್ತು ಅವರ ಜೊತೆಗಾರರೂ ಹೊರತರುತ್ತಿರುವುದು ಬಹು ದೊಡ್ಡ ಸಾಹಸ. ಕನ್ನಡದ ಬಹುತೇಕ ಬರಹಗಳಲ್ಲಿ ನಿಷ್ಠುರತೆ, ವಿವೇಕ ಕಾಣೆಯಾಗಿರುವ ಈ ದಿನಗಳಲ್ಲಿ 'ಹೊಸ ಮನುಷ್ಯ' ಒಂದು ಓಯಸಿಸ್ ನಂತಿದೆ.

ಅಂತರಾಷ್ಟ್ರೀಯ , ರಾಷ್ಟ್ರೀಯ ಮಟ್ಟದಲ್ಲಿ ಆಂಗ್ಲ ಭಾಷೆಯಲ್ಲಿ ಬರುವ ಹಲವು ಘನವಾದ ಮಾಸ ಪತ್ರಿಕೆಗಳ ಸಾಲಿಗೆ ' ಹೊಸ ಮನುಷ್ಯ'ವನ್ನು ಸೇರಿಸಬಹುದು. ಇಂತಹ ಎಲ್ಲ ಪತ್ರಿಕೆ ಗಳ ಓದುಗನಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಆದರೆ 'ಹೊಸ ಮನುಷ್ಯ' ತಲುಪಬೇಕಾದಷ್ಟು ಇಂದಿನ ಪೀಳಿಗೆಯನ್ನು ತಲುಪಿಲ್ಲ. ಮಾರ್ಕೆಟಿಂಗ್ ಕಡೆಗೆ ಸಂಪಾದಕರು ಗಮನಹರಿಸಬೇಕೆಂಬುದು ನನ್ನ ಮನವಿ.

ಸಾಹಿತ್ಯ ಮತ್ತು ರಂಗಭೂಮಿಯ ವಿಷಯದಲ್ಲಿ ವಿಮರ್ಶೆಗಳು ಬಂದಂತೆ ಸಂಗೀತ, ಜನಪದ, ಸಿನಿಮಾಗಳ ಮೇಲೂ ವಿಶ್ಲೇಷಣೆ, ವಿಮರ್ಶೆಗಳಿದ್ದರೆ ಚೆನ್ನ. ಲೋಹಿಯಾ, ಜೆಪಿ, ಕಮಲಾದೇವಿ ಚಟ್ಟೋಪಾಧ್ಯಾಯವರ ಬಯಾಗ್ರಫಿಯನ್ನು ಸರಳವಾಗಿ ಇಂದಿನ ತಲೆಮಾರನ್ನು ಗಮನದಲ್ಲಿಟ್ಟುಕೊಂಡು ಧಾರಾವಾಹಿಯಾಗಿ ಪ್ರಕಟಿಸಲು ಸಾಧ್ಯವೇ? ಈ ಎಲ್ಲರ ಬಗೆಗೆ 'ಹೊಸ ಮನುಷ್ಯ' ದಲ್ಲಿ ಬರಹಗಳು ಬಂದಿವೆಯಾದರೂ ' ಗಾಂಧಿ ಕಥನ' ದಂತೆ ಬರಲಿ ಎಂಬುದು ಓದುಗನಾಗಿ ನನ್ನ ಕೋರಿಕೆ.

ಹೊಸ ಮನುಷ್ಯ ಪತ್ರಿಕೆಯ ಎಲ್ಲ ಸಂಚಿಕೆಗಳನ್ನು ಕೂಡಿಟ್ಟು ಕಾಲೇಜುಗಳಲ್ಲಿ ಓದುತ್ತಿರುವ ಬೆರಳೆಣಿಕೆಯಷ್ಟು ವಿದ್ಯಾರ್ಥಿಗಳಿಗೆ ಓದಿಸುವ ನನಗೆ ಅನ್ನಿಸುವುದೇನೆಂದರೆ, ಇಂದಿನ ಪೀಳಿಗೆ ನಾವು ತಿಳಿದಷ್ಟು ಘನವಾದ ಓದಿಗೆ ಸಂವೇದನೆಗೆ ವಿಮುಖರಾಗಿಲ್ಲವೆಂದು. ಕೆಲವೊಮ್ಮೆ ಸಂಪಾದಕರ ಬೀಸುದೊಣ್ಣೆ ಹೆಚ್ಚೇ ಬೀಸಿತೇನೋ ಎನಿಸಿದ್ದು ಇದೆ.



ವರ್ಣರಂಜನೆಯೇ ಮುಖ್ಯ ವಾಗಿರುವ ಕಾಲದಲ್ಲಿ ಅದಿಲ್ಲದೆಯೂ ನೂರು ಸಂಚಿಕೆ ಗಳನ್ನು ಮುಗಿಸಿರುವುದು ಸಾಧನೆಯೇ ಸರಿ

–ಶ್ರೀಕಾಂತ .ಎಸ್.ವಿ., ರಂಗ ಶಿಕ್ಷಕ ಮತ್ತು ರಂಗಕರ್ಮಿ, ಕೊಟ್ಟೂರು

'ಹೊಸ ಮನುಷ್ಯ'-ಪತ್ರಿಕೆಯ-ಜುಲೈ-೨೦೨೦ರ-ಸಂಚಿಕೆಯ ಸಂಪಾದಕರ ಟಿಪ್ಪಣಿಗಳು ಎಂದಿನಂತೆ ನಿಮ್ಮ ಪತ್ರಿಕೆಯಲ್ಲಿ ಮಾತ್ರ ಪ್ರಕಟವಾಗಬಹುದಾದ ವಿಚಾರಪೂರ್ಣ ಪ್ರತಿಕ್ರಿಯೆಗಳಾಗಿವೆ. ಚೀನಾ ಮತ್ತು ಭಾರತದ ನಡುವಿನ ಗಡಿ ಸಂಘರ್ಷದ ಬಗೆಗಿನ ಅಭಿಪ್ರಾಯಗಳನ್ನು ದೇಶಪ್ರೇಮದ ಒರೆಗಲ್ಲಿಗೆ ಹಚ್ಚಿ ಆಳುವವರು ಮತ್ತು ಮಾಧ್ಯಮಗಳು ಮೌಲ್ಯಮಾಪನ ಮಾಡುತ್ತಿವೆ.ಈ ಬಿಕ್ಕಟ್ಟಿನ ಬಗ್ಗೆ ಎತ್ತುವ ಪ್ರಶ್ನೆಗಳು ದೇಶದ್ರೋಹವೆನ್ನುವಂತೆ ಎಲ್ಲರೂ ಬಾಯನ್ನು ಕಟ್ಟಿಹಾಕಲಾಗುತ್ತಿದೆ. ಸಂಪಾದಕೀಯದಲ್ಲಿ ಸಲಹೆ ಮಾಡಿರುವಂತೆ ದೇಶದ್ರೋಹದ ವರಸೆಗಳನ್ನು ಬಿಟ್ಟು ಸಂಘರ್ಷದ ಕಾರಣಗಳು ಮತ್ತು ಅದರ ಪರಿಹಾರೋಪಾಯಗಳ ಬಗ್ಗೆ ತಣ್ಣನೆಯ ಮನಸ್ಸಿನೊಂದಿಗೆ ಕೂತು ವಿಮರ್ಶಿಸಿಕೊಳ್ಳಬೇಕಾದ ಕಾಲ. ಆದರೆ ಶಬ್ದಮಾಲಿನ್ಯ ವೃದ್ಧಿಸುವುದೇ ಆಳುವ ಸಮರ್ಥ ವಿಧಾನ ಎಂದು ನಂಬಿರುವ ವಿರೋಧ ಪಕ್ಷಗಳ ಧ್ವನಿ ಕ್ಷೀಣಿಸಿರುವ, ಮಾಧ್ಯಮಗಳು ಆಳುವ ಪಕ್ಷಕ್ಕೆ ಬೆಂಬಲ ಘೋಷಿಸಿರುವ ಕಾಲದಲ್ಲಿ , ಇದು ಸಾಧ್ಯವೇ ಎಂಬುದು ಅನುಮಾನ.

–ಕೆ.ಪುಟ್ಟಸ್ವಾಮಿ, ಬೆಂಗಳೂರು

ಜಗತ್ತಿನ ಶತಕೋಟಿ ಬಂಡವಾಳಿಗರ ಏಕಸ್ವಾಮ್ಯತೆಯ ಪರಿಸರ ವಿರೋಧಿ ನಿಲುವುಗಳ ಬಗ್ಗೆ ವಂದನಾಶಿವರವರು ಮನಮುಟ್ಟುವಂತೆ ಹೇಳಿದ್ದಾರೆ.ಹಣವನ್ನು ಶತಕೋಟಿ ಲೆಕ್ಕದಲ್ಲಿ ಕೂಡಿಡುವುದರ ಹಿಂದೆ ಇಂಥಹ ಅಮಾನವೀಯತೆ ಇರುವುದನ್ನು ತೋರಿಸಿದ್ದಾರೆ. ಹಿಟ್ಲರ್‌ನ ಮುಂದುವರಿಕೆಯಾಗಿ ರಾಸಾಯನಿಕ ಗೊಬ್ಬರ,ವಿಷಾನಿಲಗಳು ಇಂದಿಗೂ ಜಗತ್ತನ್ನು ಆಳುತ್ತಿರುವುದು ಆಶ್ಚರ್ಯವನ್ನುಂಟು ಮಾಡುತ್ತಿದೆ. ಇದು ಹಿಟ್ಲರ್ ಮನಸ್ಥಿತಿಯ ಮುಂದುವರಿಕೆಯಂತೆಯೇ ಕಾಣುತ್ತಿದೆ. ಈ ಲೇಖನ? ಮುಂದುವರಿಕೆಯಂತೆ ರಾಜಮೋಹನ್ ಗಾಂಧಿಯವರ

ಮಾತುಗಳಿವೆ.ಆದರೆ ವ್ಯತ್ಯಾಸವಿರುವುದು ವಂದನಾ ಶಿವರವರು ಖಾಸಗಿ ಬಂಡವಾಳಿಗರ ಪರಿಸರ ವಿರೋಧಿ ಅಮಾನವೀಯತೆ ಬಗ್ಗೆ ಹೇಳಿದರೆ ರಾಜಮೋಹನ ಗಾಂಧಿಯವರು ಚೀನಾದಂತಹ ಪ್ರಭುತ್ವ ಹೇಗೆ ಬಹು ಆಯಾಮದ ಮಾತುಗಳನ್ನು ಹತ್ತಿಕ್ಕಿ ಇಡೀ ಪ್ರಪಂಚದ ಮೇಲೆ ಹೇಗೆ ಕ್ರೂರವಾಗಿ ಮೇಲರಗಿದೆ ಎಂಬುದನ್ನು ತಿಳಿಸುತ್ತಾರೆ. ಮತ್ತೆ ಗಾಂಧಿಯವರ ವಿಕೇಂದ್ರಿಕೃತ ತಿಳಿವಿಗೆ ಬರಬೇಕೆಂಬ ಸಾರ್ವಕಾಲಿಕ ಕಾಣ್ಕೆ ನಮಗೆ ತೋರುತ್ತಾರೆ. ಈ ಅಪಾಯದ ಪರಿಣಾಮ ಸೈಫ್ ಕೊಟ್ಟೂರು ಅವರ ಪದ್ಯ, ನಗರಗಳು ತುರ್ತು ಘಟಕಗಳಲಿ, ಹಳ್ಳಿಗಳು ಕೊಂಪೆಗಳಾಗಿ ಎಂದು ಸಮಾಜಕ್ಕೆ ಹುಳು ಬಡಿದಿರುವುದನ್ನು ಸೂಚಿಸುವ ಪದ್ಯ ವಿಶೇಷವಾಗಿ ಕಾಣುತ್ತದೆ.

–ಅಪೂರ್ವ ಡಿ'ಸಿಲ್ವ, ಮೈಸೂರು

ಜುಲೈ ಸಂಚಿಕೆಯಲ್ಲಿ "ಧರ್ಮವಿಚಾರ ಪುಟ'ದಲ್ಲಿನ ಶೃಂಗೇರಿ ಮಠದ ವಿಭಿನ್ನ ಪೀಠಾಧಿಪತಿ ಎಂಬ ನಿಮ್ಮ ಲೇಖನ ಧರ್ಮದ ಬಗ್ಗೆ ನಡೆದಿರುವ ಇಂದಿನ ಕಚ್ಚಾಟದ ದಿನಗಳಲ್ಲಿ ಬೋಧಪ್ರದವಾಗಿದೆ. ಇಂತಹ ಲೇಖನಗಳು ಹೆಚ್ಚು ಬರಲಿ.

–ಜಿ.ಬಿ. ಶಿವರಾಜು, ಬೆಂಗಳೂರು

ಕಳೆದ ಎಂಟು ತಿಂಗಳಿನಿಂದ ಆರು ಮಾಸಿಕ ಸಂಚಿಕೆಗಳಿಗೆ ಚಂದಾದಾರನಾಗಿದ್ದೇನೆ. ಯಾವ ಮಾಸಿಕ ಸಂಚಿಕೆಯ, ಯಾವ ಸಂಪಾದಕರು ನೀವು ಬರೆದ ಹಾಗೆ ಬರೆದದ್ದು ನನ್ನ ಓದಿನ ಮಿತಿಯಲ್ಲಿ ಕಂಡಿಲ್ಲ. ನಿನ್ನೆ ನನಗೆ ತಲುಪಿದ "ಹೊಸ ಮನುಷ್ಯ" ಜುಲೈ ಸಂಚಿಕೆಯನ್ನೂ ಒಳಗೊಂಡಂತೆ. ಅಂದರೆ

ನಿಮ್ಮ ಬರವಣಿಗೆ ಅನೇಕರಿಗೆ ಬಹಳ ನೇರ ಮತ್ತು ಖಾರ ಅನ್ನಿಸಿರಬಹುದು. ಆದರೆ ಸತ್ಯ ಮಾತ್ರ ಮರೆಮಾಚದಂತೆ, ಕಣ್ಣಿಗೆ ಕಟ್ಟಿದಂತೆ ಸೃಜಿಸಿರುತ್ತೀರಿ.

ಅದು ಯಾವ ಕ್ಷೇತ್ರವಾದರೂ ಆಗಿರಬಹುದು.

ಅಲ್ಲದೇ ಆಯಾ ಕ್ಷೇತ್ರದ ನೇತಾರರು, ಆಯಾ ಕ್ಷೇತ್ರದ ಅಭಿವೃದ್ಧಿಗಾಗಿ ಎಲ್ಲಿ ಎಡವಿ ಬಿದ್ದಿದ್ದಾರೆ?

ಅದು ಯಾಕೆ? ಎಂಬಿತ್ಯಾದಿ ಪ್ರಶ್ನೆಗಳ ಮೂಲಕ ಮಾತ್ರ ನಿಮ್ಮ ಬರಹ ಸಾಗುವುದಿಲ್ಲ. ಬದಲಾಗಿ ಅವರ ಯೋಚನೆಗಳು ವಿಫಲವಾಗಲು ಕಾರಣಗಳೇನು ಎನ್ನುವುದರ ಬಗ್ಗೆ ಹುಡುಕಿರುತ್ತೀರಿ.

ಇದರ ಬಗೆಗೆ ಅವರು ಯೋಚಿಸಬೇಕಾದ, ಕೈಗೊಳ್ಳಬೇಕಾದ ನಿರ್ಧಾರಗಳಾದರೂ ಹೇಗಿರಬೇಕು . ಜೊತೆಗೆ ಅವರ ದಡ್ಡತನ ಎಂಥದು ಎಂಬುದನ್ನು ಮುಖ–ಮೂತಿ ನೋಡದಯೇ ಕಡಿಮೆ ಪದಸಂಖ್ಯೆಯ ಮಿತಿಯಲ್ಲಿಯೇ ಕಟ್ಟಿರುತ್ತೀರಿ. ಆದರೂ ಮತ್ತೆ–ಮತ್ತೆ ಯೋಚನೆಗೀಡು ಮಾಡಿಸದೇ ನಿಮ್ಮ ಬರಹ ಸುಮ್ಮನಿರಲಾರದು. ಬದಲಾಗಿ ಹಾಗೆ ಯೋಚನೆ ಮಾಡಿಸುವುದರಲ್ಲಿಯೇ ೫೦೦ರ ಪದ ಸಂಖ್ಯೆಯ ಮಿತಿ ನನ್ನೊಳಗೆ ಸಾವಿರ ಪದಗಳ ಯೋಚನೆಯ ಗಡಿಯನ್ನು ದಾಟಿಸಿರುತ್ತದೆ.

–ಶ್ರೀಧರ ಆರ್.ವಿ. ತುಮಕೂರು

ಜುಲೈ ಸಂಚಿಕೆಯಲ್ಲಿ ನನ್ನ ಬಗ್ಗೆ ಪ್ರೀತಿಯ ಮಾತುಗಳನ್ನಾಡಿದ ನಿಮಗೆ ಕೃತಜ್ಞ. ಒಂದು ಮಜಾ ಕೊಟ್ಟ ಸಂಗತಿ ಎಂದರೆ, ನನಗೆ ನೀವು ಎಂಬತ್ತರಿಂದ ಒಮ್ಮೆಗೇ ತೊಂಬತ್ತಕ್ಕೆ ಜಿಗಿತ ನೀಡಿದ್ದು! ಅದಷ್ಟು ಬೇಗ ನಾನು ನೂರಕ್ಕೆ ತಲುಪುವಂತೆ ಮಾಡುವುದು ನಿಮ್ಮ ಪ್ಲಾನ್ ಇರಬೇಕು. ಇರಲಿ, ನಿಮ್ಮ ಪ್ರೀತಿ ನನ್ನನ್ನು ಮುಟ್ಟಿದೆ. ಥೇಂಕ್ಸ್ ಮಾರಾಯರೆ!

–ಸುಬ್ರಾಯ ಚೊಕ್ಕಾಡಿ, ಚೊಕ್ಕಾಡಿ

(ನಿಮ್ಮ ಶತಮಾನೋತ್ಸವಕ್ಕೆ ನಾವೆಲ್ಲ ಹಾಜರಾಗಬೇಡವೇ? ಅದಕ್ಕೇ ಈ ಪ್ಲಾನ್!–ಸಂ.)


ಇಬ್ಬರು ಹಿರಿಯ ಓದುಗರ ಪತ್ರ–ಬರಹಗಳು

ತಮ್ಮ ಹೊಸಮನುಷ್ಯ ಜೂನ್ ೨೦೨೦ ರ ಸಂಚಿಕೆಯಲ್ಲಿ ಡಾ. ಎ.ಎನ್. ನಾಗರಾಜ್ ಅವರ 'ಆಹಾರ ಸಂಜೀವಿನಿ' ಎಂಬ ಪುಸ್ತಕದ ಬಗ್ಗೆ ಶ್ರೀಮತಿ ಕೆ.ಪದ್ಮಾಕ್ಷಿ ಇವರು ಬರೆದಿರುವ 'ಉತ್ತಮ ಆರೋಗ್ಯಕ್ಕೊಂದು ಮಾರ್ಗದರ್ಶಿ' ಎಂಬ ಲೇಖನ ಓದಿ ಸಸ್ಯಾಹಾರದಿಂದ ಉತ್ತಮ ಆರೋಗ್ಯವೆಂದು ಪ್ರತಿಪಾದಿಸಲು 'ವಿದೇಶಗಳಲ್ಲಿ ಸಂಪೂರ್ಣ ಸಸ್ಯಾಹಾರಿಗಳು' ಎಂಬ ಲೇಖನವೊಂದನ್ನು ಆ ಬಗ್ಗೆ ನಾನು ಪ್ರಕಟಿಸಿರುವ 'ವೇಗಾನ್' ಡೈರಿ ಸಮೇತ ಈ ಮೂಲಕ ಕಳುಹಿಸಿರುತ್ತೇನೆ. ನಾನು ಲಂಡನ್ನಿನಲ್ಲಿ ಆರು ತಿಂಗಳ ಕಾಲ ವಾಸವಿದ್ದು ಆಗ ಅಲ್ಲಿನ ವೇಗಾನ್ ಸೊಸೈಟಿಯ ಸಂಪರ್ಕದಿಂದ ನಾನೂ ಕೂಡ ಸಂಪೂರ್ಣ ಸಸ್ಯಾಹಾರಿಯಾಗಿ ಈ ಬಗ್ಗೆ ಪ್ರಚಾರ ಕೈಗೊಂಡಿರುತ್ತೇನೆ. ನನಗೀಗ ೮೫ ವರ್ಷ ವಯಸ್ಸು. ಕೊರೋನಾ ಸಂದರ್ಭದಲ್ಲಿ ಜನತೆ ಸಂಪೂರ್ಣ ಸಸ್ಯಾಹಾರಿಗಳಾಗಿ (ವೇಗಾನ್)ಸೋಂಕು ತಡೆಗಟ್ಟುವಲ್ಲಿ ಸಹಕಾರಿ ಆಗಲಿ ಎಂಬುದು ಈ ಲೇಖಕನ ಸದಾಶಯ.

ವಿದೇಶಗಳಲ್ಲಿ ಸಂಪೂರ್ಣ ಸಸ್ಯಾಹಾರಿಗಳು

ನಾನು ೨೦೦೨ ರಲ್ಲಿ ಆಸ್ಟ್ರೇಲಿಯಾ ಮತ್ತು ೨೦೦೭ ರಲ್ಲಿ ಇಂಗ್ಲೆಂಡ್ ದೇಶಗಳಿಗೆ ಭೇಟಿ ಕೊಟ್ಟಾಗ ಆ ದೇಶಗಳಲ್ಲಿ ಮತ್ತು ಬ್ರೆಜಿಲ್, ಜಪಾನ್, ಅಮೇರಿಕಾ ಮುಂತಾದ ಮುಂದುವರೆದ ದೇಶಗಳಲ್ಲಿ ವೇಗಾನ್ ಸೊಸೈಟಿ ಅಂದರೆ ಸಂಪೂರ್ಣ ಸಸ್ಯಾಹಾರಿ ಸಂಘಗಳಿವೆ ಎಂದು ತಿಳಿದುಬಂತು. ಇಂಗ್ಲೆಂಡಿನಲ್ಲಿದ್ದಾಗ ಅಲ್ಲೊಂದು ಸಂತೆಗೆ ಹೋಗಿದ್ದೆನು. ಆ ಸಂತೆಯಲ್ಲಿ ಚಪ್ಪಲಿ, ಬೂಟ್ಸ್ ಮಾರುವ ಅಂಗಡಿಯಲ್ಲಿ 'vegetarian shoes available' ಎಂಬ ಒಂದು ಬೋರ್ಡ್ ಹಾಕಿದ್ದರು. ಸಸ್ಯಾಹಾರವೇ ಪ್ರಧಾನವಾದ ನಮ್ಮ ದೇಶದಲ್ಲಿ ಎಲ್ಲೂ ಕಾಣದ ಇಂಥ ಬೋರ್ಡನ್ನು ಕಂಡು ಆಶ್ಚರ್ಯಚಕಿತನಾಗಿ ಅಂಗಡಿ ಮಾಲೀಕನನ್ನು ಇವು ಎಂಥ ಷೂಗಳು ಎಂದು ಕೇಳಿದೆ. ಅವನು ಇವು ವೇಗಾನರಿಗಾಗಿ ತಯಾರಿಸಿದವು ಎಂದನು. ವೇಗಾನ್ ಎಂದರೆ ಏನು? ಎಂದು ನನ್ನ ಪ್ರಶ್ನೆ. ಅವನು ವೇಗಾನರು ಎಂದರೆ ಸಂಪೂರ್ಣ ಸಸ್ಯಾಹಾರಿಗಳು ಅಂದರೆ ಪ್ರಾಣಿಜನ್ಯ ವಸ್ತುಗಳಾದ ಹಾಲು ಮೊಸರು, ಬೆಣ್ಣೆ ತುಪ್ಪ, ಜೇನುತುಪ್ಪ, ಚರ್ಮ, ಚರ್ಮದಿಂದ ಮಾಡಿದ ವಸ್ತುಗಳು ಇವುಗಳನ್ನು ಅವರು ಉಪಯೋಗಿಸುವುದಿಲ್ಲ, ಅವರನ್ನು 'ವೇಗಾನ್ಸ್' ಎಂದು ಕರೆಯುತ್ತಾರೆ ಈ ಪದ ವೆಜಿಟೇರಿಯನ್ ಎಂಬ ಪದದಿಂದ ಚುಟುಕು ಪದವಾಗಿ ಬಂದಿದೆ ಎಂದನು. ನಾವೇನೂ ಕಡಿಮೆಯಿಲ್ಲ ಎಂಬಂತೆ ನಮ್ಮ ದೇಶದಲ್ಲೂ ಕೋಟ್ಯಾನುಕೋಟಿ ಸಸ್ಯಾಹಾರಿಗಳಿದ್ದಾರೆ, ನಾವೂ ಸಹ ಮಾಂಸ, ಮೀನು, ಮೊಟ್ಟೆಗಳನ್ನು ಉಪಯೋಗಿಸುವುದಿಲ್ಲ, ಆದರೆ ಕೇವಲ ಹಾಲು,ಮೊಸರುಗಳನ್ನು ಉಪಯೋಗಿಸುತ್ತೇವೆ ಎಂದೆ. ಅದಕ್ಕುತ್ತರವಾಗಿ ಆ ಅಂಗಡಿ ಮಾಲೀಕ 'you are not a pure vegetarian' ಎಂದ. ನಮ್ಮ ದೇಶದಲ್ಲಿ ಯಾರೂ ಹೀಗೆ ಹೇಳಿರದ ಮಾತು ಕೇಳಿ ನನಗೆ ಮುಳ್ಳು ಚುಚ್ಚಿದಂತಾಯಿತು. ಸಾವರಿಸಿಕೊಂಡು ಮಾಂಸಾಹಾರವೇ ಪ್ರಧಾನವಾದ ದೇಶದಲ್ಲಿ ಇಂಥ ಜನರಿದ್ದಾರಲ್ಲ ಎಂದು ಸಂತೋಷವಾಗಿ ನಾನು ವೇಗಾನ್ ಸೊಸೈಟಿಗೆ ಸದಸ್ಯನಾದೆ. ಸಂಘದವರು ಒಂದು ಪುಸ್ತಕ ಕೊಟ್ಟು ಸಂಪೂರ್ಣ ಸಸ್ಯಾಹಾರಿ ಅಗಿ ಆ ಬಗ್ಗೆ ನಮ್ಮ ದೇಶದಲ್ಲಿ ಪ್ರಚಾರ ಮಾಡುವಂತೆ ಕೇಳಿಕೊಂಡರು. ನಮ್ಮ ದೇಶಕ್ಕೆ ಬಂದ ಮೇಲೆ ಪತ್ರಿಕೆಗಳಲ್ಲಿ ವೇಗಾನ್‌ರ ಬಗ್ಗೆ ಲೇಖನ ಬರೆದುದಲ್ಲದೆ ಸಾವಿರಾರು ಪಾಕೆಟ್ ಕ್ಯಾಲೆಂಡರ್ ಎಲ್ಲಾ ಉಚಿತವಾಗಿ ಹಂಚಿದೆ.

'ವೇಗಾನ್' ಯಾಕಾಗಬೇಕು? ಪಾಶ್ಚಿಮಾತ್ಯ ದೇಶಗಳಲ್ಲಿ ಗೋವುಗಳು ಸೇರಿದಂತೆ ಲಕ್ಷಾಂತರ ಪ್ರಾಣಿಗಳನ್ನು ಮೇಯಿಸಲು ಕಾಡುಗಳನ್ನು ಕಡಿದು ಹುಲ್ಲುಗಾವಲುಗಳನ್ನಾಗಿ ಪರಿವರ್ತನೆ ಮಾಡುತ್ತಿದ್ದಾರಂತೆ. ಪ್ರಾಣಿಗಳ ವಧೆಯಿಂದ ವಾತಾವರಣದಲ್ಲಿ ಏರುಪೇರಾಗಿ ಪರಿಸರ ಕೆಡುತ್ತದೆ. ಅದಕ್ಕಾಗಿ ಯಾರು ಕೂಡ ಮಾಂಸಾಹಾರ ಸೇವಿಸದಿದ್ದರೆ ಪ್ರಾಣಿ ರಕ್ಷಣೆಯೂ ಆಗುತ್ತದೆ. ಪರಿಸರ ಉತ್ತಮೊಳ್ಳುತ್ತದೆ ಎಂಬ ಉದ್ದೇಶದಿಂದ ಅಲ್ಲಿನ ಪ್ರಜ್ಞಾವಂತ ನಾಗರೀಕರು ವೇಗಾನ್ ಸೊಸೈಟಿ ಸ್ಥಾಪಿಸಿ ಪರಿಸರ ಉಳಿಸುವುದು ಹಾಗೂ ಪ್ರಾಣಿದಯೆ ತೋರಿಸಲು ಪ್ರಚಾರ ಮಾಡುತ್ತಿದ್ದಾರೆ. ಇಂಗ್ಲೆಂಡ್ ಒಂದರಲ್ಲಿಯೇ ಕ್ರಿಶ್ಚಿಯನರು ಸೇರಿದಂತೆ ಸುಮಾರು ಒಂದು ಲಕ್ಷ ಜನ ಸಂಪೂರ್ಣ ಸಸ್ಯಾಹಾರಿಗಳಾಗಿದ್ದಾರೆ. ಇಂಥಹ ವೇಗಾನ್ ಗ್ರೂಪ್‌ಗಳು ವಿಶ್ವದಲ್ಲಿ ಸುಮಾರು ೩೦೦ ಗ್ರೂಪ್‌ಗಳಿವೆ. ಖೇದದ ಸಂಗತಿಯೆಂದರೆ ಸಸ್ಯಾಹಾರವೇ ಪ್ರಧಾನವಾದ ನಮ್ಮ ದೇಶದಲ್ಲಿ ಇಂಥಾ ಸೊಸೈಟಿಗಳು ಇಲ್ಲದೆ ಇರುವುದು, ಇದ್ದರೂ ಅವುಗಳಿಗೆ ಪ್ರೋತ್ಸಾಹ ಇಲ್ಲದಿರುವುದು. ಸಂಪೂರ್ಣ ಸಸ್ಯಾಹಾರದಿಂದ ರೋಗನಿರೋಧಕ ಶಕ್ತಿ ಶರೀರದಲ್ಲಿ ಹೆಚ್ಚಿ ಕರೋನ ಮುಂತಾದ ವೈರಸ್‌ಗಳನ್ನು ತಡೆಗಟ್ಟಬಹುದು ಎಂಬುದು ಆರೋಗ್ಯತಜ್ಞರ ಅಭಿಪ್ರಾಯ.



–ಪೌಳಿ ಶಂಕರಾನಂದಪ್ಪ ತುಮಕೂರು

ಕರೋನ ವೈರಸ್ ಬಗ್ಗೆ ಹೋದ ತಿಂಗಳ ' ಹೊಸ ಮನುಷ್ಯ' ದಲ್ಲಿ ಪ್ರಕಟಿಸಿದ ಎಲ್ಲ ಲೇಖನಗಳನ್ನೂ ಓದಿದೆ. ಅವುಗಳಲ್ಲಿರುವ ಉಪಯುಕ್ತ ವಿಷಯಗಳ ಜೊತೆಗೆ, ಪ್ರತಿಯೊಬ್ಬರೂ ತಮ್ಮ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಂಡು, ಕರೋನ ವೈರಸ್ ಮತ್ತು ಇತರ ರೋಗ ಕ್ರಿಮಿಗಳಿಂದ ಹೇಗೆ ರಕ್ಷಿಸಿಕೊಳ್ಳಬಹುದು ಎಂಬ ವಿಷಯದ ಬಗ್ಗೆ ಒಬ್ಬ ವೈರಾಲಜಿಸ್ಟ್ ಆದ ನಾನು ನನ್ನ ಕೆಲವು ಅಭಿಪ್ರಾಯಗಳನ್ನು ಈ ಮೂಲಕ ತಿಳಿಸುತ್ತಿದ್ದೇನೆ. ಸೂಕ್ತವೆನಿಸಿದರೆ ಪ್ರಕಟಿಸಿ. ಅನೇಕರಿಗೆ ತಮ್ಮ ಆಹಾರಾಭ್ಯಾಸಗಳನ್ನು ಬದಲಾಯಿಸಿಕೊಳ್ಳುವುದು ಕಷ್ಟ. ಆದರೆ ಸಕ್ಕರೆಯೊಂದನ್ನು ಬಿಟ್ಟು, ಇತರ ಆಹಾರಾಭ್ಯಾಸಗಳನ್ನು ಸಾಧ್ಯವಾದಷ್ಟು ಅನುಸರಿಸಲು ಸಾಧ್ಯವಾಗುವ ಕೆಲವರಿಗಾದರೂ ಉಪಯುಕ್ತ ವಾಗಬಹುದು.

ಕರೋನಾ ವೈರಸ್ ತಡೆಗೆ ಸಹಾಯಕ ಆಹಾರಗಳು

ಮಾನವನ ದೇಹದ ರಚನೆ ಅದ್ಭುತವಾದ ಒಂದು ಸೃಷ್ಟಿ. ನಮ್ಮ ದೇಹದಲ್ಲಿ ಎಲ್ಲ ಕಾಯಿಲೆಗಳನ್ನೂ ನಿರೋಧಿಸುವ ಮತ್ತು ನಿಯಂತ್ರಿಸುವ ವ್ಯವಸ್ಥೆ ಇದೆ. ಈ ವ್ಯವಸ್ಥೆಯು ಸರಿಯಾಗಿ ಕೆಲಸ ಮಾಡಿದರೆ ನಮಗೆ ಯಾವ ಕಾಯಿಲೆಯೂ ಬರುವುದಿಲ್ಲ. ಈ ವ್ಯವಸ್ಥೆಯು ಕೆಲಸ ಮಾಡುವುದಕ್ಕೆ ನಾವು ನಾಲ್ಕು ಅತ್ಯವಶ್ಯಕ ಕೆಲಸಗಳನ್ನು ಮಾಡಬೇಕು. ೧). ನಮ್ಮ ದೇಹದ ಎಲ್ಲ ಅಂಗಗಳ ಕಾರ್ಯಗಳಿಗೆ ಬೇಕಾಗುವ ಹಲವಾರು ಆಹಾರಾಂಶಗಳನ್ನು ಶುಭ್ರವಾದ ಗಾಳಿಯಿಂದ, ನೀರಿನಿಂದ ಮತ್ತು (ಪುಷ್ಟಿಕರ) ಆಹಾರಗಳಿಂದ ಒದಗಿಸಬೇಕು. ೨). ಅಂಗಗಳ ಕಾರ್ಯಗಳಿಗೆ ಅವಶ್ಯಕವಾದ ಆಹಾರಾಂಶಗಳನ್ನು ನಾಶಮಾಡುವ ಹಾನಿಕರ ಪದಾರ್ಥಗಳನ್ನು ತೆಗೆದುಕೊಳ್ಳಬಾರದು. ೩). ಆಹಾರಾಂಶಗಳನ್ನು ಅರಗಿಸಿಕೊಳ್ಳಲು ಸಾಕಷ್ಟು ವ್ಯಾಯಾಮ ಮಾಡಬೇಕು. ಮತ್ತು ೪). ಅವಶ್ಯಕ ಆಹಾರಾಂಶಗಳನ್ನು ನಾಶಮಾಡುವ ಮಾನಸಿಕ ಒತ್ತಡವನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು. ನಮ್ಮ ಜೀವನ ಶೈಲಿಯಲ್ಲಿ ಇವೆಲ್ಲ ಅವಶ್ಯಕತೆಗಳನ್ನೂ ಪೂರೈಸಿದರೆ ನಮಗೆ ಯಾವ ಕಾಯಿಲೆಗಳೂ ಬರುವುದಿಲ್ಲ ಮತ್ತು ತಪ್ಪು ಜೀವನಶೈಲಿಯಿಂದ ಬಂದ ಕಾಯಿಲೆಗಳು ನಮ್ಮ ಜೀವನಶೈಲಿಯನ್ನು ಸೂಕ್ತವಾಗಿ ಬದಲಾಯಿಸಿಕೊಂಡರೆ, ಕೆಲವೊಮ್ಮೆ ನಿಧಾನವಾಗಿಯಾದರೂ, ವಾಸಿಯಾಗುತ್ತವೆ ಎಂಬುದನ್ನು ನೂರಾರು ವೈಜ್ಞಾನಿಕ ಸಂಶೋಧನೆಗಳು ರುಜುವಾತು ಮಾಡಿವೆ.

ಪರಿಸರದಲ್ಲಿ ಯಾವಾಗಲೂ ಕರೋನ ವೈರಸ್ ತರಹದ ಮತ್ತು ಬೇರೆಬೇರೆ ತರಹದ ಹಲವಾರು ಕ್ರಿಮಿಗಳಿರುತ್ತವೆ. ಮತ್ತು ನಮ್ಮ ದೇಹದ ಒಳಗೇ ಕೂಡ ಲಕ್ಷಗಟ್ಟಲೆ ರೋಗಜನಕ ಕ್ರಿಮಿಗಳಿರುತ್ತವೆ. ನಮ್ಮ ಜೀವನಶೈಲಿಯಲ್ಲಿ ಮೇಲೆ ಸೂಚಿಸಿದ ನಾಲ್ಕು ಅಂಶಗಳಲ್ಲಿ ಯಾವುದೇ ಒಂದು ಸರಿಯಾಗಿಲ್ಲದಿದ್ದರೆ ಮಾತ್ರ ನಮ್ಮ ರೋಗನಿರೋಧಕ ಶಕ್ತಿಯು ಕುಂದಿ ದೇಹದೊಳಗಿರುವ ಕೆಲವು ಕ್ರಿಮಿಗಳೇ ಹೆಚ್ಚಿಕೊಂಡು ಅಥವಾ ಹೊರಗಡೆಯಿಂದ ಕೆಲವು ಕ್ರಿಮಿಗಳು ಬಂದು ಕಾಯಿಲೆಗಳಿಗೆ ಕಾರಣವಾಗುತ್ತವೆ. ಅನೇಕ ಕೈಗಾರಿಕೆಗಳು, ಪೆಟ್ರೋಲ್-ಡೀಸೆಲ್ ಇತ್ಯಾದಿಗಳನ್ನು ಬಳಸುವ ವಾಹನಗಳು, ವ್ಯವಸಾಯದಲ್ಲಿ ಬಳಸುವ ರಾಸಾಯನಿಕಗಳು ಇತ್ಯಾದಿಗಳಿಂದ ಆಗುವ ವಾಯು ಮಾಲಿನ್ಯ, ಜಲ ಮಾಲಿನ್ಯ, ಆಹಾರ ಮಾಲಿನ್ಯ ಇವುಗಳ ಜೊತೆಗೆ ಸತ್ವರಹಿತ ಸಸ್ಯಾಹಾರಗಳು ಮತ್ತು ಪ್ರಾಣಿಮೂಲದ ಎಲ್ಲ ಆಹಾರಗಳು ಕರೋನ ವೈರಸ್ ಮತ್ತು ಇತರ ಅನೇಕ ಕ್ರಿಮಿಗಳು ಕಾಯಿಲೆಗಳಿಗೆ ಕಾರಣವಾಗುವುದರಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಇಂತಹ ಮಲಿನವಾದ ಪರಿಸರದಲ್ಲಿ ಕೂಡ ನಾವು ಎಲ್ಲ ಕಾಯಿಲೆಗಳನ್ನು ನಿರೋಧಿಸುವುದು ಸಾಧ್ಯ ಎಂಬುದಕ್ಕೆ ಸಾಕಷ್ಟು ವೈಜ್ಞಾನಿಕ ಮಾಹಿತಿಗಳಿವೆ.

ವಾಯು ಮಾಲಿನ್ಯವನ್ನು ತಡೆಗಟ್ಟುವುದು ಎಲ್ಲರಿಗೂ ಯಾವಾಗಲೂ ಸಾಧ್ಯವಾಗುವುದಿಲ್ಲ. ಆದರೆ ಹೆಚ್ಚು ಜನಸಂದಣಿಯಿರುವ ನಗರಗಳಲ್ಲಿ, ಅಥವಾ ಹೆಚ್ಚು ಮಾಲಿನ್ಯಕ್ಕೆ ಕಾರಣವಾದ ಕೈಗಾರಿಕೆಗಳಲ್ಲಿ ಕೆಲಸ ಮಾಡದಿರುವುದು, ಹೆಚ್ಚು ವಾಹನಗಳ ಸಂಚಾರವಿಲ್ಲದ ರಸ್ತೆಗಳಲ್ಲಿರುವ ಮನೆಗಳಲ್ಲಿ ವಾಸಮಾಡುವುದು ಇತ್ಯಾದಿ ಕ್ರಮಗಳಿಂದ ವಾಯುಮಾಲಿನ್ಯದ ತೀವ್ರ ಪರಿಣಾಮಗಳಿಂದ ತಪ್ಪಿಸಿಕೊಳ್ಳಬಹುದು. ಮಲಿನವಾದ ನೀರಿರುವ ಪರಿಸ್ಥಿತಿಗಳಲ್ಲಿ ನೀರನ್ನು ರಿವರ್ಸಿಸ್ ಆಸ್ಮೋಸಿಸ್ ಯಂತ್ರಗಳಿಂದ ಶುದ್ಧಿ ಮಾಡುವುದರಿಂದ ಜಲ ಮಾಲಿನ್ಯದ ಕೆಟ್ಟ ಪರಿಣಾಮಗಳಿಂದ ತಪ್ಪಿಸಿಕೊಳ್ಳಬಹುದು. ವ್ಯಾಯಾಮ ಮಾಡದೆ ಜಡ ಜೀವನ ನಡೆಸುತ್ತಿರುವವರು ವ್ಯಾಯಾಮ ಮಾಡುವುದನ್ನು ನಿಧಾನವಾಗಿ ಅಭ್ಯಾಸ ಮಾಡಿಕೊಳ್ಳಬಹುದು. ನಮ್ಮ ಮಾನಸಿಕ ಒತ್ತಡವನ್ನು ಮುಂದೆ ತಿಳಿಸಿರುವ ರೀತಿಯಲ್ಲಿ ಹತೋಟಿಯಲ್ಲಿಟ್ಟುಕೊಳ್ಳಬಹುದು.


ಆಧುನಿಕ ಮಾನವರ ಜೀವನಶೈಲಿಯಲ್ಲಿ ಅತಿ ಸಾಮಾನ್ಯವಾಗಿರುವ ಆದರೆ ನಮಗೆ ಅತ್ಯಂತ ಹಾನಿಕರವಾದ ಕೆಲವು ಆಹಾರಾಭ್ಯಾಸಗಳನ್ನು ಬಿಡುವುದು ಅತ್ಯಂತ ಕಷ್ಟತರವಾದುದು. ಬೆಳಿಗೆ ಎದ್ದ ಕೂಡಲೇ ತಕ್ಷಣ ಕುಡಿಯುವ ಕಾಫ಼ಿ-ಟೀ ಇತ್ಯಾದಿ ಪಾನೀಯಗಳಲ್ಲಿ ಬಳಸುವ ಹಾಲಿನಲ್ಲಿರುವ ಪ್ರೋಟೀನುಗಳು ಕ್ಯಾನ್ಸರ್ ಕೋಶಗಳನ್ನು ಬೆಳೆಸುವುದರಲ್ಲಿ, ಆಸ್ಟಿಯೋಪೊರೋಸಿಸ್ ಕಾಯಿಲೆಗೆ, ಮಲ್ಟಿಪಲ್ ಸ್ಕ್ಲೆರೋಸಿಸ್ ಮತ್ತು ಇತರ ಅನೇಕ ಕಾಯಿಲೆಗಳಿಗೆ ಮುಖ್ಯ ಕಾರಣಗಳಾಗಿವೆ. ಸಕ್ಕರೆಯು ದೇಹದಲ್ಲಿ ಆಮ್ಲತೆಯನ್ನು ಹೆಚ್ಚಿಸಿ ಕ್ಯಾಲ್ಸಿಯಮ್ ಇತ್ಯಾದಿ ಅವಶ್ಯಕ ಖನಿಜಾಂಶಗಳನ್ನು ಹೀರಿಕೊಳ್ಳುವುದಕ್ಕೆ ಅಡ್ಡ ಬರುತ್ತದೆ ಮತ್ತು ನಮ್ಮ ರೋಗನಿರೋಧಕ ಶಕ್ತಿಯನ್ನು ಕುಂದಿಸುತ್ತವೆ. ಕಾಫ಼ಿ-ಟೀಗಳಲ್ಲಿರುವ ಮಾದಕ ಪದಾರ್ಥಗಳು ದೇಹದಲ್ಲಿರುವ ಕೆಲವು ಬಿ ವಿಟಮಿನ್ನುಗಳನ್ನು ಅತಿ ಹೆಚ್ಚು ಬಳಸಿಕೊಂಡು ಅವುಗಳ ಕೊರತೆಗೆ ಕಾರಣವಾಗುತ್ತವೆ. ದೋಸೆ ಇತ್ಯಾದಿ ತಿನಿಸುಗಳಿಗೆ ಬಳಸುವ ಎಣ್ಣೆಗಳನ್ನು ಕಾಯಿಸಿದಾಗ ಉತ್ಪತ್ತಿಯಾಗುವ ಟ್ರಾನ್ಸ್ ಕೊಬ್ಬುಗಳು ಮತ್ತು ಹೆಚ್ಚಿನ ಪ್ರಮಾಣದಲ್ಲಿ ಬಳಸುವ ಕೊಬ್ಬುಗಳು ಮತ್ತು ಹಾಲು, ಮೊಟ್ಟೆ, ಮಾಂಸ ಇತ್ಯಾದಿ ಎಲ್ಲ ಪ್ರಾಣಿಮೂಲದ



ಆಹಾರಗಳು ದೇಹದಲ್ಲಿ ಕೊಲೆಸ್ಟೆರಾಲ್ ಪ್ರಮಾಣವನ್ನು ಹೆಚ್ಚಿಸಿ ಹೃದಯರೋಗಗಳು, ಕ್ಯಾನ್ಸರುಗಳು, ಮಲ್ಟಿಪಲ್ ಸ್ಕ್ಲೆರೋಸಿಸ್ ಮತ್ತು ಅನೇಕ ಇತರ ಕಾಯಿಲೆಗಳಿಗೆ ಕಾರಣವಾಗುತ್ತವೆ. ಉದಾಹರಣೆಗೆ ಅಕ್ಕಿಯನ್ನು ಪಾಲಿಶ್ ಮಾಡುತ್ತೇವೆ, ಗೋಧಿ ಹಿಟ್ಟನ್ನು ಜರಡಿಯಾಡಿ ಹೊಟ್ಟನ್ನು ಹೊರಗೆಸೆಯುತ್ತೇವೆ. ಶೇಂಗಾ-ಎಳ್ಳು ಇತ್ಯಾದಿ ಎಣ್ಣೆ ಬೀಜಗಳಿಂದ ಎಣ್ಣೆಯನ್ನು ಮಾತ್ರ ಬೇರ್ಪಡಿಸಿ ಹಿಂಡಿಯಲ್ಲಿರುವ ಅಮೂಲ್ಯವಾದ ಪ್ರೋಟೀನುಗಳು, ಖನಿಜಾಂಶಗಳು, ಏಂಟಿಆಕ್ಸಿಡೆಂಟುಗಳು ಇತ್ಯಾದಿಗಳನ್ನು ಹೊರಗೆಸೆಯುತ್ತೇವೆ. ಇದರಿಂದ ಇವೆಲ್ಲ ಆಹಾರಗಳು ಸಾರರಹಿತ ಹಾನಿಕರ ಆಹಾರಗಳಾಗುತ್ತವೆ. ಏಕೆಂದರೆ ನಾವು ಹೊರಗೆಸೆದ ಹೊಟ್ಟು, ಹಿಂಡಿ ಇತ್ಯಾದಿಗಳಲ್ಲಿ ಹೊರಗೆಸೆದ ಬಿ ವಿಟಮಿನ್ನುಗಳು, ಖನಿಜಾಂಶಗಳು, ನಾರುಗಳು ಮುಂತಾದ ಅಮೂಲ್ಯ ಆಹಾರಾಂಶಗಳಿರುತ್ತವೆ. ಇವು ನರಮಂಡಲದ ಮತ್ತು ಇತರ ಅನೇಕ ಅಂಗಗಳ ಕಾರ್ಯಗಳಿಗೆ ಅತ್ಯವಶ್ಯಕವಾದ ಆಹಾರಾಂಶಗಳು. ಈ ರೀತಿ ಅನೇಕ ಪ್ರಾಕೃತಿಕ ಸತ್ವಪೂರಿತ ಸಂಪೂರ್ಣ ಆಹಾರಗಳನ್ನು ಸತ್ವರಹಿತ ಹಾನಿಕರ ಆಹಾರಗಳನ್ನಾಗಿ ಪರಿವರ್ತಿಸುತ್ತೇವೆ. ಇಂತಹ ಆಹಾರಗಳು ನಮ್ಮ ರೋಗನಿರೋಧಕ ಶಕ್ತಿಯನ್ನು ಬಹುಮಟ್ಟಿಗೆ ಕುಂದಿಸುತ್ತವೆ.

ಆಹಾರ ವಿಜ್ಞಾನಿ ಡಾ. ಕಾಲಿನ್ ಕ್ಯಾಂಪ್ ಬೆಲ್ಲ್ ಅವರ ಪ್ರಕಾರ, ನಮ್ಮ ದೇಹದ ಎಲ್ಲ ಅಂಗಗಳ ಕಾರ್ಯಗಳಿಗೆ ಮತ್ತು ನಮ್ಮ ರೋಗನಿರೋಧಕ ಶಕ್ತಿಯನ್ನು ಉತ್ತಮ ಸ್ಥಿತಿಯಲ್ಲಿಟ್ಟುಕೊಳ್ಳುವುದಕ್ಕೆ, ಅತಿ ಕಡಿಮೆ ಕೊಬ್ಬುಗಳಿರುವ ಸಂಪೂರ್ಣ ಸಸ್ಯಾಹಾರಗಳಾದ ಸಂಪೂರ್ಣ ಧಾನ್ಯಗಳು, ತರಕಾರಿಗಳು, ಹಣ್ಣುಗಳು ಮತ್ತು ತೊಗರಿ-ಕಡಲೆ-ಹೆಸರು ಇತ್ಯಾದಿ ಕಾಳುಗಳು, ತೆಂಗು-ಶೇಂಗಾ-ಎಳ್ಳು ಇತ್ಯಾದಿ ಎಣ್ಣೆ ಬೀಜಗಳನ್ನು ಸಣ್ಣ ಪ್ರಮಾಣದಲ್ಲಿ ಮಾತ್ರ ಬಳಸಿದಾಗ ನಮ್ಮ ದೇಹಕ್ಕೆ ಅತ್ಯವಶ್ಯಕವಾದ ಎಲ್ಲ ಆಹಾರಾಂಶಗಳನ್ನೂ ಒದಗಿಸುತ್ತವೆ. ಯಾವ ಕಾಯಿಲೆಗಳೂ ಬರದಂತೆ ತಡೆಯುತ್ತವೆ. ಅಸಂಪೂರ್ಣ ಆಹಾರಗಳಾದ ಪಾಲಿಶ್ ಮಾಡಿದ ಅಕ್ಕಿ, ಹೊಟ್ಟು ತೆಗೆದ ಗೋಧಿ ಹಿಟ್ಟು ಇತ್ಯಾದಿ ಧಾನ್ಯಗಳು, ಸಕ್ಕರೆ-ಬೆಲ್ಲ, ಎಣ್ಣೆಗಳು, ಹಾಲು-ಮೊಸರು-ಬೆಣ್ಣೆ-ತುಪ್ಪ, ಮೊಟ್ಟೆ ಮತ್ತು ಎಲ್ಲ ಮಾಂಸಾಹಾರಗಳಲ್ಲಿ ಸಾಕಷ್ಟು ಏಂಟಿಆಕ್ಸಿಡೆಂಟುಗಳು, ಖನಿಜಾಂಶಗಳು, ವಿಟಮಿನ್ನುಗಳು ಮತ್ತು ನಾರುಗಳು ಇರುವುದಿಲ್ಲ. ಆದ್ದರಿಂದ ಅವೆಲ್ಲ ಆಹಾರಗಳನ್ನು ಬಳಸದಿದ್ದರೇ ಒಳ್ಳೆಯದು. ಅಥವಾ ಅತಿ ಕಡಿಮೆ ಪ್ರಮಾಣದಲ್ಲಿ ಒಮ್ಮೊಮ್ಮೆ ಬಳಸಿದರೆ ಹಾನಿಯಾಗದಿರಬಹುದು. ಆಹಾರಾಂಶಗಳನ್ನು ನಾಶಮಾಡುವ ಕಾಫ಼ಿ-ಟೀ, ಮಾದಕ ಪಾನೀಯಗಳು, ತಂಬಾಕು ಇತ್ಯಾದಿಗಳನ್ನು ವರ್ಜಿಸುವುದು, ಸಕ್ಕರೆಯನ್ನು ಬಳಸದೆ ಇರುವುದು ತುಂಬಾ ಸಹಾಯಕವಾಗುತ್ತವೆ. ಕ್ಯಾಲಿಫ಼ೋರ್ನಿಯ ವಿಶ್ವವಿದ್ಯಾಲಯದ ವಿಜ್ಞಾನಿಗಳ ಪ್ರಯೋಗಗಳ ಪ್ರಕಾರ, ಒಂದು ಕ್ಯಾಂಡಿ ಬಾರನ್ನು ತಿಂದರೆ ಅದರಲ್ಲಿರುವ ಸಕ್ಕರೆಯಿಂದ ಹಲವಾರು ಘಂಟೆಗಳು ನಮ್ಮ ರೋಗ ನಿರೋಧಕ ಶಕ್ತಿ ಸಂಪೂರ್ಣವಾಗಿ ಕುಂದಿಹೋಗಿ, ನಾವು ಸುಲಭವಾಗಿ ಅಂಟುರೋಗಗಳಿಗೆ ತುತ್ತಾಗುತ್ತೇವೆ. ಆದ್ದರಿಂದ, ಸಕ್ಕರೆ ಹಾಕಿದ ಸಿಹಿ ತಿನಿಸುಗಳನ್ನು ಬಳಸಿದಾಗ ಹಲವಾರು ಘಂಟೆಗಳು ಹೊರಗೆ ಹೋಗದಿದ್ದರೆ ಒಳ್ಳೆಯದು.

ಸತ್ವಪೂರಿತ ಸಂಪೂರ್ಣ ಕಡಿಮೆ ಕೊಬ್ಬಿರುವ ಸಸ್ಯಾಹಾರಗಳನ್ನು ಬಳಸುವುದು, ಸಕ್ಕರೆ-ಎಣ್ಣೆ ಇತ್ಯಾದಿ ಅಸಂಪೂರ್ಣ ಸಸ್ಯಾಹಾರಗಳನ್ನು ಮತ್ತು ಹಾಲೂ ಸೇರಿ ಎಲ್ಲ ಪ್ರಾಣಿಮೂಲದ ಆಹಾರಗಳನ್ನೂ ವರ್ಜಿಸುವುದು, ಜೊತೆಗೆ ದಿವಸಕ್ಕೆ ಕನಿಷ್ಟ ೩೦ ನಿಮಿಷಗಳಾದರೂ ನಡೆಯುವುದು, ಅಥವಾ ಬೇರೆ ರೀತಿಯಲ್ಲಿ ವ್ಯಾಯಾಮ ಮಾಡುವುದು ಮತ್ತು ಯೋಗಾಸನ, ಪ್ರಾಣಾಯಾಮ, ಮತ್ತು ಧ್ಯಾನಗಳಿಂದ ಅಥವಾ ಎಲ್ಲರ ಬಗೆಗೆ ಪ್ರೀತಿಯುತ ಧೋರಣೆಗಳನ್ನು ಬೆಳೆಸಿಕೊಳ್ಳುವುದರ ಮೂಲಕ ನಮ್ಮ ಮಾನಸಿಕ ಒತ್ತಡವನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ಕೂಡ ಕರೋನ ವೈರಸ್ಸು ನಮಗೆ ಬರದಂತೆ ತಡೆಯುವುದಕ್ಕೆಸಹಾಯಕವಾಗುತ್ತದೆ. ಜೊತೆಗೆ, ಹೊರಗೆ ಹೋದಾಗ ಮಾಸ್ಕ್ ಧರಿಸಿಕೊಳ್ಳುವುದು, ಜನಗಳಿಂದ ಕನಿಷ್ಟ ಎರಡು ಮೀಟರ್ ಅಂತರ ಕಾಯ್ದುಕೊಳ್ಳುವುದು ಇವೆಲ್ಲವನ್ನೂ ಅಭ್ಯಾಸ ಮಾಡಿಕೊಳ್ಳುವುದು ಕೂಡ ಉಪಯುಕ್ತ.



-ಡಾ.ಎ.ಎನ್. ನಾಗರಾಜ್, ಭೀಮನಕಟ್ಟೆ

'ಹೊಸ ಮನುಷ್ಯ' ವಾರ್ಷಿಕ ವಿಶೇಷಾಂಕ-2020ಕ್ಕೆ
ಪೋಷಕ ನಿಧಿ ನೀಡಿ
ಓದುಗರೆಲ್ಲರಿಗೂ ಹಾರ್ದಿಕ
ಶುಭಾಶಯಗಳನ್ನು ಕೋರಿರುವವರು-

ಶ್ರೀ ಚೆನ್ನವೀರ ಕಣವಿ, ಹಿರಿಯ ಕವಿಗಳು, ಧಾರವಾಡ
ಪ್ರೊ.ಜಿ.ಬಿ ಶಿವರಾಜು, ಟ್ರಸ್ಟೀ, ಕಸ್ತೂರಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಬೆಂಗಳೂರು
ಡಾ. ಬಿ. ಚಂದ್ರಶೇಖರ್, ಸಂಯೋಜನಾಧಿಕಾರಿಗಳು, ರಾಷ್ಟ್ರೀಯ ಸೇವಾ ಯೋಜನೆ, ಮೈಸೂರು ವಿ,ವಿ,. ಮೈಸೂರು
ಶ್ರೀ ಸಿ.ಎಂ. ಅಂಗಡಿ, ಸುಪ್ರೀಂ ಕೋರ್ಟ್ ವಕೀಲರು, ನವದೆಹಲಿ
ಶ್ರೀ ವೈ ಮಹೇಶ, ಮಾಜಿ ಶಾಸಕರು, ಮೈಸೂರು
ಪ್ರೊ.ಎಚ್. ಸಿದ್ದೇಗೌಡ, ವಿಶ್ರಾಂತ ಪ್ರಾಧ್ಯಾಪಕರು, ಚನ್ನರಾಯಪಟ್ಟಣ
ಶ್ರೀ ಜಯವಂತ ಕಾಮತ್, ಬೇಲಾಡಿ (ಕಾಂತಾವರ (ದ,ಕ.)
ಶ್ರೀ ಜಗದೀಶ ಪೈ, ಕರ್ನೂಲು (ಆಂಧ್ರ ಪ್ರದೇಶ)
ಅವಿರತ ಪ್ರತಿಷ್ಠಾನ, ಬೆಂಗಳೂರು
ಶ್ರೀ ವೈಎಸ್ವಿ ದತ್ತ, ಮಾಜಿ ಶಾಸಕರು, ಕಡೂರು
ಶ್ರೀ ಎಂ. ಬಸವಯ್ಯ, ಸಂಸ್ಥಾಪಕರು, ಬಾಪೂಜಿ ವಿದ್ಯಾಸಂಸ್ಥೆ, ತುಮಕೂರು
ಪ್ರೊ. ಎಂ.ಜಿ. ಈಶ್ವರಪ್ಪ. ವಿಶ್ರಾಂತ ಪ್ರಾಧ್ಯಾಪಕರು, ದಾವಣಗೆರೆ
ಶ್ರೀ ಜಿ. ರಾಜಶೇಖರ, ಲೇಖಕರು, ಉಡುಪಿ
ಡಾ. ಸಿದ್ಧಲಿಂಗಯ್ಯ, ಕವಿಗಳು, ಬೆಂಗಳೂರು
ಪ್ರೊ. ಆರ್. ಪಂಡಿತಾರಾಧ್ಯ, ವಿಶ್ರಾಂತ ಪ್ರಾಧ್ಯಾಪಕರು, ಮೈಸೂರು
ಶ್ರೀಮತಿ ಅಬೀದಾ ಬೇಗಂ. ಅಧ್ಯಾಪಕರು, ರಾಮನಗರ
ಶ್ರೀ ಎನ್. ರಾಮು, ಪ್ರಾಚಾರ್ಯರು, ನಾಗಮಂಗಲ
ಪ್ರೊ. ಬಿ.ಕೆ. ಚಂದ್ರಶೇಖರ ಗೌಡ, ಸಂಸ್ಥಾಪಕರು, ವಿಶ್ವಮಾನವ ವಿದ್ಯಾನಿಕೇತನ, ಮೈಸೂರು
ಶ್ರೀ ಕೆ. ಟಿ. ಮೋಹನ್, ವಕೀಲರು, ಬೆಂಗಳೂರು
ಶ್ರೀ ಕೆ.ಟಿ. ಗಂಗಾಧರ, ರೈತ ಮುಖಂಡರು, ಶಿವಮೊಗ್ಗ
ಶ್ರೀ ಕೆ. ಪುಟ್ಟಸಾಮಿ, ಲೇಖಕರು, ಬೆಂಗಳೂರು
ಶ್ರೀ ರಮೇಶ್‌ಬಾಬು, ಅಧ್ಯಾಪಕರು, ಮೈಸೂರು
ಶ್ರೀ ಕಿರಣ್‌ಕುಮಾರ್, ಅಧ್ಯಾಪಕರು, ಹುಣಸೂರು
ಶ್ರೀ ಗುರುಕುಲ **ಎಜುಕೇಷನಲ್ ಚಾರಿಟಬಲ್ ಟ್ರಸ್ಟ್,** ತಿಪಟೂರು
ಶ್ರೀ ಜಿ. ಶಿವಕುಮಾರ್, ವಿವೇಕ ಟ್ಯುಟೋರಿಯಲ್ಸ್, ಹಾಸನ
ಶ್ರೀ ಎನ್.ಆರ್. ಬಾಲಸುಬ್ರಮಣ್ಯ ಮತ್ತು ಕುಟುಂಬ, ಬೆಂಗಳೂರು
ಶ್ರೀ ಎಸ್.ಬಿ. ರಮೇಶ, ವಿಶ್ರಾಂತ ಪ್ರಾಧ್ಯಾಪಕರು, ಶಿವಮೊಗ್ಗ
ಶ್ರೀಮತಿ ಎಸ್.ಬಿ. ಶೋಭಾ ರಾಮಕೃಷ್ಣ, ವಿಶ್ರಾಂತ ಪ್ರಾಚಾರ್ಯರು, ಶಿವಮೊಗ್ಗ
ಶ್ರೀ ಕೆ. ಅರ್ಕೇಶ್, ವಿಶ್ರಾಂತ ಪೋಲೀಸ್ ಅಧಿಕಾರಿ, ಮೈಸೂರು
ಶ್ರೀ ರವಿ ಸಸಿತೋಟ, **ಅಡಿಕೆ ಬೆಳೆಗಾರರು, ಶಿವಮೊಗ್ಗ**
ಡಾ. ಲೋಕೇಶ ಅಗಸನಕಟ್ಟೆ, ವಿಶ್ರಾಂತ ಪ್ರಾಧ್ಯಾಪಕರು, ಚಿತ್ರದುರ್ಗ
ಶ್ರೀ ಮಹಾಂತೇಶ ಓಶಿಮಠ, ಕೈಗಾ (ಉ.ಕ)

'ಹೊಸ ಮನುಷ್ಯ' ವಾರ್ಷಿಕ ವಿಶೇಷಾಂಕ-೨೦೨೦ಕ್ಕೆ
ನಮ್ಮ ಹಾರ್ದಿಕ ಶುಭಾಶಯಗಳು

ಟಿ.ಆರ್. ರಾಧಾಕೃಷ್ಣ
ಅವರ ನೆನಪಿನಲ್ಲಿ

ತಾರಿಣಿ ಶುಭದಾಯಿನಿ
ಮತ್ತು ಮಕ್ಕಳು
ಚಿತ್ರದುರ್ಗ


'ಹೊಸ ಮನುಷ್ಯ' ವಾರ್ಷಿಕ ವಿಶೇಷಾಂಕ-೨೦೨೦ರ
ಓದುಗರೆಲ್ಲರಿಗೂ ಹಾರ್ದಿಕ ಶುಭಾಶಯಗಳು

ಜಿ.ಎಲ್. ಶಿವೇಗೌಡ
ಅವರ ನೆನಪಿನಲ್ಲಿ

ಶ್ರೀಮತಿ ಗಂಗಮ್ಮ,
ಮತ್ತು ಮಕ್ಕಳು
ಗೊಟ್ಟಿಗೆರೆ (ತುರುವೇಕೆರೆ ತಾ.)

ತುರ್ತು ಮತ್ತು ವೈವಿಧ್ಯಗಳ ಸಂಗಮ: ಪತ್ರಿಕೆ ನಡೆದು ಬಂದ ದಾರಿಯ ಒಂದು ಹಿನ್ನೋಟ

-ಟಿ. ಅವಿನಾಶ್



"ಕಳೆದ ಒಂದು ವರ್ಷದ ಪತ್ರಿಕೆಯ ಆದ್ಯತೆ, ಧೋರಣೆಗಳನ್ನು ನೋಡಿದರೆ ಇದು ಸ್ಥಳೀಯ ಜೀವನಕ್ರಮ ಮತ್ತು ಆರ್ಥಿಕತೆಗೆ ಹೆಚ್ಚು ಮಹತ್ವ ಕೊಟ್ಟಿದ್ದು ಅರಿವಾಗುತ್ತದೆ. ಅಂತೆಯೇ ಗಾಂಧೀ ಪ್ರಣೀತ ಮಿತ ಜೀವನದ ಮೌಲ್ಯಗಳೂ ಇಲ್ಲಿ ಪದೇ ಪದೇ ಪ್ರಸ್ತಾವಿತವಾಗಿದೆ. ಜಾಗತೀಕರಣದ ಪ್ರಕ್ರಿಯೆ ತಂದಿಟ್ಟ ರಾಕ್ಷಸ ಆರ್ಥಿಕತೆಗೆ ವಿರುದ್ಧವಾಗಿ ಮಿತ ಆರ್ಥಿಕತೆಯ ಮೌಲ್ಯಗಳಿಗೆ ಆದ್ಯತೆ ನೀಡಲಾಗಿದೆ.... ನಮ್ಮ ಅತಿವೇಗದ ಜೀವನದ ಮೌಲ್ಯಗಳಿಗೆ ಪರ್ಯಾಯವಾಗಿ ನಿಧಾನದ ಬದುಕಿನ ಲಯಗಳನ್ನು ಸಹ ಇಲ್ಲಿ ದಾಖಲಿಸಲಾಗಿದೆ. ಈ ಬಗೆಯ ದೃಷ್ಟಿಕೋನ ಕೇವಲ ಕಳೆದ ವರ್ಷದ ಸಂಚಿಕೆಗಳಿಗೆ ಮಾತ್ರ ಸೀಮಿತವಾಗಿರದೆ, ಪತ್ರಿಕೆಯ ಪ್ರಾರಂಭದ ದಿನಗಳಿಂದಲೂ ಇದು ಪುನಃ ಪುನಃ ವ್ಯಕ್ತವಾಗುತ್ತಲೇ ಬಂದಿದೆ. ಪರಿಸರ ಸಂರಕ್ಷಣೆ ಮತ್ತು ಜಾಗತಿಕ ತಾಪಮಾನದ ಏರಿಕೆಗೆ ಸಂಬಂಧಿಸಿದಂತೆ ಯುರೋಪಿನಲ್ಲಿ ನಡೆಯುತ್ತಿರುವ ಮಹತ್ತರ ಪರಿಸರ ಚಳುವಳಿಯ ಸ್ವರೂಪವನ್ನು ಸಹ ಇಲ್ಲಿ ಪರಿಚಯಿಸಲಾಗಿದೆ. ವಿಶ್ವಾತ್ಮಕವಾಗಿರುವ ಸಾಮಾಜಿಕ-ಸಾಂಸ್ಕೃತಿಕ ವಿದ್ಯಮಾನಗಳನ್ನು ಬಿಟ್ಟ ಸ್ಥಳೀಯತೆ ಇಲ್ಲ ಎಂಬ ದೃಷ್ಟಿಕೋನವನ್ನು ನಾವು ಇಲ್ಲಿ ಗಮನಿಸಬಹುದು. ಅಥವಾ ಕನ್ನಡದ ಅಸ್ಮಿತೆಯನ್ನು ಜಾಗತಿಕ ವಿದ್ಯಮಾನದಿಂದ ಹೊರತುಪಡಿಸಿ ನೋಡಲಾಗುವುದಿಲ್ಲ. ಆದ್ದರಿಂದಲೇ ಆರ್ಥಿಕತೆ, ಜಾಗತೀಕರಣ, ಪರಿಸರ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ಇಂಗ್ಲಿಷಿನಿಂದ ಅನುವಾದಗೊಂಡ ಅನೇಕ ಲೇಖನಗಳನ್ನು ಪ್ರಕಟಿಸಲಾಗಿದೆ. ಕನ್ನಡ ಸಂವೇದನೆಯನ್ನು ಹಿಗ್ಗಿಸುವ ತಂತ್ರವಾಗಿ ಈ ಅನುವಾದದ ಲೇಖನಗಳು ಬಂದಿವೆ. ಈ ಅನುವಾದಗಳು ಸ್ವಾಗತಾರ್ಹ ಬೆಳವಣಿಗೆಯಾಗಿದೆ."

'ಸಮಾಜವಾದಿ ಮಾಸಿಕ' ಎಂಬ ಉಪಶೀರ್ಷಿಕೆ ಹೊಂದಿರುವ 'ಹೊಸ ಮನುಷ್ಯ' ವರ್ತಮಾನದ ತವಕ-ತಲ್ಲಣಗಳಿಗೆ ತನ್ನದೇ ಆದ ಸೈದ್ಧಾಂತಿಕ ನೆಲೆಯಲ್ಲಿ ಮುಖಾಮುಖಿ ಆಗುವ ಒಂದು ಕಿರುಪತ್ರಿಕೆಯಾಗಿದೆ. ವಿದ್ವದ್ ಜನರ ಹಾಗೂ ಸಮಾನಮನಸ್ಕ ಓದುಗರಿಗೆ ಅತ್ಯಗತ್ಯವಾಗಿದ್ದ ಚರ್ಚಾ ವೇದಿಕೆ ಒದಗಿಸಿರುವ ಈ ಕಿರುಪತ್ರಿಕೆ ಚರ್ವಿತ ಚರ್ವಣ ಪರಿಭಾಷೆಯನ್ನು ಬಿಟ್ಟುಕೊಟ್ಟ ಮತ್ತು ವರ್ತಮಾನದ ಬಿಕ್ಕಟ್ಟುಗಳಿಗೆ ಸಾವಧಾನವಾಗಿ ಸ್ಪಂದಿಸುವ ಚಹರೆಯನ್ನೂ ಹೊಂದಿರುವುದರಿಂದ ಓದುಗರ ಬೌದ್ಧಿಕತೆಯನ್ನು ಯಾವಾಗಲೂ ಜೀವಂತವಾಗಿಟ್ಟಿದೆ. ಪತ್ರಿಕೋದ್ಯಮ ಎಂದರೆ ಅದು ಬೃಹತ್ ಬಂಡವಾಳಿಗರ ಮತ್ತು ಆಳುವ ವರ್ಗದ ಹಿತಾಸಕ್ತಿ ಕಾಪಾಡುವ ಒಂದು ಪ್ರಬಲ ಅಸ್ತ್ರವಾಗಿರುವ ಈ ಕಾಲದಲ್ಲಿ 'ಹೊಸ ಮನುಷ್ಯ' ತನ್ನೆಲ್ಲ ಮಿತಿಗಳ ನಡುವೆಯು ಪರ್ಯಾಯ ಪತ್ರಿಕೋದ್ಯಮಕ್ಕೆ ಮಾದರಿಯಾದಂತಿದೆ ಎಂದರೆ ಅದು ಅತಿಶಯೋಕ್ತಿಯಾಗಲಾರದು ಎಂದು ಭಾವಿಸುತ್ತೇನೆ.






ಕಳೆದ ಒಂದು ವರುಷದಲ್ಲಿ ಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನಗಳ ತಾತ್ವಿಕ ಅವಲೋಕನವನ್ನು ಇಲ್ಲಿ ಮಾಡಲಾಗಿದೆ. ಸರಳತೆ ಮತ್ತು ಸಮಾಜವಾದಿ ಆಶಯಗಳ ಚೌಕಟ್ಟಿನಲ್ಲಿ ಪ್ರಕಟವಾಗುವ ಇಲ್ಲಿನ ಲೇಖನಗಳು ತಮ್ಮ ವಸ್ತು ವೈವಿಧ್ಯತೆ ಮತ್ತು ಪ್ರಖರ ಚಿಂತನೆಗಳ ಕಾರಣಕ್ಕೆ ನಮ್ಮ ಗಮನ ಸೆಳೆಯುತ್ತವೆ. ವಿಷಯದ ಆಯ್ಕೆ ಮತ್ತು ನಿರೂಪಣೆಯ ಜೀವಂತಿಕೆಯಿಂದ ಗಮನ ಸೆಳೆಯುವ ಇಲ್ಲಿನ ಲೇಖನಗಳು ಪತ್ರಿಕೆಯ ವಿಶಿಷ್ಟತೆ ಕೂಡ ಹೌದು. ಯಾವುದೇ ಪಂಥಕ್ಕೆ ಜೋತು ಬೀಳದೆ ಬಲ-ಎಡಪಂಥಗಳ ಸೀಮಿತತೆಯನ್ನು ಇಲ್ಲಿನ ಲೇಖನಗಳು ತಾರ್ಕಿಕವಾಗಿ ವಿಶ್ಲೇಷಿಸುತ್ತವೆ. ಉದಾಹರಣೆ ಎಂದರೆ ಚುನಾವಣಾ ವಿಶ್ಲೇಷಣೆ ಮಾಡುವಾಗ ಸಂಪಾದಕರು ಬಲಪಂಥೀಯ ರಾಜಕಾರಣದ ಹುಸಿ ರಾಷ್ಟ್ರೀಯತೆಯನ್ನು ಎತ್ತಿ ತೋರಿಸುತ್ತಾರೆ. ಹಾಗೆಯೇ ಹಳಸಲು ಜಾತಿರಾಜಕಾರಣದ ಪರಿಭಾಷೆಯನ್ನೂ ಸಹ ಪ್ರಖರವಾಗಿ ಖಂಡಿಸುತ್ತಾರೆ. ಆದ್ದರಿಂದ ಇಲ್ಲಿನ ಲೇಖನಗಳು, ಪೀಠಿಕೆ-ಪ್ರಸ್ತಾವನೆ ಮೊದಲಾದವುಗಳು ಎರಡು ಪಂಥಗಳ ದೌರ್ಬಲ್ಯಗಳನ್ನು ವಿಶ್ಲೇಷಿಸುವುದರಿಂದ ಅನಂತಮೂರ್ತಿಗಳು ಪ್ರತಿಪಾದಿಸುವ 'ಒಳವಿಮರ್ಶೆ' (ಅಡುಣುಛಿಚಿಟ ಖಟುಜಜಡಿ)ಯ ಚಹರೆಯನ್ನು ಸಹ ನಾವು ಇಲ್ಲಿ ಗುರುತಿಸಬಹುದು.


ಕಳೆದ ಮೂರು-ನಾಲ್ಕು ತಿಂಗಳುಗಳಲ್ಲಿ ಚಾಲ್ತಿಯಲ್ಲಿರುವ ಎರಡು ಪ್ರಮುಖ ವಿದ್ಯಮಾನಗಳೆಂದರೆ ಕೋವಿಡ್-೧೯ ವೈರಾಣು ತಂದಿಟ್ಟ ಸಂಕಷ್ಟ ಮತ್ತು ಕೇಂದ್ರ ಸರ್ಕಾರದ ವಿವಾದಾಸ್ಪದ ಪೌರತ್ವ ತಿದ್ದುಪಡಿ ಕಾಯಿದೆ. ಇವೆರಡೂ ವಿಷಯಗಳನ್ನು ಕುರಿತಾದ ಅಮೂಲಾಗ್ರ ವಿಶ್ಲೇಷಣೆಯನ್ನು ಪತ್ರಿಕೆ ಮಾಡಿದೆ. ಡಿ.ಎಸ್. ನಾಗಭೂಷಣರು ವಿಷಯದ ಆಳಕ್ಕಿಳಿದು ವಿಶ್ಲೇಶಿಸುತ್ತಾ "ಪ್ರಗತಿಪರರು ಹೇಳುವಂತೆ ಈ ತಿದ್ದುಪಡಿ ಕೋಮುವಾದಿಯಾಗಿದೆ ಎಂಬುದು ಮಾತ್ರ ಮುಖ್ಯವಲ್ಲ. ಇದರ ಜೊತೆಗೆ ಸಾಂವಿಧಾನಿಕತೆಯ ನೈತಿಕತೆ ಮತ್ತು ಸಮರ್ಪಕತೆಯೂ ಮುಖ್ಯ" ಎಂದು ಅಭಿಪ್ರಾಯಪಟ್ಟಿದ್ದಾರೆ. ಚರಿತ್ರೆಯ ವಿವಿಧ ಮಗ್ಗಲುಗಳನ್ನು ವ್ಯಾಖ್ಯಾನಿಸುವ ಈ ಲೇಖನ ಸಿಎಎ ಕುರಿತಾದ ಅತ್ಯುತ್ತಮ ಲೇಖನಗಳಲ್ಲೊಂದು ಎಂದು ತಿಳಿಯಬಹುದು.

ಹಾಗೆಯೇ ನಾಗೇಶ ಹೆಗಡೆಯವರು ಕೋವಿಡ್-೧೯ರ ಪರಿಣಾಮಗಳನ್ನು ವಿಶ್ಲೇಷಿಸುತ್ತಾ ಮಾಧ್ಯಮಗಳ ಅನೈತಿಕತೆ, ವೈರಾಣುವನ್ನು ಪಳಗಿಸಲು ಮಾಡಬೇಕಾದ ಕ್ರಮ ಮತ್ತು ಅದು ಸುದ್ದಿಮಾರಿಯಾಗಿ ಜನರಲ್ಲಿ ಭೀತಿ ಹೆಚ್ಚಿಸಿದ ವಿದ್ಯಮಾನವನ್ನು ಸಮರ್ಪಕವಾಗಿ ದಾಖಲಿಸಿದ್ದಾರೆ. ಕೋವಿಡ್ ಕುರಿತಾದ ಅತ್ಯಂತ ಪರಿಣಾಮಕಾರಿ ಲೇಖನ ಇದಾಗಿದೆ.

ಪತ್ರಿಕೆಯು 'ಪ್ರಚಲಿತ' ಎಂಬ ಶೀರ್ಷಿಕೆಯಲ್ಲಿ ವರ್ತಮಾನದ ಬಿಕ್ಕಟ್ಟುಗಳ ವಿಶ್ಲೇಷಣೆಗೆ ಸಾಕಷ್ಟು ಜಾಗವನ್ನು ಮೀಸಲಿಟ್ಟಿದೆ. ಕಾಶ್ಮೀರದ ಸಮಸ್ಯೆಯಿಂದ ಹಿಡಿದು, ಅಯೋಧ್ಯೆ ತೀರ್ಪು, ಉಚ್ಚನ್ಯಾಯಾಲಯದ ಸಮಸ್ಯೆಗಳು, ಪ್ರಸ್ತುತ ರಾಜಕಾರಣದ ದ್ವಂದ್ವಗಳು, ಚುನಾವಣಾ ಪರಿಣಾಮ, ಕಾರ್ಪೊರೇಟ್ ವಲಯದ ಬಿಗಿಹಿಡಿತ, ರಾಕ್ಷಸ ಆರ್ಥಿಕತೆ, ನೈಸರ್ಗಿಕ ವಿಕೋಪಗಳು, ಕೃಷಿಕ್ಷೇತ್ರದ ಬಿಕ್ಕಟ್ಟು, ರಾಷ್ಟ್ರೀಯ ಶಿಕ್ಷಣದ ನೀತಿ, ಅಭಿವೃದ್ಧಿಯ ಮಾದರಿಗಳು ಹೀಗೆ ಬೇರೆ ಬೇರೆ ನೆಲೆಯ ನಮ್ಮ ಬದುಕನ್ನು ಪ್ರಭಾವಿಸುವ ವಿಷಯಗಳ ಪ್ರಖರ ವಿಶ್ಲೇಷಣೆ ಇಲ್ಲಿದೆ. ಇವುಗಳನ್ನು ಒಟ್ಟುಟ್ಟಾಗಿ ಓದಿದರೆ ಒಂದು ವಿಶಿಷ್ಟ ವಾಙ್ಮಯವೇ ನಿರ್ಮಾಣವಾಗುತ್ತದೆ. ಮುಖ್ಯವಾಗಿ ಜಾಗತೀಕರಣದ ಪ್ರಕ್ರಿಯೆಯಿಂದ ತೀವ್ರಗೊಂಡಿರುವ ಬೃಹತ್ ಆರ್ಥಿಕತೆಯ ರಾಕ್ಷಸ ಸ್ವರೂಪ ನಮಗೆ ಸ್ಪಷ್ಟವಾಗಿ ಗೋಚರಿಸುತ್ತದೆ. ಇದಕ್ಕೆ ಪರ್ಯಾಯವಾಗಿ ಸ್ಥಳೀಯ ನೆಲೆಯ ಅಭಿವೃದ್ಧಿಯ ಮಾದರಿಗಳನ್ನು ಎತ್ತಿ ಹಿಡಿಯಲಾಗಿದೆ. ಈ ಬಗೆಯ ಸ್ಥಳೀಯತೆಗೆ ನೀಡುವ ಪ್ರಾಮುಖ್ಯತೆಯನ್ನು ಸಂಪಾದಕೀಯದ ಲೇಖನಗಳಲ್ಲೂ ನಾವು ಗಮನಿಸಬಹುದು. ಸರ್ವಾಧಿಕಾರಿ ಆಯಾಮ ಪಡೆದುಕೊಂಡಿರುವ ರಾಜಕಾರಣದಿಂದಾಗಿ ನ್ಯಾಯಾಲಯಗಳು, ಸಾಂವಿಧಾನಿಕ ಸಂಸ್ಥೆ, ಮಿಲಿಟರಿಗಳೆಲ್ಲವೂ ಸಂಪೂರ್ಣ ರಾಜಕೀಯಗೊಂಡಿರುವುದರ ವಿದ್ಯಮಾನವನ್ನು ಸಹ ಇಲ್ಲಿನ ಅನೇಕ ಲೇಖನಗಳು ಅರ್ಥಪೂರ್ಣವಾಗಿ ಚರ್ಚಿಸಿವೆ.

ಕಳೆದ ಒಂದು ವರ್ಷದ ಅವಧಿಯಲ್ಲಿ ಗಾಂಧಿ ಚಿಂತನೆಗಳ ಸ್ವರೂಪದ ಕುರಿತಾಗಿ ವಿಫುಲವಾಗಿ ಲೇಖನಗಳು ಪತ್ರಿಕೆಯಲ್ಲಿ ಪ್ರಕಟಿತವಾಗಿವೆ. ಸಂಪಾದಕರೇ ಬರೆದ 'ಗಾಂಧಿ ಕಥನ' ಪುಸ್ತಕದ ಆಯ್ದ ಭಾಗಗಳಿಂದ ಮೊದಲಾಗಿ ಗಾಂಧಿ ಚಿಂತನೆಯ ಸ್ವರೂಪ ಮತ್ತು ಅದರ ಸಮಕಾಲೀನ ಪ್ರಸ್ತುತತೆಯ ಕುರಿತಾಗಿ ನಾಗೇಶ ಹೆಗಡೆ, ಗೋಪಾಲಗುರು, ಕೆ.ವಿ. ಸುಬ್ರಹ್ಮಣ್ಯ, ಜಿ.ಎನ್. ದೇವಿ ಮೊದಲಾದ ಹೆಸರಾಂತ ಚಿಂತಕರುಗಳು ತಮ್ಮ ಚಿಂತನೆಗಳನ್ನು ಇಲ್ಲಿ ದಾಖಲಿಸಿದ್ದಾರೆ. ಸರ್ವೇಸಾಮಾನ್ಯವಾಗಿ ಗಾಂಧಿ ಸಂಕಥನದ ಜೊತೆಗೆ ಅಂಬೇಡ್ಕರ್ ಸಂಕಥನವನ್ನು ಪ್ರಸ್ತಾಪಿಸಲಾಗುತ್ತದೆ. ಆದರೆ ಇಲ್ಲಿನ ಲೇಖನಗಳು ಈ ಸಿದ್ಧಮಾದರಿ ಚೌಕಟ್ಟನ್ನು







ಮೀರುವ ಮತ್ತು ಗಾಂಧಿ ದರ್ಶನದ ಬೇರೆ ಆಯಾಮಗಳನ್ನು ವ್ಯಾಖ್ಯಾನಿಸುವ ಸ್ಥೈರ್ಯ ಹೊಂದಿವೆ. ಕೇವಲ ಒಂದು ಲೇಖನ ಮಾತ್ರ ಗಾಂಧಿ–ಅಂಬೇಡ್ಕರ್ ಸಂಕಥನವನ್ನು ವಿಶ್ಲೇಷಿಸುತ್ತದೆ.

ಇದರ ಜೊತೆಗೆ ವರ್ತಮಾನ ಕಾಲದ ಪ್ರತಿ ಸಮಸ್ಯೆಗೂ ನೆಹರೂ ಅವರನ್ನೇ ಹೊಣೆ ಮಾಡುವ ಈ ಕಾಲಘಟ್ಟದಲ್ಲಿ ನೆಹರೂ ವಿಚಾರಗಳು ಮತ್ತು ಕಸ್ತೂರಬಾ ಅವರ ಜೀವನದ ಕೆಲ ಆಯ್ದ ವಿವರಗಳೂ ಸಹ ಪತ್ರಿಕೆಯಲ್ಲಿ ದಾಖಲಾಗಿದೆ.

ಪ್ರಸ್ತುತ ಕಾಲಘಟ್ಟದ ಪ್ರಭುತ್ವದ ರಾಜಕಾರಣವು ಕಲ್ಪನಾತೀತ ಹಿಂಸೆಯೊಂದಿಗೆ ತಳುಕುಹಾಕಿಕೊಂಡಿದೆ. ನಿವೃತ್ತ ಐ.ಪಿ.ಎಸ್. ಅಧಿಕಾರಿ ಸಂಜೀವ ಭಟ್‌ರನ್ನು ಅನೈತಿಕವಾಗಿ ಬಂಧಿಸಿರುವುದನ್ನು ಚಿಂತಕರಾದ ಹರ್ಷ ಮಂದರ್ ಅವರು ಸಮರ್ಪಕವಾಗಿ ವಿಶ್ಲೇಷಿಸಿ ಖಂಡಿಸಿದ್ದಾರೆ. ಹಾಗೆಯೇ ಶರವಣ ರಾಜಾ ಅವರು ಕಣ್ಣನ್ ಗೋಪಿನಾಥನ್ ಅವರು ನಾಗರೀಕ ಹಕ್ಕುಗಳ ಉಲ್ಲಂಘನೆಯ ಕಾರಣದಿಂದ ರಾಜೀನಾಮೆ ನೀಡಿರುವುದನ್ನು ಪ್ರಸ್ತಾಪಿಸಿ ಇಂದಿನ ರಾಜಕಾರಣದ ಕ್ರೌರ್ಯ ಮತ್ತು ಜಡತೆಯನ್ನು ಎತ್ತಿ ತೋರಿಸಿದ್ದಾರೆ. ಇವೆರೆಡೂ ಲೇಖನಗಳು ಸಮಕಾಲೀನ ಸಂದರ್ಭದ ಭ್ರಮನಿರಸನದ ಚಹರೆಯನ್ನು ಎತ್ತಿ ತೋರಿಸುತ್ತವೆ.

ಕಳೆದ ಒಂದು ವರುಷದಲ್ಲಿ ಎರಡು ವಿಚಾರಗಳನ್ನು ಕುರಿತು ತಜ್ಞರುಗಳ ಅಭಿಪ್ರಾಯ ಪಡೆಯಲಾಗಿದೆ. ಸ್ತ್ರೀಸಂವೇದನೆ ಮತ್ತು ಕನ್ನಡ ಭಾಷೆಯ ಮಾಧ್ಯಮ ಶಿಕ್ಷಣದ ಕುರಿತಾಗಿ ತಜ್ಞರುಗಳ ಅಭಿಪ್ರಾಯವನ್ನು ಆಹ್ವಾನಿಸಿ ಸಮಸ್ಯೆಗಳ ಬೇರೆ ಬೇರೆ ಮಗ್ಗಲುಗಳನ್ನು ಶೋಧಿಸಲಾಗಿದೆ. ಕನ್ನಡ ಮಾಧ್ಯಮದಲ್ಲಿ ತಮ್ಮ ಮಕ್ಕಳನ್ನು ಓದಿಸಲು ಸಾಧ್ಯವಾಗದ ಅನೇಕರು ಕನ್ನಡ ಶಾಲೆಗಳ ದುಸ್ಥಿತಿಯತ್ತ ಗಮನ ಸೆಳೆದಿದ್ದರೆ ಖಾಸಗಿ ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ನೀಡುವ ಶಿಕ್ಷಣವು ಕೇವಲ ಕಣ್ಕಟ್ಟು ಮತ್ತು ಅನಗತ್ಯ ಭಾರ ಎಂದೂ ಸಹ ಇನ್ನು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಕನ್ನಡ ಮಾಧ್ಯಮದಲ್ಲಿ ಮಕ್ಕಳನ್ನು ಓದಿಸಬೇಕು ಎಂಬುದು ಆದರ್ಶವಾದರೆ, ಬಹುಭಾಷಿಕ ಪರಿಸರದಲ್ಲಿ ಬೆಳೆಯುವ ಮಗುವಿಗೆ ಈ ಬಹುಭಾಷಿಕತೆಯ ಸಂವೇದನೆ ಅತ್ಯಗತ್ಯ ಎಂಬ ಅಭಿಪ್ರಾಯವೂ ಇಲ್ಲಿ ದಾಖಲಾಗಿದೆ.

ಮಹಿಳೆಯರ ಮೇಲೆ ಹೆಚ್ಚುತ್ತಿರುವ ಅತ್ಯಾಚಾರದಂತಹ ಆಕ್ರಮಣ ಮತ್ತು ಅದಕ್ಕೆ ಕಾರಣವನ್ನು ಹುಡುಕುತ್ತಾ ನಾಡಿನ ಅನೇಕ ಲೇಖಕಿಯರು ತಮ್ಮ ಚಿಂತನೆಗಳನ್ನು ದಾಖಲಿಸಿದ್ದಾರೆ. ಅತ್ಯಾಚಾರದಂತಹ ಪ್ರಕರಣಗಳ ಸುತ್ತಮುತ್ತ ಇರುವ ಸಾಮಾಜಿಕ ಪರಿಸರದ ಆಯಾಮವನ್ನು ಅಗತ್ಯವಾಗಿ ಗಮನಿಸಬೇಕು ಎಂಬುದು ಬಹುತೇಕರ ಅಭಿಪ್ರಾಯವಾಗಿದೆ. ಪುರುಷ ನಿರ್ಮಿತ ಮೌಲ್ಯಗಳಿಂದ ಮೊದಲಾಗಿ ಮುಕ್ತ ಮಾರುಕಟ್ಟೆ, ಕತ್ತು ಕೊಯ್ಯುವ ಸ್ಪರ್ಧೆ, ವಿವೇಕಶೂನ್ಯತೆ, ಗಂಡುಮಕ್ಕಳಿಗೆ ನೀಡಬೇಕಾದ ತರಬೇತಿ, ವೈಚಾರಿಕತೆಯ ಅಗತ್ಯ, ರಾಜಕೀಯದಲ್ಲಿ ಪ್ರಾತಿನಿಧ್ಯ ಹೀಗೆ ಸಮಸ್ಯೆಯ ಬಹುಮುಖೀ ನೆಲೆಗಳು ಇಲ್ಲಿ ಪ್ರಸ್ತಾಪಿತವಾಗಿವೆ. ಈ ಎರಡೂ ವಿಷಯಗಳನ್ನು ಕುರಿತ ಅಭಿಪ್ರಾಯ ಸಂಗ್ರಹಣೆಯು ಸೂಕ್ತವೂ ಸಮಕಾಲೀನ ಅಗತ್ಯವೂ ಆಗಿದ್ದವು.

ಕಳೆದ ಒಂದು ವರ್ಷದ ಪತ್ರಿಕೆಯ ಆದ್ಯತೆ, ಧೋರಣೆಗಳನ್ನು ನೋಡಿದರೆ ಇದು ಸ್ಥಳೀಯ ಜೀವನಕ್ರಮ ಮತ್ತು ಆರ್ಥಿಕತೆಗೆ ಹೆಚ್ಚು ಮಹತ್ವ ಕೊಟ್ಟಿದ್ದು ಅರಿವಾಗುತ್ತದೆ. ಅಂತೆಯೇ ಗಾಂಧೀ ಪ್ರಣೀತ ಮಿತ ಜೀವನದ ಮೌಲ್ಯಗಳೂ ಇಲ್ಲಿ ಪದೇ ಪದೇ ಪ್ರಸ್ತಾವಿತವಾಗಿದೆ. ಜಾಗತೀಕರಣದ ಪ್ರಕ್ರಿಯೆ ತಂದಿಟ್ಟ ರಾಕ್ಷಸ ಆರ್ಥಿಕತೆಗೆ ವಿರುದ್ಧವಾಗಿ ಮಿತ ಆರ್ಥಿಕತೆಯ ಮೌಲ್ಯಗಳಿಗೆ ಆದ್ಯತೆ ನೀಡಲಾಗಿದೆ.


ನಮ್ಮ ಅತಿವೇಗದ ಜೀವನದ ಮೌಲ್ಯಗಳಿಗೆ ಪರ್ಯಾಯವಾಗಿ ನಿಧಾನದ ಬದುಕಿನ ಲಯಗಳನ್ನು ಸಹ ಇಲ್ಲಿ ದಾಖಲಿಸಲಾಗಿದೆ. ಈ ಬಗೆಯ ದೃಷ್ಟಿಕೋನ ಕೇವಲ ಕಳೆದ ವರ್ಷದ ಸಂಚಿಕೆಗಳಿಗೆ ಮಾತ್ರ ಸೀಮಿತವಾಗಿರದೆ, ಪತ್ರಿಕೆಯ ಪ್ರಾರಂಭದ ದಿನಗಳಿಂದಲೂ ಇದು ಪುನಃ ಪುನಃ ವ್ಯಕ್ತವಾಗುತ್ತಲೇ ಬಂದಿದೆ. ಪರಿಸರ ಸಂರಕ್ಷಣೆ ಮತ್ತು ಜಾಗತಿಕ ತಾಪಮಾನದ ಏರಿಕೆಗೆ ಸಂಬಂಧಿಸಿದಂತೆ ಯುರೋಪಿನಲ್ಲಿ ನಡೆಯುತ್ತಿರುವ ಮಹತ್ತರ ಪರಿಸರ ಚಳುವಳಿಯ ಸ್ವರೂಪವನ್ನು ಸಹ ಇಲ್ಲಿ ಪರಿಚಯಿಸಲಾಗಿದೆ. ವಿಶ್ವಾತ್ಮಕವಾಗಿರುವ ಸಾಮಾಜಿಕ–ಸಾಂಸ್ಕೃತಿಕ ವಿದ್ಯಮಾನಗಳನ್ನು ಬಿಟ್ಟ ಸ್ಥಳೀಯತೆ ಇಲ್ಲ ಎಂಬ ದೃಷ್ಟಿಕೋನವನ್ನು ನಾವು ಇಲ್ಲಿ ಗಮನಿಸಬಹುದು. ಅಥವಾ ಕನ್ನಡದ ಅಸ್ಮಿತೆಯನ್ನು ಜಾಗತಿಕ ವಿದ್ಯಮಾನದಿಂದ ಹೊರತುಪಡಿಸಿ ನೋಡಲಾಗುವುದಿಲ್ಲ. ಆದ್ದರಿಂದಲೇ ಆರ್ಥಿಕತೆ, ಜಾಗತೀಕರಣ, ಪರಿಸರ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ಇಂಗ್ಲಿಷಿನಿಂದ ಅನುವಾದಗೊಂಡ ಅನೇಕ ಲೇಖನಗಳನ್ನು ಪ್ರಕಟಿಸಲಾಗಿದೆ. ಕನ್ನಡ ಸಂವೇದನೆಯನ್ನು ಹಿಗ್ಗಿಸುವ ತಂತ್ರವಾಗಿ ಈ ಅನುವಾದದ ಲೇಖನಗಳು ಬಂದಿವೆ. ಈ ಅನುವಾದಗಳು ಸ್ವಾಗತಾರ್ಹ ಬೆಳವಣಿಗೆಯಾಗಿದೆ.


ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಲೇಖನಗಳಲ್ಲಿ ಒಂದು ತುರ್ತು ಇದ್ದಂತೆ, ವೈವಿಧ್ಯವೂ ಇದೆ. ಸಾಂಸ್ಕೃತಿಕವಾಗಿ ಮುಖ್ಯರಾದವರು, ಸಾಹಿತಿಗಳು ಮರಣಹೊಂದಿದಾಗ ಬರುವ ಶ್ರದ್ಧಾಂಜಲಿ ಲೇಖನಗಳಿಂದ ಮೊದಲಾಗಿ ಪುಸ್ತಕ ವಿಮರ್ಶೆ, ಕವಿತೆ, ಕತೆ, ನಾಟಕ ವಿಮರ್ಶೆ, ಸಂಪಾದಕರ ಟಿಪ್ಪಣಿಗಳು, ಕಮ್ಮಟಗಳ ವರದಿಗಳು, ಧಾರ್ಮಿಕ–ಆಧ್ಯಾತ್ಮಿಕ ಆಯಾಮಗಳ ಲೇಖನಗಳು, ಯಕ್ಷಗಾನ–ತಾಳಮದ್ದಲೆ ಕುರಿತಾದ ಸ್ತ್ರೀವಾದಿ ದೃಷ್ಟಿಕೋನ, ಲಲಿತ ಪ್ರಬಂಧಗಳು, ಅನುವಾದಗಳು, ಲಘು ಬರಹಗಳು ಹೀಗೆ ನಾನಾ ಬಗೆಯ ಪ್ರಕಾರ–ಪ್ರಪಂಚಗಳ ಅನಾವರಣ ಇಲ್ಲಾಗಿದೆ. ಯಾವ ಲೇಖನಗಳೂ ಸಹ ಕೇವಲ ಮೇಲ್‌ಸ್ತರದವಾಗಿರದೆ ಪ್ರಖರ ವೈಚಾರಿಕತೆಯಿಂದ ಕೂಡಿರುವುದು ಪತ್ರಿಕೆಯ ವಿಶೇಷ. ಇದಕ್ಕೆ ಸಂಬಂಧಿಸಿ ಉಡುಪಿಯ ಯತಿ ಪೇಜಾವರರ ಶ್ರದ್ಧಾಂಜಲಿಗೆ ಸಂಬಂಧಿಸಿದ ಲೇಖನವೊಂದರ ಪ್ರಕಟಣೆಗೆ ಸಂಬಂಧಿಸಿ ಲೇಖಕರು ಮತ್ತು ಸಂಪಾದಕರ ನಡುವೆ ಬಿರುಸಿನ ಚಕಮಕಿ ಕೂಡ ನಡೆದಿದೆ. ಭಿನ್ನಾಭಿಪ್ರಾಯಕ್ಕೂ ಅವಕಾಶ ಮಾಡಿಕೊಟ್ಟಿದ್ದು ಸ್ವಾಗತಾರ್ಹವೆ. ಚಕಮಕಿಯು ವೈಯುಕ್ತ ನೆಲೆಯಲ್ಲಿರದೆ ತಾತ್ವಿಕ ಭಿನ್ನಾಭಿಪ್ರಾಯವಾಗಿದ್ದರೆ ಅದಕ್ಕೆ ಅವಕಾಶ ನೀಡುವುದು ಒಳ್ಳೆಯದೆ.

ಪತ್ರಿಕೆಯಲ್ಲಿ ಎಂದಿನಂತೆ ಕಾವ್ಯ, ಸಾಹಿತ್ಯ–ಸಂಸ್ಕೃತಿಗೆ ಸಂಬಂಧಪಟ್ಟ ಟಿಪ್ಪಣಿಗಳು ಹಾಗೂ ಪುಸ್ತಕ ವಿಮರ್ಶೆ ವಿಪುಲವಾಗಿ ಪ್ರಕಟವಾಗಿವೆ.

೨೦೧೯ರ ವಿಶೇಷ ಸಂಚಿಕೆಯು ತನ್ನ ವೈಚಾರಿಕ ಪ್ರಖರತೆಯಿಂದಾಗಿ ನಮ್ಮ ಗಮನ ಸೆಳೆಯುತ್ತದೆ. ಹೆಚ್ಚಿನ ಭಾಗವು ಗಾಂಧಿ ಚಿಂತನೆ–ತಾತ್ವಿಕತೆಗೆ ಮೀಸಲಾಗಿದ್ದರೆ, ಉಳಿದ ಭಾಗಗಳಲ್ಲಿ ನವೋದಯ ಸಾಹಿತ್ಯದ ಮರು ಓದು, ಕನ್ನಡ ಸಾಹಿತ್ಯದ ನಿರೂಪಣೆಗಳಲ್ಲಿರುವ ನಿಯಂತ್ರಣ ಮತ್ತು ಅಧಿಕಾರದ ನೆಲೆಗಳು, ಜಾಗತೀಕರಣದ ಹಿನ್ನಲೆಯಲ್ಲಿ ಸಾಹಿತ್ಯದ ಮರುನೋಟ, ಯುರೋಪಿನ ಸಂದರ್ಭದಲ್ಲಿ ಕನ್ನಡ ಸಾಹಿತ್ಯದ ನೆಲೆಗಳು, ಅದ್ವೈತದ ಹೆಜ್ಜೆಗುರುತುಗಳು ಮುಂತಾದವುಗಳ ಕುರಿತಾದ ವಿಶೇಷ ಲೇಖನಗಳಿವೆ. ಗಾಂಧಿ ಚಿಂತನೆಗಳನ್ನು ಒರೆಹಚ್ಚಬೇಕಾದರೆ ಅಂಬೇಡ್ಕರ್ ಚಿಂತನೆಗಳೊಂದಿಗೆ ಅನುಸಂಧಾನ ಮಾಡುವ ರೀತಿಯನ್ನು ಸಂಜಯ ಪಲ್ಶೀಕರ್ ತೆರೆದಿಟ್ಟರೆ, ಡಿ.ಎಸ್. ನಾಗಭೂಷಣ ಅವರು ಗಾಂಧಿಯವರ ಪ್ರೇಮಪ್ರಕರಣವನ್ನು ಕುರಿತಾದ ವಿಸ್ತ್ರತ ಲೇಖನ ಪ್ರಕಟಿಸಿದ್ದಾರೆ. ಇಡೀ ಸಂಚಿಕೆಯು ಗಾಂಧಿ ವಿಚಾರಧಾರೆಯ ಪುನರ್ ವಿಮರ್ಶೆಯ ಜೊತೆಗೆ ವರ್ತಮಾನದ ಸಂಕಟಗಳನ್ನೂ ಸಹ ವಿಶ್ಲೇಷಿಸುತ್ತವೆ.

ಕೊನೆಯದಾಗಿ ಪ್ರಖರತೆ, ತೀಕ್ಷ್ಣ ವಿಶ್ಲೇಷಣೆ ಹಾಗೂ ತೀವ್ರ ರಾಜಕೀಯ ಪ್ರಜ್ಞೆಯನ್ನು ಹೊಂದಿರುವ ಪತ್ರಿಕೆಗೆ ಇನ್ನೂ ಹೊಸ ಲೇಖಕರ ಮತ್ತು ಲೇಖಕರ ಬೇಸ್ ಅನ್ನು ವಿಸ್ತರಿಸುವ ಅಗತ್ಯ ಕಂಡುಬರುತ್ತದೆ. ಹೊಸ ಲೇಖಕರು ತರಬಹುದಾದ ಹೊಸ ಪ್ರಪಂಚ ಪತ್ರಿಕೆಗೆ ಅಗತ್ಯವಿದೆ.





(ಶಿವಮೊಗ್ಗದಲ್ಲಿ ನೆಲೆಸಿರುವ ಲೇಖಕರು ವೃತ್ತಿಯಿಂದ ಇಂಗ್ಲಿಷ್ ಅಧ್ಯಾಪಕರಾಗಿದ್ದು ತಮ್ಮ ಕ್ರೀಡಾ ಬರಹಗಳಿಂದಲೂ ಗಮನ ಸೆಳೆದಿದ್ದಾರೆ)

ನವಿಲುಗರಿ


ಆತ್ಮ ಸಂಗಾತಿ

ನನ್ನ ಮೈ ತುಂಬಿ ತುಳುಕಿದ ಆತ್ಮಸಂಗಾತಿ
ನನ್ನನಗಲಿದಳೆಂದು ನಂಬಲಿ ಹೇಗೆ? ಎಲ್ಲಿ
ನೋಡಿದರಲ್ಲಿ ಅವಳೆ ಇರುವಾಗ? ಕನಸಲ್ಲಿ
ಮನಸಲ್ಲಿ ಒಂದಾಗಿ ಹೊಂದಿಕೊಂಡಿರುವಾಗ?
ಕೈಯಲ್ಲಿ ಸದಾ ಒಂದು ಪುಸ್ತಕ, ತಪ್ಪಿದರೆ
ಹೆಣಿಕೆ, ಬಣ್ಣದೆಳೆಗಳನೆಣಿಸಿ ಹೊಸ ಚಿತ್ತಾರ,
ಚಿನ್ನದೊಡನಾಡಿನಂತೆ ಅಕ್ಕಸಾಲಿ; ಸ್ವಂತ-
ಅನ್ಯ ಭೇದವಿರದ ಉಪಕೃತಿಯ ಉಡುಗೊರೆ.
ಕಥೆ ಬರೆಯಲು ಏಕಾಂತ ಬೇಕಿಲ್ಲ; ಅಡುಗೆ ಮನೆ
ಪಡಸಾಲೆ, ಮಲಗುವ ಕೋಣೆ, ಯಾವುದಾದರು
ಸರಿಯೆ; ಬಳಕೆ ನುಡಿ ಕೆಳಸ್ತರದ ಜನರು
ಆಡುವ ಭಾಷೆಯಲ್ಲಿ ಕಲೆಯ ಕೆತ್ತುವಿಕೆ.
ಶಾಂತಿ-ಸಹನೆಯ ಮೂರ್ತಿ ಅಮೃತದ ಗುಳಿಗೆ ನುಂಗಿ
ಭವರೋಗ ಗೆದ್ದಳು. ನನ್ನನಿಲ್ಲಿಯೇ ಉಳಿಸಿ.



-ಚೆನ್ನವೀರ ಕಣವಿ

೨೨-೦೬-೨೦೨೦: ಪತ್ನಿ ಶಾತಾದೇವಿ
ತೀರಿಕೊಂಡು ಒಂದು ತಿಂಗಳಾದಾಗ ಬರೆದುದು)




ಸ್ಯಾಂಟಿಯಾಗೋನ ಚೈತ್ರ

ಕೊಂಬೆರೆಂಬೆ ಮೇಗಳ
ಕಂದೆಲೆಗುಂಪಲ ನಡುನಡುವೆ
ಇಣುಕುತಿವೆ
ಹಸಿರು ಚಿಗುರೆಲೆ
ನಿಶ್ಶಬ್ದವಾಗಿ, ನಿಧಾನವಾಗಿ, ನಿಶ್ಚಿತವಾಗಿ
ಸಾಂಟಿಯಾಗೋಗೆ ಬರುತಿದೆ ಚೈತ್ರ
ಥಂಡಿ ಅಡಿಯಿಡುತಾ

ನೇತಾಡುತ್ತಾ ಕಾಲದಲ್ಲಿ
ಹಿಮಗಾಲ, ಚಿಗುರುಕಾಲಗಳ ನಡುವೆ
ದಿನ ಬೆಚ್ಚಗಾಗುತಿವೆ
ಇರುಳುಗಳಿನ್ನೂ ಕುಳಿರು ಬೆರಳಿಂದ
ನಿಮ್ಮನ್ನು ಸೋಕುತಿವೆ

ವಾಪಸಾಗುತಿದೆ ವಸಂತ
ಕೊಕೆವ ಸಾಂಟಿಯಾಗೋಗೆ
ಮನ, ಮಂಜುಗಳನ್ನು ಕರಗಿಸುತಾ
ಕೃಷ್ಣ ಮರಳುವ ಹಾಗೆ ಬೃಂದಾವನಕೆ
ಏಸೂನಂತೆ ಜೆರುಸಲೆಮ್ಮಿಗೆ
ಬುಲ್ಬುಲ್ ಹಾಗೆ ಗುಲಾಬಿವನಕೆ
ಅಪಾರ ಸಂಪತ್ತಿನಂತೆ ದರಿದ್ರರಿಗೆ
ಭರವಸೆಯಂತೆ ಬಳಲಿಹೋದ ನೆಲಕೆ




ಪ್ರತಿ ಮಂಜಾವು
ಪ್ರತಿ ಮುಸ್ಸಂಜೆ ತಯಾರು
ನವ ಸಂಭ್ರಮಕೆ
ಸ್ವಾಗತ ಚೈತ್ರಕೆ



ತಯಾರಾಗಿವೆ ಎಲ್ಲಾ ನನ್ನ ಹೊರತು
ಹಿಂದಿರುಗೀತೆ ನನ್ನ ಚೈತ್ರ ಎಂದಾರಾ?
ಸಾಂಟಿಯಾಗೋಗೆ ನಾ ಬರೆಯುತಿರುವ ಚೈತ್ರಗೀತೆ
ಆದೀತು
ನನ್ನೆಲ್ಲ ಚೈತ್ರಗಳ ಶೋಕಗೀತೆ

-ಎಚ್,ಎಸ್. ಶಿವಪ್ರಕಾಶ

ದಿವ್ಯ ಕ್ಷಣ



ಹೊರಗೆ ಹೂ ಬಳ್ಳಿಯಲಿ
ಹೂವಂಥ ಹಕ್ಕಿ.
ಒಳಗೆ ನಾನು.ನಡುವೆ
ಗೋಡೆಯ ತೆರದ
ಗಾಜಿನ ಕಿಟಿಕಿ

ದೃಷ್ಟಿ ಮಿಲನದ ಕ್ಷಣದಿಂದ
ಹಕ್ಕಿ ಬಂದು,ಕುಟುಕುತ್ತಲೇ ಇದೆ
ಗಾಜ.ಒಳಬರುವ
ಹಾದಿ ಹುಡುಕುತ್ತ.

ಗೊತ್ತಿಲ್ಲ ಹಕ್ಕಿಗೆ-ಅದು
ಗಾಜಿನ ಗೋಡೆಯೆಂದು.ಮತ್ತೆ ಮತ್ತೆ
ಕುಟುಕುತ್ತಲೇ ಇದೆ ಒಳಗ
ಜಗದ ದರ್ಶನಕಾಗಿ.

ಅಚ್ಚರಿಯ ಕಣ್ಣಾಗಿ ಕುಳಿತಿದ್ದೇನೆ ನಾನು
ಗಾಜಿನ ಗೋಡೆ
ಬ್ರಮೆಯೇ,ನಿಜವೇ
ತಿಳಿಯದೇ
ಒಳ ಹೊರಗ ದಾರಿಯನು
ಅರಿಯದೇ

ಕಾಯುತ್ತೇವೆ,
ಗಾಜಿನ ಗೋಡೆಯೊಡೆದು
ಒಳಹೊರಗು ಒಂದಾಗುವ
ದಿವ್ಯಕ್ಷಣಕ್ಕಾಗಿ.

-ಸುಬ್ರಾಯ ಚೊಕ್ಕಾಡಿ

ಮಗ ಬಂದ
(ಒಂದು ಲಾಕ್‌ಡೌನ್ ಕವಿತೆ)

ನಿನ್ನೆ ಶುಕ್ರವಾರ
ಇಂದು ಶನಿವಾರ
ಬೆಂಗಳೂರು ಬವಣೆ ಹೊತ್ತು
ನಸುಕಿನಲ್ಲಿ ಬಂದಿರುವ
ನನ್ನ ಮಗ ಮಲಗಿದ್ದಾನೆ



ಎತ್ತಲೊ ಬೀಸಾಕಿದ
ಜರ್ಕಿನ್ನು, ಮಂಕಿ ಕ್ಯಾಪು
ಬೂಟು ಸಾಕ್ಸು ,
ಕಿವಿಗೆ ಜೋತು ಬಿದ್ದ
ಮೋಬೈಲ್ ಹಿಯರಿಂಗ್ ಜನಿವಾರ;

ಎಲ್ಲ ಕಿತ್ತೆಸೆದು
ತನ್ನ ಹಾವೇರಿ ಮನೆಯಲ್ಲಿಮಲಗಿದ್ದಾನೆ.

work from home- ಎಂದು
ಒಂದು ಕೈ ಲ್ಯಾಪ್‌ಟಾಪ್ ಮೇಲೆ
ಇನ್ನೊಂದು ದಿಂಬು ಸಂದಿಗೆ

ಕನಸು ಕೂಡ ಬೆರಳಿಂದ
ಕೊರಳಿಗೆ, ಕೊರಳಿಂದ ಮರೆವಿಗೆ

ಹೋಗಿದೆ


ಹೇಗಿದೆ :
ಇವನ ಯವ್ವನ
ಹೊತ್ತ ಹೊರೆ ತಲೆ ತುಂಬ
ಇಂಬು ಇಲ್ಲ, ಕಂಬವೂ ಇಲ್ಲ
ಕರಳು ಕುಡಿಗೆ

ಇಂದನು ಉಸುರಿಸಿ, ನಾಳೆಗೆ ಕಾಯುತ್ತಿದ್ದಾನೆ

–ಸತೀಶ ಕುಲಕರ್ಣಿ

ಭೂಮಿ

ಅಗುಳು ಅನ್ನಬಿದ್ದರೂ ಅಷ್ಟೆ
ಹೆಣ ಬಿದ್ದರೂ ಅಷ್ಟೆ, ಭೂಮಿ
ಸುಮ್ಮನೆ ನೋಡುತ್ತದೆ;



ಅನ್ನದ ಅಗುಳಿಗೆ ಇರುವೆ
ಹೆಣಕ್ಕೆ ಹದ್ದು
ಅವರವರ ಪಾಲು ಅವರಿಗೇ

ಅಳಿದುಳಿದ ಮೂಳೆಗಳನ್ನು
ತನ್ನೊಡಲಲ್ಲಿಟ್ಟುಕೊಂಡು
ಕಾಯುತ್ತದೆ ಭೂಮಿ,
ಹುಡುಕುತ್ತ ಬರುವ ಹೆಸರಿಲ್ಲದವರಿಗಾಗಿ

ಜಿ.ಪಿ.ಬಸವರಾಜು

ಪ್ರೀತಿ ನನ್ನ ತಟ್ಟಿ ಎಬ್ಬಿಸಿತ್ತು

ಪ್ರೀತಿ ನನ್ನ ತಟ್ಟಿ ಎಬ್ಬಿಸಿತ್ತು
ಮುಟ್ಟಿತ್ತು, ಮುತ್ತಿಟ್ಟಿತ್ತು
ಸುಡುವ ತುಟಿಗಳಲ್ಲಿ
ಕಾವಾಡುವ ಕರಗಳಲ್ಲಿ
ಬೆವರಾಡುವ ಬೆದೆಯಲ್ಲಿ
ಬಿಸಿಯುಸಿರು ಬಿಡುವಲ್ಲಿ
ಹಗುರಾದ ಗಾಳಿಪುಗ್ಗೆಯಾಗಿ
ಚುಕ್ಕೆಗಳ ಕಣ್ಣಲ್ಲಿ ಮನವ
ತೂರಿಬಿಟ್ಟಿತ್ತು ಆಕಾಶದುದ್ದ
ಮಣ್ಣ ಕಣಕೆ ಮಳೆಬೆರೆವಂತೆ!


ಬೆಟ್ಟಗುಡ್ಡಗಳ ಮೇಲೆ
ಕಾವಳದ ಕೊರೆಯು
ಇಳೆಬಿಟ್ಟ ತೆರೆಯಂಥ
ಬೆಚ್ಚನೆಯ ಪ್ರೀತಿಯೇ
ಬಿಸಿಲಲ್ಲಿ ಕರಗಲು
ಮೈ ಒದರುವ ಕಾಲವನ್ನೇ
ಚೆಲುವಾಗಿಸುವ
ನಿನ್ನ ಕಲೆಗೆ ಶರಣು




ಕರಗಿಹೋದ ಕಾಲದೊಳು

ನಿನ್ನ ಬಿಟ್ಟವರಿಲ್ಲ
ಹಿಡಿದವರೂ ಇಲ್ಲ
ಕಾಲನ ಬಾಗಿಲಲ್ಲಿ ಕಾದುನಿಂತರೂ
ಆ ಬಿಸಿಯುಸಿರಿನ ಗಂಧವನು
ಮರೆತವರ ನಾ ಕಾಣೆ







ಚಿತ್ರಗಳು: ವಿಜಯಶ್ರೀ ಹಾಲಾಡಿ)

ಕಾದೂ ಕಾದೂ
ಕಾಲವನೊಳಗೊಂಡ
ನಿಟ್ಟುಸಿರು ಗಾಳಿಯಲ್ಲಿ
ಸುಯ್ಲಿಡುತ್ತ ಕಲೆಯಾಗಿ....
ಕಾವ್ಯವಾಗಿ.,
ಕಥೆಯಾಗಿ ....

–ಹೆಚ್ . ಆರ್ . ಸುಜಾತಾ

ಕತ್ತು ಹಿಚುಕುವ ಸಿದ್ಧಹಸ್ತ

ಕತ್ತು ಹಿಚುಕುವುದರಲ್ಲೇ ಅವನ ನುಡಿ ಸಿದ್ಧಹಸ್ತ.

ಘಮಘಮಿಸಿ ಅರಳತೊಡಗಿದಾಗಲೇ
ಹೂವ ಕುಸುರೊಳಗೆ ಜೀವಪಡೆಯುವುದು ಹುಳ,
ಕಾಯಲ್ಲ ಹೀಚಲ್ಲ ಮಾಗುವ ಹಣ್ಣಿನ
ಮಂಡಲದೊಳಗೆ
ಮರಿಯಿಕ್ಕುತ್ತದೆ ಹಿಂಡಿಲು ಹುಳ.



ಕಾದು ಕುಳಿತಿದೆ ಹೊಂಚುಹಾಕಿ
ಯಾವುದೋ ನುಡಿ ಹುಳದ ಹಾಗೆ
ಎಲ್ಲರ ಎದೆಯೊಳಗೆ,
ಮಾತನ್ನು ಮೌನದೊಳಗೆ ಕರಗಿಸುವುದ ಕಲಿಸು
ಕವಿತೆ.

ಹಣ್ಣನ್ನು ಹುಳ ಕೆಡಿಸುವ ಮುನ್ನ ತಿನ್ನುವುದೇ
ಲೇಸು,
ಸಿಪ್ಪೆ ನೋಡಿ ತಿರುಳನರಿಯುವುದೇ ಕವಿತೆಯ
ಹುಡುಕಾಟವೂ.

ಎಲ್ಲೋ ಕೆಲವರಿಗೆ ಮಾತ್ರ ದಕ್ಕಬಹುದು
ಸಿಪ್ಪೆ, ತಿರುಳು, ಬೀಜದ ಪೂರ್ಣಫಲ,
ಉಳಿದವರಿಗೆ ಹಣ್ಣಿನ ಕತ್ತು ಹಿಚುಕುವ ಹುಳ
ಮಾತ್ರ.

–ಜ.ನ. ತೇಜಶ್ರೀ

ಸಾಧ್ಯವಿಲ್ಲದ್ದು

ಬೆಕ್ಕಿಗೆ ಹಾಲು ನೀಡಿದರೆ
ಹಕ್ಕಿಗೆ ಕಾಳು ನೀಡೀದರೆ
ನಾಯಿಗೆ ರೊಟ್ಟಿ ನೀಡಿದರೆ
ಮೊಲಕ್ಕೆ ಸೊಪ್ಪು ನೀಡಿದರೆ
ಹಸುವಿಗೆ ಹುಲ್ಲು ನೀಡಿದರೆ
ಇರುವೆಗೆ ಸಕ್ಕರೆ ನೀಡಿದರೆ



ಪ್ರೀತಿಯ ಬಲೆಯಲ್ಲಿ
ಸಿಲುಕುವುದು ಖಚಿತ
ಕಟ್ಟಿಕೊಂಡಾಗ ಪುಳಕ
ಅಟ್ಟಿ ಬಿಡುವಾಗ ನರಕ !

ಜಗತ್ತು ವಿಶಾಲವಾಗಿದೆ
ದಯೆ ಅಪಾರವಾಗಿದೆ
ದೈವ ಅವರ ಪರವಾಗಿದೆ
ಅಂದುಕೊಳ್ಳುವುದೇ ಉಚಿತ !

ಹೆಸರಿಗೆ ಮೂಕ ಲೋಕ
ಜೀವ ಪೂರ್ಣ ಪರಿಪಾಕ

–ಸವಿತಾ ನಾಗಭೂಷಣ

ಲೌಕಿಕ-ಅಲೌಕಿಕ: ಒಂದು ಜಿಜ್ಞಾಸೆ

-ಲಕ್ಷ್ಮೀಶ ತೋಳ್ಪಾಡಿ



ಅಧ್ಯಾತ್ಮಿಕ ಸಾಧಕರು ಎಂದು ಹೇಳಲಾಗುವ 'ಗುರು'ಗಳು ಅಥವಾ ಅವಧೂತರ ಬಗೆಗೆ ಹೆಚ್ಚಿನ ಆಸಕ್ತಿ ವ್ಯಕ್ತವಾಗುತ್ತಿರುವ, ಅಂಥವರೇ ಅಥವಾ ಅವರ ಬದುಕಿನ ಬಗ್ಗೆ ಬರೆದ ಪುಸ್ತಕಗಳು ಹೊರಬರುತ್ತಿರುವ ಈ ದಿನಗಳಲ್ಲಿ ಅವುಗಳಲ್ಲಿ ನಿರೂಪಿತವಾಗಿರುವ 'ಅಲೌಕಿಕ' ಎಂದು ಸಾಧಾರಣವಾಗಿ ವರ್ಣಿಸಲಾಗುವ ಘಟನೆ ಮತ್ತು ವಿದ್ಯಮಾನಗಳನ್ನು ಕಲಿತ ನಮ್ಮ ಆಧುನಿಕ ವೈಚಾರಿಕತೆಯ ಗ್ರಹಿಕೆಯ ಪರಿಕರಗಳ ಮೂಲಕ ಕಟ್ಟುಕತೆಗಳೆಂದು ತಳ್ಳಿಹಾಕುವುದು ಸುಲಭದ ಕೆಲಸ. ಆದರೆ ನಮ್ಮ ಪ್ರಜ್ಞೆಗೆ ವೈಚಾರಿಕತೆಯ ಆಯಾಮ ಮಾತ್ರವಿಲ್ಲ; ಅದನ್ನು ಮಿಕ್ಕಿ ಮೀರಿದ ಅನುಭವದ ಸಂವೇದೆಗಳಿಗೂ ಮಿಡಿಯುವ ಅನಿರ್ವಚನೀಯ ಆಯಾಮವೊಂದಿದೆ ಎಂಬ ತಿಳಿವಿಗೆ ಒಳಗಾದವರು ಇಂತಹ ಘಟನೆ/ವಿದ್ಯಮಾನಗಳನ್ನು ತಮ್ಮ ಜ್ಞಾನದ ಭಾಗವಾಗಿ ಅಂತರ್ಗತಗೊಳಿಸಿಕೊಳ್ಳಲು ಇರುವ ಮಾನವ ಗ್ರಹಿಕೆಯ ಪರಿಕರಗಳಾದರೂ ಯಾವುವು? ಇದಕ್ಕೆ ಸಂಬಂಧಪಟ್ಟ ಜಿಜ್ಞಾಸೆಯೊಂದು ಇಲ್ಲಿದೆ.-ಸಂ.

ಅಲೌಕಿಕ ವಿದ್ಯಮಾನಗಳ ಬಗ್ಗೆ ಪವಾಡ ಸದೃಶ ಘಟನೆಗಳ ಬಗ್ಗೆ ನಿಮ್ಮ ನಿಲುವೇನು, ಅವುಗಳನ್ನು ಒಪ್ಪುವಿರಾ ಎಂದು ಯಾರಾದರೂ ಕೇಳಿದರೆ ನಾನು ಹೇಳುವೆ: ನನ್ನ ಒಪ್ಪಿಗೆ ಅಥವಾ ಒಪ್ಪಿಗೆ ಇಲ್ಲ; ಇವೆಲ್ಲ ಯಾತರ ಲೆಕ್ಕ? ನನ್ನ ಒಪ್ಪಿಗೆಯಿಂದ ಅಲೌಕಿಕ ಸತ್ಯಕ್ಕೆ ಲವಲೇಶ ಹೆಚ್ಚಳವೂ ನನ್ನ ನಿರಾಕರಣೆಯಿಂದ ಲವಲೇಶ ಕುಂದೂ ಉಂಟಾಗದು. ಅದಕ್ಕೆ ನಮ್ಮ ಹಂಗೇ ಇಲ್ಲ. ಅದನ್ನು ಒಪ್ಪುವುದೆಂದರೆ ಒಪ್ಪಿದವರ ಬದುಕೇ ಬದಲಾದಂತೆ. ನನ್ನನ್ನು ಬದಲಾಯಿಸಿಕೊಳ್ಳುವುದು ನನ್ನ ಕೈಯಲ್ಲಿರುವ ಸಂಗತಿಯಲ್ಲ. ನನ್ನ ಕೈಯಲ್ಲಿರುವ ಸಂಗತಿ ಎಂದು ಭಾವಿಸುವೆನಾದರೆ ಬದುಕು ಬದಲಾಗಿಲ್ಲ ಎಂದೇ ಅರ್ಥ! ಏಕೆಂದರೆ ಬದುಕು ನನ್ನ ಕೈಯಲ್ಲಿದೆ ಎಂಬ ಭಾವನೆಯಿಂದ ಸಾಧಿಸಿ ನೋಡೋಣ! ಅದಕ್ಕೆ ಯಾರ ಸಹಾಯವೂ ಬೇಕಿಲ್ಲ. ಹಣವೂ ಬೇಡ. ದೈಹಿಕ-ಮಾನಸಿಕ ಪರಿಶ್ರಮವೂ ಬೇಡ. ಇಷ್ಟು ಸುಲಭ ಸರಳವೆಂದು ಕಂಡರೂ ಪ್ರಾರ್ಥನೆಯ ಭಾವ ಉಂಟಾಗುವುದಿಲ್ಲ. ಯಾವ ಸಮಯ ಸಾಧಕತೆಯಿಂದಲೂ ಹೃದಯ ಕರಗುವ ಹೊತ್ತನ್ನು ಸಾಧಿಸಲಾಗುವುದಿಲ್ಲ! ಆದುದರಿಂದ ಅದನ್ನು ಒಪ್ಪುವಂತೆ ಅದೇ ಮಾಡಲಿ; ಮಾಡುತ್ತದೆ!

ತನ್ನ ಪ್ರಚಂಡ ವಚನ ಒಂದರಲ್ಲಿ ಅಲ್ಲಮ; ಗುಹೇಶ್ವರನ ಎಲ್ಲ ಪೌರಾಣಿಕ ಸಂಬಂಧಗಳೂ ಕಳಚಿ ಬಿದ್ದವು ಎಂದು ವರ್ಣಿಸುತ್ತ ವಚನದ ಕೊನೆಯಲ್ಲಿ "ಅಲ್ಲಿಂದತ್ತ ಗುಹೇಶ್ವರ ಸತ್ತನೆಂಬ ಸುದ್ದಿ" – ಎಂದು ಉದ್ಗರಿಸುತ್ತಾನೆ. ಈ ವಚನವನ್ನು ಹೇಗೆ ಕೇಳಿಸಿಕೊಳ್ಳಬೇಕೆಂದರೆ ಗುಹೇಶ್ವರನ ಸಾವಿನ ಸುದ್ದಿ ಎಂದರೆ ತನ್ನ ಸಾವಿನ ಸುದ್ದಿ ಎಂಬಂತೆ! ತನ್ನ ಸಾವಿನ ಸುದ್ದಿಯನ್ನು ತಾನೇ ಕೇಳಿಸಿಕೊಳ್ಳುವ ನಿರಾಳತೆ – ನಿಸ್ಸಂಗ – ಕೆಚ್ಚಿಲ್ಲದ ಕೆಚ್ಚು – ಅಲ್ಲಮನದು! ಅಲೌಕಿಕವನ್ನು ನಿಜವಾಗಿ ಒಪ್ಪುವುದೆಂದರೆ ತನ್ನ ಸಾವಿನ ಸುದ್ದಿಯನ್ನು ತಾನೇ ಕೇಳುವುದಕ್ಕೆ –ದೂರದಿಂದಲಾದರೂ; ಹೀಗಂತೆ ಎಂಬ ರೀತಿಯಲ್ಲಾದರೂ ಕೇಳಿಸಿಕೊಳ್ಳುವುದಕ್ಕೆ ಸಿದ್ಧನಾದಂತೆ!'

ಅಲೌಕಿಕ ವಿದ್ಯಮಾನಗಳು ನಮ್ಮ ಗ್ರಹಿಕೆಯ ನೆಲೆಗಳನ್ನು ತಾವೇ ಸೃಷ್ಟಿಸಿಕೊಳ್ಳುತ್ತವೆ. ಅಲೌಕಿಕ ಎಂಬುದೇನು? ಲೌಕಿಕದ ವಿದ್ಯಮಾನಗಳೂ ಹೀಗೆಯೇ ಇವೆ. ತಮಗೆ ಬೇಕಾದುದೆಲ್ಲಿದೆ, ಅದನ್ನು ಪಡೆಯುವುದು ಹೇಗೆ ಎಂದು ತಿಳಿಯದ ಖಗ-ಮೃಗ-ಕ್ರಿಮಿ-ಕೀಟಗಳಿವೆಯೆ ಈ ಲೋಕದಲ್ಲಿ? ಅಂದರೆ ಯಾವುದೂ ಇಲ್ಲಿ ಏಕಾಂಗಿಯಾಗಿ, ರಿಕ್ತವಾಗಿ ಸೃಷ್ಟಿಯಾದುದಲ್ಲ. ಒಂದು ಸನ್ನಿವೇಶದ ಭಾಗವಾಗಿಯೇ, ಸೃಷ್ಟಿಯಾದುದು. ಸನ್ನಿವೇಶವೇ ಸೃಷ್ಟಿಯಾದುದು. ಸೃಷ್ಟಿ ಎಂದರೆ ಸೃಷ್ಟಿಯ ಸನ್ನಿವೇಶವೇ. ಅಲೌಕಿಕ ವಿದ್ಯಮಾನಗಳೂ ಹೀಗೆಯೇ. ಅಲೌಕಿಕತೆಯ ವಿಶೇಷವೇನೆಂದರೆ – ವಿಶ್ವಪ್ರಜ್ಞೆಯು (ಅಲೌಕಿಕ) ಸ್ವ-ಪ್ರಜ್ಞೆಯ (ಲೌಕಿಕ) ಜೊತೆಗೆ ಒಡನಾಡಬೇಕಾಗಿ ಬಂದಿರುವುದು. ಲೌಕಿಕದಲ್ಲಿ, ತನ್ನಂತೆ ಇರುವವರ ಜೊತೆ – ತನ್ನಂತೇ ಇದ್ದಾರಲ್ಲ ಎಂಬ ವಿಲಕ್ಷಣ ಮುನಿಸಿನಿಂದಲೇ – ಒಡನಾಟ, ಗುದ್ದಾಟಗಳ ಸನ್ನಿವೇಶವಾದರೆ – ಅಲೌಕಿಕದಲ್ಲಿ, ತನ್ನಂತೆ ಇದ್ದೂ ಹಾಗೆಂದು ತಿಳಿಯದ – ತಿಳಿಯಲು ನಿರಾಕರಿಸುವ ನಾನು ಬೇರೆ – ನಾನು ನಾನೇ – ನಾನು ನಿನ್ನಂತಾಗಲಾರೆ – ಆಗಬೇಕಾಗಿಲ್ಲ – ಆಗುವುದಿಲ್ಲ – ಎಂದು ತನ್ನೊಳಗೇ ಹೇಳಿಕೊಳ್ಳುತ್ತಿರುವ, ಅದೇ ಧ್ಯಾನವಾಗಿರುವ ಸ್ವ-ಪ್ರಜ್ಞೆಯ ಜೊತೆಗೆ ಇದೆಲ್ಲವನ್ನೂ ತಿಳಿದ – ತಿಳುವಳಿಕೆಯೇ ತನ್ನ ಸ್ವರೂಪವಾಗಿರುವ – ವಿಶ್ವಪ್ರಜ್ಞೆಯು ಒಡನಾಡಬೇಕಿದೆ! ಇವೆರಡರ ನಡುವೆ ವಿಲಕ್ಷಣವಾದ ಒಂದು ಗುದುಮುರಿಗೆ ಇದೆ. ಸ್ವ-ಪ್ರಜ್ಞೆಯು ತನ್ನದು ಸರಿಯಾದ, ತರ್ಕಸಮ್ಮತವಾದ, ಸತ್ಯನಿಷ್ಠವಾದ ನಿಲುವು ಎಂದು ಬಗೆದಿದೆ. ವಿಶ್ವಪ್ರಜ್ಞೆಗಾದರೋ ಇದು ಮಾಯೆ – ಇದು ಭ್ರಮೆ – ಇದು ಕನಸು – ಇದು ಈಗ ಹೀಗಿದೆ. ಆದರೆ ಬದಲಾಗಿಯೇ ಆಗುತ್ತದೆ ಎಂದು ಸ್ಪಷ್ಟವಾಗಿ ಅರಿವಿದೆ. ಆದುದರಿಂದ, ತನಗೇ ವಿಶಿಷ್ಟವಾದ ಒಂದು ಜತನದಿಂದ, ಜೋಪಾನದಿಂದ, 'handle with utmost care' ಎನ್ನುವ ಎಚ್ಚರದಿಂದ, ತನಗೆ ರೋಗವೆಂದೇ ಗೊತ್ತಿಲ್ಲದ ಆದರೆ ಪ್ರಬಲವಾದ ರೋಗ ಬಂದೆರಗಿರುವ ರೋಗಿಯೊಬ್ಬನ ಶುಶ್ರೂಷೆ ಮಾಡುವ ತಾಳ್ಮೆಯಿಂದ, ಸದ್ಯವನ್ನೂ ಸಾಧ್ಯತೆಯನ್ನೂ ಬೆರೆಸುವ ಅನುಪಮವಾದ ಕೌಶಲದಿಂದ, ವಿಶ್ವಪ್ರಜ್ಞೆಯು ಸ್ವ-ಪ್ರಜ್ಞೆಯ ಜೊತೆ ಒಡನಾಡುತ್ತದೆ. ಈ ಒಡನಾಟದಲ್ಲಿ ಪವಾಡಗಳು ನಡೆಯುತ್ತವೆ. ಪವಾಡಗಳು ಸಂಭವಿಸಬೇಕಾದರೆ ಈ ಇಬ್ಬಗೆಯ ಮುಖಾಮುಖಿ ಬೇಕು.

ಒಂದು ತಮಾಷೆಯ ಸಂಗತಿ ಹೇಳುತ್ತೇನೆ. ಸ್ವಾಮಿ ರಾಮ ಅವರ ಮೂಲ ಇಂಗ್ಲಿಷ್ ಕೃತಿಯ ಕನ್ನಡಾನುವಾದ – "ಹಿಮಾಲಯದ ಮಹಾತ್ಮರ ಸನ್ನಿಧಿಯಲ್ಲಿ" – 1992ರಲ್ಲಿ ಹೊರ ಬಂತು. ಪರಮಹಂಸ ಯೋಗಾನಂದರು ಬರೆದ 'ಯೋಗಿಯ ಆತ್ಮಕಥೆ' ಅದಾಗಲೇ ಕನ್ನಡದಲ್ಲಿ ಬಂದಿತ್ತು. ಈ ಎರಡೂ ಕೃತಿಗಳು ಪವಾಡ ಘಟನೆಗಳಿಂದ ತುಂಬಿ ತುಳುಕುತ್ತಿವೆ. "ಹಿಮಾಲಯದ ಮಹಾತ್ಮರ ಸನ್ನಿಧಿಯಲ್ಲಿ" ಬಿಡುಗಡೆಯ ಸಂದರ್ಭದಲ್ಲಿ ನಮ್ಮ ಶಿವರಾಮ ಕಾರಂತರು ಈ ಕೃತಿಗೆ ಹೇಗೆ ಸ್ಪಂದಿಸಿದ್ದರೆಂದು "ಸುಧಾ" ವಾರಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಕಾರಂತರ ಪ್ರತಿಕ್ರಿಯೆಯಲ್ಲಿ ಎರಡು ವಾಕ್ಯಗಳು ನನ್ನನ್ನು ಸೆಳೆದವು. "... ಈತನಕ ಹರಿದು ಬಂದ ನಮ್ಮ ನಾಡಿನ ಸಂಸ್ಕೃತಿಯಲ್ಲಿ ನಮ್ಮ ಅನೇಕ ಹಿರಿಯರು ತಮ್ಮ ಯಾವತ್ತೂ ಬದುಕನ್ನು ಅರ್ಪಿಸಿ ಜೀವಿಸಿದಂಥ ಕ್ಷೇತ್ರ ಯಾವ ತೆರನದು ಎಂದು ಬಹಳ ಚೆನ್ನಾಗಿ ಈ ಗ್ರಂಥದಲ್ಲಿ ಬಣ್ಣಿಸಿದ್ದಾರೆ ... " ಎಂಬೊಂದು ವಾಕ್ಯ. ಹಾಗೆಯೇ; "ಏನೆಲ್ಲ ನಡೆಯಿತು ಎಂದು ಇದರಲ್ಲಿ ಹೇಳಿದ್ದಾರೆ. ಅಂಥ ಘಟನೆಗಳನ್ನು ಕಣ್ಣಾರೆ ಕಂಡರೂ ನನ್ನಂಥವನು ನಂಬುವುದು ಕಷ್ಟ"– ಎಂಬ ಮತ್ತೊಂದು ವಾಕ್ಯ. ಮೊದಲ ವಾಕ್ಯ ಕಾರಂತರ ಉದಾರ ಮನೋಧರ್ಮವನ್ನು ತೋರಿಸುತ್ತದೆ. ಎರಡನೆಯ ವಾಕ್ಯವಾದರೋ ಅದು ಕಾರಂತರ ವ್ಯಕ್ತಿಗತ ನಿಲುವು. ತಾನು ಬದುಕಿನಲ್ಲಿ ಪಡೆದ ಅನುಭವಗಳು ಮತ್ತು ಅದರಿಂದ ರೂಪುಗೊಂಡ ವೈಚಾರಿಕ ನೆಲೆಗಳನ್ನು ಯಾವ ಕಾರಣಕ್ಕೂ ಬಿಟ್ಟುಕೊಡಬೇಕಾಗಿಲ್ಲ ಎನ್ನುವ ನಿಲುವು. ಉತ್ಕಟವಾಗಿ ಬದುಕಿದವರಿಗೆ ಇಷ್ಟವಾಗುವ ನಿಲುವು.

ನಾನು ಇಲ್ಲಿ ಯಾರನ್ನೂ ಕೊಂಡಾಡುವುದನ್ನಾಗಲೀ ಟೀಕಿಸುವುದನ್ನಾಗಲೀ ಮಾಡಹೊರಟಿಲ್ಲ. ನನ್ನ ಆಶ್ಚರ್ಯವೇನೆಂದರೆ – ಕಣ್ಣಾರೆ ಕಂಡರೂ ನಂಬುವುದು ಕಷ್ಟ – ಎನ್ನುವ ಮಾತು ಲೌಕಿಕಾನುಭವಕ್ಕೆ ಬದ್ಧವಾದ ಮಾತಾಗಿ ಕೇಳಿಸಿದರೆ, ಇದೇ ಉದ್ಗಾರವು ಆಧ್ಯಾತ್ಮಕ ಅನುಭವದ ಹಂತದಲ್ಲಿಯೂ ಮೂಡಿ ಬರುವ ಉದ್ಗಾರವಾಗಿರುವುದು. "ಇದು ನಂಬಲಸಾಧ್ಯ" ಎನ್ನುವ ಉದ್ಗಾರವನ್ನು ಅದೊಂದು ಬಗೆಯ ಸೂಕ್ಷ್ಮತೆಯಿಂದ ಕೇಳಿ. ನಾವು ಬೆರಗಾದ – ಬೆಕ್ಕಸ ಬೆರಗಾದ ಸಂದರ್ಭದಲ್ಲಿ ಮೂಡಿ ಬರುವಂಥದಲ್ಲವೇ. ಈ "ಇದು ನಂಬಲಸಾಧ್ಯ" ಎನ್ನುವ ಉದ್ಗಾರ!

ಇದೊಂದು ಅದ್ಭುತವಾದ ಉದ್ಗಾರವೇ ಸೈ! ಭಾಷೆಯು ನಮ್ಮ ಹಟಗಳನ್ನು ನಾವೇ ಮೀರುವಂತೆ ಕೆಲವು ಉದ್ಗಾರಗಳನ್ನು ನಮ್ಮಲ್ಲಿಯೇ ಹುದುಗಿಸಿಟ್ಟು ಹೇಗೆ ನಮ್ಮನ್ನು ನಮ್ರರನ್ನಾಗಿಸುತ್ತಿದೆ ನೋಡಿ. ಭಾಷೆಯೇ ಪವಾಡಗಳನ್ನು ನಡೆಸಲು ಉತ್ಸುಕವಾಗಿದೆ!

'ನೋಡಿದರೂ ನಂಬಲಾರೆ' ಎನ್ನುವುದು ಒಂದು ಬಗೆಯ ಆತ್ಮಪ್ರತ್ಯಯದ ಪ್ರಯೋಗವಾದರೆ, "ನಂಬಲಸಾಧ್ಯ" ಎನ್ನುವ ಉದ್ಗಾರವು ಪರವಶಗೊಂಡ ಪ್ರತ್ಯಯದ ಉದ್ಗಾರವಾಗಿದೆ. ಭಾಷೆಯು ತನ್ನ ಒಂದೇ ಮೈಯಲ್ಲಿ ಸ್ವ-ಪ್ರಜ್ಞೆಗೂ ವಿಶ್ವಪ್ರಜ್ಞೆಗೂ ಇಂಬುಕೊಟ್ಟು ಜೋಕಾಲಿಯಾಡುತ್ತಿದೆ. ಶಿವನ ಮೈಯಲ್ಲಿ ಗೌರಿ, ಗೌರಿಯ ಮೈಯಲ್ಲಿ ಶಿವ – ನೆಲಸಿರುವಿರಿ. ನೀವಿಬ್ಬರೂ ನನ್ನ ಮಾತಿನ ಮೈಯಲ್ಲಿ ನೆಲೆಯಾಗಿರಿ ಎಂದು ಬೇಡಿದನಂತೆ ಕಾಳಿದಾಸ! ಅವನು ಕವಿಯಲ್ಲವೆ? ಕವಿ, ರಹಸ್ಯಗಳ ಜೊತೆ ಒಡನಾಡುವವನು. ಪವಾಡಗಳನ್ನು ನೇವರಿಸುವವನು! ಅಲೌಕಿಕ ವಿದ್ಯಮಾನಗಳು ತಮ್ಮ ಗ್ರಹಿಕೆಯ ನೆಲೆಗಳನ್ನು ತಾವೇ ಸೃಷ್ಟಿಸಿಕೊಳ್ಳುತ್ತವೆ ಎಂದೆ. ನನ್ನ ಗುರುಗಳಿಗೆ ಸಂಬಂಧಿಸಿದ ಒಂದು ಘಟನೆ ಹೇಳುವೆ. ಗುರುಗಳು ಯಾರಲ್ಲಿ ಮಾತನಾಡುವಾಗಲೂ ಒಂದೆರಡು ಸಲವಾದರೂ ತಮ್ಮ ಬಗ್ಗೆ "ನಾವು ಬಂದವರು" ಎಂದು ಹೇಳುತ್ತಿದ್ದರು. 'ನಾನು' ಎನ್ನುತ್ತಿರಲಿಲ್ಲ; 'ನಾವು' ಎನ್ನುತ್ತಿದ್ದರು. ಮತ್ತು ಅದೊಂದು ಪಲ್ಲವಿಯಂತೆ "ನಾವು ಬಂದವರು" ಎನ್ನುತ್ತಿದ್ದರು. ಇವರಿಗೆ ಹುಚ್ಚು ಹಿಡಿದಿದೆ ಎಂಬ ಪ್ರಚಾರ ಹರಡಿತ್ತಾಗಿ ಇವರ ಮಾತನ್ನು ಯಾರೂ ಗಂಭೀರವಾಗಿ ಕೇಳಿಸಿಕೊಳ್ಳುತ್ತಿರಲಿಲ್ಲ. ಒಮ್ಮೆ ಓರ್ವ ಮಹನೀಯರು "ನಾವು ಬಂದವರು" ಎಂದು ಗುರುಗಳು ಹೇಳಿದ್ದನ್ನು ಕೇಳಿಸಿಕೊಂಡು – ಹಾಗಾದರೆ ನೀವು ಯಾರು? ಎಂದು ಪ್ರಶ್ನಿಸಿದರು. ಈ ಮಾತು ಕೇಳಿ ಗುರುಗಳಿಗೆ ಸಂತೋಷ ಉಕ್ಕಿತು. ಇದೆಲ್ಲಾ ಆಗಿ ಎಷ್ಟೋ ವರ್ಷಗಳು ಉರುಳಿದ ಮೇಲೆ ಗುರುಗಳೇ ನಮ್ಮ ಬಳಿ ತಿಳಿಸಿದಂತೆ – "ಯಾಕೆ ಅಷ್ಟು ಸಂತೋಷವಾಯಿತೆಂದರೆ, ಪರಿಚಯವಿಲ್ಲದವರ ಬಳಿ ನೀವು ಯಾರು? ಎಂದು ಕೇಳುವುದು ನಿಮ್ಮ ಲೋಕದ ಪದ್ಧತಿಯಲ್ಲವೆ? ನಿಮ್ಮ ಪದ್ಧತಿಯನ್ನು ನೀವು ಪಾಲಿಸಿದರೆ ನಮಗೆಷ್ಟು ಸಂತೋಷವಾಗುತ್ತದೆ ಗೊತ್ತೆ? ಬಂದವರ ಕಣ್ಣುಗಳಿಗೆ ಇಲ್ಲಿರುವವರು ಅವರವರ ಪದ್ಧತಿ, ನಡೆ-ನುಡಿಗಳನ್ನು ಪರಿಪಾಲಿಸುವುದನ್ನು ನೋಡುವುದು ಅವರ್ಣನೀಯವಾದ ಆನಂದವನ್ನು ನೀಡುತ್ತದೆ. ಏಕೆಂದರೆ ಆಗ ನೀವು 'ಸಹಜ'ವಾಗಿರುತ್ತೀರಿ. ನಾವು ಬಂದು ಎಲ್ಲಿ ನಿಮ್ಮ ಸಹಜತೆ ಕಳೆದುಹೋಗುತ್ತದೋ ಎಂದು ನಮಗೆ ಎಲ್ಲಿಲ್ಲದ ಆತಂಕ".

ತುಂಬ ಸೂಕ್ಷ್ಮವೂ, ಸಂವೇದನಾಶೀಲವೂ, ನಿಗೂಢವೂ ಆದ ಆಳವಾದ ಮಾತುಗಳಿವು. ಗುರುಗಳು ಮತ್ತೆ ಹೇಳತೊಡಗಿದರು. "ನೀವು ಯಾರು?" ಎಂಬ ಪ್ರಶ್ನೆ ಮೊದಲಬಾರಿಗೆ ನಮಗೆ ಎದುರಾದಾಗ ಕುಣಿದಾಡುವಂತಾಯಿತು. ಏಕೆಂದರೆ ನಿಮ್ಮ ಪ್ರಶ್ನೆಗೆ ನಾವು ಕೊಡುವ ಉತ್ತರ ನಿಮಗೆ ಅರ್ಥವಾಗುತ್ತದೆ ಎಂಬ ನಂಬಿಕೆಯಿಂದ ತಾನೇ ನೀವು ಪ್ರಶ್ನೆ ಕೇಳುವುದು. ನಿಮಗೆ ಅರ್ಥವಾಗುತ್ತದೆ. ಅಂದರೆ ನೀವು ಯಾರು ಎಂದು ನಿಮ್ಮ ಪ್ರಶ್ನೆಗೆ ಉತ್ತರವಾಗಿ ನಾವು ನಮ್ಮ ಪರಿಚಯವನ್ನು ಹೇಳಿದಾಗ ಅದು ನಿಮಗೆ ಅರ್ಥವಾಗುತ್ತದೆ – ಎಂದಾದರೆ ಅದಕ್ಕಿಂತ ಇನ್ನೇನು ಬೇಕು? ಏಕೆಂದರೆ ಎಲ್ಲಿ ಪರಿಚಯವಾಯಿತು – ಗುರುತು ಸಿಕ್ಕಿತು–ಅಲ್ಲಿಗೆ ನಾವು ಬಂದವರು ಎನ್ನುವ ಮಾತು; ನಾವು ನಿಮ್ಮಿಂದ ಬೇರೆ ಎನ್ನುವ ಭಾವ-ಬಿದ್ದು ಹೋಯಿತಲ್ಲವೆ? ಇದು ಬಿಡುಗಡೆಯೇ ಅಲ್ಲವೆ? ನಿಮ್ಮ ಲೋಕಕ್ಕೆ ನಾವು ಬಂದು ನಿಮ್ಮ ಕೈಯಲ್ಲಿ ನಮ್ಮ ಬಿಡುಗಡೆಯೇ ಆಗಿಬಿಟ್ಟರೆ – ಆಹಾ! ನಿಮ್ಮ ಲೋಕದ ಮಹತ್ವವೇ! ನಾವು ಮೂಕರಾಗಿದ್ದೆವು. ನಮ್ಮ ಪೈಕಿ ಒಬ್ಬರು ಗುರುಗಳನ್ನು ಕೇಳಿದರು – ನೀವು ಯಾರು ಎಂಬ ಪ್ರಶ್ನೆಗೆ – "ಯಾರೂ ಆಗಿರಬಹುದು" ಎಂಬುದೇ ನಮ್ಮ ಉತ್ತರ! ಗೊಂದಲವಾಗಿ ಹೋಯಿತು. ಯಾರೂ ಆಗಿರಬಹುದು ಎಂದರೆ? ಈ ಉತ್ತರ ಅರ್ಥವಾಗುವುದು–ಹೇಗೆ? ನಮ್ಮನ್ನು ನೋಡಿ, ಗೊಂದಲವನ್ನು ಗ್ರಹಿಸಿ, ಗುರುಗಳು– ಹೌದೆ? 'ಸತ್ಯ' ಹೇಳಿದರೆ ನಿಮಗೆ ಗೊಂದಲವಾಗುವುದೆ? ಇಂಥ ಉತ್ತರವನ್ನು ಈ ಮುನ್ನ ನೀವು ಯಾರಿಂದಲೂ ಪಡೆದೇ ಇಲ್ಲವೆ? ನೀವು ಹೇಗೆ ಕರೆದರೆ ಹಾಗೆ ನಾವು ಓಗೊಡುವೆವು. ಯಾವ ಹೆಸರಿನಿಂದ ಕರೆದರೂ ಅದಕ್ಕೆ ನಮ್ಮ ಒಪ್ಪಿಗೆ. ಅದಕ್ಕೇ ಹೇಳಿದ್ದು; "ನಾವು ಯಾರೂ ಆಗಿರಬಹುದು'.

ನಮ್ಮ ಪದ್ಧತಿಯಂತೆ ನಾವು ಪ್ರಶ್ನಿಸಿದರೆ ಗುರುಗಳಿಗೆ ಕುಣಿದಾಡುವಷ್ಟು ಸಂತೋಷವಾಗುವುದಾದರೆ ಅವರ ಪದ್ಧತಿಯಂತೆ ಅವರು ಉತ್ತರಿಸಿದರೆ ನಮಗೆ ಗೊಂದಲ ಉಂಟಾಗುವುದು. ನಮ್ಮ ನಡುವಿನ ಈ ವ್ಯತ್ಯಾಸ ನಮಗೆ ನಿಚ್ಚಳವಾಗತೊಡಗಿತು. ಅವರ ವ್ಯಕ್ತಿತ್ವದ ರಹಸ್ಯಮಯತೆ ದಟ್ಟವಾಗತೊಡಗಿತು. ನಮ್ಮ ಬದುಕಿನ ಸಹಜತೆ ಅವರ ಕಾರಣದಿಂದಾಗಿ ಎಲ್ಲಿ ಕಳೆದು ಹೋಗುತ್ತದೋ ಎಂಬ ಆತಂಕಕ್ಕೆ ಏನು ಅರ್ಥ ಎಂದು ನಮಗೆ ತಿಳುವಳಿಕೆಯಾಗಬೇಕಾದರೆ – ಈ ಅವಧೂತ ಗುರುಗಳ ಜೊತೆ ಸುಮಾರು 10 ವರ್ಷ ಎಡೆಬಿಡದೆ ಸಂಗಾತಿಯಾಗಿದ್ದು ಅವರ ದೇಹವನ್ನು ನೋಡಿಕೊಂಡ ಇಸ್ಮಾಯಿಲ್ ಕುಂಞಪ್ಪ ಎಂಬ ಬೆಳ್ಳಾರೆಯ ಮುಸ್ಲಿಂ ಸದ್‌ಗೃಹಸ್ಥರನ್ನು ಭೆಟ್ಟಿಯಾದ ಮೇಲೆಯೇ. ಇಸ್ಮಾಯಿಲ್ ಹೇಳಿದ್ದಿದು: ಗುರುಗಳು ಕೆಲವೊಮ್ಮ ಇದ್ದಕಿದ್ದಂತೆ ಅಂತರ್ಮುಖಿಗಳಾಗಿ ಬಿಡುತ್ತಿದ್ದರು. ರಾಮಕೃಷ್ಣರ ಭಾವಸಮಾಧಿಯಂತೆ. ಆಗ ಗುರುಗಳ ಹಣೆಯ ನಡುಭಾಗದಲ್ಲಿ ಗೆರೆ ಎಳೆದಂತೆ ನಾಡಿಯೊಲೊಂದು ಎದ್ದು ಉಬ್ಬಿ ಕಾಣುತ್ತಿತ್ತು. ಅದನ್ನು ನೋಡಿದ ಯಾರಿಗೇ ಆದರೂ ಇದೇನೋ ಒಂದು ವಿಶೇಷ ಎಂಬ ಚಕಿತಭಾವ ಉಂಟಾಗುತ್ತಿತ್ತು. ಮೊದಲ ಭೇಟಿಯಲ್ಲಿಯೇ ಇಸ್ಮಾಯಿಲ್ ಗುರುಗಳೊಡನೆ ಮಾತಾಡುತ್ತಿದ್ದಾಗ – ಇದ್ದಕಿದ್ದಂತೆ ಅವರ ಹಣೆಯ ನಾಡಿ ತೋರು ಬೆರಳಿನಷ್ಟು ಉಬ್ಬಿ ಗೋಚರಿಸಿತು! ಇಸ್ಮಾಯಿಲ್ ಚಕಿತನಾದರು. ಇದೇನೋ ದೈವೀ ಸೂಚನೆ ಎಂಬ ಭಾವ ಅವರ ಮನದಲ್ಲಿ ಹಾದು ಹೋಯಿತು. ಈ ಭಾವಕ್ಕೆ ಸ್ಪಂದಿಸಿದರೋ ಎನ್ನುವಂತೆ ಗುರುಗಳು ಜೀವಕಳೆಯಿಂದ ಬೆಳಗುತ್ತ ದೇಶದ ಮೂಲೆಮೂಲೆಗಳಲ್ಲಾಗುತ್ತಿದ್ದ ಮಹತ್ತ್ವದ ಘಟನೆಗಳನ್ನೆಲ್ಲ ಹೇಳ ತೊಡಗಿದರು; ಒಂದೇ ಸಮನೆ ಅವರ ರಭಸಕ್ಕೆ ಇಸ್ಮಾಯಿಲ್ ಗಾಬರಿಗೊಂಡರು. ಕೆಲದಿನಗಳಾದ ಮೇಲೆ ಪರಿಚಿತ ಜನರು ಇಸ್ಮಾಯಿಲ್‌ರಲ್ಲಿ ಲೋಕಾಭಿರಾಮಕ್ಕೆ ತೊಡಗಿದ ಸಂದರ್ಭದಲ್ಲಿ ಪತ್ರಿಕೆಗಳಲ್ಲಿ ಬಂದ ವಾರ್ತೆಗಳನ್ನು ವಿವರಿಸಿದರೆ ಅವೆಲ್ಲವೂ ಗುರುಗಳು ಈ ಮುನ್ನ ಹೇಳಿದ್ದೇ ಆಗಿದ್ದವು! ಇಸ್ಮಾಯಿಲ್‌ರ ಮನಸ್ಸಿನಲ್ಲಿ ಗುರುಗಳ ಹಣೆಯನಾಡಿ ಮರೆಯದ ಗುರುತಾಗಿ ಉಳಿಯತೊಡಗಿತು!

ಹೀಗಿರಬೇಕಾದರೆ – ಒಮ್ಮೆ ಏನಾಯಿತೆಂದರೆ – ಗುರುಗಳ ಬಳಿಯಲ್ಲಿಲ್ಲದ ಹೊತ್ತಿನಲ್ಲಿ ಇಸ್ಮಾಯಿಲ್ ಮನೆಯಂಗಳದಲ್ಲಿ ಏನೋ ಮಾಡುತ್ತಿದ್ದರು. ಮೋಡಮುಸುಕಿದ ಆಕಾಶ. ತಂಪು ಹವೆ. ಇಸ್ಮಾಯಿಲ್ ಇದ್ದಕಿದ್ದಂತೆ ತಲೆ ಎತ್ತಿ ಆಗಸವನ್ನು ದಿಟ್ಟಿಸಿದರು. ನೋಟ ಸೌಮ್ಯವಾಗಿ ತೊಳಗುತ್ತಿದ್ದ ಸೂರ್ಯಬಿಂಬದತ್ತ ಹೊರಳಿತು. ನೋಡುತ್ತಾರೆ – ಅಗೋ ಅಗೋ ಆ ಬಿಂಬದಲ್ಲಿ ಗುರುಗಳ ಮುಖ ಮೂಡಿತು. ಆ ಹಣೆ ಕಾಣಿಸಿತು. ಪರಿಚಿತ ಹಣೆ! ಹಣೆಯಲ್ಲಿ ಮರಿನಾಗರದ ಬಾಲದಂತೆ ಉಬ್ಬಿನಿಂತ ನಾಡಿಯ ಗೆರೆ!

ಇಸ್ಮಾಯಿಲ್ ಸ್ತಂಭೀಭೂತರಾದರು!

ಅವರ ಎರಡೂ ಕೈಗಳ ಅಂಗೈ ಮೇಲ್ಮುಖವಾದವು! ಯಾ ಅಲ್ಲಾ!

ಈ ಸಂಗತಿಗಳನ್ನು ಸ್ವಯಂ ಇಸ್ಮಾಯಿಲ್ ಕುಂಞಪ್ಪ ನನ್ನಲ್ಲಿ ಹೇಳಿದ್ದರು. ಹೇಳಿ ಹೀಗೊಂದು ಮಾತು ಕೊನೆಯದಾಗಿ ಸೇರಿಸಿದ್ದರು ಕೂಡಾ.

ಅದೆಂದರೆ: ಗುರುಗಳ ಹಣೆಯಲ್ಲಿ ಆ 'ನಾಡಿ' ಎದ್ದು ಕಾಣುತ್ತದಲ್ಲ, ಆಗ ಅವರು ಇಲ್ಲಿರುವುದಿಲ್ಲ".

'ಅವರು ಇಲ್ಲಿರುವುದಿಲ್ಲ', 'ಅವರು ಇಲ್ಲಿರುವುದಿಲ್ಲ' ಎಂದು ನನ್ನೊಳಗೇ ಜಪಿಸುತ್ತಿದ್ದೆ. ಆಹಾ! 'ನಾವು ಬಂದವರು' ಎಂದು ಗುರುಗಳು ಹೇಳುತ್ತಲೇ ಇದ್ದ ಮಾತಿಗೆ 'ಅವರು ಇಲ್ಲಿರುವುದಿಲ್ಲ' ಎನ್ನುವ ಈ ಮಾತು ಎಂಥ ಜೊತೆ ಸೇರಿಯಾಗಿ ಬಿಟ್ಟಿದೆ! ಮಾತಿನಲ್ಲಿಯೂ ಅಂದರೆ ಕಾಣ್ಕೆಯಲ್ಲಿಯೂ ಎಂಥ ಜೊತೆ ಈ ಇಬ್ಬರಿಗೆ!

ಇಲ್ಲಿರುವುದಿಲ್ಲ – ಎಂದರೆ ಇಲ್ಲಿನವರಲ್ಲ ಎಂದೂ ಅರ್ಥ. ಇಲ್ಲಿಗೆ ಅಂಟಿಕೊಂಡವರಲ್ಲ ಎಂದು. ಏಕ ಮಾತ್ರ ಸಾಕ್ಷಿ.

'ನಾವು ಬಂದವರು' ಎನ್ನುತ್ತಿದ್ದ ಗುರುಗಳು ಆ ಮಾತಿಗೆ ಒಂದು ಸಾಕ್ಷಿಯನ್ನು ಹುಡುಕುತ್ತಿದ್ದರು. ಆ ಏಕ ಮಾತ್ರ ಸಾಕ್ಷಿ. ಆ ಸಾಕ್ಷಿ ಇಲ್ಲಿನವನಾಗಿರಬೇಕು. ಇಲ್ಲಿನ ಪದ್ಧತಿಗಳನ್ನು ಪಾಲಿಸಬೇಕು. ಪಾಲಿಸುತ್ತ ಸಹಜವಾಗಿರಬೇಕು. ಇಲ್ಲಿ ಸಹಜವಾಗಿರುವವನಿಗೆ ಹೊರಗಿನಿಂದ ಬಂದವರ (ಬಂದರೆ) ಚಹರೆ ಕೂಡಲೇ ತಿಳಿದುಬಿಡುತ್ತದೆ. ಅವನು ಹೇಳಬಲ್ಲ – ಇವರು ಇಲ್ಲಿನವರಲ್ಲ; ಬಂದವರು ಎಂದು. ಆಗ ಏನಾಗುತ್ತದೆ ಎಂದರೆ – ಇನ್ನೊಂದೆಡೆಯಿಂದ ಇಲ್ಲಿಗೆ ಬಂದು ಇಲ್ಲಿನವನೇ ಆದಂತೆ ಇದ್ದವನಿಗೆ ತನ್ನ ಪರಿಚಯವನ್ನು ತನಗೇ ಮರಳಿ ಮಾಡಿಕೊಟ್ಟಂತೆ ಆಗುತ್ತದೆ. ದೇವರಿಗೆ ನೀನು ದೇವರು ಎಂದು ಗುರುತಿಸಿ ಹೇಳುವವನು ಬೇಕು. ಇವನು ದೇವರೇ ಎಂದು ಲೋಕಕ್ಕೆ ತಿಳಿಸಬಲ್ಲ 'ಸಾಕ್ಷಿ' ಬೇಕು. ಸಾಕ್ಷಿಯು ಸಹಜವಾಗಿರಬೇಕು; ಇಲ್ಲಿನವನಾಗಿ. ಸಹಜತೆ ಕಳೆದುಹೋದರೆ – ಸಾಕ್ಷೀಭಾವವೂ ಕಳೆದು ಹೋಗುತ್ತದೆ.

ಈ ಸಾಕ್ಷೀ ಭಾವವೂ ನಮ್ಮಿಂದ ಕಳೆದುಹೋಗದಂತೆ, ತಮ್ಮ ವ್ಯವಹಾರದಲ್ಲಿ ಗುರುಗಳ ಅಖಂಡ ಕಾಳಜಿ ಕಂಡು ಬರುತ್ತಿತ್ತು!

ಇದು ಅವರು ತಮ್ಮ ಮೇಲೆ ತಾವೇ ಮಾಡಿಕೊಂಡ ಪವಾಡ ಸದೃಶ ಪ್ರಯೋಗ ಎನ್ನುವುದು ನನಗೆ ಖಚಿತವಾಗಿದೆ. ಇನ್ನೊಬ್ಬರಿಗಾಗಿ ಪವಾಡ ನಡೆಸುವವರುಂಟು. ತಮ್ಮ ಮೇಲೆ ತಾವೇ ಪವಾಡ ನಡೆಸಿ ಅದಕ್ಕೆ ಒಳಗಾಗುವವರುಂಟೆ?




(ಪುತ್ತೂರಿನಲ್ಲಿ ನೆಲೆಸಿರುವ ಲೇಖಕರು ಕನ್ನಡ-ಸಂಸ್ಕೃತ-ಇಂಗ್ಲಿಷ್ ಬಲ್ಲ ಬಹುಶ್ರುತ ವಿದ್ವಾಂಸರು ಮತ್ತು ಚಿಂತಕರು)



ಮಾನವಕುಲ ಇತಿಹಾಸಕ್ಕೊಂದು ಮರುಭೇಟಿ

ಮೂಲ: ಯುವಾಲ್ ನೊಹ ಹರಾರಿ
ಕನ್ನಡಕ್ಕೆ: ಎಂ. ರಾಜು



ಮಾನವ ಇತಿಹಾಸದ ಹಾದಿಯನ್ನು ನಾವು ಈವರೆಗೆ ನಿರೂಪಿಸಿಕೊಂಡ ಬಗೆಯ ಬಗ್ಗೆ ಒಂದು ಹೊಸದಾದ ಮರು ವಿಮರ್ಶೆ ಆರಂಭಿಸಿ ಮಂಗನಿಂದ ಮಾನವನಾಗಿ ಮಾನವ ಸಮಾಜವೊಂದು ನಿರ್ಮಾಣವಾಗಿ ಇಂದಿನ ವಿಜ್ಞಾನ-ತಂತ್ರಜ್ಞಾನಾಧಾರಿತ ಆಧುನಿಕತೆತೆಗೆ ತೆರೆದುಕೊಳ್ಳುವವರೆಗೆ ಈ ಇತಿಹಾಸವು ಮನುಷ್ಯನನ್ನು ಹೆಚ್ಚು ಸುಖೀಯನ್ನಾಗಿ ಮಾಡಿದೆಯೆ? ಎಂಬ ಮೂಲಭೂತ ಪ್ರಶ್ನೆಯನ್ನೆತ್ತುವ ಪ್ರಯತ್ನವೊಂದು ಇದೀಗ ಆರಂಭವಾಗಿದೆ. ಇಸ್ರೇಲ್‌ನ ಇತಿಹಾಜ್ಞ ಮತ್ತು ತತ್ವಶಾಸ್ತ್ರಜ್ಞ ಯುವಾ; ನೊಹ ಹರಾರಿಯವರ SAPIENS (A brief History of Human kind) ಎಂಬ ಪುಸ್ತಕ ಮಾನವ ಕುಲದ ಇತಿಹಾಸವನ್ನು ಜೀವಶಾಸ್ತ್ರದಿಂದ ಹಿಡಿದು ನ್ಯಾಯಶಾಸ್ತ್ರದವರೆಗಿನ ಅನ್ಯಜ್ಞಾನ ಶಿಸ್ತುಗಳ ಪರಿಕಲ್ಪನೆಗಳ ಕಣ್ಣಲ್ಲಿ ನೋಡುತ್ತಾ, ಈವರೆಗಿನ ಇತಿಹಾಸ ನಿರೂಪಣೆಗಳ ಮಿತಿಗಳು ಮತ್ತು ಪೂರ್ವಗ್ರಹಗಳನ್ನು ನಮ್ಮ ಅರಿವಿಗೆ ತರುತ್ತಾರೆ. ಮನುಷ್ಯ ಹೇಗೆ ಭೂಮಿಯ ಮೇಲಿನ ಜೀವಕುಲದ ಮೇಲೆ ತನ್ನ ಪಾರಮ್ಯವನ್ನು ಸ್ಥಾಪಿಸಿದ? ನಗರಗಳನ್ನು ಅವನು ಕಟ್ಟಲು ಕಾರಣಗಳೇನು? ದೇವರ ಕಲ್ಪನೆ, ರಾಷ್ಟ್ರದ ಪರಿಕಲ್ಪನೆ ಇತ್ಯಾದಿಗಳು ಅವನಲ್ಲಿ ಮೂಡಿದ್ದು ಹೇಗೆ? ಮುಂತಾದ ಪ್ರಶ್ನೆಗಳನ್ನು ಇತಿಹಾಸದ ಪಾಳಿನಿಂದ ಎತ್ತಿಕೊಂಡು ಪರಿಶೀಲಿಸುವ ಮೂಲಕ ಮಾನವ ಕುಲದ ಮುಂದಿನ ಇತಿಹಾಸ ಅಥವಾ ಭವಿಷ್ಯದ ಬಗ್ಗೆ, ವಿಶೇಷವಾಗಿ ಬಂಡವಾಳಶಾಹಿಯ ಮಾಯಾಜಾಲದಂತೆ ನಿರ್ಮಾಣವಾಗುತ್ತಿರುವ ಕೃತಕ ಬುದ್ಧಿಮತ್ತೆಯ ಆಟೋಟಗಳ ಹಿನ್ನೆಲೆಯಲ್ಲಿ-ಪರೋಕ್ಷವಾಗಿ ಕೆಲವು ಎಚ್ಚರಿಕೆಯ ಕರೆಗಳನ್ನು ಧ್ವನಿಸುತ್ತದೆ.

ಮಾನವ ಇತಿಹಾಸದ ನಿರೂಪಣೆಯನ್ನು ಉಸಿರುಗಟ್ಟಿಸಲಾರಂಭಿಸಿದ ಕೈಗಾರೀಕೀಕರಣ ಯುಗವೆನ್ನಿಸಿದ ೧೯-೨೦ನೇ ಶತಮಾನದಲ್ಲಿ ಹಲವರು ಹಲವು ನೆಲೆಗಳಿಂದ ಪ್ರಶ್ನೆ ಮಾಡಿದವರಿದ್ದಾರೆ. ಅವರಲ್ಲಿ ಥೋರೋ-ರಸ್ಕಿನ್-ಟಾಲ್‌ಸ್ಟಾಯ್‌ರಂತಹ ಪಶ್ಚಿಮದ ಚಿಂತಕರಿಂದ ಹಿಡಿದು ಗಾಂಧಿ ಫುಕೊವೊಕಾರವರೆಗಿನ ಪೂರ್ವದ ಚಿಂತಕರವರೆಗೆ ಈ ಮರು ವಿಮರ್ಶೆ ನಡೆದಿದೆ. ಆದರೆ ಮಾನವ ಕುಲದ ಇಡೀ ಇತಿಹಾಸದ ಮೇಲೆ ವಿಮರ್ಶಾತ್ಮಕವಾಗಿ ಕಣ್ಣು ಹಾಯಿಸಿ ಅದನ್ನು ಮರು ನಿರೂಪಿಸುತ್ತಾ ಇಂದಿನ ನಮ್ಮನ್ನು ಚಿಂತನೆಗೆ ಹಚ್ಚುತ್ತದೆ. ಈ ಪುಸ್ತಕದಿಂದ ಎರಡು ಸಣ್ಣ ಅಧ್ಯಾಯಗಳನ್ನು ಆಯ್ದು ಕನ್ನಡಕ್ಕೆ ಅನುವಾದಿಸಿ ಇಲ್ಲಿ ನಮ್ಮ ಓದುಗರಿಗೆ ನೀಡುತ್ತಿದ್ದೇವೆ.-ಸಂ.

ಒಂದು ಶಾಶ್ವತ ಕ್ರಾಂತಿ

ಕೈಗಾರಿಕಾ ಕ್ರಾಂತಿಯು, ಶಕ್ತಿಯನ್ನು(ಜಟಿಜಡಿರಥಿ) ಪರಿವರ್ತಿಸಿ ಹೊಸ ವಸ್ತುಗಳನ್ನು ಉತ್ಪಾದಿಸುವ ಮತ್ತು ಮನುಷ್ಯ ಕುಲವನ್ನು ತನ್ನ ಸುತ್ತಲ ಜೀವವೈವಿಧ್ಯದ ಮೇಲಿನ ಅವಲಂಬನೆಯಿಂದ ಬಹುಮಟ್ಟಿಗೆ ಬಿಡುಗಡೆಗೊಳಿಸುವ ಹೊಸ ವಿಧಾನಗಳನ್ನು ಪರಿಚಯಿಸಿತು. ಮನುಷ್ಯರು ಕಾಡುಗಳನ್ನು ಕಡಿದರು, ಜೌಗು ಪ್ರದೇಶಗಳನ್ನು ಸೋಸಿದರು, ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟಿದರು, ಬಯಲು ಪ್ರದೇಶಗಳಿಗೆ ನೀರು ಹಾಯಿಸಿದರು, ಹತ್ತಾರು ಸಹಸ್ರ ಕಿಲೋಮೀಟರ್ ದೂರಕ್ಕೆ ರೈಲು ಹಳಿಗಳನ್ನು ಅಳವಡಿಸಿದರು, ಬಹುಮಹಡಿ ಕಟ್ಟಡಗಳ ಮಹಾನಗರಗಳನ್ನು ನಿರ್ಮಿಸಿದರು. ಹೋಮೋಸೆಪಿಯನ್ ಜೀವಿಗಳು ತಮ್ಮ ಅಗತ್ಯಕ್ಕೆ ಹೊಂದುವಂತೆ ಜಗತ್ತನ್ನು ಎರಕಹೊಯ್ಯುತ್ತಿರುವಾಗ, ಎಷ್ಟೋ ಜೀವಿಗಳ ಆವಾಸಸ್ಥಾನಗಳು ನಾಶವಾದುವು, ಮತ್ತೆಷ್ಟೋ ಜೀವಿಗಳು ನಿರ್ವಂಶವಾದವು. ಒಮ್ಮೆ ಹಸಿರು ಗ್ರಹವಾಗಿದ್ದ ಭೂಗ್ರಹವು ಕಾಂಕ್ರೀಟ್ ಮತ್ತು ಪ್ಲಾಸ್ಟಿಕ್‌ನ ವ್ಯಾಪಾರಿ ಕೇಂದ್ರವಾಯಿತು.

ಇಂದು ಈ ಭೂಮಿಯ ಮೇಲಿನ ಏಳು ಖಂಡಗಳು ೭೦೦ ಕೋಟಿ ಸೇಪಿಯನ್‌ಗಳ ನೆಲೆಗಳಾಗಿವೆ. ನೀವು ಇಷ್ಟೂ ಜನರನ್ನು ಎತ್ತಿ ಒಂದು ಬೃಹತ್ ತಕ್ಕಡಿಯ ಮೇಲೆ ಇರಿಸಿದರೆ ಇವರೆಲ್ಲರ ಒಟ್ಟು ತೂಕ ಸುಮಾರು ೩೦೦ ಮಿಲಿಯನ್ ಟನ್‌ಗಳಷ್ಟಾಗುವುದು. ನಂತರ ನೀವು ಈ ಭೂಮಿಯ ಮೇಲಿರುವ ಜಮೀನುಗಳಲ್ಲಿರುವ ಅಷ್ಟೂ ಸಾಕು ಪ್ರಾಣಿಗಳನ್ನು - ಹಸು, ಹಂದಿ, ಕುರಿ, ಕೋಳಿ,- ಎತ್ತಿ ಇನ್ನೂ ದೊಡ್ಡ ತಕ್ಕಡಿಯೊಂದರ ಮೇಲೆ ಇರಿಸಿದರೆ ಅವುಗಳ ಒಟ್ಟು ತೂಕ ೭೦೦ ಮಿಲಿಯನ್ ಟನ್‌ಗಳಷ್ಟಾಗುವುದು. ಇದಕ್ಕೆ ಪ್ರತಿಯಾಗಿ ಈಗ ಬದುಕುಳಿದಿರುವ ಎಲ್ಲಾ ದೊಡ್ಡ ವನ್ಯ ಜೀವಿಗಳ - ಪೆಂಗ್ವಿನ್ ಮತ್ತು ಮುಳ್ಳುಹಂದಿಯಿಂದ ಹಿಡಿದು ಆನೆ ತಿಮಿಂಗಿಲಗಳವರೆಗೆ - ಒಟ್ಟು ತೂಕ ೧೦೦ ಮಿಲಿಯನ್ ಟನ್‌ಗಳಿಗೂ ಕಡಿಮೆ. ನಮ್ಮ ಮಕ್ಕಳ ಪುಸ್ತಕಗಳಲ್ಲಿ, ನಮ್ಮ ಶಿಲ್ಪಗಳಲ್ಲಿ ಮತ್ತು ನಮ್ಮ ಟಿ ವಿ ಪರದೆಗಳ ಮೇಲೆ ಜಿರಾಫೆ, ತೋಳ, ಚಿಂಪಾಂಜಿಗಳು ತುಂಬಿವೆ. ಆದರೆ ನಿಜಪ್ರಪಂಚದಲ್ಲಿ ಉಳಿದಿರುವ ಅವುಗಳ ಸಂಖ್ಯೆ ಬಹಳ ಅಲ್ಪ. ೧.೫ ಬಿಲಿಯನ್ ದನಗಳಿಗೆ ಪ್ರತಿಯಾಗಿ ಈಗ ಇಡೀ ಪ್ರಪಂಚದಲ್ಲಿ ಸುಮಾರು ೮೦,೦೦೦ ಜಿರಾಫೆಗಳು ಮಾತ್ರವೇ ಉಳಿದಿವೆ. ೪೦೦ ಮಿಲಿಯನ್ ಸಾಕು ನಾಯಿಗಳಿಗೆ ಪ್ರತಿಯಾಗಿ ೨,೦೦,೦೦೦ ತೋಳಗಳು ಮಾತ್ರವೇ ಉಳಿದಿವೆ. ಬಿಲಿಯನ್‌ಗಟ್ಟಲೆ ಮನುಷ್ಯರಿಗೆ ಪ್ರತಿಯಾಗಿ ಕೇವಲ ೨,೫೦,೦೦೦ ಚಿಂಪಾಂಜಿಗಳು ಮಾತ್ರ ಇವೆ. ಮನುಷ್ಯಕುಲವು ಇಡೀ ಜಗತ್ತನ್ನು ಆವರಿಸಿಕೊಂಡಿದೆ.

ಜೀವಪರಿಸರ ಅವನತಿ ಮತ್ತು ಸಂಪನ್ಮೂಲಗಳ ಕೊರತೆಗಳು ಏಕರೀತಿಯ ಸಮಸ್ಯೆಗಳಲ್ಲ. ಹಿಂದಿನ ಅಧ್ಯಾಯದಲ್ಲಿ ಗಮನಿಸಿದ ಹಾಗೆ ಮಾನವ ಕುಲಕ್ಕೆ ದೊರೆಯುತ್ತಿರುವ ಸಂಪನ್ಮೂಲಗಳು ಸತತವಾಗಿ ಹೆಚ್ಚುತ್ತಲೇ ಇವೆ. ಮತ್ತು ಅವು ಹಾಗೇ ಮುಂದುವರಿಯುವ ಸಾಧ್ಯತೆಗಳೂ ಇವೆ. ಆದ್ದರಿಂದಲೇ ಸಂಪನ್ಮೂಲಗಳು ಒಂದು ದಿನ ಬರಿದಾಗಿ ಹೋಗುತ್ತವೆ ಎಂಬ ಭವಿಷ್ಯವಾಣಿ ನಿಜವಾಗದಿರಬಹುದು. ಆದರೆ ಜೀವಪರಿಸರ ವಿನಾಶ ಮಾತ್ರ ಸಾಬೀತಾಗಿರುವ ವಾಸ್ತವವಾಗಿದೆ, ಮುಂದಿನ ದಿನಗಳಲ್ಲಿ ಸೇಪಿಯನ್‌ಗಳು ಹೊಸ ವಸ್ತುಗಳ, ಮತ್ತು ಶಕ್ತಿಮೂಲಗಳ ಸಮೃದ್ಧಿಯನ್ನು ಸಾಧಿಸುವುದನ್ನೂ ಕಾಣಬಹುದೇನೋ, ಅದೇ ಕಾಲಕ್ಕೆ ಅಳಿದುಳಿದಿರುವ ಪ್ರಾಕೃತಿಕ ಜೈವಿಕ ನೆಲೆಗಳು ನಾಶವಾಗಿ ಇತರೆ ಪ್ರಭೇದಗಳು (ಠಿಜಛಿಜ) ಅಳಿಯುವುದನ್ನೂ ಕಾಣಬಹುದು.

ವಾಸ್ತವದಲ್ಲಿ ಜೀವಪರಿಸರ ಪ್ರಕ್ಷುಬ್ಧತೆಯು(ecological turmoil) ಹೋಮೋಸೇಪಿಯೆನ್‌ಗಳ ಅಸ್ತಿತ್ವಕ್ಕೇ ಧಕ್ಕೆ ತರುವ ಸಾಧ್ಯತೆ ಇದೆ. ಹೆಚ್ಚುತ್ತಿರುವ ಜಾಗತಿಕ ತಾಪಮಾನ, ಏರುತ್ತಿರುವ ಸಮುದ್ರಮಟ್ಟ, ವ್ಯಾಪಕವಾಗಿ ಹರಡುತ್ತಿರುವ ಮಾಲಿನ್ಯಗಳು ನಮ್ಮ ಕುಲಕ್ಕೆ ಭೂಮಿಯು ಅನನುಕೂಲಕರವಾಗುವಂತೆ ಮಾಡಬಹುದು. ಪರಿಣಾಮವಾಗಿ ಮುಂದಿನ ದಿನಗಳಲ್ಲಿ ಮಾನವ ಶಕ್ತಿ ಮತ್ತು ಮಾನವ ಪ್ರೇರಿತ ವಿಪತ್ತುಗಳ ನಡುವೆ ಒಂದು ಪೈಪೋಟಿಯ ಸುಳಿ ಪ್ರಾರಂಭವಾಗಬಹುದು, ಪ್ರಾಕೃತಿಕ ಶಕ್ತಿಗಳನ್ನು ಎದುರಿಸಲು ಮತ್ತು ಜೀವಪರಿಸರವನ್ನು. ತಮ್ಮ ಅಗತ್ಯಗಳಿಗೆ ಮತ್ತು ತಮ್ಮ ಖಯಾಲಿಗಳಿಗೆ ತಕ್ಕಂತೆ ನಿಗ್ರಹಿಸಲು ಮನುಷ್ಯರು ತಮ್ಮ ಶಕ್ತಿಯನ್ನು ಬಳಸುವುದರಿಂದ ಅನೀರೀಕ್ಷಿತ ಮತ್ತು ಅಪಾಯಕಾರಿಯಾದ ಅಡ್ಡಪರಿಣಾಮಗಳು ಉಂಟಾಗಬಹುದು. ಇನ್ನೂ ಹೆಚ್ಚು ತೀವ್ರವಾಗಿ ಜೀವಪರಿಸರದ ಮೇಲೆ ಕೈವಾಡ ನಡೆಸುವ ಮೂಲಕ ಮಾತ್ರ ಈ ಅಡ್ಡ ಪರಿಣಾಮಗಳನ್ನು ನಿಯಂತ್ರಿಸಲು ಸಾಧ್ಯವಾಗುವುದರಿಂದ ಅದು ಇನ್ನೂ ಹೆಚ್ಚಿನ ಗೊಂದಲದಲ್ಲಿ ಪರ್ಯವಸಾನಗೊಳ್ಳುವುದು.

ಈ ಪ್ರಕ್ರಿಯೆಯನ್ನು ಬಹಳ ಜನ 'ಪ್ರಕೃತಿಯ ನಾಶ' ಎಂದು ಕರೆಯುತ್ತಾರೆ. ಆದರೆ ಇದು ನಿಜಕ್ಕೂ ನಾಶವಲ್ಲ, ಬದಲಾವಣೆ. ಪ್ರಕೃತಿಯನ್ನು ನಾಶ ಮಾಡಲಾಗದು. ಅರವತ್ತೈದು ಮಿಲಿಯನ್ ವರ್ಷಗಳ ಹಿಂದೆ ಒಂದು ಕ್ಷುದ್ರಗ್ರಹವು ಭೂಮಿಗೆ ಅಪ್ಪಳಿಸಿ ಡೈನೋಸಾರ್‌ಗಳನ್ನು ನಿರ್ನಾಮ ಮಾಡಿತು. ಇದರಿಂದ ಸಸ್ತನಿಗಳು ಮುಂದೆ ಬರಲು ದಾರಿಯಾಯಿತು. ಇಂದು ಹಲವು ಜೀವಪ್ರಭೇದಗಳನ್ನು ನಿರ್ವಂಶ ಮಾಡುತ್ತಿರುವ ಮಾನವಕುಲ ಒಂದು ದಿನ ತಾನೇ ನಾಶವಾಗಿ ಹೋಗಬಹುದು. ಆದರೆ ಎಷ್ಟೋ ಜೀವಿಗಳು ಸುಸ್ಥಿತಿಯಲ್ಲೇ ಇವೆ. ಉದಾಹರಣೆಗೆ ಇಲಿ ಮತ್ತು ಜಿರಲೆಗಳು ತಮ್ಮ ಉಚ್ಛ್ರಾಯ ಸ್ಥಿತಿಯನ್ನು ತಲುಪುತ್ತಿವೆ. ಈ ಗಟ್ಟಿಗ ಜಂತುಗಳು ಬಹುಶಃ ಅಣುಯುದ್ಧ ನಡೆದರೂ, ಯುದ್ಧರಂಗದ ಹೊಗೆಯಾಡುವ ಅವಶೇಷಗಳ ಅಡಿಯಿಂದ ತಮ್ಮ DNAಯನ್ನು ಪಸರಿಸುವುದಕ್ಕಾಗಿ ತೂರಕ್ಕೆ

ನುಸುಳಿ ಬರಬಹುದು. ನಾವಿಂದು ಡೈನೋಸಾರ್‌ಗಳನ್ನು ಉಡಾಯಿಸಿದ ಕ್ಷುದ್ರಗ್ರಹವನ್ನು ನೆನೆಯುವ ಹಾಗೆ, ಬಹುಶಃ ಇಲ್ಲಿಂದ ಅರವತ್ತೈದು ಮಿಲಿಯನ್ ವರ್ಷಗಳ ನಂತರ ಬುದ್ಧಿವಂತ ಇಲಿಗಳು ಮನುಷ್ಯ ಕುಲವು ಉಂಟು ಮಾಡಿದ ವಿನಾಶವನ್ನು ಕೃತಜ್ಞತೆಯಿಂದ ನೆನೆಯಬಹುದೇನೋ!


ನಮ್ಮ ಕುಲ ನಿರ್ನಾಮವಾಗಬಹುದು ಎಂಬ ವದಂತಿಗೆ ಬಲವಾದ ಆಧಾರಗಳಿಲ್ಲ. ಕೈಗಾರಿಕಾ ಕ್ರಾಂತಿಯ ಕಾಲದಿಂದಲೂ ಜಗತ್ತಿನ ಜನಸಂಖ್ಯೆ ಹಿಂದೆಂದೂ ಕಂಡಿರದ ರೀತಿಯಲ್ಲಿ ಹೆಚ್ಚುತ್ತಾ ಬಂದಿದೆ. ೧೭೦೦ನೆಯ ಇಸವಿಯಲ್ಲಿ ಈ ಪ್ರಪಂಚ ಸುಮಾರು ೭೦ ಕೋಟಿ ಜನರ ನೆಲೆಯಾಗಿತ್ತು. ೧೮೦೦ರಲ್ಲಿ ಜಾಗತಿಕ ಜನಸಂಖ್ಯೆ ೯೫ ಕೋಟಿಗೆ ಏರಿಕೆಯಾಯಿತು, ೧೯೦೦ರ ಹೊತ್ತಿಗೆ ನಮ್ಮ ಸಂಖ್ಯೆಯನ್ನು ೧.೬ ಬಿಲಿಯನ್‌ಗೆ ದುಪ್ಪಟ್ಟು ಮಾಡಿಕೊಂಡೆವು. ೨೦೦೦ಸಾವಿರದ ಹೊತ್ತಿಗೆ ನಮ್ಮಸಂಖ್ಯೆಯನ್ನು ನಾಲ್ಕು ಪಟ್ಟು ಹೆಚ್ಚಿಸಿಕೊಂಡು ೬ ಬಿಲಿಯನ್ ಮುಟ್ಟಿದೆವು. ಇಂದು ೭ ಬಿಲಿಯನ್‌ಗೆ ತುಸುವೇ ಕಡಿಮೆ ಇದ್ದೇವೆ.

ಆಧುನಿಕ ಕಾಲ

ಈ ಸೇಪಿಯನ್‌ಗಳು ಬಹುಮಟ್ಟಿಗೆ ಪ್ರಕೃತಿಯ ಮರ್ಜಿಗೆ ಒಳಗಾಗದೆ ಉಳಿದುಕೊಂಡರೂ, ಆಧುನಿಕ ಕೈಗಾರಿಕೆ, ಮತ್ತು ಸರ್ಕಾರಗಳ ಆದೇಶಗಳಿಗೆ ಅವು ಸಂಪೂರ್ಣ ಅಧೀನವಾಗಿವೆ. ಕೈಗಾರಿಕಾ ಕ್ರಾಂತಿಯು ಸಾಮಾಜಿಕ ನಿರ್ವಹಣೆಯ (social engineering) ವಿಚಾರಕ್ಕೆ ಸಂಬಂಧಿಸಿದಂತೆ ಪ್ರಯೋಗಗಳ ಒಂದು ದೀರ್ಘ ಪರಂಪರೆಯ ನಿರ್ಮಾಣಕ್ಕೆ, ಮತ್ತು ದೈನಂದಿನ ಬದುಕು ಹಾಗೂ ಮನುಷ್ಯನ ಮನೋವೃತ್ತಿಯ ವಿಚಾರದಲ್ಲಿ ಯುಕ್ತ ಪೂರ್ವಾಲೋಚನೆ ಇಲ್ಲದ ಬದಲಾವಣೆಗಳಿಗೆ ದಾರಿಮಾಡಿಕೊಟ್ಟಿತು. ಇಂತಹ ಹಲವಾರು ಸಂಗತಿಗಳ ನಡುವೆ ಒಂದು ಉದಾಹರಣೆಯನ್ನು ಗಮನಿಸುವುದಾದರೆ, ಅದು ಪಾರಂಪರಿಕ ಕೃಷಿಯು ಅನುಸರಿಸುತ್ತಿದ್ದ ಪ್ರಾಕೃತಿಕ ಲಯದ ಸ್ಥಾನದಲ್ಲಿ ಕೈಗಾರಿಕೆಯ ಖಚಿತ ನಿಷ್ಕೃಷ್ಟ ವೇಳಾಪಟ್ಟಿಯನ್ನು ಅಳವಡಿಸಿಕೊಂಡಿದ್ದು.

ಸಾಂಪ್ರದಾಯಿಕ ಕೃಷಿಯು ಪ್ರಾಕೃತಿಕ ಕಾಲ ಮತ್ತು ಸಾವಯವ ಬೆಳವಣಿಗೆಯ ಲಯವನ್ನು ಅವಲಂಬಿಸಿತ್ತು. ಬಹಳಷ್ಟು ಸಮುದಾಯಗಳು ಖಚಿತವಾದ ಕಾಲ ನಿರ್ಣಯ ಮಾಡಲಾರದವಾಗಿದ್ದವು, ಅಥವಾ ಅದನ್ನು ಮಾಡುವ ವಿಚಾರದಲ್ಲಿ ಅವು ಆಸಕ್ತಿಯನ್ನೂ ಹೊಂದಿರಲಿಲ್ಲ. ಗಡಿಯಾರಗಳೂ, ವೇಳಾ ಪಟ್ಟಿಗಳೂ ಇಲ್ಲದೆಯೇ ಕೇವಲ ಸೂರ್ಯನ ಚಲನೆ ಮತ್ತು ಸಸ್ಯಗಳ ಬೆಳವಣಿಗೆಯ ಕ್ರಮವನ್ನು ಅನುಸರಿಸಿ ಜಗತ್ತು ತನ್ನ ವ್ಯವಹಾರಗಳಲ್ಲಿ ತೊಡಗಿತ್ತು. ಏಕರೂಪದ ಕೆಲಸದ ದಿನಗಳು ಇರಲಿಲ್ಲ, ಋತುಗಳಿಗೆ ತಕ್ಕಂತೆ ಎಲ್ಲಾ ನಿತ್ಯಕ್ರಮಗಳೂ ತೀವ್ರವಾಗಿ ಬದಲಾಗುತ್ತಿದ್ದವು. ಸೂರ್ಯ ಎಲ್ಲಿದ್ದಾನೆಂಬುದು ಜನಕ್ಕೆ ತಿಳಿದಿರುತ್ತಿತ್ತು, ಮಳೆಗಾಲದ ಕೌತುಕಗಳಿಗೆ, ಸುಗ್ಗಿಯ ಕಾಲಕ್ಕೆ ಜನ ಕಾಯುತ್ತಿದ್ದರು, ಆದರೆ ಅವರಿಗೆ ಗಂಟೆಗಳ ಬಗ್ಗೆ ಅರಿವಿರುತ್ತಿರಲಿಲ್ಲ, ವರ್ಷಗಳ ಪರಿವೆಯಂತೂ ಇರುತ್ತಲೇ ಇರಲಿಲ್ಲ. ಕಾಲಯಾನವೊಂದರಲ್ಲಿ ಹಾದಿತಪ್ಪಿದ ಯಾವನಾದರೂ ಒಬ್ಬ ಮನುಷ್ಯ ಮಧ್ಯ ಯುಗದ ಹಳ್ಳಿಯೊಂದರಲ್ಲಿ ಅವತರಿಸಿ ಯಾವನಾದರೂ ದಾರಿಹೋಕನನ್ನು, ಇದು ಯಾವ ವರ್ಷ? ಎಂದು ಕೇಳಿದ್ದರೆ ಆ ದಾರಿಹೋಕ, ಆಗಂತುಕನ ಉಡುಪನ್ನು ಕಂಡು ದಿಗ್ಭ್ರಮೆಗೊಂಡಷ್ಟೇ ಅವನ ಪ್ರಶ್ನೆಯಿಂದಲೂ ದಿಗ್ಭ್ರಮೆಗೊಳ್ಳುತ್ತಿದ್ದ.

ಮಧ್ಯ ಯುಗದ ಒಬ್ಬ ರೈತನಿಗೆ, ಅಥವಾ ಶೂ ತಯಾರಕನಿಗೆ ಸೂರ್ಯ ಮತ್ತು ಋತುಗಳು ಬಹುಮುಖ್ಯವಾಗಿದ್ದರೆ, ಆಧುನಿಕ ಕೈಗಾರಿಕೆಗೆ ಅದು ಏನೇನೂ ಅಲ್ಲ. ಅದು ಏಕರೂಪತೆ ಮತ್ತು ನಿಷ್ಕೃಷ್ಟತೆಯನ್ನು ಪವಿತ್ರೀಕರಿಸುತ್ತದೆ. ಉದಾಹರಣೆಗೆ ಒಂದು ಮಧ್ಯ ಯುಗದ ಕಾರ್ಯಾಗಾರದಲ್ಲಿ ಪ್ರತಿಯೊಬ್ಬ ಶೂ ತಯಾರಿಸುವ ಕೆಲಸಗಾರನೂ ಅಟ್ಟೆಯಿಂದ ಹಿಡಿದು ಕೊನೆಯವರೆಗೆ ಎಲ್ಲ ಕೆಲಸವನ್ನೂ ಮಾಡಿ ಸಂಪೂರ್ಣವಾಗಿ ಒಂದು ಜೊತೆ ಶೂ ಹೊಲಿಯುತಿದ್ದನು. ಆಗ ಒಬ್ಬ ಕೆಲಸಗಾರ ತಡವಾಗಿ ಬಂದರೆ ಅದು ಇತರರ ಕೆಲಸಕ್ಕೆ ಅಡ್ಡಿಯಾಗುತ್ತಿಲ್ಲಿಲ್ಲ. ಆದರೆ ಒಂದು ಆಧುನಿಕ ಪಾದರಕ್ಷೆ ಕಾರ್ಖಾನೆಯ ಜೋಡಣಾ ಸಾಲಿನ (assembly line) ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಕೆಲಸಗಾರನೂ, ಶೂ ತಯಾರಿಕೆಗೆ ಬೇಕಾದ ಒಂದು ಸಣ್ಣ ಭಾಗವನ್ನು ತಯಾರಿಸುವ ಯಂತ್ರವನ್ನು ನಿರ್ವಹಿಸುತ್ತಾನೆ, ಅದು ಅಲ್ಲಿಂದ ಮುಂದಕ್ಕೆ ಚಲಿಸುತ್ತದೆ. ಯಂತ್ರ ನಂ ೫ ಅನ್ನು ನಿರ್ವಹಿಸುವ ಕೆಲಸಗಾರನು ತುಸು ಸಮಯ ಮೀರಿ ನಿದ್ರಿಸಿ ತಡವಾಗಿ ಕೆಲಸಕ್ಕೆ ಬಂದರೆ, ಅದು ಇತರೆ ಎಲ್ಲಾ ಯಂತ್ರಗಳನ್ನೂ ಸ್ಥಗಿತಗೊಳಿಸಿಬಿಡುತ್ತದೆ. ಇಂತಹ ಅವಗಢವನ್ನು ತಪ್ಪಿಸುವುದಕ್ಕಾಗಿ, ಪ್ರತಿಯೊಬ್ಬರೂ ಒಂದು ಖಚಿತವಾದ ವೇಳಾ ಪಟ್ಟಿಯನ್ನು ಅನುಸರಿಸಬೇಕಾಗುತ್ತದೆ. ಪ್ರತಿಯೊಬ್ಬ ಕೆಲಸಗಾರನೂ ಒಂದು ನಿರ್ದಿಷ್ಟ ಸಮಯದಲ್ಲಿ ಕೆಲಸಕ್ಕೆ ಹಾಜರಿರಬೇಕಾಗುತ್ತದೆ. ಒಬ್ಬನಿಗೆ ಹಸಿವಾಗಿರಬಹುದು ಅಥವಾ ಆಗದೇ ಇರಬಹುದು, ಆದರೆ ಪ್ರತಿಯೊಬ್ಬನೂ ತನ್ನ ಊಟದ ಬಿಡುವನ್ನು ನಿರ್ದಿಷ್ಟ



ಸಮಯದಲ್ಲೇ ತೆಗೆದುಕೊಳ್ಳಬೇಕಾಗುತ್ತದೆ. ಒಂದು ವಿಶಲ್ ಶಬ್ದ ಕೆಲಸದ ಸಮಯ ಮುಗಿದಿದೆ ಎಂಬುದನ್ನು ಸೂಚಿಸಿದಾಗ ಪ್ರತಿಯೊಬ್ಬರೂ ಮನೆಗೆ ತೆರಳಬೇಕಾಗುತ್ತದೆ – ಕೆಲಸ ಮುಗಿದ ಕೂಡಲೆ ಅಲ್ಲ.

ಕೈಗಾರಿಕಾ ಕ್ರಾಂತಿಯು ವೇಳಾ ಪಟ್ಟಿಯನ್ನು ಮತ್ತು ಜೋಡಣಾ ಸಾಲನ್ನು ಮನುಷ್ಯನ ಬಹುತೇಕ ಇತರೆ ಎಲ್ಲಾ ಚಟುವಟಿಕೆಗಳ ಮಾದರಿಯನ್ನಾಗಿಸಿಬಿಟ್ಟಿತು. ಅಲ್ಪ ಕಾಲದಲ್ಲೇ ಕಾರ್ಖಾನೆಗಳು ಮನುಷ್ಯನ ನಡವಳಿಕೆಗಳ ಮೇಲೂ ತಮ್ಮ ಸಮಯಪಾಲನೆಯ ಚೌಕಟ್ಟನ್ನು ಹೇರತೊಡಗಿದವು. ಶಾಲೆಗಳು ಖಚಿತವಾದ ವೇಳಾಪಟ್ಟಿಯನ್ನು ಅಳವಡಿಸಿಕೊಂಡವು. ಆಸ್ಪತ್ರೆಗಳಿಗೆ, ಸರ್ಕಾರೀ ಕಛೇರಿಗಳಿಗೆ, ದಿನಸಿ ಅಂಗಡಿಗಳಿಗೂ ಕೂಡಾ ವೇಳಾ ಪಟ್ಟಿಯೇ ರಾಜನಾಯಿತು. ಅಂಗಡಿಗಳೂ ಇದನ್ನು ಅನುಸರಿಸತೊಡಗಿದವು. ಕಾರ್ಖಾನೆಯ ಪಾಳಿ ಸಂಜೆ ೫ ಗಂಟೆಗೆ ಮುಕ್ತಾಯಗೊಂಡರೆ ೫.೦೨ಕ್ಕೆ ಪಬ್ ವ್ಯವಹಾರಕ್ಕಾಗಿ ತೆರೆಯುವುದು ಸೂಕ್ತ ಎನ್ನುವಂತಾಯಿತು.

ವೇಳಾಪಟ್ಟಿ ವ್ಯವಸ್ಥೆಯನ್ನು ವ್ಯಾಪಕವಾಗಿ ವಿಸ್ತರಿಸುವ ಕಾರ್ಯದಲ್ಲಿ ಒಂದು ಪ್ರಮುಖ ಪಾತ್ರ ವಹಿಸಿದ್ದು ಸಾರ್ವಜನಿಕ ಸಾರಿಗೆ ವ್ಯವಸ್ಥೆ. ಕೆಲಸಗಾರರು ತಮ್ಮ ಪಾಳಿಯನ್ನು ೦೮:೦೦ ಗಂಟೆಗೆ ಪ್ರಾರಂಭಿಸಬೇಕಾದರೆ ರೈಲು ಅಥವಾ ಬಸ್ ಕಾರ್ಖಾನೆಯನ್ನು ೦೭:೫೫ಕ್ಕೆ ತಲುಪಲೇ ಬೇಕು. ಕೆಲವೇ ನಿಮಿಷ ತಡವಾದರೂ ಉತ್ಪಾದನೆಯಲ್ಲಿ ಏರುಪೇರು ಉಂಟಾಗಬಹುದು, ತಡವಾಗಿ ಕೆಲಸಕ್ಕೆ ಬಂದ ಬಡಪಾಯಿಯನ್ನು ಕೆಲಸದಿಂದ ವಜಾ ಮಾಡುವುದರಲ್ಲೂ ಅದು ಕೊನೆಯಾಗಬಹುದು ಎನ್ನುವಂತಹ ಸ್ಥಿತಿ ನಿರ್ಮಾಣವಾಯಿತು. ೧೭೮೪ರಲ್ಲಿ ಒಂದು ಪ್ರಕಟಿತ ವೇಳಾ ಪಟ್ಟಿಯೊಂದಿಗೆ ಕಾರ್ಯಾಚರಿಸಿದ ಕೋಚ್ ಸೇವೆ ಬ್ರಿಟನ್‌ನಲ್ಲಿ ಪ್ರಾರಂಭವಾಯಿತು. ಅದರ ವೇಳಾ ಪಟ್ಟಿಯು, ಹೊರಡುವ ಸಮಯವನ್ನು ಮಾತ್ರ ಸೂಚಿಸಿ, ತಲುಪುವ ಸಮಯವನ್ನು ಸೂಚಿಸುತ್ತಿರಲಿಲ್ಲ. ಅಂದಿನ ಬ್ರಿಟನ್‌ನಲ್ಲಿ ಪ್ರತಿಯೊಂದು ನಗರ ಮತ್ತು ಪಟ್ಟಣವೂ ತನ್ನದೇ ಆದ ಸ್ಥಳೀಯ ಕಾಲಗಣನೆಯ ವ್ಯವಸ್ಥೆಯನ್ನು ಹೊಂದಿರುತ್ತಿತ್ತು. ಲಂಡನ್ ಸಮಯದೊಂದಿಗೆ ಅವು ಸುಮಾರು ಅರ್ಧ ಗಂಟೆಯವರೆಗೂ ವ್ಯತ್ಯಾಸ ಹೊಂದಿರುತ್ತಿದ್ದವು. ಲಂಡನ್‌ನಲ್ಲಿ ೧೨:೦೦ಗಂಟೆಯಾಗಿದ್ದಾಗ ಲಿವರ್‌ಪೂಲ್‌ನಲ್ಲಿ ಬಹುಶಃ ೧೨:೨೦, ಕ್ಯಾಂಟರ್‌ಬರಿಯಲ್ಲಿ ೧೧:೫೦ ಆಗಿರುತ್ತಿತ್ತು. ಆಗ ರೇಡಿಯೋ, ಟೆಲಿಫೋನ್, ಟೆಲಿವಿಷನ್, ವೇಗದ ಟ್ರೈನ್ ಯಾವುದೂ ಇರದಿದ್ದುದರಿಂದ – ಇದು ಯಾರ ಗಮನಕ್ಕೂ ಬರುತ್ತಿರಲಿಲ್ಲ, ಯಾರೂ ಅದರ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಲೂ ಇರಲಿಲ್ಲ.

ಲಿವರ್‌ಪೂಲ್ ಮತ್ತು ಮ್ಯಾಂಚೆಸ್ಟರ್ ನಡುವೆ ೧೮೩೦ರಲ್ಲಿ ಪ್ರಥಮ ವಾಣಿಜ್ಯ ರೈಲು ಪ್ರಾರಂಭವಾಯಿತು. ಹತ್ತು ವರ್ಷಗಳ ನಂತರ ಪ್ರಥಮ ರೈಲು ವೇಳಾಪಟ್ಟಿ ಬಿಡುಗಡೆಗೊಂಡಿತು. ರೈಲುಗಳು ಹಳೆಯ ಸವಾರಿ ಬಂಡಿಗಳಿಗಿಂತ ವೇಗವಾಗಿ ಚಲಿಸುತ್ತಿದ್ದುದರಿಂದ, ಏಕರೂಪತೆಯಿರದ, ಸ್ಥಳೀಯ ಕಾಲಗಣನೆಯ ವೈಖರಿಯು ತೀವ್ರವಾದ ರಗಳೆಗೆ ಕಾರಣವಾಗತೊಡಗಿತು. ೧೮೪೭ರಲ್ಲಿ ಎಲ್ಲ ಬ್ರಿಟಿಷ್ ರೈಲು ಕಂಪನಿಗಳೂ ಒಟ್ಟಿಗೆ ಕೂತು ಚರ್ಚಿಸಿ, ಮುಂದೆ ಎಲ್ಲಾ ರೈಲುಗಳ ವೇಳಾ ಪಟ್ಟಿಗಳನ್ನೂ ಸ್ಥಳೀಯ ಲಿವರ್‌ಪೂಲ್, ಮ್ಯಾಂಚೆಸ್ಟರ್, ಗ್ಲಾಸ್‌ಗೊ, ಕಾಲಮಾನಗಳಿಗೆ ಪ್ರತಿಯಾಗಿ ಗ್ರೀನ್‌ವಿಚ್ ವೀಕ್ಷಣಾಲಯದ ಕಾಲಮಾನಕ್ಕೆ ಹೊಂದುವಂತೆ ತಮ್ಮ ವೇಳಾ ಪಟ್ಟಿಗಳನ್ನು ಬದಲಾಯಿಸಿಕೊಳ್ಳಬೇಕೆಂದು ತೀರ್ಮಾನಿಸಿದವು. ಹೆಚ್ಚು ಹೆಚ್ಚು ಸಂಸ್ಥೆಗಳು ರೈಲು ಕಂಪನಿಗಳ ಉದಾಹರಣೆಯನ್ನು ಅನುಸರಿಸತೊಡಗಿದವು. ಅಂತಿಮವಾಗಿ ೧೮೮೦ರಲ್ಲಿ ಬ್ರಿಟಿಷ್ ಸರ್ಕಾರವು ಬ್ರಿಟನ್‌ನ ಎಲ್ಲಾ ವೇಳಾಪಟ್ಟಿಗಳೂ ಗ್ರೀನ್‌ವಿಚ್ ಕಾಲಮಾನವನ್ನು ಅಳವಡಿಸಿಕೊಳ್ಳಬೇಕೆಂದು ಸೂಚಿಸುವ, ಹಿಂದೆಂದೂ ಕಂಡಿರದ ನಿರ್ಣಯವನ್ನು ಅಂಗೀಕರಿಸಿತು. ಇತಿಹಾಸದಲ್ಲಿ ಪ್ರಥಮಬಾರಿಗೆ ಒಂದು ದೇಶವು ರಾಷ್ಟ್ರೀಯ ಕಾಲಮಾನವೊಂದನ್ನು ಅಂಗೀಕರಿಸಿ ತನ್ನ ಪ್ರಜೆಗಳು ಸ್ಥಳೀಯ ಕಾಲಮಾನ, ಅಥವಾ ಸೂರ್ಯಾಸ್ತ, ಸೂರ್ಯೋದಯಗಳ ಆವರ್ತನೆಗಳಿಗೆ ಪ್ರತಿಯಾಗಿ ಕೃತಕವಾದ ಗಡಿಯಾರವನ್ನು ಅನುಸರಿಸಬೇಕೆಂದು ನಿರ್ಬಂಧಿಸಿತು.

ಒಂದು ಸೆಕೆಂಡ್‌ನ ಒಂದಂಶವೂ ಕೂಡ ಹೊಂದಾಣಿಕೆಗೆ ಮುಖ್ಯವಾಗುವ ಮಟ್ಟಕ್ಕೆ ಅಗಾಧ ಸಂಖ್ಯೆಯ ವೇಳಾಪಟ್ಟಿಗಳ ಜಾಲಗಳು ಹುಟ್ಟುವುದಕ್ಕೆ ಈ ಒಂದು ಸಾಧಾರಣನಿರ್ಧಾರ ಮುನ್ನುಡಿಯಾಯಿತು. ಪ್ರಸಾರ ಮಾಧ್ಯಮಗಳು – ಮೊದಲು ರೇಡಿಯೋ, ನಂತರ ಟೆಲಿವಿಷನ್ – ಪಾದಾರ್ಪಣೆ ಮಾಡಿದಾಗ ಅವು ವೇಳಾ ಪಟ್ಟಿಗಳನ್ನು ಜಾರಿಗೆ ತರುವ ಸಾಧನಗಳೂ, ಅವುಗಳ ಪ್ರಮುಖ ಪ್ರಚಾರಕರೂ ಆದವು. ರೇಡಿಯೋ ಕೇಂದ್ರಗಳು ಪ್ರಸಾರ ಮಾಡಿದ ಪ್ರಥಮ ಸಂಗತಿಗಳು ಎಂದರೆ ಸಮಯದ ಸಂಕೇತಗಳನ್ನು, ದೂರ ದೂರ ಹರಡಿಹೋದ ವಾಸದ ನೆಲೆಗಳೂ,(ಜಣಣಟಜಟಜಟಣ) ಹಡಗುಗಳೂ, ತಮ್ಮ ಗಡಿಯಾರಗಳನ್ನು ಸರಿ ಹೊಂದಿಸಲು ಅನುವಾಗುವ ಬೀಪ್‌ಗಳು. ನಂತರದಲ್ಲಿ ರೇಡಿಯೋ ಕೇಂದ್ರಗಳು ಪ್ರತಿ ಗಂಟೆಗೊಮ್ಮೆ ವಾರ್ತೆಗಳನ್ನು ಬಿತ್ತರಿಸುವ ಪರಿಪಾಠವನ್ನು ಬೆಳೆಸಿಕೊಂಡವು. ಇತ್ತೀಚಿನ ದಿನಗಳಲ್ಲಿ ಪ್ರತಿಯೊಂದು ವಾರ್ತಾ ಪ್ರಸಾರವೂ ಪ್ರಸಾರ ಮಾಡುವ ಮೊದಲ ಸಂಗತಿ – ಒಂದು ಯುದ್ಧ ಪ್ರಾರಂಭವಾಗಿದ್ದಕ್ಕಿಂತಲೂ ಹೆಚ್ಚು ಮುಖ್ಯ – ವೇಳೆ. ದ್ವಿತೀಯ ಮಹಾ ಯುದ್ಧದ ಕಾಲದಲ್ಲಿ ನಾಝಿ ಆಕ್ರಮಿತ ಯೂರೋಪಿಗೆ, ಬಿ.ಬಿ.ಸಿ. ವಾರ್ತಾ ಪ್ರಸಾರ ಮಾಡಲಾಗುತ್ತಿತ್ತು. ಪ್ರತಿಯೊಂದು ವಾರ್ತಾ ಪ್ರಸಾರವೂ, ಸಮಯ ಸೂಚಿಸುವುದಕ್ಕಾಗಿ, ಬಿಗ್‌ಬೆನ್ ಗಂಟೆಯ ಶಬ್ದದೊಂದಿಗೆ – ಸ್ವಾತಂತ್ರ್ಯದ ಮ್ಯಾಜಿಕಲ್ ಶಬ್ದ – ಪ್ರಾರಂಭವಾಗುತ್ತಿತ್ತು. ಚತುರರಾದ ಜರ್ಮನ್ ಭೌತಶಾಸ್ತ್ರಜ್ಞರು ಈ ಗಂಟೆ ಸದ್ದಿನಲ್ಲಿ ಕಂಡುಬರುತ್ತಿದ್ದ ಸೂಕ್ಷ್ಮ ವ್ಯತ್ಯಾಸಗಳನ್ನು ಆದರಿಸಿ ಲಂಡನ್‌ನ ವಾತಾವರಣದ ಸ್ಥಿತಿಯನ್ನು ನಿರ್ಧರಿಸುವ ವಿಧಾನವನ್ನು ಅಭಿವೃದ್ಧಿಪಡಿಸಿಕೊಂಡರು. ಈ ಮಾಹಿತಿಯು ಲುಫ್ಟ್‌ವ್ಯಾಫ್‌ಗೆ ಅಮೂಲ್ಯವಾದ ನೆರವನ್ನು ಒದಗಿಸಿತು. ಬ್ರಿಟಿಷ್ ಗುಪ್ತಚರ ಸಂಸ್ಥೆಯು ಇದನ್ನು ಪತ್ತೆ ಹಚ್ಚಿದಾಗ ಪ್ರಖ್ಯಾತ ಗಡಿಯಾರದ ಸದ್ದಿನ ನೇರ ಪ್ರಸಾರದ ಜಾಗದಲ್ಲಿ ಪೂರ್ವ ಧ್ವನಿಮುದ್ರಿತ ಗಂಟೆ ಸದ್ದನ್ನು ಬಿ.ಬಿ.ಸಿ. ಪ್ರಸಾರಮಾಡ ತೊಡಗಿತು.

ವೇಳಾಪಟ್ಟಿಯ ಜಾಲವನ್ನು ನಿರ್ವಹಿಸುವುದಕ್ಕಾಗಿ ಅಗ್ಗವಾದ, ಸುಲಭವಾಗಿ ಸಾಗಿಸಬಲ್ಲ(portable) ಗಡಿಯಾರಗಳನ್ನು ಸರ್ವವ್ಯಾಪಿಯಾಗಿಸಲಾಯಿತು. ಸಾಸ್ಸನಿಡ್, ಅಥವಾ ಇಂಕಾ ನಗರಗಳಲ್ಲಿ ಬಹಳ ಹೆಚ್ಚೆಂದರೆ ಒಂದೆರಡು ನೆರಳು ಗಡಿಯಾರಗಳಿದ್ದಿರಬಹುದು. (sun dial) ಯೂರೋಪಿಯನ್ ಮಧ್ಯಯುಗೀನ ನಗರಗಳಲ್ಲಿ ಸಾಮಾನ್ಯವಾಗಿ ಒಂದೇ ಒಂದು ಗಡಿಯಾರ ಇರುತ್ತಿತ್ತು – ನಗರ ಮಧ್ಯದ ಚೌಕದಲ್ಲಿ ಒಂದು ಎತ್ತರದ ಸ್ತಂಭದ ಮೇಲೆ ಸ್ಥಾಪಿಸಿದ ದೊಡ್ಡ ಯಂತ್ರ. ಈ ಸ್ತಂಭದ ಮೇಲಿನ ಗಡಿಯಾರಗಳು ಅಸಮರ್ಪಕತೆಗೆ ಕುಪ್ರಸಿದ್ಧವಾಗಿದ್ದವು, ಆದರೆ ಇವುಗಳ ಅಸಮರ್ಪಕತೆಯನ್ನು ತೋರಿಸಲು ಅಲ್ಲಿ ಬೇರಾವ ಗಡಿಯಾರಗಳೂ ಇರುತ್ತಿರಲಿಲ್ಲವಾಗಿ, ಅದರಿಂದ ಯಾವ ವ್ಯತ್ಯಾಸವೂ ಆಗುತ್ತಿರಲಿಲ್ಲ. ಮಧ್ಯಯುಗೀನ ದೇಶವೊಂದು ಹೊಂದಿರುತ್ತಿದ್ದ ಗಡಿಯಾರಗಳಿಗಿಂತ ಹೆಚ್ಚಿನ ಸಂಖ್ಯೆಯ ಗಡಿಯಾರಗಳನ್ನು ಇಂದು ಒಂದು ಶ್ರೀಮಂತ ಕುಟುಂಬವೇ ಹೊಂದಿರುತ್ತದೆ. ನಿಮ್ಮ ಕೈಗಡಿಯಾರವನ್ನು ನೋಡಿ, ನಿಮ್ಮ ಆಂಡ್ರಾಯ್ಡ್ ಅನ್ನು ದಿಟ್ಟಿಸಿ, ನಿಮ್ಮ ಮಂಚದ ಪಕ್ಕದಲ್ಲಿರುವ ಗಡಿಯಾರವನ್ನು ನಿರುಕಿಸಿ, ಅಡುಗೆ ಮನೆಯ ಗೋಡೆಯ ಮೇಲಿನ ಗಡಿಯಾರವನ್ನು ನೋಡಿ, ನಿಮ್ಮ ಮೈಕ್ರೋವೇವ್ ಅನ್ನು ನೋಡಿ, TV ಅಥವಾ DVDಯನ್ನು ಗಮನಿಸಿ, ನಿಮ್ಮ ಕಂಪ್ಯೂಟರಿನ ಮೂಲೆಯ ಟಾಸ್ಕ್ ಬಾರ್ ಕಡೆ ದೃಷ್ಟಿ ಹೊರಳಿಸಿ, ನೀವು ಗಂಟೆ ಎಷ್ಟು ಎಂಬುದನ್ನು ತಿಳಿಯಬಹುದು. ಈಗ ಗಂಟೆ ಎಷ್ಟು ಎಂಬುದನ್ನು ತಿಳಿಯದೆ ಇರಲು ಪ್ರಜ್ಞಾಪೂರ್ವಕ ಪ್ರಯತ್ನ ಮಾಡಬೇಕಾದ ಸ್ಥಿತಿ ಇದೆ.

ಒಬ್ಬ ಮಾದರಿ ಮನುಷ್ಯ ದಿನವೊಂದಕ್ಕೆ ಹಲವು ಡಜನ್ ಸಲ ಈ ಸಮಯಸೂಚಕಗಳನ್ನು ನೋಡುತ್ತಾನೆ, ಏಕೆಂದರೆ ನಾವು ಮಾಡುವ ಪ್ರತಿಯೊಂದನ್ನೂ ಸಮಯಕ್ಕೆ ಸರಿಯಾಗಿ ಮಾಡಬೇಕು. ಒಂದು ಅಲಾರ್ಮ್ ಗಡಿಯಾರ ಬೆಳಗ್ಗೆ ಏಳಕ್ಕೆ ನಮ್ಮನ್ನು ಎಚ್ಚರಿಸುತ್ತದೆ, ನಮ್ಮ ಶೀತಲೀಕರಿಸಿದ ಬಾಗೆಲ್ ಅನ್ನು ಮೈಕ್ರೋವೇವ್‌ನಲ್ಲಿ ಸರಿಯಾಗಿ ೫೦ ಸೆಕೆಂಡ್ ಬಿಸಿಮಾಡಬೇಕು, ನಮ್ಮ ಎಲೆಕ್ಟ್ರಿಕಲ್ ಟೂತ್ ಬ್ರಷ್ ಮೂರುನಿಮಿಷದ ನಂತರ ಬೀಪ್ ಸದ್ದು ಮಾಡುವವರೆಗೆ ಹಲ್ಲು ಉಜ್ಜ ಬೇಕು, ಕೆಲಸಕ್ಕೆ ಹೋಗಲು ೦೭:೪೦ರ ಟ್ರೈನ್ ಹಿಡಿಯಬೇಕು, ೩೦ ನಿಮಿಷದ ನಂತರ ಬೀಪ್ ಸದ್ದು ಮಾಡಿ ಸಮಯ ಮುಗಿಯಿತು ಎಂದು ತಿಳಿಸುವವರೆಗೆ ಜಿಮ್‌ನಲ್ಲಿ ಟ್ರೆಡ್‌ಮಿಲ್ ಮೇಲೆ ಓಡಬೇಕು, ಟಿ.ವಿ ಯ ಮುಂದೆ ಕುಳಿತು ನಮಗೆ ಪ್ರಿಯವಾದ ಪ್ರದರ್ಶನ ನೋಡಬೇಕು, ನಡುನಡುವೆ ಸೆಕೆಂಡ್‌ಗೆ ೧೦೦೦ ಡಾಲರ್ ಶುಲ್ಕದ ವಾಣಿಜ್ಯ ಪ್ರಚಾರಗಳಿಂದ ಅಡ್ಡಿಪಡಿಸಲ್ಪಡಬೇಕು. ಮತ್ತು ಪ್ರಾಸಂಗಿಕವಾಗಿ ೫೦ ನಿಮಿಷಗಳ ಚಿಕಿತ್ಸಾ ಗಂಟೆಗೆ ನಮ್ಮ ಗೊಣಗಾಟವನ್ನು ಮಿತಿಗೊಳಿಸಿದ ಚಿಕಿತ್ಸಕನ ಮೇಲೆ ನಮ್ಮ ಆತಂಕವನ್ನು ಸುರಿಯಬೇಕು.

ಕೈಗಾರಿಕಾ ಕ್ರಾಂತಿಯು ಮಾನವ ಸಮಾಜದಲ್ಲಿ ಡಜನ್‌ಗಟ್ಟಲೆ ಪ್ರಮುಖ ಪಲ್ಲಟಗಳನ್ನು ಉಂಟು ಮಾಡಿದೆ. ಕೈಗಾರಿಕಾ ಕಾಲಮಾನಕ್ಕೆ ಹೊಂದಿಕೊಳ್ಳುವುದು ಅವುಗಳಲ್ಲಿ ಒಂದು. ಇತರೆ ಗಮನಾರ್ಹ ಉದಾಹರಣೆಗಳು, ನಗರೀಕರಣ, ರೈತಾಪಿಯ ಕಣ್ಮರೆ, ಕೈಗಾರಿಕಾ ಕೆಳವರ್ಗದ(industrial proletariat) ಹೆಚ್ಚಳ, ಸಾಮಾನ್ಯ ಮನುಷ್ಯನ ಸಬಲೀಕರಣ, ಪ್ರಜಾಪ್ರಭುತ್ವೀಕರಣ, ಯುವ ಸಂಸ್ಕೃತಿ, ಮತ್ತು ಪಿತೃಪ್ರಾಧಾನ್ಯತೆಯ ಕಣ್ಮರೆ ಮುಂತಾದುವನ್ನು ಒಳಗೊಳ್ಳುತ್ತವೆ.

ಆದರೂ ಮನುಷ್ಯಕುಲವು ಕಂಡ ಅತ್ಯಂತ ಪ್ರಬಲ ಸಾಮಾಜಿಕ ಕ್ರಾಂತಿಯೊಂದು ಈ ಎಲ್ಲಾ ಪಲ್ಲಟಗಳೂ ಕುಬ್ಜವಾಗುವಂತೆ ಮಾಡಿದೆ, ಅದು ಕೌಟುಂಬಿಕ ವ್ಯವಸ್ಥೆ, ಮತ್ತು ಸ್ಥಳೀಯ ಸಮುದಾಯಗಳ ಕುಸಿತ ಮತ್ತು ಇವುಗಳ ಸ್ಥಾನವನ್ನು ಪ್ರಭುತ್ವ ಮತ್ತು ಮಾರುಕಟ್ಟೆಗಳು ಆಕ್ರಮಿಸಿಕೊಂಡಿದ್ದು. ನಮಗೆ ತಿಳಿದಿರುವಂತೆ ಬಹಳ ಹಿಂದೆ, ಅಂದರೆ ಒಂದು ಮಿಲಿಯನ್ ವರ್ಷಗಳಿಗೂ ಹಿಂದೆ ಮನುಷ್ಯರು, ಬಹುತೇಕ ಎಲ್ಲ ಸದಸ್ಯರೂ ಸಂಬಂಧಿಕರೇ ಆಗಿದ್ದ, ಸಣ್ಣ ಆಪ್ತ ಸಮುದಾಯಗಳಲ್ಲಿ ಬದುಕುತ್ತಿದ್ದರು. ಅರಿವಿನ ಕ್ರಾಂತಿ ಮತ್ತು ಕೃಷಿ ಕ್ರಾಂತಿಗಳು ಅದನ್ನು ಬದಲಾಯಿಸಲಿಲ್ಲ. ಅವು ಕುಟುಂಬಗಳನ್ನು ಮತ್ತು ಸಮುದಾಯಗಳನ್ನು ಒಟ್ಟಾಗಿ ಬೆಸೆದು ಬುಡಕಟ್ಟುಗಳನ್ನು, ನಗರಗಳನ್ನು, ರಾಜ್ಯಗಳನ್ನು, ಸಾಮ್ರಾಜ್ಯಗಳನ್ನು, ನಿರ್ಮಿಸಿದವು. ಆದರೆ ಕುಟುಂಬಗಳು, ಸಮುದಾಯಗಳು ಎಲ್ಲಾ ಮಾನವ ಸಮುದಾಯಗಳ ನಿರ್ಮಿತಿಯ ಮೂಲ ಘಟಕಗಳಾಗಿ ಉಳಿದಿದ್ದವು. ಪ್ರತಿಯಾಗಿ ಕೈಗಾರಿಕಾ ಕ್ರಾಂತಿಯು ಎರಡು ಶತಮಾನಗಳ ಕಾಲದಲ್ಲೇ ಈ ಮೂಲ ಘಟಕಗಳನ್ನು ಒಡೆದು ಅಣುಗಳನ್ನಾಗಿ ಪರಿವರ್ತಿಸಿತು. ಕುಟುಂಬಗಳ, ಮತ್ತು ಸಮುದಾಯಗಳ ಬಹಳಷ್ಟು ಕಾರ್ಯಗಳನ್ನು ಪ್ರಭುತ್ವ ಮತ್ತು ಮಾರುಕಟ್ಟೆಗೆ ಹಸ್ತಾಂತರಿಸಿತು.

ಕುಟುಂಬ ಮತ್ತು ಸಮುದಾಯಗಳ ಅವನತಿ

ಕೈಗಾರಿಕಾ ಕ್ರಾಂತಿಗೆ ಪೂರ್ವದಲ್ಲಿ ಬಹುಪಾಲು ಜನರ ದೈನಂದಿನ ಜೀವನವು ಬಿಡಿ ಕುಟುಂಬ(nuclear family), ವಿಸ್ತರಿಸಲ್ಪಟ್ಟ ಕುಟುಂಬ, ಸ್ಥಳೀಯ ಆಪ್ತ ಸಮುದಾಯ ಎಂಬ ಮೂರು ಪುರಾತನ ಚೌಕಟ್ಟುಗಳ ಒಳಗೇ ನಡೆಯುತ್ತಿತ್ತು: ಬಹಳಷ್ಟು ಜನ ಕುಟುಂಬದ ವ್ಯವಹಾರಗಳಲ್ಲಿ ತೊಡಗಿಕೊಳ್ಳುತ್ತಿದ್ದರು. ಉದಾ: ಕುಟುಂಬದ ಜಮೀನು ಸಾಗುವಳಿ ಮಾಡುವುದು, ಕುಟುಂಬದ ಕಾಯಕಸಾಲೆಯಲ್ಲಿ ದುಡಿಯುವುದು, ಅಥವಾ ನೆರೆಯ ಕುಟುಂಬದೊಂದಿಗೆ ಕೆಲಸ ಮಾಡುವುದು. ಕುಟುಂಬವೆಂಬುದು ಜನಹಿತ ವ್ಯವಸ್ಥೆ, ಆರೋಗ್ಯ ವ್ಯವಸ್ಥೆ, ಶೈಕ್ಷಣಿಕ ವ್ಯವಸ್ಥೆ, ನಿರ್ಮಾಣ ಕೈಗಾರಿಕೆ, ಕಾರ್ಮಿಕ ಸಂಘ, ನಿವೃತ್ತಿವೇತನ ನಿ ಧಿ, ವಿಮಾ ವ್ಯವಸ್ಥೆ, ರೇಡಿಯೋ, ಟೆಲಿವಿಷನ್, ವೃತ್ತಪತ್ರಿಕೆ, ಬ್ಯಾಂಕ್, ಪೋಲೀಸ್ ವ್ಯವಸ್ಥೆ ಎಲ್ಲವೂ ಆಗಿರುತ್ತಿತ್ತು.

ಒಬ್ಬ ವ್ಯಕ್ತಿ ಖಾಯಿಲೆ ಮಲಗಿದರೆ ಕುಟುಂಬವು ಅವನನ್ನು ನೋಡಿಕೊಳ್ಳುತ್ತಿತ್ತು. ಒಬ್ಬ ವ್ಯಕ್ತಿಗೆ ವಯಸ್ಸಾದಾಗ ಕುಟುಂಬವು ಆಕೆಯನ್ನು ಪೋಷಿಸುತ್ತಿತ್ತು, ಮಕ್ಕಳೇ ಆಕೆಯ ನಿವೃತ್ತಿ ವೇತನ ನಿಧಿ, ಒಬ್ಬ ವ್ಯಕ್ತಿ ಮೃತಪಟ್ಟರೆ ಕುಟುಂಬವು ಅನಾಥರಾದ ಮಕ್ಕಳ ಪಾಲನೆ ಮಾಡುತ್ತಿತ್ತು. ವ್ಯಕ್ತಿಯೊಬ್ಬ ಒಂದು ಗುಡಿಸಲು ನಿರ್ಮಿಸಬಯಸಿದರೆ ಕುಟುಂಬವು ಸಹಾಯ ನೀಡುತ್ತಿತ್ತು. ಒಬ್ಬ ವ್ಯಕ್ತಿ ವ್ಯವಹಾರವೊಂದನ್ನು ಪ್ರಾರಂಭಿಸಬಯಸಿದರೆ ಅಗತ್ಯವಿದ್ದ ಹಣವನ್ನು ಕುಟುಂಬವು ಹೊಂದಿಸುತ್ತಿತ್ತು. ಒಬ್ಬ ವ್ಯಕ್ತಿ ಮದುವೆಯಾಗಬಯಸಿದರೆ ಕುಟುಂಬವು ಸೂಕ್ತ ಸಂಗಾತಿಯನ್ನು ಹುಡುಕುತ್ತಿತ್ತು ಅಥವಾ ಪರಿಶೀಲಿಸುತ್ತಿತ್ತು. ನೆರೆಯವರೊಂದಿಗೆ ವೈಮನಸ್ಯವುಂಟಾದರೆ, ಕುಟುಂಬವು ಮಧ್ಯ ಪ್ರವೇಶಿಸುತ್ತಿತ್ತು. ಒಬ್ಬ ವ್ಯಕ್ತಿಯ ಖಾಯಿಲೆಯು ಕುಟುಂಬವು ನಿರ್ವಹಿಸಲಾರದಷ್ಟು ತೀವ್ರವಾಗಿದ್ದರೆ, ಅಥವಾ ಒಂದು ವ್ಯವಹಾರಕ್ಕೆ ಬೇಕಾದ ಹಣ ಕುಟುಂಬದ ಶಕ್ತಿಗೆ ಮೀರಿದ್ದರೆ, ಅಥವಾ ನೆರೆಯವರೊಂದಿಗಿನ ಭಿನ್ನಾಭಿಪ್ರಾಯವು ಹಿಂಸೆಯ ಮಟ್ಟ ತಲುಪಿದರೆ, ಸ್ಥಳೀಯ ಸಮುದಾಯವು ಸಹಾಯಕ್ಕೆ ಬರುತ್ತಿತ್ತು.

ಮುಕ್ತ ಮಾರುಕಟ್ಟೆಯ ಸರಬರಾಜು ಮತ್ತು ಬೇಡಿಕೆಯ ನಿಯಮಗಳಿಗಿಂತ ಭಿನ್ನವಾದ ರೀತಿಯಲ್ಲಿ ಸಮುದಾಯವು, ಸ್ಥಳೀಯ ಸಂಪ್ರದಾಯ, ಮತ್ತು ಸೌಹಾರ್ದದ ಆರ್ಥಿಕ ಆಧಾರದಲ್ಲಿ ಸಹಾಯ ನೀಡುತ್ತಿತ್ತು. ಒಂದು ಹಳೆಯ ಮಾದರಿಯ ಮಧ್ಯಯುಗೀನ ಸಮುದಾಯದಲ್ಲಿ ನನ್ನ ನೆರೆಯವನಿಗೆ ಅಗತ್ಯವಿದ್ದಾಗ ಯಾವುದೇ ಪ್ರತಿಫಲದ ನಿರೀಕ್ಷೆಯಿಲ್ಲದೆ, ಆತನ ಗುಡಿಸಲನ್ನು ನಿರ್ಮಿಸಲು ನಾನು ಸಹಾಯ ಮಾಡುತ್ತಿದ್ದೆ, ಅವನ ಕುರಿಗಳನ್ನು ಕಾಯುತ್ತಿದ್ದೆ. ನನಗೆ ಅಗತ್ಯವಿದ್ದಾಗ ನನ್ನ ನೆರೆಯಾತ ಈ ಸಹಾಯವನ್ನು ಹಿಂದಿರುಗಿಸುತ್ತಿದ್ದ. ಅದೇ ಕಾಲಕ್ಕೆ ಸ್ಥಳೀಯ ಪಾಳೇಗಾರ ಒಂದು ಪೈಸೆಯನ್ನೂ ಕೊಡದೆ ನಮ್ಮೆಲ್ಲರನ್ನೂ ತನ್ನ ದುರ್ಗವನ್ನು ನಿರ್ಮಿಸಲು ನೇಮಿಸಿಕೊಳ್ಳಬಹುದಿತ್ತು. ಇದಕ್ಕೆ ಪ್ರತಿಯಾಗಿ ಡಕಾಯಿತರು ಮತ್ತು ದುಷ್ಟರಿಂದ(ಛಚಿಡಿಛಚಿಡಿಚಿಟಿ) ನಮ್ಮನ್ನು ಆತ ರಕ್ಷಿಸುವನೆಂದು ನಿರೀಕ್ಷಿಸಬಹುದಿತ್ತು. ಗ್ರಾಮ ಜೀವನವು ಹಲವಾರು ವ್ಯವಹಾರಗಳನ್ನು ಒಳಗೊಂಡಿರುತ್ತಿತ್ತು. ಅಲ್ಲಿ ಸ್ವಲ್ಪಮಟ್ಟಿಗೆ ವ್ಯಾಪಾರವೂ ಖಂಡಿತ ಇರುತ್ತಿತ್ತು, ಆದರೆ ಅದರ ಪಾತ್ರ ಸೀಮಿತವಾದುದಾಗಿತ್ತು. ನೀವು ಅಪರೂಪದ ಸಾಂಬಾರ ಪದಾರ್ಥಗಳನ್ನು, ಬಟ್ಟೆಯನ್ನು, ಉಪಕರಣಗಳನ್ನು, ಕೊಳ್ಳಬಹುದಿತ್ತು, ವಕೀಲ ಮತ್ತು ವೈದ್ಯರ ಸೇವೆಯನ್ನು ಬಾಡಿಗೆಗೆ ಪಡೆಯಬಹುದಿತ್ತು. ಹೌದು! ಸಾಮಾನ್ಯವಾಗಿ



ಬಳಕೆಯಾಗುತ್ತಿದ್ದುದರಲ್ಲಿ ಶೇ.೧೦ಕ್ಕಿಂತಲೂ ಕಡಿಮೆ ಪ್ರಮಾಣದ ಉತ್ಪನ್ನಗಳನ್ನು ಮಾರುಕಟ್ಟೆಯಲ್ಲಿ ಕೊಳ್ಳಬಹುದಿತ್ತು. ಮನುಷ್ಯನ ಬಹಳಷ್ಟು ಅಗತ್ಯಗಳು ಕುಟುಂಬ ಮತ್ತು ಸಮುದಾಯಗಳಿಂದ ಪೂರೈಕೆಯಾಗುತ್ತಿದ್ದವು.

ಯುದ್ಧ ಮಾಡುವುದು, ರಸ್ತೆಗಳನ್ನು, ಅರಮನೆಗಳನ್ನು ನಿರ್ಮಿಸುವುದು ಮುಂತಾದ ಪ್ರಮುಖ ಕಾರ್ಯಗಳನ್ನು ಕೈಗೊಳ್ಳುತ್ತಿದ್ದ ರಾಜ್ಯಗಳು, ಸಾಮ್ರಾಜ್ಯಗಳೂ ಇದ್ದವು. ಇಂತಹ ಉದ್ದೇಶಗಳಿಗಾಗಿ ರಾಜರು ತೆರಿಗೆ ವಸೂಲು ಮಾಡುತ್ತಿದ್ದರು, ಯಾವಾಗಲಾದರೂ ಸೈನಿಕರನ್ನು, ಕೆಲಸಗಾರರನ್ನು ನಿಯಮಿಸಿಕೊಳ್ಳುತ್ತಿದ್ದುದೂ ಉಂಟು. ಆದರೂ, ಕೆಲವು ಅಪವಾದಗಳನ್ನು ಹೊರತುಪಡಿಸಿ ರಾಜ್ಯಗಳು, ಕುಟುಂಬಗಳ, ಸಮುದಾಯಗಳ ದೈನಂದಿನ ವ್ಯವಹಾರಗಳಿಂದ ದೂರ ಉಳಿಯುತ್ತಿದ್ದವು. ಹಾಗೆ ಮಧ್ಯಪ್ರವೇಶ ಮಾಡಬೇಕೆಂದು ಬಯಸಿದರೂ ರಾಜರಿಗೆ ಅದು ಕಷ್ಟವೇ ಆಗುತ್ತಿತ್ತು. ಸಾಂಪ್ರದಾಯಿಕ ಕೃಷಿ–ಆರ್ಥಿಕತೆಗಳಲ್ಲಿ ಸರ್ಕಾರೀ ಅಧಿಕಾರಿಗಳ, ಪೋಲೀಸರ, ಸಾಮಾಜಿಕ ಕಾರ್ಯಕರ್ತರ, ಅಧ್ಯಾಪಕರ, ವೈದ್ಯರ, ಬೃಹತ್ ಸಮುದಾಯಗಳನ್ನು ಪೋಷಿಸಲು ಸಾಕಾಗುವಷ್ಟು ಹೆಚ್ಚುವರಿ ಉತ್ಪಾದನೆ ಇರುತ್ತಿರಲಿಲ್ಲ. ಪರಿಣಾಮವಾಗಿ, ಬಹಳಷ್ಟು ರಾಜರು ಸಾಮೂಹಿಕ ಶಿಕ್ಷಣ ಅಥವಾ, ಆರೋಗ್ಯ ರಕ್ಷಣೆಯಂತಹ ಸಾಮಾಜಿಕ ಹಿತದ ಕಲ್ಯಾಣ ಯೊಜನೆಗಳನ್ನು ಅಭಿವೃದ್ಧಿಪಡಿಸುವ ಪ್ರಯತ್ನಗಳನ್ನು ಮಾಡಲೇ ಇಲ್ಲ. ಅಂತಹ ಕಾರ್ಯಗಳನ್ನು ಅವರು ಕುಟುಂಬಗಳಿಗೆ ಅಥವಾ ಸಮುದಾಯಗಳಿಗೆ ಬಿಟ್ಟು ಕೊಟ್ಟಿದ್ದರು. ರಾಜರು ಹೆಚ್ಚು ತೀವ್ರವಾಗಿ ಮಧ್ಯ ಪ್ರವೇಶಿಸಲು ಪ್ರಯತ್ನಿಸಿದಾಗಲೂ ಕೂಡ (ಚೀನಾದ ಕ್ವಿನ್ ಸಾಮ್ರಾಜ್ಯದ ಸಂದರ್ಭದಲ್ಲಿ ಆದ ಹಾಗೆ) ಅವರು ಕುಟುಂಬದ ಯಜಮಾನರನ್ನು ಮತ್ತು ಸಮುದಾಯದ ಹಿರಿಯರನ್ನು ಸರ್ಕಾರದ ಮಧ್ಯವರ್ತಿಗಳನ್ನಾಗಿ ಮಾಡಿಕೊಳ್ಳಬೇಕಾಗುತ್ತಿತ್ತು.

ಎಷ್ಟೋ ಸಲ ಸಾರಿಗೆ ಮತ್ತು ಸಂಪರ್ಕದ ಅಡಚಣೆಗಳಿಂದಾಗಿ ದೂರದ ಸಮುದಾಯಗಳ ವ್ಯವಹಾರಗಳಲ್ಲಿ ಮಧ್ಯಪ್ರವೇಶ ಮಾಡುವುದು ಎಷ್ಟು ಕಷ್ಟಕರವಾಗುತ್ತಿತ್ತೆಂದರೆ ಹಲವು ಸಮ್ರಾಜ್ಯಗಳು– ತೆರಿಗೆ ವಸೂಲಿ, ಹಿಂಸೆಯ ನಿರ್ವಹಣೆಯಂತಹ – ತಮ್ಮ ಅತ್ಯಂತ ಮೂಲಭೂತ ವಿಶೇಷಾಧಿಕಾರಗಳನ್ನೂ ಸಮುದಾಯಗಳಿಗೇ ಬಿಟ್ಟುಕೊಡುತ್ತಿದ್ದವು. ಉದಾಹರಣೆಗೆ, ಆಟ್ಟೊಮನ್ ಸಾಮ್ರಾಜ್ಯದಲ್ಲಿ ದೊಡ್ಡ ಪೋಲೀಸ್ ಪಡೆಯನ್ನು ನಿರ್ವಹಿಸುವುದಕ್ಕೆ ಪ್ರತಿಯಾಗಿ ಕೌಟುಂಬಿಕ ಪ್ರತೀಕಾರದ ಮೂಲಕ ಕಲಹಗಳನ್ನು ತೀರ್ಮಾನಿಸಿಕೊಳ್ಳಲು ಬಿಟ್ಟುಬಿಡಲಾಗುತ್ತಿತ್ತು.. ನನ್ನ ಸಹೋದರ ಯಾರನ್ನಾದರೂ ಕೊಂದಿದ್ದರೆ, ಅದಕ್ಕೆ ಪ್ರತಿಯಾಗಿ, ಕೊಲೆಯಾದವನ ಸಹೋದರ, ನನ್ನನ್ನು ಕೊಲ್ಲುವುದಕ್ಕೆ ಅನುಮತಿಯಿರುತ್ತಿತ್ತು. ಹಿಂಸೆಯು ಒಂದು ಸ್ವೀಕಾರಾರ್ಹ ಮಟ್ಟದಲ್ಲಿರುವವರೆಗೆ ಇಸ್ತಾನ್‌ಬುಲ್‌ನಲ್ಲಿದ್ದ ಸುಲ್ತಾನ ಅಥವಾ ಪ್ರಾಂತೀಯ ಪಾಶಾ, ಮಧ್ಯಪ್ರವೇಶ ಮಾಡುತ್ತಿರಲಿಲ್ಲ.


ಚೀನಾದ ಮಿಂಗ್ ಸಾಮ್ರಾಜ್ಯದಲ್ಲಿ (೧೩೬೮–೧೬೪೪) ಪ್ರಜೆಗಳನ್ನು ಬಾಜಾ ಎಂಬ ವ್ಯವಸ್ಥೆಗೆ ಒಳಪಡಿಸಲಾಗಿತ್ತು. ಹತ್ತು ಕುಟುಂಬಗಳು ಸೇರಿ ಜಿಯಾ ಎಂಬ ವ್ಯವಸ್ಥೆಯನ್ನು ರಚಿಸುತ್ತಿದ್ದವು, ಹತ್ತು ಜಿಯಾಗಳು ಒಟ್ಟಾದರೆ ಅದೊಂದು ಬಾವೊ ಆಗುತ್ತಿತ್ತು. ಒಂದು ಬಾವೋದ ಸದಸ್ಯ ಯಾವುದಾದರೊಂದು ಅಪರಾಧವೆಸಗಿದರೆ ಅದಕ್ಕಾಗಿ ಬಾವೋದ ಇತರ ಸದಸ್ಯರನ್ನು, ವಿಶೇಷವಾಗಿ ಬಾವೋದ ಹಿರಿಯರನ್ನು, ಶಿಕ್ಷಿಸಬಹುದಾಗಿತ್ತು. ತೆರಿಗೆಯನ್ನೂ ಕೂಡ ಬಾವೋದ ಮೇಲೆ ವಿಧಿಸಲಾಗುತ್ತಿತ್ತು, ಪ್ರತಿಯೊಂದು ಕುಟುಂಬದ ಪರಿಸ್ಥಿತಿಯನ್ನು ಅವಲೋಕಿಸಿ ಅವರು ಎಷ್ಟು ತೆರಿಗೆ ನೀಡಬಹುದೆಂಬುದನ್ನು ರಾಜ್ಯಾಧಿಕಾರಿಗಳಿಗಿಂತಲೂ ಹೆಚ್ಚು ಬಾವೋದ ಹಿರಿಯರೇ ನಿರ್ಧರಿಸಬಹುದಾಗಿತ್ತು. ಸಾಮ್ರಾಜ್ಯದ ದೃಷ್ಟಿಯಿಂದ ಈ ವ್ಯವಸ್ಥೆ ಬಹಳ ಅನುಕೂಲಕರವಾಗಿತ್ತು. ಪ್ರತಿಯೊಂದು ಕುಟುಂಬದ ಆದಾಯ, ಮತ್ತು ಖರ್ಚನ್ನು ನಿರ್ಧರಿಸಿ ತೆರಿಗೆ ವಿಧಿಸಲು ಅಗತ್ಯವಾದ ಸಹಸ್ರಾರು ಕಂದಾಯ ಅಧಿಕಾರಿಗಳನ್ನು, ತೆರಿಗೆ ವಸೂಲಿದಾರರನ್ನು ಸಾಕುವುದಕ್ಕೆ ಪ್ರತಿಯಾಗಿ, ಈ ಕಾರ್ಯವನ್ನು ಸಮುದಾಯದ ಹಿರಿಯರಿಗೇ ವಹಿಸಲಾಗುತ್ತಿತ್ತು. ಹಳ್ಳಿಯ ಪ್ರತಿಯೊಬ್ಬ ಸದಸ್ಯನ ಕಿಮ್ಮತ್ತು ಏನು ಎಂಬುದನ್ನು ನಿರ್ಧರಿಸಿ, ಸಾಮ್ರಾಜ್ಯದ, ಸೈನ್ಯದ, ನೆರವಿಲ್ಲದೆ ಸಮುದಾಯದ ಹಿರಿಯರೇ ತೆರಿಗೆಯ ಪ್ರಮಾಣವನ್ನು ನಿರ್ಧರಿಸಬಹುದಾಗಿತ್ತು.

ಹಲವಾರು ರಾಜ್ಯಗಳ, ಸಾಮ್ರಾಜ್ಯಗಳ ಕಾರ್ಯಚಟುವಟಿಕೆಗಳು ವಾಸ್ತವದಲ್ಲಿ ರಕ್ಷಣೆ ನೀಡುವ ದಂಧೆಗಿಂತ(protection rackets) ತುಸುವೇ ಹೆಚ್ಚಿನದಾಗಿರುತ್ತಿದ್ದುವು. ರಾಜ ಎಂಬುವವನು, ರಕ್ಷಣೆ ನೀಡುವುದಕ್ಕಾಗಿ ಹಫ್ತಾ ವಸೂಲಿ ಮಾಡುವ, ತನ್ನ ಸುಪರ್ದಿಯಲ್ಲಿರುವವರಿಗೆ, ನೆರೆಯ ಅಪರಾಧಿ ಗುಂಪುಗಳು, ಪುಡಿ ಯುವಗುಂಪುಗಳು ತೊಂದರೆ ಮಾಡದಂತೆ ರಕ್ಷಿಸುವ ಧಣಿಗಳ ಧಣಿ ಆಗಿರುತ್ತಿದ್ದ.

ಕುಟುಂಬ ಮತ್ತು ಸಮುದಾಯಗಳ ಮಡಿಲಿನಲ್ಲಿ ಬದುಕು ಬಹಳ ಸುಗಮವಾಗೇನೂ ಇರುತ್ತಿರಲಿಲ್ಲ. ಆಧುನಿಕ ಪ್ರಭುತ್ವಗಳು, ಮತ್ತು ಮಾರುಕಟ್ಟೆಗಳಿಗಿಂತ ಹೆಚ್ಚು ಕ್ರೂರವಾಗಿ ಕುಟುಂಬಗಳು, ಮತ್ತು ಸಮುದಾಯಗಳು, ಮನುಷ್ಯನನ್ನು ದಮನಮಾಡುತ್ತಿದ್ದವು. ಮತ್ತು ಅವುಗಳ ಅಂತರಿಕ ಚಾಲಕಶಕ್ತಿ (dynamics) ಎಷ್ಟೋ ಸಲ ಒತ್ತಡ ಹಾಗೂ ಹಿಂಸೆಯಿಂದ ತುಂಬಿರುತ್ತಿತ್ತು – ಆದರೂ ಜನರಿಗೆ ಬೇರೆ ಆಯ್ಕೆಗಳು ಇರುತ್ತಿರಲಿಲ್ಲ. ೧೭೫೦ರ ಸುಮಾರಿಗೆ ತನ್ನ ಕುಟುಂಬ ಮತ್ತು ಸಮುದಾಯವನ್ನು ಕಳೆದುಕೊಂಡ ಒಬ್ಬ ಮಹಿಳೆಯ ಬದುಕು ಸಾವಿಗೆ ಸಮಾನವಾಗಿರುತ್ತಿತ್ತು. ಅವಳಿಗೆ ಶಿಕ್ಷಣ, ಕೆಲಸ, ದೊರೆಯುವುದು ಸಾಧ್ಯವಿರಲಿಲ್ಲ. ಖಾಯಿಲೆ ಅಥವಾ ಸಂಕಷ್ಟದ ಕಾಲದಲ್ಲಿ ಯಾವುದೇ ಸಹಾಯ ದೊರೆಯುತ್ತಿರಲಿಲ್ಲ. ಅವಳಿಗೆ ಯಾರೂ ಸಾಲ ಕೊಡುತ್ತಿರಲಿಲ್ಲ, ತೊಂದರೆಗೆ ಒಳಗಾದರೆ ಸಹಾಯಕ್ಕೆ ಬರುತ್ತಿರಲಿಲ್ಲ. ಅಲ್ಲಿ ಪೋಲೀಸರಾಗಲೀ, ಸಾಮಾಜಿಕ ಕಾರ್ಯಕರ್ತರಾಗಲೀ, ಕಡ್ಡಾಯ ಶಿಕ್ಷಣವಾಗಲೀ, ಇರುತ್ತಿರಲಿಲ್ಲ. ಬದುಕುವುದಕ್ಕಾಗಿ ಇಂತಹ ವ್ಯಕ್ತಿ ತಕ್ಷಣದಲ್ಲಿ ಮತ್ತೊಂದು ಪರ್ಯಾಯ ಕುಟುಂಬವನ್ನೋ, ಸಮುದಾಯವನ್ನೋ, ಆರಿಸಿಕೊಳ್ಳಬೇಕಾಗಿತ್ತು. ಮನೆಯಿಂದ ಓಡಿಹೋದ ಹುಡುಗ ಹುಡುಗಿಯ ಅದೃಷ್ಟ ಚೆನ್ನಾಗಿದ್ದರೆ ಬೇರೆ ಯಾವುದೋ ಹೊಸ ಕುಟುಂಬವೊಂದರಲ್ಲಿ ಅವರು ಸೇವಕರಾಗಿ ಉಳಿಯಬಹುದಿತ್ತು. ಅದೃಷ್ಟ ಕೆಟ್ಟದ್ದಾಗಿದ್ದರೆ ಅವರು ಸೈನ್ಯದ ಕೈಗೋ, ವೇಶ್ಯಾವಾಟಿಕೆಗೋ ಬೀಳುವುದು ಅನಿವಾರ್ಯವಾಗುತ್ತಿತ್ತು.

ಕಳೆದ ಎರಡು ಶತಮಾನಗಳಲ್ಲಿ ಇವೆಲ್ಲವೂ ಬಹಳ ನಾಟಕೀಯವಾಗಿ ಬದಲಾಗಿವೆ. ಕೈಗಾರಿಕಾ ಕ್ರಾಂತಿಯು ಮಾರುಕಟ್ಟೆಗೆ ಅಗಾಧವಾದ ಹೊಸ ಶಕ್ತಿಯನ್ನು ತಂದುಕೊಟ್ಟಿದೆ. ರಾಜ್ಯಕ್ಕೆ ಸಂವಹನ ಮತ್ತು ಸಾರಿಗೆಯ ಹೊಸ ಸಾಧನಗಳನ್ನು ಒದಗಿಸಿದೆ. ಗುಮಾಸ್ತರ, ಅಧ್ಯಾಪಕರ, ಪೋಲೀಸರ ಮತ್ತು ಸಾಮಾಜಿಕ ಕಾರ್ಯಕರ್ತರ ಒಂದು ಪಡೆಯನ್ನೇ ಸರ್ಕಾರಗಳ ಕೈಯಲ್ಲಿ ಇರಿಸಿದೆ. ಇತರರ ಮಧ್ಯಪ್ರವೇಶವನ್ನು ಇಷ್ಟಪಡದ ಸಾಂಪ್ರದಾಯಿಕ ಕುಟುಂಬಗಳು, ಸಮುದಾಯಗಳು, ತಮ್ಮ ಹಾದಿಗೆ ಅಡ್ಡಿಯಾಗುತ್ತಿರುವುದನ್ನು ಮಾರುಕಟ್ಟೆ ಮತ್ತು ರಾಜ್ಯವ್ಯವಸ್ಥೆ ಪ್ರಾರಂಭದಲ್ಲೇ ಕಂಡುಕೊಂಡವು. ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯಿಂದಾಗಿ ತಮ್ಮ ಮುಂದಿನ ಪೀಳಿಗೆಗಳು, ಸೇನೆಗೆ ಭರ್ತಿಯಾಗುವುದನ್ನು ಅಥವಾ ಬೇರುಗಳಿಲ್ಲದ, ನಗರದ ಶ್ರಮಜೀವಿಗಳ ವರ್ಗಕ್ಕೆ ಸೇರಿಹೋಗುವುದನ್ನು ಪೊಷಕರು, ಸಮುದಾಯಗಳ ಹಿರಿಯರು ಇಷ್ಟಪಡುತ್ತಿರಲಿಲ್ಲ.

ಕಾಲಕ್ರಮೇಣ, ರಾಜ್ಯವ್ಯವಸ್ಥೆ ಮತ್ತು ಮಾರುಕಟ್ಟೆಗಳು ತಮ್ಮ ವೃದ್ಧಿಸುತ್ತಿದ್ದ ಶಕ್ತಿಯನ್ನು ಬಳಸಿ, ಕುಟುಂಬ ಮತ್ತು ಸಮುದಾಯಗಳ ಬಂಧಗಳನ್ನು ದುರ್ಬಲಗೊಳಿಸತೊಡಗಿದವು. ರಾಜ್ಯವ್ಯವಸ್ಥೆ ಕುಟುಂಬ ಕಲಹಗಳನ್ನು ತಡೆಯಲು ಪೋಲೀಸ್ ಬಲವನ್ನು ಬಳಸತೊಡಗಿತು. ಸಾಮುದಾಯಿಕ ನ್ಯಾಯನಿರ್ಣಯದ ಸ್ಥಾನದಲ್ಲಿ ನ್ಯಾಯಾಲಯಗಳ ತೀರ್ಪುಗಳನ್ನು ಪರಿಚಯಿಸಿತು. ದೀರ್ಘಕಾಲದ ಸ್ಥಳೀಯ ಸಂಪ್ರದಾಯಗಳನ್ನು ತೊಡೆದು ಹಾಕುವುದಕ್ಕಾಗಿ, ಅವುಗಳ ಜಾಗದಲ್ಲಿ ಸದಾ ಬದಲಾಗುವ ವ್ಯಾಪಾರೀ ಫ್ಯಾಷನ್‌ಗಳನ್ನು ಪರಿಚಯಿಸುವುದಕ್ಕಾಗಿ, ಮಾರುಕಟ್ಟೆಯು ಸಂಚಾರಿವ್ಯಾಪಾರಿಗಳನ್ನು ಕಳುಹಿಸಿತು. ಇಷ್ಟಾದರೂ, ಕುಟುಂಬ ಮತ್ತು ಸಮುದಾಯಗಳ ಬಲವನ್ನು ಕುಗ್ಗಿಸುವುದಕ್ಕಾಗಿ, ಅವುಗಳ ವಿರುದ್ಧ ಒಳಗಿನಿಂದಲೇ ಕೆಲಸ ಮಾಡುವ ಐದನೆಯ ಕಾಲಂ ಒಂದರ ಅಗತ್ಯ ಅವರಿಗಿತ್ತು. ಅದಕ್ಕಾಗಿ, ನಿರಾಕರಿಸಲು ಸಾಧ್ಯವಿಲ್ಲದಂತಹ ಪ್ರಸ್ತಾಪವೊಂದನ್ನು ರಾಜ್ಯವ್ಯವಸ್ಥೆ ಮತ್ತು ಮಾರುಕಟ್ಟೆಗಳು, ಕುಟುಂಬ ಮತ್ತು ಸಮುದಾಯಗಳ ಮುಂದೆ ಇರಿಸಿದವು. ಅದೇ ವೈಯಕ್ತಿಕತೆ. ನೀವು ಯಾರನ್ನು ಬೇಕಾದರೂ ಮದುವೆಯಾಗಬಹುದು, ಅದಕ್ಕೆ ನಿಮ್ಮ ತಂದೆ ತಾಯಿಯರ ಸಮ್ಮತಿಯ ಅಗತ್ಯವಿಲ್ಲ ಎನ್ನಲಾಯಿತು. ನಿಮ್ಮ ಸಮುದಾಯದ ಹಿರಿಯರು ಮುಖ ಗಂಟಿಕ್ಕಿದರೂ ಚಿಂತೆಯಿಲ್ಲ, ನಿಮಗೆ ಬೇಕಾದ ಕೆಲಸಕ್ಕೆ ಸೇರಿ. ನಿಮಗೆಲ್ಲಿ ಬೇಕೋ ಅಲ್ಲಿ ಬದುಕಿ, ಕುಟುಂಬದೊಂದಿಗೆ ಪ್ರತಿವಾರ ಊಟಕ್ಕೆ ಇರಲು ಸಾಧ್ಯವಾಗದಿದ್ದರೂ ಚಿಂತೆಯಿಲ್ಲ. ನೀವು ನಿಮ್ಮ ಕುಟುಂಬ ಅಥವಾ ಸಮುದಾಯದ ಮೇಲೆ ಅವಲಂಬಿಸಿಲ್ಲ. ಪ್ರತಿಯಾಗಿ ನಾವು ಅಂದರೆ ಪ್ರಭುತ್ವ ಮತ್ತು ಮಾರುಕಟ್ಟೆ ನಿಮ್ಮ ಜವಾಬ್ದಾರಿ ಹೊರುತ್ತೇವೆ. ನಿಮಗೆ ಆಹಾರ, ವಸತಿ, ಶಿಕ್ಷಣ, ಆರೋಗ್ಯ ಸೇವೆ, ಕಲ್ಯಾಣ, ಉದ್ಯೋಗಗಳನ್ನು ನಾವು ನೀಡುತ್ತೇವೆ.



ನಾವು ಪಿಂಚಣಿ, ವಿಮೆ, ಮತ್ತು ರಕ್ಷಣೆಯನ್ನು ನೀಡುತ್ತೇವೆ ಎನ್ನಲಾಯಿತು.

ರಮ್ಯ ಸಾಹಿತ್ಯವು, ವ್ಯಕ್ತಿಯನ್ನು ಸದಾ ಪ್ರಭುತ್ವ ಮತ್ತು ಮಾರುಕಟ್ಟೆಗಳ ವಿರುದ್ಧದ ಸಂಘರ್ಷದಲ್ಲಿ ಸಿಕ್ಕಿ ಹಾಕಿಕೊಂಡವನು ಎಂಬಂತೆ ಚಿತ್ರಿಸುತ್ತದೆ. ಸತ್ಯಕ್ಕೆ ಇದಕ್ಕಿಂತ ಹತ್ತಿರವಾದ ಸಂಗತಿ ಇರಲಾರದು. ಪ್ರಭುತ್ವ ಮತ್ತು ಮಾರುಕಟ್ಟೆಗಳೇ ವ್ಯಕ್ತಿಯ ಅಪ್ಪ ಅಮ್ಮಂದಿರು, ಅವರಿಂದಾಗಿ ಮಾತ್ರವೇ ವ್ಯಕ್ತಿ ಉಳಿಯಬಲ್ಲ. ಮಾರುಕಟ್ಟೆಯು ನಮಗೆ ಕೆಲಸ, ವಿಮೆ ಮತ್ತು ಪಿಂಚಣಿಯನ್ನು ನೀಡುತ್ತದೆ. ನಾವೊಂದು ಕಸುಬನ್ನು ಕಲಿಯಬೇಕೆಂದರೆ ಅದನ್ನು ಕಲಿಸಲು ನಮಗೆ ಸರ್ಕಾರಿ ಶಾಲೆಗಳಿವೆ. ನಾವು ಒಂದು ವ್ಯವಹಾರವನ್ನು ಪ್ರಾರಂಭಿಸಬೇಕೆಂದರೆ, ಬ್ಯಾಂಕು ನಮಗೆ ಸಾಲ ನೀಡುತ್ತದೆ. ಮನೆ ಕಟ್ಟಬೇಕೆಂದರೆ ಒಂದು ನಿರ್ಮಾಣಸಂಸ್ಥೆ ಅದನ್ನು ನಿರ್ಮಿಸಿಕೊಡುತ್ತದೆ, ಕೆಲವೊಮ್ಮೆ ಸರ್ಕಾರದ ಸಹಾಯಧನ ಅಥವಾ ವಿಮೆಯನ್ನು ನೀಡುವ ಅಡಮಾನವನ್ನು ಬ್ಯಾಂಕ್ ದೊರಕಿಸಿ ಕೊಡುತ್ತದೆ. ಹಿಂಸೆಯೇನಾದರೂ ಸ್ಫೋಟಿಸಿದಲ್ಲಿ ಸರ್ಕಾರವು ನಮಗೆ ರಕ್ಷಣೆ ನೀಡುತ್ತದೆ. ನಾವು ಕೆಲವು ದಿನ ಅನಾರೋಗ್ಯದಿಂದ ಮಲಗಿದರೆ ನಮ್ಮ ಆರೋಗ್ಯ ವಿಮೆ ನಮ್ಮ ಕಾಳಜಿ ವಹಿಸುತ್ತದೆ. ನಾವೇನಾದರೂ ತಿಂಗಳುಗಳ ಕಾಲ ನಿಶ್ಶಕ್ತರಾದರೆ, ಸಾಮಾಜಿಕ ಭದ್ರತೆ ನಮ್ಮ ನೆರವಿಗೆ ಬರುತ್ತದೆ. ದಿನಪೂರ್ತಿ ನಮ್ಮನ್ನು ನೋಡಿಕೊಳ್ಳುವವರ ಅಗತ್ಯ ಬಿದ್ದರೆ ಮಾರುಕಟ್ಟೆಯಲ್ಲಿ ದೊರೆಯುವ ಶುಶ್ರೂಷಕರನ್ನು ನಾವು ನೇಮಿಸಿಕೊಳ್ಳಬಹುದು – ಜಗತ್ತಿನ ಮತ್ತೊಂದು ಭಾಗದಿಂದ ಬಂದಿರಬಹುದಾದ, ಅಪರಿಚಿತರಾದ ಇವರು ಸಾಮಾನ್ಯವಾಗಿ ನಮ್ಮ ಮಕ್ಕಳಿಂದ ಕೂಡ ನಿರೀಕ್ಷಿಸಲಾಗದ ಮಟ್ಟಿಗಿನ ನಿಷ್ಠೆಯಿಂದ ನಮ್ಮನ್ನು ನೋಡಿಕೊಳ್ಳುತ್ತಾರೆ. ನಮ್ಮಲ್ಲಿ ಹಣವಿದ್ದರೆ ವೃದ್ಧಾಶ್ರಮದಲ್ಲಿ ನಮ್ಮ ಸುವರ್ಣ ಕಾಲವನ್ನು ಕಳೆಯಬಹುದು. ತೆರಿಗೆ ಅಧಿಕಾರಿಗಳು ನಮ್ಮನ್ನು ವ್ಯಕ್ತಿಗಳನ್ನಾಗಿ ಪರಿಗಣಿಸುತ್ತಾರೆ. ನಮ್ಮ ನೆರೆಯವನ ತೆರಿಗೆಯನ್ನು ನಾವು ಕೊಡಬೇಕಾಗಿಲ್ಲ. ಕೋರ್ಟುಗಳು ಕೂಡ ನಮ್ಮನ್ನು ವ್ಯಕ್ತಿಗಳನ್ನಾಗಿ ಪರಿಗಣಿಸುತ್ತವೆ, ನನ್ನ ಸಹೋದರ ಮಾಡಿದ ಅಪರಾಧಕ್ಕಾಗಿ ನನಗೆ ಶಿಕ್ಷೆ ನೀಡುವುದಿಲ್ಲ.

ಪ್ರೌಢ ಪುರುಷರನ್ನು ಮಾತ್ರವಲ್ಲದೆ, ಮಕ್ಕಳು ಮತ್ತು ಮಹಿಳೆಯರನ್ನೂ ವ್ಯಕ್ತಿಗಳೆಂದು ಗುರುತಿಸಲಾಗುತ್ತದೆ. ಇತಿಹಾಸದ ಉದ್ದಕ್ಕೂ ಬಹುತೇಕ ಮಹಿಳೆಯರನ್ನು ಕುಟುಂಬದ ಆಸ್ತಿ ಅಥವಾ ಒಂದು ಸರಕು ಎಂಬಂತೆ ಕಾಣಲಾಗಿದೆ. ಇದಕ್ಕೆ ಬದಲಾಗಿ ಆಧುನಿಕ ರಾಜ್ಯವ್ಯವಸ್ಥೆಯು ಮಹಿಳೆಯರನ್ನು ಅವರ ಕುಟುಂಬ ಮತ್ತು ಸಮುದಾಯಗಳಿಂದ ಸ್ವತಂತ್ರರಾಗಿ ಆರ್ಥಿಕ ಹಾಗೂ ಕಾನೂನುಬದ್ಧ ಹಕ್ಕುಗಳನ್ನು ಹೊಂದಿದ ವ್ಯಕ್ತಿಗಳೆಂಬಂತೆ ಕಾಣುತ್ತದೆ. ಅವರು ತಮ್ಮದೇ ಬ್ಯಾಂಕ್ ಖಾತೆಗಳನ್ನು ಹೊಂದಬಹುದು, ಯಾರನ್ನು ಮದುವೆಯಾಗಬೇಕೆಂದು ತೀರ್ಮಾನಿಸಬಹುದು, ವಿಚ್ಛೇದನ ಪಡೆಯಬೇಕೇ ಅಥವಾ ಜೊತೆಯಲ್ಲಿ ಬದುಕಬೇಕೇ ಎಂಬುದನ್ನು ಅವರೇ ತೀರ್ಮಾನಿಸಬಹುದು.

ಆದರೆ, ಸ್ವಾತಂತ್ರ್ಯ ಪಡೆಯಲು ವ್ಯಕ್ತಿ ಒಂದು ಬೆಲೆ ತೆರಬೇಕಾಗುತ್ತದೆ. ಸದೃಢ ಕುಟುಂಬ ಮತ್ತು ಸಮುದಾಯಗಳು ಕಣ್ಮರೆಯಾಗಿರುವುದನ್ನು ಕುರಿತು ನಮ್ಮಲ್ಲಿ ಬಹಳ ಜನ ಸಂಕಟಪಡುತ್ತೇವೆ, ವ್ಯಕ್ತಿಸ್ವರೂಪವಿಲ್ಲದ(impersonal) ಪ್ರಭುತ್ವ ಮತ್ತು ಮಾರುಕಟ್ಟೆಗಳು ನಮ್ಮ ಬದುಕಿನ ಮೇಲೆ ಚಲಾಯಿಸುವ ಅಧಿಕಾರಗಳನ್ನು ಕಂಡು ಭಯಪಡುತ್ತೇವೆ. ಪ್ರಬಲವಾದ ಕುಟುಂಬಗಳು ಮತ್ತು ಸಮುದಾಯಗಳಿಂದ ನಿರ್ಮಾಣವಾದ ಪ್ರಭುತ್ವ ಮತ್ತು ಮಾರುಕಟ್ಟೆಗಳು ತಮ್ಮ ಸದಸ್ಯರ ಜೀವನದಲ್ಲಿ ಮಧ್ಯಪ್ರವೇಶಿಸುವುದಕ್ಕಿಂತ ಹೆಚ್ಚು ಸುಲಭವಾಗಿ, ಅನ್ಯರಾದ (ಚಿಟುಜಟಚಿಣಜಜ) ವ್ಯಕ್ತಿಗಳಿಂದ ನಿರ್ಮಾಣವಾದ ಪ್ರಭುತ್ವ ಮತ್ತು ಮಾರುಕಟ್ಟೆಗಳು ತಮ್ಮ ಸದಸ್ಯರ ಜೀವನದಲ್ಲಿ ಮಧ್ಯಪ್ರವೇಶ ಮಾಡಬಲ್ಲವು. ಒಂದು ಬಹುಮಹಡಿ ಕಟ್ಟಡದಲ್ಲಿ ವಾಸಿಸುವ ನೆರೆಹೊರೆಯವರು ತಮ್ಮ ಜಾಡಮಾಲಿಗೆ ಎಷ್ಟು ಸಂಬಳ ಕೊಡಬೇಕೆಂಬ ವಿಚಾರದಲ್ಲಿ ಒಮ್ಮತಕ್ಕೆ ಬರಲಾಗದಿರುವಾಗ, ಪ್ರಭುತ್ವವನ್ನು ವಿರೋಧಿಸುವ ವಿಚಾರದಲ್ಲಿ ಅವರು ಒಮ್ಮತಕ್ಕೆ ಹೇಗೆ ಬಂದಾರು?

ರಾಜ್ಯವ್ಯವಸ್ಥೆ, ಮಾರುಕಟ್ಟೆ, ಮತ್ತು ವ್ಯಕ್ತಿಗಳ ನಡುವಿನ ವ್ಯವಹಾರವು ಅಹಿತವಾದುದು. ರಾಜ್ಯವ್ಯವಸ್ಥೆ ಮತ್ತು ಮಾರುಕಟ್ಟೆಗಳು ತಮ್ಮ ಪರಸ್ಪರ ಹಕ್ಕುಗಳು ಮತ್ತು ಜವಾಬ್ದಾರಿಗಳ ಬಗ್ಗೆ ಒಮ್ಮತ ಹೊಂದಿಲ್ಲ. ಮತ್ತು ಈ ರಾಜ್ಯವ್ಯವಸ್ಥೆ ಮತ್ತು ಮಾರುಕಟ್ಟೆಗಳೆರಡೂ ನಮ್ಮಿಂದ ಅತಿ ಹೆಚ್ಚು ತೆಗೆದುಕೊಳ್ಳುತ್ತವೆ ಮತ್ತು ನಮಗೆ ಅತಿ ಕಡಿಮೆ ನೀಡುತ್ತವೆ ಎಂದು ವ್ಯಕ್ತಿಗಳು ದೂರುತ್ತಾರೆ. ಹಲವು ಸಂದರ್ಭಗಳಲ್ಲಿ ಮಾರುಕಟ್ಟೆಗಳು ವ್ಯಕ್ತಿಗಳನ್ನು ಶೋಷಿಸುತ್ತವೆ, ರಾಜ್ಯವ್ಯವಸ್ಥೆಗಳು ತಮ್ಮ ಸೈನ್ಯ, ಪೋಲೀಸ್ ಬಲ ಮತ್ತು ಅಧಿಕಾರಶಾಹಿಯನ್ನು ವ್ಯಕ್ತಿಗಳಿಗೆ ರಕ್ಷಣೆ ಒದಗಿಸುವುದಕ್ಕಾಗಿ ಬಳಸುವುದಕ್ಕೆ ಪ್ರತಿಯಾಗಿ, ವ್ಯಕ್ತಿಗಳನ್ನು ಹಿಂಸಿಸುವುದಕ್ಕೆ ಬಳಸುತ್ತವೆ. ಆದರೂ, ಅಸಮರ್ಪಕವಾಗಿಯಾದರೂ, ಈ ವ್ಯವಹಾರ ನಡೆಯುತ್ತದೆ ಎಂಬುದೇ ಒಂದು ಆಶ್ಚರ್ಯ. ಏಕೆಂದರೆ ಅದು ಅಸಂಖ್ಯಾತ ತಲೆಮಾರುಗಳ ಮನುಷ್ಯರ ಸಾಮಾಜಿಕ ವ್ಯವಸ್ಥೆಯನ್ನು ಛಿದ್ರಗೊಳಿಸುತ್ತದೆ. ಮಿಲಿಯಾಂತರ ವರ್ಷಗಳ ವಿಕಾಸವು, ಸಮುದಾಯಗಳ ಸದಸ್ಯರಾಗಿ ಒಂದು ರೀತಿಯಲ್ಲಿ ಬದುಕಲು ಯೋಚಿಸಲು ನಮಗೆ ಕಲಿಸಿದೆ. ಆದರೆ ಬರೀ ಎರಡು ಶತಮಾನಗಳಲ್ಲಿ ನಾವು ಪರಕೀಯರಾದ ವ್ಯಕ್ತಿಗಳಾಗಿ ಹೋಗಿದ್ದೇವೆ. ಸಂಸ್ಕೃತಿಯ ಅಗಾಧ ಶಕ್ತಿಗೆ ಇದಕ್ಕಿಂತ ಉತ್ತಮ ಸಾಕ್ಷಿಯಿರಲಾರದು.

ಬಿಡಿಕುಟುಂಬ ಅಂತಿಮವಾಗಿ ಆಧುನಿಕ ಭೂಪ್ರದೇಶದ ಮೇಲಿಂದ ಸಂಪೂರ್ಣವಾಗಿ ಕಣ್ಮರೆಯಾಗಲಿಲ್ಲ. ರಾಜ್ಯವ್ಯವಸ್ಥೆ ಮತ್ತು ಮಾರುಕಟ್ಟೆಗಳು ಕುಟುಂಬದಿಂದ ಆರ್ಥಿಕ ಮತ್ತು ರಾಜಕೀಯ ಜವಾಬ್ದಾರಿಗಳನ್ನು ಕಿತ್ತುಕೊಂಡರೂ ಕೆಲವು ಭಾವನಾತ್ಮಕ ಭಾಗವನ್ನು ಉಳಿಸಿದ್ದವು. ರಾಜ್ಯವ್ಯವಸ್ಥೆ ಮತ್ತು ಮಾರುಕಟ್ಟೆಗಳಿಗೆ ಸಾಧ್ಯವಿಲ್ಲದ (ಇಲ್ಲಿಯವರೆಗೆ) ಆತ್ಮೀಯತೆಯ ಭಾವನಾತ್ಮಕ ಅಗತ್ಯಗಳನ್ನು ಆಧುನಿಕ ಕುಟುಂಬವು ಪೂರೈಸಬೇಕೆಂದು ನಿರೀಕ್ಷಿಸಲಾಗುತ್ತದೆ. ಆದರೂ ಇಲ್ಲೂ ಸಹ ಕುಟುಂಬಗಳು ಅತಿಯಾದ ಮಧ್ಯಪ್ರವೇಶಕ್ಕೆ ಒಳಪಡುತ್ತವೆ. ಹಿಂದೆಂದೂ ಇರದಿದ್ದ ಮಟ್ಟದಲ್ಲಿ ಮಾರುಕಟ್ಟೆಯು, ಜನರ ಪ್ರಣಯ ಮತ್ತು ಲೈಂಗಿಕ ಜೀವನವನ್ನು ರೂಪಿಸುತ್ತದೆ. ಸಾಂಪ್ರದಾಯಿಕವಾಗಿ ಕುಟುಂಬವು ಜೋಡಿ ಕುದುರಿಸುವ(matchmaker) ಮುಖ್ಯ ಪಾತ್ರಧಾರಿಯಾಗಿದ್ದರೆ, ಇಂದು ಮಾರುಕಟ್ಟೆಯು ನಮ್ಮ ಪ್ರಣಯ ಮತ್ತು ಲೈಂಗಿಕ ಆಯ್ಕೆಗಳನ್ನು ನಿರ್ಧರಿಸುತ್ತದೆ ಮತ್ತು ಅವನ್ನು ಒದಗಿಸುವಲ್ಲಿ ಸಹಾಯಹಸ್ತ ನೀಡುತ್ತದೆ – ಒಂದು ಭಾರೀ ಶುಲ್ಕದೊಂದಿಗೆ. ಹಿಂದೆಲ್ಲಾ ವಧು ಮತ್ತು ವರರು ಕುಟುಂಬದ ಹಜಾರದಲ್ಲಿ ಭೇಟಿಯಾಗುತ್ತಿದ್ದರು, ಹಣವು ಒಬ್ಬ ತಂದೆಯ ಕೈಯಿಂದ ಮತ್ತೊಬ್ಬ ತಂದೆಯ ಕೈಗೆ ಹಸ್ತಾಂತರವಾಗುತ್ತಿತ್ತು. ಇಂದು ಪ್ರೇಮ ವ್ಯವವಹಾರ (courting) ಬಾರ್‌ಗಳಲ್ಲಿ, ಕೆಫೆಗಳಲ್ಲಿ ನಡೆಯುತ್ತದೆ, ಹಣವು ಪ್ರೇಮಿಯ ಕೈಯಿಂದ ಕೆಫೆಯ ಪರಿಚಾರಕರ ಕೈಗೆ ದಾಟುತ್ತದೆ. ಮಾರುಕಟ್ಟೆಯ ಸೌಂದರ್ಯದ ಕಲ್ಪನೆಗೆ ಎಷ್ಟು ಸಾಧ್ಯವೋ ಅಷ್ಟು ಹತ್ತಿರವಾಗಿ ನಾವು ಕೆಫೆಗೆ ಬರಲು ಸಹಾಯಮಾಡುವ, ಫ್ಯಾಷನ್ ಡಿಸೈನರ್‌ಗಳ, ಜಿಮ್ ಮ್ಯಾನೇಜರ್‌ಗಳ, ಡಯಟೀಷಿಯನ್‌ಗಳ, ಪ್ರಸಾಧನದವರ (ಛಿಥಿಟಜಿಣಉಛಿಚಿಟ) ಪ್ಲಾಸ್ಟಿಕ್ ಸರ್ಜನ್‌ಗಳ, ಬ್ಯಾಂಕ್ ಖಾತೆಗಳಿಗೆ ಇನ್ನೂ ಹೆಚ್ಚು ಹಣ ಹರಿಯುತ್ತದೆ. ರಾಜ್ಯವ್ಯವಸ್ಥೆಯು ಕೌಟುಂಬಿಕ ಸಂಬಂಧಗಳ ಮೇಲೆ, ವಿಶೇಷವಾಗಿ ಅಪ್ಪ ಅಮ್ಮಂದಿರು ಮತ್ತು ಮಕ್ಕಳ ಸಂಬಂಧಗಳ ಮೇಲೆ, ಇನ್ನೂ ಹೆಚ್ಚು ತೀವ್ರವಾಗಿ ದೃಷ್ಟಿ ಇರಿಸುತ್ತದೆ. ಪೋಷಕರು ತಮ್ಮ ಮಕ್ಕಳನ್ನು ಸಾರ್ವಜನಿಕ ಶಿಕ್ಷಣ ಪಡೆಯಲು ಕಳುಹಿಸಬೇಕೆಂದು ಒತ್ತಾಯಿಸುತ್ತದೆ. ತಮ್ಮ ಮಕ್ಕಳನ್ನು ಹಿಂಸಿಸುವ, ತೊಂದರೆ ಕೊಡುವ, ತಂದೆ ತಾಯಂದಿರನ್ನು ರಾಜ್ಯವು ನಿರ್ಬಂಧಿಸಬಯಸುತ್ತದೆ. ಅಗತ್ಯ ಬಂದಲ್ಲಿ ರಾಜ್ಯವು ತಂದೆ ತಾಯಂದಿರನ್ನು ಬಂಧಿಸಲೂಬಹುದು ಅಥವಾ ಮಕ್ಕಳನ್ನು ಬೇರೆ ಪೋಷಕ ಕುಟುಂಬಕ್ಕೆ ವರ್ಗಾಯಿಸಬಹುದು. ಇತ್ತೀಚಿನವರೆಗೂ ಕೂಡ, ತಂದೆ ತಾಯಂದಿರು ತಮ್ಮ ಮಕ್ಕಳಿಗೆ ಏಟು ಕೊಡುವುದನ್ನು, ಅಥವಾ ಅವಮಾನಿಸುವುದನ್ನು ರಾಜ್ಯವು ತಡೆಯಬೇಕೆಂಬ ಸೂಚನೆಯನ್ನು ಹಾಸ್ಯಾಸ್ಪದವೂ ಕಾರ್ಯಸಾಧ್ಯವಾದುದಲ್ಲವೆಂದೂ ತಳ್ಳಿ ಹಾಕಲಾಗುತ್ತಿತ್ತು. ಹಲವಾರು ಸಮುದಾಯಗಳಲ್ಲಿ ತಂದೆತಾಯಿಯರ ಅಧಿಕಾರವು ಪವಿತ್ರವಾದುದೆಂದು ಪರಿಗಣಿಸಲಾಗುತ್ತಿತ್ತು. ತಂದೆ ತಾಯಂದಿರಿಗೆ ಗೌರವ ನೀಡುವುದು, ಅವರಿಗೆ ವಿಧೇಯರಾಗಿರುವುದೂ ಬಹಳ ಶ್ರೇಷ್ಠ ಮೌಲ್ಯವೆಂದು ಪರಿಗಣಿಸಲಾಗುತ್ತಿತ್ತು. ತಂದೆತಾಯಂದಿರು ತಮ್ಮ ನವಜಾತ ಶಿಶುಗಳ ಜೀವಹರಣ ಮಾಡುವುದು, ಮಕ್ಕಳನ್ನು ಜೀತದಾಳಾಗಿ ಮಾರುವುದು, ತಮ್ಮ ವಯಸ್ಸಿನ ಎರಡರಷ್ಟು ವಯಸ್ಸಾದವನಿಗೆ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಡುವುದೂ ಒಳಗೊಂಡಂತೆ ಏನು ಬೇಕಾದರೂ ಮಾಡಬಹುದಾಗಿತ್ತು. ಆದರೆ ಇಂದು ತಂದೆತಾಯಂದಿರ ಅಧಿಕಾರವು ಪೂರ್ಣವಾಗಿ ಹಿಂದಕ್ಕೆ ಸರಿಯುತ್ತಿದೆ. ತಮ್ಮ ತಂದೆತಾಯಂದಿರಿಗೆ ವಿಧೇಯರಾಗಿರಬೇಕಾದ ನಿರ್ಬಂಧದಿಂದ ಯುವಕರಿಗೆ ಮುಕ್ತಿ ನೀಡಲಾಗುತ್ತಿದೆ. ಹಾಗೆಯೇ ಮಕ್ಕಳ ಜೀವನದಲ್ಲಿ ಏನೇ ತೊಂದರೆಯಾದರೂ ಅದಕ್ಕೆ ಪೋಷಕರೇ ಕಾರಣವೆಂದು ದೂಷಿಸಲಾಗುತ್ತಿದೆ. ಸ್ಟಾಲಿನಿಸ್ಟ್ ಕೋರ್ಟ್ ರೂಂನ ವಿಚಾರಣೆಯ ಪ್ರದರ್ಶನದಲ್ಲಿ ಪ್ರತಿವಾದಿಯು ಬಚಾವಾಗುವುದು ಎಷ್ಟು ಸಾಧ್ಯವೋ, ಅಮ್ಮ ಅಪ್ಪಂದಿರು ಫ್ರಾಯ್ಡಿಯನ್ ಕೋರ್ಟ್‌ರೂಂನಿಂದ ಬಚಾವಾಗುವುದೂ ಅಷ್ಟೇ ಸಾಧ್ಯ. *

ವಿಜ್ಞಾನ ಮತ್ತು ಬಂಡವಾಳಶಾಹಿ ರಾಜಕಾರಣ

-ರಾಬಿನ್ ಅರಿಯಾನ್‌ರೋಡ್




ವಿಜ್ಞಾನ ಮತ್ತು ತಂತ್ರಜ್ಞಾನಗಳು ಮನುಷ್ಯನ ಬದುಕನ್ನು ಉತ್ತಮಪಡಿಸಲು ನೆರವಾಗಿವೆಯಾದರೂ, ಅವು ನಿಧಾನವಾಗಿ ಅವನ ಬದುಕನ್ನು, ಅದರ ಗುರಿ-ಉದ್ದೇಶಗಳನ್ನು, ಅದರ ನೀತಿಗಳನ್ನು ಪ್ರಭಾವಿಸುವ ಮೂಲಕ ಬದಲಿಸುತ್ತಾ ತಮ್ಮ ಅಡಿಯಾಳನ್ನಾಗಿ ಮಾಡಿಕೊಳ್ಳುತ್ತಿರುವ ಸತ್ಯವೂ ನಮಗೆ ಇತ್ತೀಚೆಗೆ ಗೋಚರಿಸುತ್ತಿದೆ. ಇದಕ್ಕೆ ಮುಖ್ಯ ಕಾರಣ ವಿಜ್ಞಾನ ಮತ್ತು ಅದರ ಅನ್ವಯ ಜ್ಞಾನವಾದ ತಂತ್ರಜ್ಞಾನ ಬಂಡವಾಳದ ಮಡಿಲಲ್ಲೇ ಹುಟ್ಟಿ ಬೆಳೆದವು ಎಂಬುದು. ಹಾಗಾಗಿ ಬಂಡವಾಳದ ಹಿತಾಸಕ್ತಿಗಳಿಗನುಗುಣವಾಗಿಯೇ ಅವು ಬೆಳೆಯಬಲ್ಲವು. ಆದರೆ ಪ್ರಜಾಪ್ರಭುತ್ವ ವ್ಯವಸ್ಥೆ ಬೆಳೆದು ಬಂದಮೇಲೆ ಅವನ್ನು ಬಂಡವಾಳದ ದಾಕ್ಷಿಣ್ಯದಿಂದ ಮುಕ್ತಗೊಳಿಸುವ ಪ್ರಯತ್ನ ಮಾಡಲಾಯಿತಾದರೂ, ಜಾಗತೀಕರಣದ ರಾಜಕಾರಣ ಅಂತಹ ಪ್ರಯತ್ನಗಳನ್ನು ವಿಫಲಗೊಳಿಸುತ್ತಿದೆ. ಈ ರಾಜಕಾರಣದ ಉತ್ಪನ್ನಗಳಾದ ಬೃಹತ್ ಕಾರ್ಪೋರೇಟ್ ಸಂಸ್ಥೆಗಳ ಅಧಿಪತಿಗಳು ವಿಜ್ಞಾನ-ತಂತ್ರಜ್ಞಾನಗಳ ಬೆಳವಣಿಗೆಯ ದಿಕ್ಕು ಮತ್ತು ಆದನ್ನು ನಿರ್ಧರಿಸುತ್ತಾ ವಿಜ್ಞಾನ-ತಂತ್ರಜ್ಞಾನಗಳ ಅನುಕೂಲತೆಗಳಿಗೆ ಶರಣಾಗಿರುವ ಜನರ ಬದುಕನ್ನೇ ತನ್ನ ಬಂಡವಾವನ್ನಾಗಿ ಮಾಡಿಕೊಂಡು ಬೆಳೆಯುತ್ತಿದ್ದಾರೆ. ಇದರಿಂದಾಗಿ ಮಾಹಿತಿ ತಂತ್ರಜ್ಞಾನ ಕಂಪನಿ ಮತ್ತು ಶಸ್ತ್ರಾಸ್ತ್ರ ಉತ್ಪಾದನೆಯ ಕಂಪನಿಗಳು ಇಂದು ಜಗತ್ತಿನ ರಾಜಕಾರಣವನ್ನು ನಿಯಂತ್ರಿಸುವಂತಾಗಿದೆ. ಈ ಸಮಸ್ಯೆಯ ಮೂಲವನ್ನು ಐತಿಹಾಸಿಕವಾಗಿ ಗುರುತಿಸುತ್ತಾ ಹೊರಡುವ ಈ ಲೇಖನ ಇದನ್ನು ಪರಿಹರಿಸುವ ಕೆಲವು ಸೂಚನೆಗಳನ್ನೂ ನೀಡುತ್ತದೆ.-ಸಂ.

ಉನ್ನತ ವಿಜ್ಞಾನ ಮತ್ತು ಬೃಹತ್ ವ್ಯಾಪಾರ ಕೂಡಿದರೆ ಏನಾಗುತ್ತದೆ? ಇದೇ ಇವತ್ತಿನ ನಮ್ಮ ಅನೇಕ ಸಾಮಾಜಿಕ ಆತಂಕಗಳ ಹಿಂದಿರುವ ಮುಖ್ಯ ಕಾಳಜಿಗಳಲ್ಲಿ ಒಂದು: ಔಷಧೀಯ ಕಂಪನಿಗಳು ಜೀವ ಉಳಿಸುವ ಔಷಧಿಗಳಿಗೆ ಅಧಿಕ ಬೆಲೆ ವಿಧಿಸುತ್ತಿರುವುದು, ಅಂತರ್ಜಾಲ ಕಂಪನಿಗಳು ನಮ್ಮ ದತ್ತಾಂಶಗಳನ್ನು ಮಾರಾಟ ಮಾಡುತ್ತಿರುವುದನ್ನು ಗಮನಿಸಿದರೆ, ಆರೋಗ್ಯ ಸೇವೆ ಮತ್ತು ತಂತ್ರಜ್ಞಾನದ ಉದ್ಯಮಗಳು ನಮ್ಮ ಜೀವನದ ಹೆಚ್ಚೆಚ್ಚು ಭಾಗವಾದಷ್ಟೂ ನಮ್ಮ ಆತಂಕಗಳು ಹೆಚ್ಚಾಗುತ್ತಾ ಹೋಗುತ್ತವೆ.

ಇಂದಿನ ತಂತ್ರಜ್ಞಾನದ ಜಗತ್ತಿನಲ್ಲಿ, ನಮ್ಮ ಪ್ರಜಾಪ್ರಭುತ್ವ, ನಮ್ಮ ಖಾಸಗಿತನ, ಮತ್ತು ನಮ್ಮ ಸಮಾಜದ ಮೇಲೆ ಗಮನಾರ್ಹ ಪರಿಣಾಮ ಬೀರುವ ಬಹಳಷ್ಟು ನಿಯಮಗಳನ್ನು ರೂಪಿಸುತ್ತಿರುವುದು, ಸಾರ್ವಜನಿಕರು ಅಥವಾ ನಮ್ಮ ಸರ್ಕಾರಗಳಿಗಿಂತ ಹೆಚ್ಚಾಗಿ ಬೃಹತ್ ಕಾರ್ಪೊರೇಟ್ ಉದ್ಯಮಗಳು. ತಂತ್ರಜ್ಞಾನ ಚಾಲಿತ ಸಾಮಾಜಿಕ ಬದಲಾವಣೆಯನ್ನು ತರುವ ಈ ರೀತಿಯ ಕಾರ್ಪೊರೇಟ್ ನಿಯಂತ್ರಣವು ಹೊಸದು ಮತ್ತು ವಿಪರೀತವಾದದ್ದು. ಎನ್ನುವುದು ನಮ್ಮಲ್ಲಿನ ಅನೇಕರ ಭಾವನೆ. ಖಂಡಿತವಾಗಿಯೂ ಅನೇಕ ರೀತಿಗಳಲ್ಲಿ ಅದು ಹಾಗಿರುವುದು ನಿಜವೇ. ಆದರೆ ಬಂಡವಾಳಶಾಹಿ ಉದ್ಯಮಗಳು, ವಿಜ್ಞಾನ ಮತ್ತು ತಂತ್ರಜ್ಞಾನದ ಅಭಿವೃದ್ಧಿಯಲ್ಲಿ ಭಾಗಿಯಾಗಿರುವ ದೀರ್ಘ ಇತಿಹಾಸವನ್ನು ಹೊಂದಿದ್ದು, ಈ ಇತಿಹಾಸವು ಅಂತಹ ಸಂಬಂಧದ ಅಪಾಯಗಳು ಮತ್ತು ಪ್ರಯೋಜನಗಳೆರಡನ್ನೂ ನಮಗೆ ತೋರಿಸುತ್ತದೆ.

೧೬ ನೇ ಶತಮಾನದ ಉತ್ತರಾರ್ಧದಲ್ಲಿ ಮತ್ತು ೧೭ ನೇ ಶತಮಾನದ ಆರಂಭದಲ್ಲಿ, ಆಧುನಿಕ ವಿಜ್ಞಾನವು ಚಿಗುರೊಡೆಯುತ್ತಿದ್ದಾಗ, ಅತ್ಯಂತ ಸೃಜನಶೀಲ ಚಿಂತಕರಿಗೆ ಹೆಚ್ಚಾಗಿ ಖಾಸಗಿ ವಲಯದಲ್ಲಿ ಉದ್ಯೋಗ ಸಿಕ್ಕಿತು. ಮಧ್ಯಕಾಲೀನ ಮತ್ತು ಆಧುನಿಕದ ನಡುವಿನ ಆ ಪರಿವರ್ತನೆಯ ಯುಗದಲ್ಲಿ, ವಿಶ್ವವಿದ್ಯಾನಿಲಯಗಳು ಇನ್ನೂ ವೈಜ್ಞಾನಿಕ ನಾವೀನ್ಯತೆಗೆ ಇಂಬುಕೊಡುವ ತಾಣಗಳಾಗಿರಲಿಲ್ಲ. ವಿಜ್ಞಾನಿಗಳು ಮತ್ತು ಗೆಲಿಲಿಯೊ ಗೆಲಿಲಿಯಂತಹ ಸಂಶೋಧಕರು, ತಮ್ಮ ವೈಜ್ಞಾನಿಕ ಪ್ರಯೋಗಗಳನ್ನು ಮಾಡಲು ಬೇಕಾದ ಸ್ವಾತಂತ್ರ್ಯಕ್ಕೋಸ್ಕರ ವಾಣಿಜ್ಯವನ್ನು ಮೆಟ್ಟಿಲಾಗಿ ಬಳಸಿದರು. ಗೆಲಿಲಿಯೊ ತಾನು ಆವಿಷ್ಕರಿಸಿದ್ದ ದೂರದರ್ಶಕದ ವಿವಿಧ ಮಾದರಿಗಳನ್ನು ತಯಾರಿಸಿ ಇಟಲಿಯ ತುಂಬೆಲ್ಲ ಮಾರತೊಡಗಿದ್ದು ಸುದ್ದಿಯಾಯಿತು. ಕೊನೆಗೆ ವೈಜ್ಞಾನಿಕ ಸಂಶೋಧನೆಯನ್ನು ಮುಂದುವರಿಸುವ ಸ್ವಾತಂತ್ರ್ಯವನ್ನು ಕೊಡುವ ಶ್ರೀಮಂತ ಪೋಷಕನೊಬ್ಬನು ಅವನಿಗೆ ಸಿಕ್ಕನು.

ಆ ಸಮಯದಲ್ಲಿ ಇಂಗ್ಲೆಂಡಿನಲ್ಲಿ ಈ ರೀತಿಯ ಪ್ರೋತ್ಸಾಹ, ಪೋಷಣೆಗಳು ರಾಣಿಯ ಆಸ್ಥಾನದಿಂದ ಸಿಗುತ್ತಿರಲಿಲ್ಲ. ಏಕೆಂದರೆ ಒಂದನೇ ಎಲಿಜಬೆತ್ ರಾಣಿಯು, ತತ್ವಜ್ಞಾನಿಗಳು ಅಥವಾ ಗಣಿತಜ್ಞರನ್ನು ನೇಮಿಸಿಕೊಳ್ಳುತ್ತಿರಲಿಲ್ಲ. ಹಾಗಾಗಿ ಹೊಸ ತುಡಿತದ ಸೃಜನಶೀಲ ಇಂಗ್ಲಿಷರು ಸಾಮಾನ್ಯವಾಗಿ ಖಾಸಗಿ ಧನಸಹಾಯವನ್ನು ಪಡೆಯುತ್ತಿದ್ದರು.



ಥಾಮಸ್ ಹ್ಯಾರಿಯಟ್ ಸರ್ ವಾಲ್ಟರ್ ರೇಲೀ

ಒಂದನೇ ಎಲಿಜಬೆತ್ ರಾಣಿಯ ಇಂಗ್ಲೆಂಡ್ನಲ್ಲಿ ಅತ್ಯುತ್ತಮ ವೈಜ್ಞಾನಿಕ ಮನಸ್ಥಿತಿಯಿದ್ದ ಥಾಮಸ್ ಹ್ಯಾರಿಯಟ್‌ಗೆ ಇದ್ದದ್ದು ಈ ಪರಿಸ್ಥಿತಿ. ಹಾಗಾಗಿ ಅವರು ತಮ್ಮ ವೈಜ್ಞಾನಿಕ ಕೃತಿಗಳನ್ನು ಎಂದಿಗೂ ಪ್ರಕಟಿಸಲಿಲ್ಲ. ಆದ್ದರಿಂದ, ಮನ್ನಣೆ ಪಡೆಯುತ್ತಿದ್ದ ತಮ್ಮ ಸಮಕಾಲೀನ ಜಾಗತಿಕ ವಿಜ್ಞಾನಿಗಳಿಗೆ ಅನೇಕ ವಿಧಗಳಲ್ಲಿ ಸಮಾನರಾಗಿದ್ದೂ ಕೂಡ ಅವರು ಬೆಳಕಿಗೆ ಬರಲು ಸಾಧ್ಯವಾಗಲಿಲ್ಲ. ಕೆಲ ಉದಾಹರಣೆಗಳನ್ನು ನೋಡುವುದಾದರೆ; ಅವರು, ಭೌತ ವಸ್ತುವೊಂದು ಕೆಳ ಬೀಳುವ ಚಲನೆಯ ನಿಯಮವನ್ನು ಕಂಡುಹಿಡಿದರು ಮತ್ತು ಗೆಲಿಲಿಯೊನಿಂದ ಸ್ವತಂತ್ರವಾಗಿ ಚಂದ್ರನ ನಕ್ಷೆಯನ್ನು ತಯಾರು ಮಾಡಲು ದೂರದರ್ಶಕವನ್ನು ಬಳಸಿದ್ದರು; ರೆನೆ ಡೆಕಾರ್ಟ್‌ಗೂ ಮೊದಲು ಸಂಪೂರ್ಣ ಸಾಂಕೇತಿಕ ಬೀಜಗಣಿತವನ್ನು ರೂಪಿಸಿದ್ದರು; ಮತ್ತು ವಿಲ್ಲೆಬ್ರೊರ್ಡ್ ಸ್ನೆಲಿಯಸ್‌ಗೂ ಮೊದಲೇ ವಕ್ರೀಭವನದ ನಿಯಮವನ್ನು ಕಂಡುಹಿಡಿದಿದ್ದರು.

ಹ್ಯಾರಿಯಟ್ ತನ್ನ ವೃತ್ತಿಜೀವನದ ಆರಂಭದಲ್ಲೇ ತನ್ನ ಸಂಶೋಧನೆಯನ್ನು ಪ್ರಕಟಿಸದಿರಲು ಪ್ರಮುಖವಾದ ಒಂದು ಕಾರಣವೆಂದರೆ ಅದರಲ್ಲಿ ಅಡಕವಾಗಿದ್ದ ವಾಣಿಜ್ಯ ಹಿತಾಸಕ್ತಿ. ಮೊದಲಿಗೆ ಅವರು ತಮ್ಮ ವೃತ್ತಿಜೀವನವನ್ನು ೧೫೮೫ ರಲ್ಲಿ ಸರ್ ವಾಲ್ಟರ್ ರೇಲೀ ಅವರ ನೌಕಾಯಾನದ ಸಲಹೆಗಾರರಾಗಿ ಆರಂಭಿಸಿದರು. ಅಮೆರಿಕಾದ ನೆಲದಲ್ಲಿ ಮೊದಲ ಇಂಗ್ಲಿಷ್ ವ್ಯಾಪಾರ ವಸಾಹತಿಗಾಗಿ ರೇಲೀ ತಯಾರಿ ನಡೆಸಿದ್ದರು. ಈಗಿನಂತೆ, ಆಗಿನ ಅನೇಕರು ಒಂದು ದೇಶದ ಉಳಿವಿಗಾಗಿ ಅಂತರರಾಷ್ಟ್ರೀಯ ವ್ಯಾಪಾರ ಬಹಳ ಮುಖ್ಯವೆಂದು ಪರಿಗಣಿಸಿದ್ದರು. ಹಾಗಾಗಿ ಅಂತಹ ವ್ಯಾಪಾರಕ್ಕೆ ಅಂದಿನ ಇಂಗ್ಲೆಂಡಿಗೆ ಹಡಗುಗಳು ಮತ್ತು ತರಬೇತಿ



ಗೆಲಿಲಿಯೋ

ಪಡೆದ ನಾವಿಕರು ಬೇಕಾಗಿದ್ದರು. ಸುರಕ್ಷಿತ ಸಮುದ್ರಯಾನಕ್ಕೆ ಅಗತ್ಯವಾದ ವೈಜ್ಞಾನಿಕ ಸಂಶೋಧನೆಯ ವಿಚಾರಕ್ಕೆ ಬಂದಾಗ, ರೇಲೀಯಂತಹ ಬಂಡವಾಳಶಾಹಿಗಳು ಸ್ವಾಭಾವಿಕವಾಗಿ ಅಂತಹ ಜ್ಞಾನದ ಸಹಾಯದಿಂದ ತಮ್ಮ ಹೂಡಿಕೆಯನ್ನು ರಕ್ಷಿಸಿಕೊಳ್ಳಲು ಬಯಸಿದರು.

ನಾವಿಕರು ತಮ್ಮ ಅಕ್ಷಾಂಶ ಅಥವಾ ರೇಖಾಂಶವನ್ನು ನಿರ್ದಿಷ್ಟ ಪ್ರಮಾಣದಲ್ಲಿ ಬದಲಾಯಿಸಲು ಬಯಸಿದರೆ ಅದಕ್ಕಾಗಿ ಯಾವುದೇ ನಿರ್ದಿಷ್ಟ ದಿಕ್ಕಿನಲ್ಲಿ ಎಷ್ಟು ದೂರ ಪ್ರಯಾಣಿಸಬೇಕು ಎಂಬುದನ್ನು ತೋರಿಸುವ ನಿಖರವಾದ ಲೆಕ್ಕಾಚಾರದ ಕೋಷ್ಟಕವನ್ನು ನಾವಿಕರಿಗೆ ಒದಗಿಸಿದ ಮೊದಲ ವ್ಯಕ್ತಿಯಾದ ಹ್ಯಾರಿಯಟ್‌ಗೆ ಯಾವುದೇ ಸಾರ್ವಜನಿಕ ಮನ್ನಣೆ ದೊರೆಯಲಿಲ್ಲ. ಅಷ್ಟೇ ಅಲ್ಲ, ಉತ್ತರಧ್ರುವ ನಕ್ಷತ್ರದ ಸ್ಥಾನವನ್ನು ಗುರುತಿಸುವ ಕರಾರುವಾಕ್ಕಾದ ಕೋಷ್ಟಕವನ್ನು ತಯಾರಿಸಿ, ಅಕ್ಷಾಂಶವನ್ನು ಲೆಕ್ಕಾಚಾರ ಮಾಡುವಾಗ ಅದನ್ನು ಬಳಸಿಕೊಂಡದ್ದಕ್ಕೆ, ಕಾಂತೀಯ ದಿಕ್ಸೂಚಿಯ ವ್ಯತ್ಯಾಸಗಳನ್ನು ಹೇಗೆ ಸರಿಪಡಿಸುವುದು ಎನ್ನುವ ಸಲಹೆಗಳನ್ನಿತ್ತಿದ್ದಕ್ಕೆ ಮತ್ತು ಹಡಗಿನ ಎತ್ತರವೂ ಕೂಡ ಹೇಗೆ ಖಗೋಳ ಮಾಪನಗಳ ಮೇಲೆ ಪರಿಣಾಮ ಬೀರುತ್ತದೆ ಎನ್ನುವ ಕುರಿತು ಅವರು ನೀಡಿದ ಸಲಹೆಗಳಿಗೆ, ಹಾಗೆಯೇ ನೌಕಾಯಾನವನ್ನು ಹೆಚ್ಚು ನಿಖರಗೊಳಿಸಿದ ಅನೇಕ ಗಣಿತ ಮತ್ತು ಖಗೋಳ ಆಧಾರಿತ ಆವಿಷ್ಕಾರಗಳಿಗಾಗಿ ಕೂಡಾ ಎಂದೂ ಅವರಿಗೆ ಮನ್ನಣೆ ಸಿಗಲಿಲ್ಲ. (ಇಂದು, ಈ ಲೆಕ್ಕಾಚಾರಗಳು ಆಧುನಿಕ ನೌಕಾಯಾನ ತಂತ್ರಜ್ಞಾನಗಳಿಗೆ ಆಧಾರವಾಗಿವೆ.)

ಹ್ಯಾರಿಯಟ್ ಪ್ರಕಟಿಸಿದ ಒಂದು ವಿಷಯವೆಂದರೆ ರೇಲೀಯವರ ವಸಾಹತಾಗಿದ್ದ ಇಂದಿನ ಅಮೆರಿಕಾದ ಉತ್ತರ ಕೆರೊಲಿನಾದಲ್ಲಿರುವ 'ವರ್ಜೀನಿಯಾ' ಕುರಿತ ವಿಸ್ತೃತ ವರದಿ. ಪರಿಣಾಮವಾಗಿ, ಇಂಗ್ಲಿಷ್ ಹಡಗುಗಳು ಸುರಕ್ಷಿತವಾಗಿ ಅಮೆರಿಕಕ್ಕೆ ಬರಲು ಸಹಾಯ ಮಾಡುವುದರ ಜೊತೆಗೆ, ಹ್ಯಾರಿಯಟ್ ಅಮೆರಿಕಾದ ಮೊದಲ ಇಂಗ್ಲಿಷ್ ಕಾಲೋನಿಯಲ್ಲಿ ಮುಖ್ಯ ವಿಜ್ಞಾನಿ, ಭಾಷಾಶಾಸ್ತ್ರಜ್ಞ ಮತ್ತು ರಾಜತಾಂತ್ರಿಕರಾದರು. ಅವರು ಪ್ರಕಟಿಸಿರುವ ವರದಿಯ ಒಂದು ಭಾಗದಲ್ಲಿ, ಉತ್ತರ ಕೆರೊಲಿನಾದ ಅಲ್ಗೊನ್ಕ್ವಿಯನ್ ಇಂಡಿಯನ್ ಮೂಲನಿವಾಸಿಗಳು ಮತ್ತು ಅವರ ಭಾಷೆ, ಸಂಸ್ಕೃತಿಯನ್ನು ಚರ್ಚಿಸಿದ್ದಾರೆ. ಆ ಭಾಗವು, ಆರಂಭಕಾಲದ ಅಮೆರಿಕನ್ ಜನಾಂಗಶಾಸ್ತ್ರದ ಶ್ರೇಷ್ಠ ಬರಹವಾಗಿ ಉಳಿದಿದೆ. ಅದೇನೇ ಇದ್ದರೂ, ರೇಲೀಯ ಸೂಚನೆಗೆ ಅನುಗುಣವಾಗಿ ವ್ಯಾಪಾರಿಗಳು ಮತ್ತು ವಸಾಹತುಶಾಹಿಗಳಿಗೆ ಆಸಕ್ತಿ ಕೆರಳಿಸುವ ಅಲ್ಲಿಯ ನೈಸರ್ಗಿಕ ಸಂಪನ್ಮೂಲಗಳನ್ನು ಪಟ್ಟಿ ಮಾಡುವುದು ಅವರ ವರದಿಯ ಪ್ರಾಥಮಿಕ ಉದ್ದೇಶವಾಗಿತ್ತು.

ರೇಲೀಯ ಅಮೆರಿಕನ್ ವಸಾಹತುಗಳು ವಿಫಲವಾದವು. ಆದರೆ ಹ್ಯಾರಿಯಟ್ ಅವನಿಗಾಗಿ ಮಾಡಿದ ಕೆಲಸವು ಇತರರ ಉದ್ಯಮಸಾಹಸಗಳಿಗೆ ದಾರಿಮಾಡಿಕೊಟ್ಟಿತು. ಇದು ಬಹಳ ದೀರ್ಘಕಾಲ ಇಂಗ್ಲೆಂಡಿನ ಹಿಡಿತವನ್ನು ಹೆಚ್ಚಿಸಿತಷ್ಟೇ ಅಲ್ಲದೆ ಸ್ಥಳೀಯ ಮೂಲನಿವಾಸಿಗಳನ್ನು ಮತ್ತು ಅವರ ಜೀವನ ವಿಧಾನವನ್ನೂ ನಾಶಮಾಡಿತು. ಆ ದಾಖಲೆಯು ಈಗ ರೇಲೀಯ ಪರಂಪರೆಯ ಮೇಲೆ ಕಳಂಕವನ್ನು ಹೊರಿಸುತ್ತದೆ. ಆದರೆ ಆ ಸಮಯದಲ್ಲಿ ಅವನು ಅಂಥ ವಿನಾಶವನ್ನು ಉದ್ದೇಶಿಸಿರಲಿಲ್ಲ ಅಥವಾ ಊಹಿಸಿರಲಿಲ್ಲ. (ಕ್ಯಾಥೊಲಿಕ್ ಐರ್ಲೆಂಡ್‌ನ ಮೇಲಿನ ಇಂಗ್ಲೆಂಡ್‌ನ ಕ್ರೂರ ಆಕ್ರಮಣ ಮತ್ತು ವಿಜಯದಲ್ಲಿ ರೇಲೀಯ ಪಾತ್ರವಿದ್ದದ್ದು ಬೇರೆ ವಿಷಯ. ರೇಲೀಗೆ ವ್ಯಾಪಾರಕ್ಕಿಂತಲೂ ಪ್ರೊಟೆಸ್ಟಂಟ್ ಧಾರ್ಮಿಕತೆಯ ಅತ್ಯುತ್ಸಾಹವಿದ್ದದ್ದು ಈ ಆರೋಪದೊಂದಿಗೆ ತಳುಕುಹಾಕಿಕೊಂಡಿದೆ.) ಅಷ್ಟಾದ ಮೇಲೂ ಇದನ್ನು 'ಹೊಸಶೋಧ' ಮತ್ತು 'ಪ್ರಗತಿ'ಗಾಗಿ ತೆರಬೇಕಾದ ಅತಿಸಣ್ಣ ಬೆಲೆಯಷ್ಟೇ ಎಂದು ಇಂಗ್ಲಿಷರು ಪರಿಗಣಿಸಿದರು.

ವೈಜ್ಞಾನಿಕ ಸಂಶೋಧನೆಗಳು, ಜಾಗತೀಕರಣ ಮತ್ತು ಅನಿಯಂತ್ರಿತ ವಾಣಿಜ್ಯ ವ್ಯವಹಾರಗಳ ಈ ಮಿಶ್ರಣ ಇಂತಹ ಸಂಬಂಧಗಳ ಭೀಕರ ಪರಿಣಾನಾಮಗಳ ಬಗ್ಗೆ ನಮಗೆ ಎಚ್ಚರಿಕೆ ನೀಡುವಂತಿವೆ. ಇದನ್ನು ನಾವು ಬೃಹತ್ ಔಷಧ ಕಂಪನಿಗಳ ಮತ್ತು ಅಂತರ್ಜಾಲ ಸಂಬಂಧಿತ ಕಂಪನಿಗಳ ವಿಷಯದಲ್ಲಿ ಮಾತ್ರವಲ್ಲದೆ ಗಣಿಗಾರಿಕೆ, ಅರಣ್ಯ ನಾಶ, ಪರಿಸರ ಮಾಲಿನ್ಯ ಮತ್ತು ಶಸ್ತ್ರಾಸ್ತ್ರ ವ್ಯಾಪಾರದ ಮೇಲಿನ ಅಸಮರ್ಪಕ ನಿಯಂತ್ರಣವೇ ಬಹುಮಟ್ಟಿಗೆ ಪೋಷಿಸುವ ಸದ್ಯದ ಭೌಗೋಳಿಕ ರಾಜಕೀಯ ಪ್ರಕ್ಷುಬ್ಧತೆಗಳ ವಿಷಯದಲ್ಲಿ ಅಲ್ಪಕಾಲಿಕ ವಾಣಿಜ್ಯ ಉದ್ದೇಶಗಳಿಗಾಗಿ ರಾಜಕೀಯ ಕಾರ್ಯಸೂಚಿಗಳನ್ನು ಪ್ರಭಾವಿಸುವ ವಿಷಯಗಳಿಗೆ ಸಂಬಂಧಿಸಿದಂತೆಯೂ ನಾವು ನೀಡುತ್ತಿದ್ದೇವೆ.

ಇಂಥ ವಿನಾಶವು ಹತ್ತಿರದಲ್ಲಿದ್ದೆ ಎಂಬುದನ್ನು ಇತಿಹಾಸದಿಂದ ನಾವು ತಿಳಿಯಬೇಕಿತ್ತು.. ಉದಾಹರಣೆಗೆ, ೧೬೦೦ರ ದಶಕದ ಆರಂಭದಲ್ಲಿ, ಇಂಗ್ಲೆಂಡ್ ತಾನು ಕಾಲಿಟ್ಟ ಹೊಸ ನೆಲೆಗಳ್ಲಿ ವ್ಯಾಪಾರವನ್ನು ಚುರುಕುಗೊಳಿಸಿ ಪ್ರಗತಿ ಸಾಧಿಸಲು ಈಸ್ಟ್ ಇಂಡಿಯಾ ಮತ್ತು ವರ್ಜೀನಿಯಾ ಕಂಪನಿಗಳನ್ನು ರಚಿಸಿತು. ಆದರೆ ಹೂಡಿಕೆದಾರರ ಲಾಭವನ್ನು ಏಕೈಕ ಗುರಿಯಾಗಿಟ್ಟುಕೊಂಡ ಈ ಕಂಪೆನಿಗಳು, ಬಹಳ ಬೇಗ ಯುದ್ಧ ಮತ್ತು ಗುಲಾಮರ ವ್ಯಾಪಾರ ಸೇರಿದಂತೆ ನಿರ್ದಯ ಮಾರ್ಗಗಳತ್ತ ಹೊರಳಿದವು.

ಹ್ಯಾರಿಯಟ್‌ನ ವೃತ್ತಿಜೀವನವೂ ಕೂಡ, ಕೇವಲ ಲಾಭದೃಷ್ಟಿಯ ಅಥವಾ ಅನಿಯಂತ್ರಿತ ವಿಜ್ಞಾನ ಮತ್ತು ಅನ್ವೇಷಣೆಗಳ ಅಪಾಯಗಳ ಬಗ್ಗೆ ಮತ್ತೊಂದು ಎಚ್ಚರಿಕೆಯ ಸೂಚನೆಯನ್ನು ಕೊಡುತ್ತದೆ. ರೇಲೀಗಾಗಿ ಕೆಲಸ ಮಾಡುವಾಗ ಅವನು ತನ್ನ ಗಣಿತ ಮತ್ತು ಖಗೋಳ ಕೌಶಲ್ಯಗಳನ್ನು ಒರೆಗೆ ಹಚ್ಚಿದರೂ, ತನ್ನ ಅತ್ಯುತ್ತಮ ವೈಜ್ಞಾನಿಕ ಕೆಲಸವನ್ನು ಮಾಡಿದ್ದು ಬೇರೊಬ್ಬ ಪೋಷಕರ ಅಡಿಯಲ್ಲಿ. ಅದು ವೈಜ್ಞಾನಿಕ ಸಂಶೋಧನೆಯನ್ನು ಬರೀ ವಿಜ್ಞಾನದ ಬೆಳವಣಿಗೆಗೋಸ್ಕರವಾಗಿಯೇ ಪ್ರಾಯೋಜಿಸಲು ಬಯಸಿದ್ದ ನಾರ್ತಂಬರ್‌ಲ್ಯಾಂಡಿನ ಶ್ರೀಮಂತ ಮನೆತನದ ಹೆನ್ರಿ ಪರ್ಸಿ ಎಂಬುವವರು ಇವನನ್ನು ನೇಮಿಸಿಕೊಂಡ ಮೇಲೆ. ಆಗಲೇ ಹ್ಯಾರಿಯಟ್ ಶುದ್ಧ ವಿಜ್ಞಾನ ಮತ್ತು ಗಣಿತಶಾಸ್ತ್ರದಲ್ಲಿ ಹೊಸ ಕಲ್ಪನೆಗಳ ಮೂಲಕ ಅನೇಕ ಆವಿಷ್ಕಾರಗಳನ್ನು ಮಾಡಿ ವೈಜ್ಞಾನಿಕ ಸಂಶೋಧನೆಯ ಮಾರ್ಗಪ್ರವರ್ತಕರಲ್ಲಿ ಒಬ್ಬನವನು. ಇದೊಂದು ಮುಕ್ತ ಶೋಧನೆ ತೆರೆದ ಹೊಸಲೋಕ; ವಿಜ್ಞಾನದ ಪ್ರೀತಿಗಾಗಿ ಅಷ್ಟೇ.

ಈಗ ನಮ್ಮ ಕಾಲದಲ್ಲಿ, ಸರ್ಕಾರಗಳು ಇಂತಹ ಮುಕ್ತ-ಸಂಶೋಧನೆಗಳನ್ನು ಪ್ರಾಯೋಜಿಸುತ್ತಿವೆ. ಆದರೆ, ೨೦೧೫ರಲ್ಲಿ, ರಿಸರ್ಚ್ ಅಂಡ್ ಡೆವಲಪ್‌ಮೆಂಟ್‌ನಲ್ಲಿ ಅಮೆರಿಕಾದ ಹೂಡಿಕೆಯು ದಾಖಲೆಯ ಮಟ್ಟವನ್ನು ತಲುಪಿದಾಗ, ಅದರ ಸಿಂಹ ಪಾಲನ್ನು (ಶೇ.೬೯) ಪ್ರಾಯೋಜಿಸಿದ್ದು ವಾಣಿಜ್ಯೋದ್ಯಮ ಸಂಸ್ಥೆಗಳು. ಸರ್ಕಾರದ ಪಾಲು ಕೇವಲ ಶೇಕಡಾ ೨೩ ರಷ್ಟು, ಹಿಂದೆಂದೂ ಇಲ್ಲದಷ್ಟು ಕಡಿಮೆ. ಇದು ನಮ್ಮ ಆತಂಕ. ನಂತರದಲ್ಲಿ ಅಮೆರಿಕಾ ಸರ್ಕಾರದ ಹೂಡಿಕೆಯು ಸ್ವಲ್ಪ ಹೆಚ್ಚಾಯಿತು. ಆದರೂ ತಳಮಟ್ಟದ ಸಂಶೋಧನೆಯಲ್ಲಿ ಹೂಡಿಕೆ ಮತ್ತೆ ಕುಸಿಯುತ್ತಿದೆ.

ವಿಜ್ಞಾನದ ಮೇಲಿನ ಹೂಡಿಕೆಯ ಬಗ್ಗೆ ರಾಜಕೀಯ ಮತ್ತು ವಾಣಿಜ್ಯ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ, ಈ ರೀತಿಯ 'ಶುದ್ಧ' ಸಂಶೋಧನೆಯೂ, ಆರ್ಥಿಕತೆಯನ್ನು ಬಲಪಡಿಸುವ ಕಡೆಗೇ ತಿರುಗಿ ಹೊರಳುತ್ತದೆ ಎಂಬುದನ್ನು ನಾವು ಗಮನಿಸಬೇಕು.. ಏಕೆಂದರೆ ಅದರಲ್ಲಿ ಹೆಚ್ಚಿನವು ಅಂತಿಮವಾಗಿ ತಂತ್ರಜ್ಞಾನಕ್ಕೆ ಅನ್ವಯವಾಗುತ್ತವೆ. ಐತಿಹಾಸಿಕವಾಗಿ ಉದ್ಯಮಿಗಳು ವಿದ್ಯುತ್ ದೀಪಗಳು, ದೂರವಾಣಿ ವ್ಯವಸ್ಥೆಗಳು, ಕಂಪ್ಯೂಟರ್‌ಗಳು ಮತ್ತು ವೈದ್ಯಕೀಯ ತಂತ್ರಜ್ಞಾನಗಳಂತಹ ಕ್ಷೇತ್ರಗಳಲ್ಲೇ ಹೊಸ ಹೆಜ್ಜೆಗಳನ್ನು ಇರಿಸಿರುವುದು. ಇದು ಇತರರ ಕುತೂಹಲಕ್ಕೆ ಚಾಲನೆ ನೀಡುವಂತಹ ಸಂಶೋಧನೆ. ಇಂದು ಶುದ್ಧ ಮತ್ತು ಅನ್ವಯ ಈ ಎರಡೂ ರೀತಿಯ ವಿಜ್ಞಾನಗಳಲ್ಲಿ ಮತ್ತು ಸಾರ್ವಜನಿಕ ಹಾಗೂ ಖಾಸಗಿ ಕ್ಷೇತ್ರಗಳ ಹೂಡಿಕೆಯ ಅಗತ್ಯವಿದೆ.

ಆದರೆ ನಾವು ಸಮತೋಲನವನ್ನು ಕಾಪಾಡಿಕೊಳ್ಳಬೇಕಿದೆ. ಚುನಾಯಿತ ಪ್ರತಿನಿಧಿಗಳು, ಸಾರ್ವಜನಿಕ ವಿಶ್ವವಿದ್ಯಾಲಯಗಳು ನೀತಿ ನಿರೂಪಣೆಗಳ ಮೂಲಕ, ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಹೇಗೆ ಅಭಿವೃದ್ಧಿಪಡಿಸುತ್ತೇವೆ ಮತ್ತು ಬಳಸಬೇಕು ಎಂಬುದರ ಮೇಲೆ ಸ್ವಲ್ಪಮಟ್ಟದ ನಿಯಂತ್ರಣವನ್ನು ಹೊಂದುವ ಅಗತ್ಯವೂ ಇದೆ.



(ರಾಬಿನ್ ಅರಿಯಾನ್‌ರೋಡ್ ಪ್ರಸಿದ್ಧ ವಿಜ್ಞಾನ ಇತಿಹಾಸಕಾರ್ತಿಯಾಗಿ, **'Thomos Harriot: a life in Science'** ಎಂಬ ಪ್ರಸಿದ್ಧ ಕೃತಿಯ ಲೇಖಕಿಯಾಗಿದ್ದು ಇಂಗ್ಲೆಂಡ್‌ನ ಮೊನಾಶ ವಿಶ್ವವಿದ್ಯಾನಿಲಯದಲ್ಲಿ ಗಣಿತಶಾಸ್ತ್ರ ಶಾಲೆಯಲ್ಲಿ ಸಂಶೋಧನಾ ಫೆಲೋ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ)

(ಕನ್ನಡಕ್ಕೆ: ಟಿ.ಎಲ್ ರೇಖಾಂಬ)

ಪರ್ಯಾಯ ಅರ್ಥವ್ಯವಸ್ಥೆಯ ಅನಿವಾರ್ಯತೆ: ಒಂದು ವಿವೇಚನೆ

–ಸಂತೋಷ್ ಕೌಲಗಿ



ಆಧುನಿಕನಾಗುವ ಹಂಬಲದಲ್ಲಿ ತನಗೆ ಗೊತ್ತಿಲ್ಲದಂತೆಯೇ ಮನುಷ್ಯ ತಾನು ಯಾವುದರ ಉತ್ಪನ್ನವೋ ಆ ಪ್ರಕೃತಿಯಿದ ದೂರವಾಗುತ್ತಾ. ಆ ಮೂಲಕ ನೈಸರ್ಗಿಕ ಬದುಕಿನ ಲಯದಿಂದ ಚ್ಯುತನಾಗಿ ಇಂದು ಹಲವು ಆಧುನಿಕ ರೋಗಗಳ ಜಾಲದಲ್ಲಿ ಬಂಧಿತನಾಗಿದ್ದಾನೆ. ಸ್ವಚ್ಛ ಗಾಳಿ, ಬೆಳಕು, ನೀರು, ಆಕಾಶಗಳಿಂದ ತನ್ನನ್ನು ತಾನೇ ವಂಚಿಸಿಕೊಂಡಿರುವ ಈ ಮನುಷ್ಯ ಇದಕ್ಕೆ ಕಾರಣವಾಗುತ್ತಿರುವ ಅನಿರ್ಬಂಧಿತ ಕೈಗಾರಿಕೀಕರಣ ಮತ್ತು ನಗರೀಕರಣಗಳ ಅಪಾಯಗಳ ವಿರುದ್ಧ ಎಚ್ಚರಿಕೆ ನೀಡಿ, ಇವಕ್ಕೆ ಪರ್ಯಾಯವಾದ ಜೀವನೋಪಾಯದ ಮತ್ತು ವಸತಿ ವಿನ್ಯಾಸಗಳ ಮಾದರಿಗಳನ್ನು ನೀಡಿದ ಗಾಂಧಿ ಮತ್ತು ಅವರ ಶಿಷ್ಯ ಜೆ.ಸಿ. ಕುಮಾರಪ್ಪನವರ ಮಾತುಗಳನ್ನು ಅವಪ್ರಗತಿಯ ಸೂಚನೆಗಳೆಂದು ತಿರಸ್ಕರಿಸಿದ. ಆದರೆ ಇಂದು ಅವನ್ನೇ ನಿಜವಾದ ಪ್ರಗತಿ ಮಾರ್ಗದ ದಾರಿ ದೀಪಗಳು ಎಂದು ಮಾನ್ಯಮಾಡುವ ಅನಿವಾರ್ಯತೆಯ ಅರಿವು ಉಂಟಾದಂತಿದೆ. ಈ ಕುರಿತ ಒಂದು ವಿವೇಚನೆ ಇಲ್ಲಿದೆ.–ಸಂ.



ಪ್ರಪಂಚ ಎಲ್ಲಿಗೆ ಬಂದು ನಿಂತಿತು ನೋಡಿ. ಪ್ರಪಂಚದಾದ್ಯಂತ ಮಾನವನ ಚಟುವಟಿಕೆಯನ್ನು ಕಳೆದ ನಾಲ್ಕು ತಿಂಗಳಿಂದ ಸ್ತಬ್ಧಗೊಳಿಸಿ, ಅವನ ಬದುಕನ್ನು ಒಂದು ಸಣ್ಣ ವೈರಸ್ ಮೂರಾಬಟ್ಟೆ ಮಾಡತೊಡಗಿದೆ. ಮತ್ತೊಮ್ಮೆ ಪ್ರಕೃತಿ ತನ್ನ ಸಾಮರ್ಥ್ಯವನ್ನು ಮನುಷ್ಯನಿಗೆ ಪರಿಚಯ ಮಾಡಿಕೊಟ್ಟಿದೆ. ಇತ್ತೀಚಿನ ದಶಕಗಳಲ್ಲಿ ಪ್ರಕೃತಿ ಮನುಷ್ಯನಿಗೆ ಈ ಪರಿ ಹೆದರಿಸಿರಲಿಲ್ಲ. ಪ್ರಕೃತಿಯ ಮಡಿಲಿನಿಂದ ದೂರ ಬಂದಿರುವ ಮಾನವನಿಗೆ ತಾನು ಪ್ರಕೃತಿಯ ಮಗು ಎಂಬುದೇ ಮರೆತು ಹೋಗಿದೆ. ಮನುಷ್ಯನ ಶ್ರಮವನ್ನು ಕಡಿಮೆಗೊಳಿಸುವ ನೆವದಲ್ಲಿ ಮನುಷ್ಯನ ಬದುಕನ್ನು ಪ್ರವೇಶಿಸಿದ ತಂತ್ರಜ್ಞಾನವು ಇಂದು ಅವನ ಬದುಕನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡು ಬಿಟ್ಟಿದೆ. ಇರುವ ಬುದ್ಧಿಮತ್ತೆಯನ್ನೇ ಸರಿಯಾಗಿ ಬಳಸಿಕೊಳ್ಳಲಾಗದ ಅವನು ಕೃತಕ ಬುದ್ಧಿಮತ್ತೆಯ ಹಿಂದೆ ಸಾಗಿದ್ದಾನೆ. ಕಳೆದ ನೂರು ವರ್ಷಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಮಾನವನಿಗೆ ಎಲ್ಲಿಲ್ಲದ ಅಹಂಕಾರವನ್ನು ತಂದು ಬಿಟ್ಟಿದೆ. ಎಲ್ಲವನ್ನೂ ತಂತ್ರಜ್ಞಾನವನ್ನು ಬಳಸಿ ಗೆದ್ದು ಬರುತ್ತೇವೆ ಎಂಬ ಭಾವ ಮಾನವನಲ್ಲಿ ಮನೆ ಮಾಡಿದೆ. ಈ ಭಾವ ನಮ್ಮಲ್ಲಿ ಎಷ್ಟೊಂದು ಹೆಚ್ಚಿ ಬಿಟ್ಟಿದೆ ಎಂದರೆ ಸಮಸ್ಯೆಯ ಪರಿಹಾರಕ್ಕೆ ಬೇರೆ ಮಾರ್ಗಗಳು ಇರಬಹುದು ಎಂಬುದೇ ಕಾಣುತ್ತಿಲ್ಲ, ಎಲ್ಲ ಸಮಸ್ಯೆಗಳಿಗೂ ಆಧುನಿಕ ತಂತ್ರಜ್ಞಾನದಿಂದಲೇ ಪರಿಹಾರ ಒದಗಿ ಬರುತ್ತದೆ ಎಂಬ ತೀರ್ಮಾನಕ್ಕೆ ನಾವು ಬಂದು ಬಿಟ್ಟಿದ್ದೇವೆ. ನಮ್ಮನ್ನು ಕಾಡುವ ಎಲ್ಲ ಸಮಸ್ಯೆಗಳೂ ತಾಂತ್ರಿಕ ಸಮಸ್ಯೆಯಾಗಿಯೇ ನಮಗೆ ಕಾಣುತ್ತವೆ. ಸಮಗ್ರ ದೃಷ್ಟಿಕೋನ ನಮಗೆ ಇಲ್ಲವಾಗಿದೆ. ಕರೋನಾ ಹರಡದಿರಲು ಒಬ್ಬನಿಂದ ಮತ್ತೊಬ್ಬ ಎಷ್ಟು ದೂರ ನಿಲ್ಲಬೇಕು, ನಮ್ಮ ಕೈ ಯನ್ನು ಎಷ್ಟು ಬಾರಿ ಹೇಗೆ ತೊಳೆಯಬೇಕು, ಯಾವ ಮುಖ ಗವಸು ಎಷ್ಟು ಸುರಕ್ಷಿತ ಎಂಬುದರಲ್ಲೇ ನಾವು ಸಮಯ ಕಳೆಯುತ್ತಿದ್ದೇವೆ. ಕರೋನಾ ಎಂಬ ವೈರಾಣು ಈ ನಾಗರಿಕತೆಗೆ ಒಡ್ಡಿರುವ ಸವಾಲಿನ ಸಂದರ್ಭದಲ್ಲಿ ಈ ಸಮಸ್ಯೆಗೆ ಇರಬಹುದಾದ ಸಮಸ್ಯೆಯ ಸಮಗ್ರ ವಿಶ್ಲೇಷಣೆ ಮಾಡುವುದು ಮತ್ತು ಭವಿಷ್ಯದ ದಾರಿಯನ್ನು ಸರಿ ಪಡಿಸಿಕೊಳ್ಳಬೇಕಾದ್ದು ಇಂದಿನ ತುರ್ತು ಅವಶ್ಯ ಆಗಿದೆ. ಕೊರೊನಾ ಸಮಸ್ಯೆ ಮುಂದಿನ ವರ್ಷಗಳಲ್ಲಿ ಮಾನವ ಕೋಟಿ ಎದುರಿಸಬೇಕಿರುವ ಸವಾಲಿನ ಒಂದು ಸಣ್ಣ ಅಲೆ ಅಷ್ಟೆ. ಜಗತ್ತಿನ ಹಲವಾರು ಚಿಂತಕರು ಮತ್ತು ವಿಜ್ಞಾನಿಗಳು ಹೇಳುತ್ತಿರುವಂತೆ ಜಾಗತಿಕ ತಾಪಮಾನವನ್ನು ನಿಯಂತ್ರಣಕ್ಕೆ ತಂದು ಕೊಳ್ಳಲು ನಮಗಿರುವ ಸಮಯಾವಕಾಶ ಇನ್ನು ಕೇವಲ ಹತ್ತು ವರ್ಷ. ಆ ನಂತರ ಅದು ನಮ್ಮ ಕೈ ಮೀರಿ ಹೋಗಿ ಅದನ್ನು ನಿಯಂತ್ರಣಕ್ಕೆ ತಂದು ಕೊಳ್ಳಲು ಸಾಧ್ಯವೇ ಇಲ್ಲ. ಆ ನಂತರ ಪರಿಸರದ ಸಮಸ್ಯೆಗಳು ಕೊರೋನಾಕ್ಕಿಂತ ದೊಡ್ಡದಾದ ಅಲೆಯ ರೂಪದಲ್ಲಿ ಬರತೊಡಗುತ್ತವೆ. ಇದನ್ನು ನಿಮಗೆ ಹೆದರಿಸಲು ನಾನು ಹೇಳುತ್ತಿಲ್ಲ. ಇದಕ್ಕೆ ನಾವು ಬಲವಾಗಿ ನಂಬಿರುವ ತಂತ್ರಜ್ಞಾನದಲ್ಲಿ ಉತ್ತರ ಇಲ್ಲ. ಇದಕ್ಕೆ ಉತ್ತರ ಇರುವುದು ನಮ್ಮ ನೈತಿಕತೆಯಲ್ಲಿ.

ಇಂದಿನ ಕರೋನಾ ಸಮಸ್ಯೆ ಜೈವಿಕವಾದದ್ದಾರೂ ಇದರ ಮೂಲ ಇರುವುದು ನಾವು ಸೃಷ್ಟಿಸಿಕೊಂಡಿರುವ ಅರ್ಥ ವ್ಯವಸ್ಥೆಯಲ್ಲಿ. ಅರ್ಥ ವ್ಯವಸ್ಥೆ ಎಲ್ಲಿಯವರಗೆ ಪ್ರಾಕೃತಿಕ ಸಂಪನ್ಮೂಲಗಳು ತನಗೆ ಬಿಟ್ಟಿ ಬಂದಿರುವ ಬಂಡವಾಳ, ಅದನ್ನು ಹೇಗೆ ಬೇಕೋ ಹಾಗೆ ಬಳಸಿ ಉಡಾಯಿಸುವ ಹಕ್ಕು ನನ್ನದು ಎಂದು ಕೊಂಡಿರುತ್ತದೋ ಅಲ್ಲಿಯವರಗೆ ಅದು ಮನುಷ್ಯನನ್ನು ನೆಮ್ಮದಿಯಾಗಿ ಬದುಕಲು ಬಿಡಲಾರದು. ಮನುಷ್ಯ ಹುಡುಕಿ ಹೊರಟ ಸುಖ ಎಂದೋ ಮನುಷ್ಯನಿಂದ ದೂರವಾಗಿ ಹೋಗಿದೆ. ಇನ್ನು ಏನಿದ್ದರೂ ಸುಖ ಸಂತೋಷದ ಕಲ್ಪನೆಯ ಭ್ರಮೆಯಲ್ಲಿ ಅವನ ಸುತ್ತಾಟ. ಪರಿಸರದ ಮೇಲೆ ಮನುಷ್ಯ ಮಾಡುತ್ತಿರುವ ದಾಳಿಯನ್ನು ನೋಡುತ್ತಿರುವಾಗ ದಿನದಿಂದ ದಿನಕ್ಕೆ, ಕ್ಷಣದಿಂದ ಕ್ಷಣಕ್ಕೆ ಮನುಷ್ಯನ ಮೇಲಿನ ಭರವಸೆ ಕಡಿಮೆಯಾಗುತ್ತಾ ಹೋಗುತ್ತಿದೆ. ಹಿಂದಿರುಗಿ ಬರಲಾರದ ರಸ್ತೆಯನ್ನು ಮನುಷ್ಯ ತುಳಿದು ಬಿಟ್ಟಿದ್ದಾನೆ. ಮನುಷ್ಯನ ಒಳ್ಳೆಯತನದ ಬಗ್ಗೆ ಭರವಸೆ ಇಡಬೇಕು, ಭವಿಷ್ಯ ಚೆನ್ನಾಗಿ ಇರುತ್ತದೆ ಎಂಬುದರ ಬಗ್ಗೆ ಆಶಾದಾಯಕವಾಗಿರ ಬೇಕು ಎಂಬ ಮಾತುಗಳು ಪೊಳ್ಳು ಎನಿಸತೊಡಗಿವೆ.

ಇಂತಹ ಪರಿಸ್ಥಿತಿಯಲ್ಲಿ ಮತ್ತೆ ಮತ್ತೆ ಗಾಂಧಿ ನೆನಪಾಗತೊಡಗುತ್ತಾರೆ. ಕಾಡತೊಡಗುತ್ತಾರೆ. ಪ್ರಕೃತಿಯೊಂದಿಗೆ ಸಮನ್ವಯಗೊಂಡಿರುವ ಅರ್ಥಶಾಸ್ತ್ರವನ್ನು ಗಾಂಧಿಯಷ್ಟು ಸ್ಪಷ್ಟವಾಗಿ ಬೇರೆ ಯಾರೂ ಅರ್ಥ ಮಾಡಿಕೊಂಡಿರಲು ಸಾಧ್ಯವಿಲ್ಲ. ಬದುಕಿನ ಎಲ್ಲ ಕ್ಷೇತ್ರಗಳಿಗೂ ನೈತಿಕತೆ ಮತ್ತು ಆಧ್ಯಾತ್ಮದ ಆಯಾಮವನ್ನು ಗಾಂಧಿ ನೀಡಲು ಪ್ರಯತ್ನಿಸಿದರು. ಆಧ್ಯಾತ್ಮಿಕ ಆಯಾಮವಿಲ್ಲದ ಯಾವುದೇ ಕ್ಷೇತ್ರವು. ಅಮಾನುಷವಾಗಿ ಬಿಡುತ್ತದೆ ಎಂದು ಅವರು ನಂಬಿದ್ದರು. ಅದು ನಿಜವೂ ಹೌದು. ಗಾಂಧಿಯವರ ಪರಮ ಶಿಷ್ಯರಾದ ಮತ್ತು ಗಾಂಧಿಯವರು ಹೇಳುತ್ತಿದ್ದ ಅರ್ಥಶಾಸ್ತ್ರದ ಆತ್ಮವನ್ನು ಅರಿತಿದ್ದ ಅರ್ಥಶಾಸ್ತ್ರಜ್ಞ ಜೆ ಸಿ ಕುಮಾರಪ್ಪನವರು ಮನುಷ್ಯನ ನೆಮ್ಮದಿಗೆ ಇರಬೇಕಾದ ಒಂದು ಶಾಶ್ವತವಾದ ಅರ್ಥವ್ಯವಸ್ಥೆಯ ಅಗತ್ಯವನ್ನು ಪ್ರತಿಪಾದಿಸಿದರು.

ಮನುಷ್ಯ ಹೆಚ್ಚು, ಹೆಚ್ಚು ನಾಗರಿಕನಾಗುವುದು ಎಂದರೆ ಉತ್ತಮವಾದ ಅರ್ಥವ್ಯವಸ್ಥೆಯ ಕಡೆಗೆ ಸಾಗುವುದು ಎಂದೇ ಅರ್ಥ. ಉತ್ತಮವಾದ ಅರ್ಥ ವ್ಯವಸ್ಥೆಯು ಪ್ರಕೃತಿಯು ನೀಡಿರುವ ಸಂಪನ್ಮೂಲಗಳನ್ನು ಹಾಳು ಮಾಡದೆ ಅದನ್ನು ಹೆಚ್ಚು ಹೆಚ್ಚು ಸಮೃದ್ಧಗೊಳಿಸುತ್ತಾ, ಪ್ರಕೃತಿಯ ಮಡಿಲಲ್ಲಿ ಮನುಷ್ಯನು ನೆಮ್ಮದಿಯ ಜೀವನವನ್ನು ನಡೆಸುವ ಒಂದು ವ್ಯವಸ್ಥೆಯನ್ನು ರೂಪಿಸುತ್ತದೆ. ಅರ್ಥ ವ್ಯವಸ್ಥೆಯಲ್ಲಿ ಒಂದು ಶ್ರೇಣಿ ಇದೆ. ಶ್ರೇಣಿಯ ಅತ್ಯಂತ ಕೆಳಹಂತದಲ್ಲಿ ಪರಾವಲಂಬಿ ಅರ್ಥವ್ಯವಸ್ಥೆ ಇದ್ದರೆ ಶ್ರೇಣಿಯ ತುತ್ತ ತುದಿಯಲ್ಲಿ ಸೇವಾ ಅರ್ಥ ವ್ಯವಸ್ಥೆ ಇದೆ. ಈ ಶ್ರೇಣಿಯಲ್ಲಿ ಕೆಳಗಿನಿಂದ ಮೇಲಕ್ಕೆ ಹತ್ತುವ ಮಾನವ ನಿಜವಾದ ನಾಗರಿಕನಾಗುತ್ತಾನೆ. ಸೇವಾ ಅರ್ಥ ವ್ಯವಸ್ಥೆಯಲ್ಲಿ ಯಾವುದೇ ಶೋಷಣೆಯಿಲ್ಲ. ಈ ವ್ಯವಸ್ಥೆಯಲ್ಲಿ ಎದುರಿಗಿದ್ದವರ ಓತವೇ ಮುಖ್ಯವಾಗಿರುತ್ತದೆ. ತಾಯಿಗೆ ಮಗುವಿನ ಮೇಲಿರುವ ಪ್ರೀತಿಯಂತೆ. ಯಾವುದೇ ಅಪೇಕ್ಷೆಯಿಲ್ಲದೆ ತಾಯಿ ಮಗುವಿನ ಹಿತವನ್ನು ಕಾಯುತ್ತಾಳೆ. ಇದು




ಅತ್ಯಂತ ಶ್ರೇಷ್ಠವಾದ ವ್ಯವಸ್ಥೆ. ಶ್ರೇಣಿಯ ಅತ್ಯಂತ ಕೆಳಗಿರುವುದು ಪರಾವಲಂಬಿ ಅರ್ಥವ್ಯವಸ್ಥೆ. ಈ ವ್ಯವಸ್ಥೆ ಎದುರಿಗಿದ್ದವರನ್ನು ಬಡಿದು ತಿಂದು ತಾನಷ್ಟೇ ಬದುಕುವುದನ್ನು ಗುರಿಯನ್ನಾಗಿಸಿಕೊಂಡಿದೆ. ಪರಾವಲಂಬಿ ವ್ಯವಸ್ಥೆಯನ್ನೂ ಅದರ ಮೇಲಿರುವ ಕೃತಘ್ನತಾ ಅರ್ಥ ವ್ಯವಸ್ಥೆಯನ್ನೂ ದಾಟಿ ಬರುವುದು ಒಬ್ಬ ನಾಗರಿಕ ಮನುಷ್ಯನಿಗೆ ಸಾಧ್ಯ. ಅದಕ್ಕೆ ಅಡ್ಡಿಯಾಗಿರುವುದು ನಮ್ಮ ಆಧುನಿಕ ಅರ್ಥ ವ್ಯವಸ್ಥೆ. ನಾವು ಆಧುನಿಕ ಎಂದು ಕೊಂಡಿರುವ ಅರ್ಥವ್ಯವಸ್ಥೆ ಸಂಪೂರ್ಣವಾಗಿ ಕೃತಘ್ನತಾ ವ್ಯವಸ್ಥೆಯಾಗಿದೆ. ಕೃತಘ್ನತಾ ಅರ್ಥ ವ್ಯವಸ್ಥೆ ಎಂತಹದು ಎಂದರೆ ಹಸುವಿನ ಲಾಲನೆ ಪೋಷಣೆ ಮಾಡದೆ ಹಾಲನ್ನು ಮಾತ್ರ ಕರೆದು ಕೊಳ್ಳುವ ವ್ಯವಸ್ಥೆ. ಲಾಭವಾಗುತ್ತದೆ ಎಂದರೆ ಕಡೆಗೆ ಹಸುವಿನ ಕೆಚ್ಚಲನ್ನೇ ಕುಯ್ದು ಲಾಭ ಮಾಡುವ ಗುಣ ಉಳ್ಳದ್ದು. ಹತ್ತಿದ ಏಣಿಯನ್ನು ಮೇಲೆ ಹತ್ತಿದ ಮೇಲೆ ಒದ್ದು ಬಿಡುವಂತಹದು. ಅನೈತಿಕವಾದುದು. ನಾವು ಪೋಷಿಸಿಕೊಂಡು ಬಂದಿರುವ ಅರ್ಥ ವ್ಯವಸ್ಥೆ ಕೃತಘ್ನತಾ ಅರ್ಥ ವ್ಯವಸ್ಥೆಯಿಂದ ಮೇಲೆ ಎದ್ದೇ ಇಲ್ಲ.

ಕಳೆದ ಒಂದು ಶತಮಾನದಲ್ಲಿ ಈ ಅರ್ಥ ವ್ಯವಸ್ಥೆ ನಮಗೆ ಎಷ್ಟೊಂದು ರೂಢಿಯಾಗಿ ಹೋಗಿದೆ ಎಂದರೆ ವ್ಯವಹಾರದಲ್ಲಿ ನೈತಿಕತೆಯ ಪ್ರಶ್ನೆ ಎತ್ತುವುದೇ ಹಾಸ್ಯಾಸ್ಪದ ಎಂಬ ಮಟ್ಟಿಗೆ ಸಮಾಜ ಬಂದು ನಿಂತಿದೆ. ಒಂದು ರೀತಿಯಲ್ಲಿ ಅನೈತಿಕತೆಯನ್ನು ಸಮಾಜ ಒಪ್ಪಿದೆ. 'ವ್ಯಾಪಾರಂ ದ್ರೋಹ ಚಿಂತನಂ' ಎಂಬ ಮಾತನ್ನು ಶಾಸನವೆಂಬಂತೆ ಸಮಾಜ ಪಾಲಿಸುತ್ತಿದೆ. ವ್ಯಾಪಾರದಲ್ಲಿ ದ್ರೋಹ ಅನಿವಾರ್ಯ ಎಂಬ ತಪ್ಪು ಗ್ರಹಿಕೆ ಸಮಾಜದ ಸುಪ್ತ ಪ್ರಜ್ಞೆಯಲ್ಲಿ ದಾಖಲಾಗಿ ಹೋಗಿದೆ. ಸಮಾಜದ ನೈತಿಕ ಪ್ರಜ್ಞೆಗೆ ನಿಧಾನವಾಗಿ ಮಂಕು ಬಡಿದು ಹೋಗಿದೆ. ನೈತಿಕತೆ ಮತ್ತು ಅನೈತಿಕತೆಯ ನಡುವಿನ ಗೆರೆ ಬಹಳ ತೆಳ್ಳಗೆ ಆಗಿಹೋಗಿದೆ. ವ್ಯಾಪಾರದಲ್ಲಿ ನೀತಿ ಇಲ್ಲದೇ ಹೋದದ್ದೇ ಇಂದಿನ ದುಸ್ಥಿತಿಗೆ ಕಾರಣ. ವ್ಯಾಪಾರಸ್ಥರಿಗೆ ನೀತಿ ಇಲ್ಲ ನಿಜ. ಅವರು ಎಷ್ಟು ಪ್ರಬಲರಾಗಿ ಬಿಟ್ಟಿದ್ದಾರೆಂದರೆ ಅವರು ಗ್ರಾಹಕರನ್ನೂ ಅನೈತಿಕರನ್ನಾಗಿ ಮಾಡಿ ಬಿಟ್ಟಿದ್ದಾರೆ. ಕಡಿಮೆ ಬೆಲೆಗೆ ಎಲ್ಲವನ್ನೂ ಕೊಳ್ಳಬೇಕು ಎಂಬ ತತ್ವವನ್ನು ಗ್ರಾಹಕರಿಗೆ ಕಲಿಸಿಬಿಟ್ಟಿದ್ದಾರೆ. ಒಂದು ವಸ್ತು ಅಗ್ಗವಾಗಿ ದೊರೆಯುತ್ತಿದೆ ಎಂದರೆ ಪ್ರಪಂಚದ ಯಾವುದೋ ಮೂಲೆಯಲ್ಲಿ ನಮ್ಮಂತಹ ಮನುಷ್ಯರು ಅತೀ ಕಡಿಮೆ ಕೂಲಿಗೆ ದುಡಿಯುತ್ತಿರಬಹುದು, ಅಲ್ಲೆಲ್ಲೋ ಪ್ರಕೃತಿಯ ಮೇಲೆ ಎಗ್ಗಿಲ್ಲದೆ ಹನನ ನಡೆಯುತ್ತಿರಬಹುದು ಎಂಬುದು ನಮ್ಮ ಅರಿವಿಗೆ ಬರುವುದೇ ಇಲ್ಲ. ನೀನು ಒಂದು ವಸ್ತುವನ್ನು ಕಡಿಮೆ ಬೆಲೆಗೆ ಕೊಂಡರೆ ನೀನು ಮೋಸ ಹೋಗಿಲ್ಲ ಎಂದು ತಿಳಿ ಎಂದು ಗ್ರಾಹಕನಿಗೆ ವ್ಯಾಪಾರಸ್ಥರು ಒಪ್ಪಿಸಿ ಬಿಟ್ಟಿದ್ದಾರೆ. ಹಾಗಾಗಿ ಗ್ರಾಹಕರು ಸದಾ ಕಾಲ ಅಗ್ಗವಾಗಿ ದೊರೆಯುವ, ಬದುಕನ್ನು ಸುಲಭ ಮಾಡುವ ವಸ್ತುಗಳ ಕಡೆಗೆ ಆಕರ್ಷಿತರಾಗುತ್ತಾರೆ.

ಈ ಅರ್ಥವ್ಯವಸ್ಥೆ ಕೇಂದ್ರೀಕೃತವಾದದ್ದರಿಂದ ಗ್ರಾಹಕನನ್ನೂ, ಉತ್ಪಾದಕನನ್ನೂ ದೂರ ದೂರ ಇಟ್ಟುಬಿಟ್ಟಿದೆ. ಗ್ರಾಹಕನಿಗೆ ಉತ್ಪಾದಕನ ಸಮಸ್ಯೆಗಳೇನು? ಅವನಿಗೆ ಅವನ ಶ್ರಮಕ್ಕೆ ತಕ್ಕುದಾದ ಪ್ರತಿಫಲ ಸಿಗುತ್ತಿದೆಯೇ? ಒಂದು ಗೊತ್ತಾದ ವಸ್ತುವನ್ನು ಕೊಂಡರೆ ಪರಿಸರದ ಮೇಲೆ ಅದರ ಪ್ರಭಾವವೇನು? ಇವು ಯಾವುವೂ ಅವನಿಗೆ ತಿಳಿಯುವುದೇ ಇಲ್ಲ. ಉದಾಹರಣೆಗೆ ನೀವು ಕೊಳ್ಳುವ ಬ್ರಾಂಡೆಡ್ ಬಟ್ಟೆಗಳ ಹಿಂದಿನ ಕತೆ ನಿಮಗೆಷ್ಟು ಗೊತ್ತು? ನಿಮ್ಮ ಮೈ ಮೇಲೆ ಹಗುರವಾಗಿ ಕೂರುವ ಅಂಗಿಯ ಹಿಂದೆ ಅದನ್ನು ಸಿದ್ಧಪಡಿಸಿದ ಢಾಕಾ ನಗರದ ಗಾರ್ಮೆಂಟ್ ಕಾರ್ಖಾನೆಗಳಲ್ಲಿ ಬಂಧಿಗಳಾಗಿ, ಪ್ರಾಣಿಗಳಿಗಿಂತಲೂ ತುಚ್ಛವಾಗಿ ಜೀವನ ನಡೆಸುತ್ತಿರುವ ಮಹಿಳೆಯರ ಪರಿಸ್ಥಿತಿ ಏನೆಂಬುದು ತಿಳಿದಿದೆಯೇ? ನಿಮ್ಮ ಕೈಯಲ್ಲಿ ತೆಳ್ಳಗೆ ನುಣುಪಾಗಿ ಸದಾ ಕಾಲ ಇರುವ ಮೊಬೈಲ್ ನ ಬ್ಯಾಟರಿಗೆ ಬೇಕಾದ ಲಿಥಿಯಂಗಾಗಿ ಇಡೀ ಕಾಂಗೋ ದೇಶವನ್ನೇ ಬಗೆದು ಬಗೆದು ಹಾಕುತ್ತಿರುವ ಕಂಪನಿಗಳ ರಕ್ಕಸ ಗುಣ ನಮಗೆ ಕಂಡಿದೆಯೇ? ನಾವು ಬಳಸುವ ವಸ್ತುವಿನ ಉತ್ಪಾದನೆಯ ದೂರ ಮತ್ತು ಅದರ ಹಿಂದಿನ ಶೋಷಣೆ ಸಮಾನುಪಾತದಲ್ಲಿವೆ. ಈ ವಸ್ತುಗಳನ್ನು ಕೊಳ್ಳುವುದರಿಂದ ಢಾಕಾದ ಹೊಲಿಗೆ ಕಾರ್ಖಾನೆಯ ಆ ಹುಡುಗಿಯ ನೋವಿನಲ್ಲಿ ನಮ್ಮದೂ ಪಾಲಿದೆ. ಅವಳು ಹಾಕುವ ಹಿಡಿ ಶಾಪದ ಒಂದು ಭಾಗ ನಮಗೂ ತಗಲುತ್ತದೆ. ಕಾಂಗೋ ದೇಶದಲ್ಲಿ ಗಣಿಗಳಲ್ಲಿ ಇಳಿದು ಖನಿಜಗಳಿಗಾಗಿ ಹುಡುಕಾಡುವ ನಮ್ಮ ಮಕ್ಕಳು ಅಥವಾ ಮೊಮ್ಮಕ್ಕಳ ವಯಸ್ಸಿನ ಬಾಲಕ ಬಾಲಕಿಯರ ಸುಂದರವಾದ ಬಾಲ್ಯವನ್ನು ಕಿತ್ತುಕೊಂಡದ್ದರಲ್ಲಿ ನಮ್ಮದೂ ಪಾಲಿದೆ. ಈ ಎಲ್ಲವೂ ಶಾಪಿಂಗ್ ಮಾಲಿನ ಝಗಮಗ ಬೆಳಕಿನಲ್ಲಿ ಕಾಣುವುದಿಲ್ಲವಾದ್ದರಿಂದ ಆದುನಿಕ ಉತ್ಪಾದನ ವ್ಯವಸ್ಥೆಯಲ್ಲಿನ ಪ್ರತಿಯೊಂದು ವಸ್ತುವಿನ ಹಿಂದೆ ಇರುವ ಬಡವರ ಮತ್ತು ಶ್ರಮಿಕರ ನೋವು ನಮಗೆ ತಿಳಿದು ಬರುವುದೇ ಇಲ್ಲ. ಅಜ್ಞಾನಿಗಳಾಗಿ, ಪ್ರಜ್ಞಾಹೀನರಾಗಿ ನಾವು ಪಾಪದ ಕೆಲಸ ಒಂದಕ್ಕೆ ಕಾಣಿಕೆ ನೀಡುತ್ತಿರುತ್ತೇವೆ.


ಈ ಸಂಕಟದಿಂದ ಹೊರ ಬರಬೇಕೆಂದರೆ ನಮಗೆ ಅಗತ್ಯವಿರುವ ವಸ್ತುಗಳ ಉತ್ಪಾದನೆಯು ಆದಷ್ಟೂ ಸ್ಥಳೀಯವಾಗಿ ನಡೆಯುವಂತೆ ನಾವು ನೋಡಿಕೊಳ್ಳಬೇಕು. ನಮ್ಮ ಅಕ್ಕ ಪಕ್ಕದ ಜನ ನಮ್ಮ ದಿನೋಪಯೋಗಿ ವಸ್ತುಗಳ ಉತ್ಪಾದನೆಯಲ್ಲಿ ತೊಡಗಿಕೊಳ್ಳುವಂತೆ ಮಾಡಬೇಕು. ಅವರು ಉತ್ಪಾದಿಸಿದ ವಸ್ತುವು ಒಂದಷ್ಟು ಸೊಟ್ಟಗಿದ್ದರೂ ಸರಿಯೇ.-ಒರಟಾಗಿದ್ದರೂ ಸರಿಯೇ. ಆಕರ್ಷಕವಾಗಿಲ್ಲದಿದ್ದರೂ ಸರಿಯೇ ಅದನ್ನೇ ಬಳಸುತ್ತೇನೆ ಎಂಬ ಸಂಕಲ್ಪವನ್ನು ಗ್ರಾಹಕರು ಮಾಡಬೇಕು. ಅದು ನಿಜವಾದ ಮೇಕ್ ಇನ್ ಇಂಡಿಯಾ. ಯಾವಾಗ ಸಮಾಜ ತಾನು ಬಳಸುವ ವಸ್ತುವಿನ ಮೌಲ್ಯವನ್ನು ಕೇವಲ ಹಣದಲ್ಲಿ ಅಳೆಯದೆ ಅದನ್ನು ನೈತಿಕ ಮೌಲ್ಯದ ಅಳತೆ ಪಟ್ಟಿಯಲ್ಲಿ ಅಳೆಯಬಲ್ಲದೋ ಆಗ ನಿಜವಾದ ಆತ್ಮನಿರ್ಭರತೆ ಮೂಡಿ ಬರುತ್ತದೆ. ಆಗ ಅದನ್ನು ಬಳಸುವ ಗ್ರಾಹಕ ಕೃತಘ್ನತಾ ಅರ್ಥ ವ್ಯವಸ್ಥೆಯಿಂದ ಒಂದು ಮೆಟ್ಟಿಲು ಮೇಲೇರಿ ಸಾಂಘಿಕ ಅರ್ಥ ವ್ಯವಸ್ಥೆಗೆ ಏರುತ್ತಾನೆ. ಸಾಂಘಿಕ ಅರ್ಥವ್ಯವಸ್ಥೆಯಲ್ಲಿರುವವರಿಗೆ ತಮ್ಮ ವೈಯುಕ್ತಿಕ ಹಿತಕ್ಕಿಂತ ಗುಂಪಿನ ಹಿತ ಮುಖ್ಯವೆನಿಸುತ್ತದೆ. ನೆರೆಹೊರೆಯವರು ತಯಾರಿಸಿದ ವಸ್ತುವನ್ನು ಕೊಳ್ಳುವುದರಿಂದ ಅವನ ಜೀವನಕ್ಕೆ ದಾರಿ ಮಾಡಿಕೊಡುತ್ತಿದ್ದೇನೆ ಎಂಬ ಅರಿವು ಅವರಿಗೆ ಇರುತ್ತದೆ. ಪಕ್ಕದ ಮನೆಯವನ ನೋವು ನಲಿವುಗಳು ಅವರಿಗೆ ಅರ್ಥವಾಗುತ್ತಿರುತ್ತದೆ. ಅವನ ಶೋಷಣೆಯಾದದ್ದು ಇವರಿಗೆ ಅಲ್ಲೆ ಪ್ರತ್ಯಕ್ಷವಾಗಿ ಕಾಣುತ್ತದೆ. ಅವರಲ್ಲೊಂದು ಪಾಪಪ್ರಜ್ಞೆ ಕಾಡಲು ಪ್ರಾರಂಭಿಸುತ್ತದೆ. ಅವರು ಮಾನಸಿಕವಾಗಿ ಬದಲಾಗಿ ಶೋಷಣಾ ವ್ಯವಸ್ಥೆಗೆ ಅಂತ್ಯ ಹೇಳುವ ಸಾಧ್ಯತೆಗಳೂ ಹೆಚ್ಚಾಗಲಿವೆ. ಹಾಗಾಗಿ ಉತ್ಪಾದಕ ಮತ್ತು ಗ್ರಾಹಕರ ನಡುವಿನ ಅಂತರ ಹೆಚ್ಚಾಗದಂತೆ ಕೊರೋನೋತ್ತರ ಸಮಾಜ ನೋಡಿಕೊಳ್ಳಬೇಕು. ದೂರದಲ್ಲಿ ಉತ್ಪಾದನೆಯಾದದ್ದನ್ನು ಬಳಸದಿರುವುದು ಮತ್ತು ಅನಗತ್ಯವಾದುದನ್ನು ಕೊಳ್ಳದಿರುವುದು ನಮ್ಮೆಲ್ಲರ ರಾಜಕೀಯ ನಿಲುವು ಆಗಬೇಕು. ನಮ್ಮ ರಾಜಕೀಯ ಸಿದ್ಧಾಂತ ಎಡಕ್ಕೂ ಹೋಗಬೇಕಿಲ್ಲ, ಬಲಕ್ಕೂ ಹೋಗಬೇಕಿಲ್ಲ ಅದು ಪರಿಸರದ ಕಡೆಗೆ ಹೋಗಬೇಕು. ನಾವಷ್ಟೇ ಕೊಳ್ಳುಬಾಕರಾಗದಿರುವುದಲ್ಲ ನಮ್ಮ ಸುತ್ತಲಿನವರೂ ಹಾಗೆ ಆಗದಂತೆ ನಾವು ಪ್ರಯತ್ನಿಸಬೇಕು. ಅನಗತ್ಯವಾಗಿ ವಸ್ತುಗಳನ್ನು ಕೊಂಡವರನ್ನು ನಾವು ಪ್ರಶ್ನಿಸುವಂತಾಗಬೇಕು. ಇದು ನಮ್ಮ ರಾಜಕೀಯ ನಿಲುವಾದಾಗ ಮಾತ್ರ ಆಧುನಿಕ ನಾಗರಿಕತೆಯ ಲೋಪಗಳನ್ನು ಪ್ರಶ್ನಿಸಲು ನಮ್ಮಲ್ಲೊಂದು ಆತ್ಮಶಕ್ತಿ ಮೂಡುತ್ತದೆ.


ಇಂದು ಕೃತಘ್ನತಾ ಅರ್ಥವ್ಯವಸ್ಥೆಯಲ್ಲಿರುವ ಮತ್ತು ಇರ ಬಯಸುವ ಮಂದಿಯೇ ಎಲ್ಲೆಡೆ ಹೆಚ್ಚಿದ್ದಾರೆ. ಸರ್ಕಾರಗಳೂ ಅವರೊಂದಿಗೆ ಕೈ ಜೋಡಿಸಿವೆ. ದೊಡ್ಡ ದೊಡ್ಡ ಬಹುರಾಷ್ಟ್ರೀಯ ಕಂಪನಿಗಳು ಸರ್ಕಾರವನ್ನು ಕೊಂಡು ಕೊಳ್ಳತೊಡಗಿವೆ. ಇದನ್ನೆಲ್ಲಾ ಚಿಂತಿಸಬೇಕಾದ ಮಧ್ಯಮ ವರ್ಗ ಮತ್ತು ಓದಿದವರ ಆಲೋಚನೆಗಳು ವಿರುದ್ಧ ದಿಕ್ಕಿನಲ್ಲಿ ಓಡುತ್ತಿವೆ. ಪ್ರಭುತ್ವವೇ ಪ್ರಜೆಗಳ ವಿರುದ್ಧ ನಿಂತಿದೆ. ಈಗ ಮಾಡಬಹುದಾದುದೇನು? ಕೊಳಚೆ ನೀರಿನಿಂದ ಮೇಲೆದ್ದು ದಡದಲ್ಲಿ ನಿಂತು ಒಬ್ಬೊಬ್ಬರನ್ನೇ ದಡಕ್ಕೆ ಎಳೆದು ಕೊಳ್ಳುವುದು ನಾವು ಮಾಡಬಹುದಾದ ಕೆಲಸ. ನಮ್ಮ ಸಂಪರ್ಕಕ್ಕೆ ಬಂದವರೊಂದಿಗೆ ಸತತವಾಗಿ ಈ ಗಂಭೀರ ವಿಚಾರಗಳನ್ನು ಚರ್ಚಿಸುತ್ತಾ ನಮ್ಮ ಬದುಕಿನ ಮೌಲ್ಯಗಳನ್ನೂ, ದಿಕ್ಕನ್ನು ಮೊದಲು ಸರಿಪಡಿಸಿಕೊಳ್ಳುವುದಷ್ಟೇ ಈ ಕ್ಷಣದಲ್ಲಿ ಮಾಡಬಹುದಾದ ಕೆಲಸ. ಮಿಕ್ಕದ್ದನ್ನು ಪ್ರಕೃತಿ ನೋಡಿ ಕೊಳ್ಳುತ್ತದೆ.




(ಲೇಖಕರಯ ಮೇಲುಕೋಟೆಯಲ್ಲಿನ ಜನಪದ ಟ್ರಸ್ಟ್‌ನ ಕಾರ್ಯದರ್ಶಿಯಾಗಿದ್ದು ಖಾದಿ ಮತ್ತು ಗ್ರಾಮೋದ್ಯೋಗ ಚಟುವಟಿಗಳ ಪೋಷಣೆಯಲ್ಲಿ ತೊಡಗಿ ಕೊಂಡಿದ್ದಾರೆ.)

ನಮ್ಮ ಕಾಲದ ಮುವ್ವರು ಮುಖ್ಯ ಮಹಿಳಾ ಹೋರಾಟಗಾರ್ತಿಯರು






ರಜಿಯಾ ಬೇಗಂ, ಝಾನ್ಸಿ ರಾಣಿ ಲಕ್ಷ್ಮಿಭಾಯಿ, ಕಿತ್ತೂರು ಚೆನ್ನಮ್ಮ ಮುಂತಾದವರು ತಂತಮ್ಮ ರಾಜಮನೆತನಗಳ ಹೊಣೆಗಾರರಾಗಿ ರಾಜಕೀಯರಂಗ ಪ್ರವೇಶಿಸಿ ಯುದ್ಧರಂಗಗಳಲ್ಲಿ ಹೋರಾಡಿದ ನಮ್ಮ ಹೆಮ್ಮೆಯ ಮಹಿಳಾ ನಾಯಕಿಯರಾದರೂ, ಇಂತಹ ಯಾವುದೇ ವಾರಸುದಾರಿಕೆಯ ಜವಾಬ್ದಾರಿಯ ಭಾರವಿಲ್ಲದೆ ಸಾರ್ವಜನಿಕ ಹಿತಕ್ಕಾಗಿ ಹೋರಾಟ ನಡೆಸಿದ ಮಹಿಳೆಯರ ಸಂಖ್ಯೇಯೇನೂ ಇತ್ತೀಚಿನ ಇತಿಹಾಸದಲ್ಲಿ ಕಡಿಮೆ ಇಲ್ಲ. ಮಹಿಳೆಯರು ಬೀದಿ ಹೋರಾಟಗಳಿಗಿಳಿಯುವುದು ಸೂಕ್ತವಲ್ಲವೆಂಬ ಮಹಾತ್ಮ ಗಾಂಧಿಯವರ ಸಲಹೆಯನ್ನು ಏಕೆ ಸೂಕ್ತವಲ್ಲವೆಂದು ಕೇಳುತ್ತಾ ಅವರೊಡನೆ ವಾದ ಮಾಡಿ ಗೆದ್ದ ಕಮಲಾದೇವಿ ಚಟ್ಟೋಪಾಧ್ಯಾಯ ಅವರ ಪರಂಪರೆಯನ್ನು ನಮ್ಮ ಕಾಲದಲ್ಲಿ ಪ್ರತಿನಿಧಿಸುತ್ತಿರುವ ಮುವ್ವರು ಮುಖ್ಯ ಮಹಿಳೆಯರ ಬದುಕು-ಹೋರಾಟಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗುತ್ತಿದೆ. ಇವರಲ್ಲಿ ಮೇಧಾ ಪಾಟ್ಕರ್ ಸಮಾಜವಾದಿ ರಾಜಕಾರಣದ ಕೌಟುಂಬಿಕ ಹಿನ್ನೆಲೆಯಿಂದ ಬಂದು ನರ್ಮದಾ ಬಚಾವೋ ಆಂದೋಲನದ ಮೂಲಕ ನಮ್ಮ ಅಭಿವೃದ್ಧಿ ಮಾದರಿಯ ರಾಜಕಾರಣದ ವಿಷಯವಾಗಿ ತಮ್ಮ ದೀರ್ಘ ಜನಾಂದೋಲನದ ರೂಪದಲ್ಲಿ ಹೋರಾಟ ನಡೆಸಿದ್ದರೆ, ಉನ್ನತ ಶಿಕ್ಷಣ ಪಡೆದ ವಂದನಾ ಶಿವ ವೃತ್ತಿಪರ ವೈಜ್ಞಾನಿಕ ಸಂಶೋಧನೆಯ ಮಾರ್ಗ ತೊರೆದು ಚಿಪ್ಕೋ ಆಂದೋಲನದ ಮೂಲಕ ಸಾರ್ವಜನಿಕ ಜೀವ ಪ್ರವೇಶಿಸಿ ಬಹುರಾಷ್ಟ್ರೀಯ ಕಂಪನಿಗಳು ನಡೆಸಿರುವ ಬಿತ್ತನೆ ಬೀಜಗಳ ವಾಣಿಜ್ಯೀಕರಣದ ವಿರುದ್ಧ ಜಾಗತಿಕ ಮಟ್ಟದಲ್ಲಿ ಬೌದ್ಧಿಕ ಹೋರಾಟ ನಡೆಸುತ್ತಿರುವವರು. ಇನ್ನು ಮಮತಾ ಬ್ಯಾನರ್ಜಿ ಕೆಲ ವ್ಯಕ್ತಿ ಸಹಜ ದೌರ್ಬಲ್ಯಗಳ ವೃತ್ತಿಪರ ರಾಜಕಾರಣಿಯಾದರೂ, ಸಮಕಾಲೀನ ವೃತ್ತಿ ರಾಜಕಾರಣದಲ್ಲಿನ ಪಟ್ಟಭದ್ರ ಹಿತಾಸಕ್ತಿಗಳನ್ನು ತಮ್ಮ ಸಂಘಟನಾ ಶಕ್ತಿ, ದೃಢ ನಿಶ್ಚಯ ಶಕ್ತಿ ಮತ್ತು ದಕ್ಷ ಆಡಳಿತಗಳ ಮೂಲಕ ಮೆಟ್ಟಿ ನಿಂತು ಇಂದು ದೇಶಾದ್ಯಂತ ಪ್ರಬಲವಾಗಿ ತಲೆ ಎತ್ತುತ್ತಿರುವ ಕೋಮುವಾದಿ ಸರ್ವಾಧಿಕಾರ ಪ್ರವೃತ್ತಿಗಳನ್ನು ಎದುರಿಸುವ ಬದ್ಧತೆಯಿಂದ ಗಮನ ಸೆಳೆದವರು. ಈ ಮೂವರ ಹೋರಾಟಗಳ ಮೌಲ್ಯ ಮತ್ತು ಮಾದರಿಗಳು ಹದವಾಗಿ ಬೆರೆತು ರಾಷ್ಟ್ರದ ಭವಿಷ್ಯದ ರಾಜಕಾರಣ ರೂಪುಗೊಳ್ಳುವಂತಾದರೆ ಚೆನ್ನ ಎಂಬ ಆಶಯದಿಂದ ಈ ಲೇಖನ ಮಾಲೆಯನ್ನು ಇಲ್ಲಿ ಪ್ರಸ್ತುತಪಡಿಸಲಾಗುತ್ತಿದೆ.-ಸಂ.



ಆಧುನಿಕ ಪ್ರಗತಿಯ ಪರಿಕಲ್ಪನೆಯನ್ನು ಪ್ರಶ್ನಿಸಿದ ಮೇಧಾ ಪಾಟ್ಕರ್

–ತಾರಿಣಿ ಶುಭದಾಯಿನಿ



ಮೇಧಾ ಪಾಟ್ಕರ್(ಹುಟ್ಟಿದ್ದು: ೧-೧೨-೧೯೫೪) ಎಂಬ ಹೆಸರು ಇತಿಹಾಸದಲ್ಲಿ ನಾನಾ ಕಾರಣಗಳಿಗಾಗಿ ನೆನಪಿನಲ್ಲಿ ಉಳಿಯುವಂತದ್ದು. ನರ್ಮದಾ ಬಚಾವೋ ಆಂದೋಲನದಿಂದ ಮನೆಮಾತಾದ ಈ ಹೋರಾಟಗಾರ್ತಿ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಗಾಂಧೀವಾದದಿಂದ ಬಂಡವಾಳಶಾಹಿ ಆಧುನಿಕತೆಯನ್ನು ಎದುರಿಸಿದ್ದು, ಜಾಗತಿಕವಾಗಿ

ಪರಿಸರದ ಕಾಳಜಿಗಳು ಪ್ರಬಲವಾಗುತ್ತಿರುವುದಕ್ಕೆ ತಮ್ಮ ದೊಡ್ಡ ಅಣೆಕಟ್ಟುಗಳ ವಿರೋಧಿ ತಾತ್ವಿಕತೆಯನ್ನು ಒದಗಿಸಿದ್ದು ಹಾಗು ಸಾಂವಿಧಾನಿಕ ರೀತಿಯಲ್ಲಿ ಒಂದು ಸಮಾಜ, ಸಮುದಾಯಗಳು ಬದುಕಬೇಕೆನ್ನುವ ಆಶಯಗಳನ್ನು ಎತ್ತಿಹಿಡಿದಿದ್ದು ಎಲ್ಲವೂ ಆಂದೋಲನಗಳ ಉತ್ಕೃಷ್ಟ ಮಾದರಿ ಎನ್ನುವಂತಿದೆ. ಮೇಧಾ ಅವರ ಬದುಕು ಗಾಂಧಿಯವರ ಹೇಳಿಕೆಯಂತೆ 'ನನ್ನ ಜೀವನವೇ ನನ್ನ ಸಂದೇಶ' ಎನ್ನುವಂತೆಯೇ ಇದೆ.

ಮೇಧಾ ಅವರದು ಹೋರಾಟದ ಹಾದಿ ಸುದೀರ್ಘವಾದದ್ದು. ಸಮಾಜವಾದಿಗಳಾಗಿದ್ದ ತಮ್ಮ ತಂದೆ ತಾಯಿಯರ ಹೋರಾಟದ ಅನುಭವಗಳ ಕಂಡು ಬೆಳೆದ ಮೇಧಾ ಅವರಿಗೆ ಕ್ರಾಂತಿಯ ಸ್ಫೂರ್ತಿ ಮನೆಯ ಪರಿಸರದಲ್ಲಿಯೇ ಸಿಕ್ಕಿತ್ತು. ಕಾಲೇಜು ಶಿಕ್ಷಣವನ್ನು ವಿಜ್ಞಾನ ವಿಷಯದಲ್ಲಿ ಪೂರೈಸಿ ಆನಂತರ ಸ್ನಾತಕೋತ್ತರ ಪದವಿಯನ್ನು ಸಾಮಾಜಿಕ ಕಾರ್ಯ ವಿಷಯದ ಮೇಲೆ ಪಡೆದುಕೊಂಡರು.ಅಕಾಡೆಮಿಕ್ ಹಿನ್ನೆಲೆಯಿಂದ ಹೊರಟು ಟಾಟಾ ಸಂಸ್ಥೆಯ ಸಮಾಜ ವಿಜ್ಞಾನ ಕೇಂದ್ರದಲ್ಲಿ ಸಂಶೋಧನಾ ವಿದ್ಯಾರ್ಥಿನಿಯಾದರು. ಆಗ ತಮ್ಮ ಸಂಶೋಧನೆಯ ಭಾಗವಾಗಿ ಮುಳುಗಡೆ ಸಂತ್ರಸ್ತರನ್ನು ಭೇಟಿಯಾದರು. ಅದು ಅವರ ಜೀವನದಲ್ಲಿ ತಿರುವು ತಂದುಕೊಟ್ಟಿತು. ಸರ್ಕಾರದ ಬಲವಂತದ ಪ್ರಗತಿ ನೀತಿಗಳಿಂದ ಸಂತ್ರಸ್ತರಾದ ಹಳ್ಳಿಗರು ತಮ್ಮ ಬದುಕುಗಳನ್ನು ಕಳೆದುಕೊಂಡಿದ್ದರು. ಅವರ ಕಷ್ಟಗಳನ್ನು ಮೇಧಾ ಮತ್ತು ಅವರ ಸಹಚರರು ಆಲಿಸುತ್ತಾ ಹೋದರು.ಅದರ ಫಲವೇ ಅವರು ತಮ್ಮ ಔಪಚಾರಿಕ ಸಂಶೋಧನೆಯನ್ನು ಬಿಟ್ಟು ಜನಸಮುದಾಯದೊಡನೆ ಇರುವ ನಿರ್ಧಾರ ಮಾಡಿದ್ದು.ಆದಿವಾಸಿಗಳು, ರೈತರು, ದಲಿತರು, ಹೆಂಗಸರು ದೊಡ್ಡ ಸಂಖ್ಯೆಯಲ್ಲಿದ್ದ ಸಂತ್ರಸ್ತರ ಗುಂಪಿಗೆ ಒಂದು ಹೋರಾಟದ ದಿಕ್ಸೂಚಿಯನ್ನು ಹಾಕಿಕೊಡುವ ಕಾರ್ಯದಲ್ಲಿ ಮೇಧಾ ತಮ್ಮನ್ನು ತಾವು ತೊಡಗಿಸಿಕೊಂಡರು.ಇದು ಅವರು ಸಾಗಿ ಬಂದ ಹಾದಿ.ಇಲ್ಲಿಂದ ಮುಂದೆ ಸುದೀರ್ಘವಾಗಿ ನರ್ಮದಾ ಬಚಾವೊ ಆಂದೋಲನ ಕಟ್ಟಿ ಹೋರಾಟ ಮಾಡಿದರು.

ಮೇಧಾ ಅವರ ಹೆಸರು ನರ್ಮದಾ ಬಚಾವೊ ಆಂದೋಲನದೊಂದಿಗೆ ಸೇರಿಹೋಗಿರುವುದರಿಂದ ಅದರ ಮೂಲಕವೇ ಅವರ ನೆಲೆಬೆಲೆಗಳನ್ನು ತಿಳಿಯಬೇಕಿದೆ. ಅರವತ್ತರ ದಶಕದಲ್ಲಿ ಅಣೆಕಟ್ಟುಗಳು ಆಧುನಿಕ ದೇವಾಲಯಗಳೆಂಬ ಕಲ್ಪನೆಯಲ್ಲಿ ಪ್ರಗತಿಯ ರೂಪುರೇಥಜಗಳನ್ನು ಹಾಕಿಕೊಂಡ ಪಶ್ಚಿಮ ಭಾರತವು ನರ್ಮದಾ ನದೀಪಾತ್ರದಲ್ಲಿ ಅನೇಕ ಅಣೆಕಟ್ಟುಗಳನ್ನು ಕಟ್ಟಲು ಉದ್ದೇಶಿಸಿತು.ಮೂರು ರಾಜ್ಯಗಳಲ್ಲಿ ಹರಿಯುವ ನರ್ಮದಾ ನದಿಗೆ ಅಡ್ಡಲಾಗಿ ೩೦ ದೊಡ್ಡ ಅಣೆಕಟ್ಟುಗಳು, ೧೩೫ ಮಧ್ಯಮ ಹಾಗು ೩೦೦೦ ಸಣ್ಣ ಅಣೆಕಟ್ಟುಗಳನ್ನು ಕಟ್ಟುವ ಮಹತ್ವಾಕಾಂಕ್ಷೀ ಯೋಜನೆಯೊಂದು ರೂಪುಗೊಂಡು ಸರ್ಕಾರದ ಅನುಮತಿ ಪಡೆಯಿತು.ಈ ದೊಡ್ಡ ಯೋಜನೆಗೆ ತಲೆಕೊಡಬೇಕಾಗಿದ್ದು ನದೀತೀರದಲ್ಲಿ ವಾಸಿಸುತ್ತಿದ್ದ ಜನ. ಸುಮಾರು ಮೂರು ಲಕ್ಷ ಜನರ ಸ್ಥಳಾಂತರ, ಕೃಷೀಭೂಮಿಯ ಮುಳುಗಡೆ, ನದೀನೀರಿನ ಹರಿವಿನಿಂದ ಆಗುವ ಪರಿಸರ ಬದಲಾವಣೆಗಳು ಇವು ಈ ಯೋಜನೆಯ ಕಪ್ಪುಚುಕ್ಕೆಗಳು. ಈ ಭಾಗಕ್ಕೆ ೧೯೮೫ರಲ್ಲಿ ಭೇಟಿ ನೀಡಿದ ಮೇಧಾ ಪಾಟ್ಕರ್ ಮೊದಲಿಗೆ ಅಲ್ಲಿನ ಸ್ಥಳೀಯ ಸರ್ಕಾರಗಳು ಸರ್ದಾರ್ ಸರೋವರ ಯೋಜನೆಯಲ್ಲಿ ನೊಂದವರ ಬಗ್ಗೆ ನಿರ್ಲಕ್ಷ್ಯ ತಾಳಿದ್ದನ್ನು ಗಮನಿಸಿದರು.ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದವರು ಆದಿವಾಸಿಗಳು, ದಲಿತರು ಹಾಗು ರೈತರು.ಅವರನ್ನೆಲ್ಲ

ಸಂಘಟಿಸಿತಮ್ಮ ಹಕ್ಕುಗಳನ್ನು ಕೇಳುವಂತೆ ಪ್ರೇರೇಪಿಸಿದರು. ಅವರ ಪರವಾಗಿ ಅವರ ಹಕ್ಕುಗಳನ್ನು ಕುರಿತು ಸರ್ಕಾರ ಸ್ಪಷ್ಟನೆ ನೀಡಬೇಕೆಂದು ಆಗ್ರಹಿಸಿ 'ನರ್ಮದಾ ಧರಣಗ್ರಸ್ತ ಸಮಿತಿ' ಮೂಲಕ ಧರಣಿ ಕೂರಲು ನಿರ್ಧರಿಸಿದರು. ಮೂವತ್ತಾರು ದಿನಗಳ ಬೃಹತ್ ಪಾದಯಾತ್ರೆ ನಡೆಯಿತು.ನಂತರ ಮಹಾರಾಷ್ಟ್ರ ಹಾಗು ಮಧ್ಯಪ್ರದೇಶಗಳ ಚಿಕ್ಕಪುಟ್ಟ ಹೋರಾಟ ಸಮಿತಿಗಳನ್ನು ಒಗ್ಗೂಡಿಸಿ ೧೯೮೯ ರಲ್ಲಿ ನರ್ಮದಾ ಬಚಾವೊ ಆಂದೋಲನ ಹುಟ್ಟುಹಾಕಲಾಯಿತು.

ನರ್ಮದಾ ಬಚಾವೋ ಆಂದೋಲನವು ಅನೇಕ ಜನರಿಂದ ನಡೆದಿದ್ದು ಅದಕ್ಕೊಂದು ಚಹರೆ ಬೇಕೆಂದು ತಮ್ಮನ್ನು ನಾಯಕಿಯನ್ನಾಗಿ ಮಾಡಿಕೊಳ್ಳಲಾಗಿದೆ ಎಂದು ಮೇಧಾ ವಿನಯದಿಂದ ಹೇಳಿಕೊಂಡಿದ್ದಾರೆ.ಆದರೆ ಈ ಆಂದೋಲನವು ಮೇಧಾ ಅವರ ನೇತೃತ್ವದಿಂದ ತಾತ್ವಿಕವಾಗಿ ಖಚಿತವಾದ ರೂಪ ಪಡೆದುಕೊಂಡಿತು; ಅರಾಜಕವಾಗಿದ್ದ ಜನಪರ ಚಳವಳಿಗಳ ಸರಪಳಿಗಳು ಕೂಡಿಕೊಂಡು ಹೋರಾಟದ ಸತ್ವವನ್ನು ಬಲಗೊಳಿಸಿಕೊಂಡವು.ಮೇಧಾ ಅವರು ಮಾಡಿದ್ದೇನು ಎನ್ನುವುದನ್ನು ನೋಡುವುದಾದರೆ ಈ ಚಳವಳಿಯ ಹಿನ್ನೆಲೆಯಲ್ಲಿ ಕೆಲವು ಮುಖ್ಯಾಂಶಗಳನ್ನು ಗುರುತಿಸಿ ಚರ್ಚಿಸಬಹುದು.

ಮೊದಲನೆಯದಾಗಿ ಮೇಧಾ ಅಣೆಕಟ್ಟು ವಿರೋಧಿ ಹೋರಾಟದಲ್ಲಿ ಅನೇಕ ಗುಂಪುಗಳು ಸಕ್ರಿಯವಾಗಿದ್ದವು. ಅಣೆಕಟ್ಟಿನ ಅಚ್ಚುಕಟ್ಟು ಪ್ರದೇಶಗಳ ಜನರಲ್ಲಿ ಅಣೆಕಟ್ಟಿನ ಕಟ್ಟುವಿಕೆಯಿಂದ ಸಮಸ್ಯೆಗಳಿಗೆ ತುತ್ತಾಗುವುದು ಸಾಮಾನ್ಯವಾಗಿದ್ದರೂ ಅವರೆಲ್ಲರ ಸಮಸ್ಯೆಗಳು ಒಂದೇ ಬಗೆಯದಾಗಿರಲಿಲ್ಲ. ಇದರಿಂದ ಆಣೆಕಟ್ಟು ವಿರೋಧಿ ಆಂದೋಲನವು ಒಂದು ದನಿಯನ್ನು ಪಡೆದುಕೊಳ್ಳುವುದು ಕಠಿಣವಾಗಿತ್ತು. ಮೇಧಾ ಅವರು ಇಂತಹ ಎಲ್ಲ ಸಂತ್ರಸ್ತ ಗುಂಪುಗಳನ್ನು ಒಂದು ವೇದಿಕೆಯಡಿ ತಂದರು. ಹೀಗಾಗಿ ನರ್ಮದಾ ಬಚಾವೊ ಆಂದೋಲನವು ಮೂರು ರಾಜ್ಯಗಳ ಆದಿವಾಸಿಗಳು, ಸಣ್ಣ ರೈತರು, ಜಮೀನ್ದಾರರು, ಮುಳುಗಡೆ ಸಂತ್ರಸ್ತರೆಲ್ಲರನ್ನೊಳಗೊಂಡ ಹೋರಾಟವಾಯಿತು.ಲಿಂಗ, ಜಾತಿ, ವರ್ಗಗಳನ್ನು ಒಳಗೊಂಡಿತು. ಸಾಮಾಜಿಕ ನ್ಯಾಯಗಳಿಗಾಗಿ ನಡೆಯುತ್ತಿದ್ದ ಅನೇಕ ಹೋರಾಟಗಳು ಇದರಲ್ಲಿ ಮಿಳಿತಗೊಂಡವು.ಆದುದರಿಂದ ಅದೊಂದು ಬಹುಸ್ತರೀಯವಾದ ರಾಷ್ಟ್ರೀಯ ಚಳವಳಿಯಾಗಿ ರೂಪುಗೊಂಡಿತು.

ನರ್ಮದಾ ಕಣಿವೆಯ ಯೋಜನೆಗಳು ಸರ್ಕಾರದ ಮಟ್ಟದಲ್ಲಿ ಯೋಜನೆ ಅನುಮತಿ ಪಡೆದಿದ್ದವಾದರೂ ಅದರ ಸ್ವರೂಪ ನರ್ಮದಾ ಕಣಿವೆಯ ಜನರಿಗೆ ತಿಳಿದಿರಲಿಲ್ಲ. ಸ್ಥಳೀಯರನ್ನು ಮುಳುಗಿಸಿ, ಸ್ಥಳಾಂತರಗೊಳಿಸಿ ಜಾರಿ ಮಾಡಲು ಹೊರಟಿದ್ದ ಈ ಯೋಜನೆಯ ಉದ್ದೇಶವು ಸ್ಥಳೀಯರ ಹಕ್ಕುಗಳನ್ನು ಕಿತ್ತುಕೊಂಡಿತ್ತಲ್ಲದೆ ಮಾನವ ಹಕ್ಕುಗಳ ಉಲ್ಲಂಘನೆಯನ್ನು ಮಾಡುವಂತದ್ದಾಗಿತ್ತು.ಇದನ್ನು ಮೇಧಾ ಮೊದಲು ನದೀಕೊಳ್ಳದ ಜನರಿಗೆ ಮನವರಿಕೆ ಮಾಡಿದರು.ಮೇಧಾ ಎತ್ತಿದ ಮುಖ್ಯ ಪ್ರಶ್ನೆಗಳಲ್ಲಿ ನೆಲದ ನದೀಪಾತ್ರದ ಜನರ ದಾಯಿತ್ವದ ಅಂಶ. ನೆಲದ ಹಕ್ಕು ನೀರಿನ ಹಕ್ಕು ಅಲ್ಲಿ ವಾಸಿಸುವ ಜನರ ಮೂಲವಾಗಿರುವಂತೆಯೇ ಅವರಿಗೆ ತಮ್ಮ ಜಾಗದಲ್ಲಿ ಏನಾಗುತ್ತಿದೆ ಎನ್ನುವುದನ್ನು ತಿಳಿಸಿಕೊಡುವುದು ಸರ್ಕಾರಗಳ ಕರ್ತವ್ಯವಾಗಿರುತ್ತದೆ ಎನ್ನುವುದನ್ನು ಮೇಧಾ ಪ್ರತಿಪಾದಿಸಿದರು. ಎಲ್ಲಕ್ಕಿಂತ ಮುಖ್ಯವಾಗಿ ನರ್ಮದಾ ಅಣೆಕಟ್ಟಿನ ಪ್ರಗತಿ ಯೋಜನೆಗಳ ವಿನ್ಯಾಸಗಳ ಸ್ವರೂಪವೇನು? ಹಾಗು ಅವುಗಳು ಸಾಮಾಜಿಕ ಆರ್ಥಿಕ ಪ್ರಗತಿಗಳ ಸೂಚಕಗಳಾಗಿ ಬಿಂಬಿತವಾಗುವುದರ ಹಿಂದಿನ ಉದ್ದೇಶಗಳೇನು ಎನ್ನುವುದನ್ನು ವಿವರಿಸಬೇಕು ಎಂಬುದು ಅವರ ಆಗ್ರಹಗಳಾಗಿದ್ದವು. ಅಂದಿನ ಪ್ರಧಾನಮಂತ್ರಿಗಳಿಗೆ ಈ ಬಗ್ಗೆ ಬಹಿರಂಗ ಪತ್ರ ಬರೆದ ಮೇಧಾ ಸರ್ದಾರ್ ಸರೋವರ ಯೋಜನೆಯಲ್ಲಿ ಪುನರ್ವಸತಿಯೊಂದೇ ಮಾನದಂಡವಲ್ಲ; ಅಲ್ಲಿನ ಸಂತ್ರಸ್ತರಿಗೆ ಯೋಜನೆಯ ಆರ್ಥಿಕ ಸಾಧಕ-ಬಾಧಕಗಳು, ಯೋಜನೆಯ ಲಾಭಾಂಶಗಳು ಹಾಗು ಅವುಗಳ ವಿತರಣೆಯನ್ನು ಪಾರದರ್ಶಕವಾಗಿ ತಿಳಿಸಬೇಕು ಎಂದು ಆಗ್ರಹಿಸಿದರು.ನರ್ಮದಾ ನದಿಯ ಅಣೆಕಟ್ಟಿನ ಪ್ರಯೋಜನವು ಅಲ್ಲಿ ಬದುಕುವ ಆದಿವಾಸಿಗಳು, ರೈತರು ಮತ್ತು ಕೆಲಸಗಾರರಿಗೆ ದೊರೆಯುವುದಿಲ್ಲ ಎನ್ನುವುದಾದರೆ ಅವರಾದರು ಯಾಕೆ ತಮ್ಮ ಬದುಕು ಮತ್ತು ತಮ್ಮ ಸಂಪನ್ಮೂಲಗಳನ್ನು ಕಳೆದುಕೊಳ್ಳಬೇಕು? ಎಂದು ಮೇಧಾ ಕೇಳಿದ್ದು ಸಾಮಾಜಿಕ ನ್ಯಾಯದ ಪ್ರಶ್ನೆಯೂ ಆಗಿತ್ತು.

೧೯೮೦ರ ಮೊದಲ ವರ್ಷಗಳಲ್ಲಿ ನಿರಾಶ್ರಿತರ, ಮುಳುಗಡೆಗೆ ಒಳಗಾದವರಿಗೆ ಪುನರ್ವಸತಿ ನೀಡುವ ಯೋಜನೆಗಳಿಗೆ ಒತ್ತಾಯಿಸಿ ಹೋರಾಟವನ್ನು ಮೇಧಾ ಅವರು ಸಂಘಟಿಸಿದರು(ಎನ್.ಡಿ.ಪಿ.ಒ ಸಮಿತಿ ಸ್ಥಾಪನೆ ಮಾಡುವುದರ ಮೂಲಕ). ನರ್ಮದಾ ಯೋಜನೆಯನ್ನು ಘೋಷಿಸುವಾಗ ಸರ್ಕಾರವು ಮುಳುಗಡೆಯಾಗುವ ಜಾಗಗಳ ಜನರಿಗೆ ಭೂಮಿ ನೀಡುವುದಾಗಿ, ಪರ್ಯಾಯ ಬದುಕುಗಳನ್ನು ಕಟ್ಟಿಕೊಡುವುದಾಗಿ ವಾಗ್ದಾನಗಳನ್ನು ಮಾಡಿತ್ತು. ಆದರೆ ಇವು ಎಷ್ಟು ಪೊಳ್ಳು ಎನ್ನುವುದನ್ನು ಮೇಧಾ ತಮ್ಮ ಜನಸಂಪರ್ಕಗಳಲ್ಲಿ ಅರಿತುಕೊಂಡರು. ಬೃಹತ್ ಯೋಜನೆಗೆ ಪರ್ಯಾಯವಾಗಿ ಸರ್ಕಾರ ಆಶ್ವಾಸನೆ ನೀಡಿದಂತೆ ಪುನರ್ವಸತಿಗೆ ಬೇಕಾದ ಭೂಮಿ ಎನ್ನುವುದು ಎಲ್ಲಿದೆ? ಎಂದು ನೋಡಿದರೆ ಯೋಜನೆ ತಿನ್ನುವ



ಭೂಮಿಗೆ ಪರ್ಯಾಯವಾಗಿ ಬೇರೆ ಭೂಮಿ ಇರಲೇ ಇಲ್ಲ. ಆದುದರಿಂದ ಸರ್ಕಾರಗಳು ಸುಳ್ಳು ಹೇಳುತ್ತಿವೆ, ಜನರಿಗೆ ಭ್ರಮೆ ಹುಟ್ಟಿಸುತ್ತಿವೆ ಎಂಬ ಅಂಶವನ್ನು ಸಾರ್ವಜನಿಕವಾಗಿ ಮೇಧಾ ತೆರೆದಿಟ್ಟರು.ಈ ನಡುವೆ ಕೆಲವು ಎನ್.ಜಿ.ಒ ಸಂಘಟನೆಗಳು ಅಣೆಕಟ್ಟುಗಳ ನಿರ್ಮಾಣದಲ್ಲಿ ಮುಳುಗಡೆ ಸಂತ್ರಸ್ತರಿಗೆ ಸೂಕ್ತ ಪರಿಹಾರಗಳನ್ನು ನೀಡಬೇಕು ಎನ್ನುವ ಬೇಡಿಕೆಯನ್ನಿಟ್ಟುಕೊಂಡು ಹೋರಾಟ ಮಾಡಿದವು. ಆದರೆ ಈ ಹೋರಾಟವನ್ನೂ ಸಹ ಮೇಧಾ ವಿಮರ್ಶೆ ಮಾಡಿದರು. ನರ್ಮದಾ ಯೋಜನೆಯ ದೊಡ್ಡ ಬಜೆಟ್ಟಿಗೆ ಹೋಲಿಸಿದರೆ ಸರ್ಕಾರ ನೀಡಲು ಉದ್ದೇಶಿಸಿರುವ ಪರಿಹಾರದ ಮೊತ್ತ ಅಲ್ಪಮೊತ್ತದ್ದು. ಹೋರಾಟಗಳು ಈ ವಿಷಯದಲ್ಲಿ ಖಚಿತವಾಗಿರಬೇಕು ಎಂದು ಹೇಳಿದರು.ಒಟ್ಟಾರೆ ಯೋಜನೆಯು ಅಲ್ಪಸಂಖ್ಯಾತ ಶ್ರೀಮಂತರಿಗೆ ಅನುಕೂಲಕಾರಿಯಾಗಿದೆ.ಪ್ರಗತಿಗಾಗಿ ತಮ್ಮ ಭೂಮಿ, ಜೀವನ ವಿಧಾನಗಳನ್ನೆಲ್ಲ ಬಲಿಕೊಡುವ ಜನರಿಗೆ ತಾವು ಕಳೆದುಕೊಂಡಿರುವುದಕ್ಕೆ ಸೂಕ್ತ ಪರಿಹಾರ ಪಡೆಯುವುದು ಹಕ್ಕಾಗಿರುತ್ತದೆ.ಯೋಜನೆಯನ್ನು ನಿಲ್ಲಿಸಲಾಗದಿದ್ದರೆ ಸಂತ್ರಸ್ತರಾದ ಜನರಿಗೆ ಅದರ ಲಾಭಾಂಶವನ್ನು ಕೊಡುವುದೇ ಸಾಮಾಜಿಕ ನ್ಯಾಯ ಎನ್ನುವುದನ್ನು ಆಂದೋಲನದ ಮೂಲಕ ಮೇಧಾ ಪ್ರತಿಪಾದಿಸಿದರು.

ಮೇಧಾ ದೃಷ್ಟಿಯಲ್ಲಿ ನರ್ಮದಾ ಬಚಾವೊ ಆಂದೋಲನವು ಹುಟ್ಟುಹಾಕಿದ ಪ್ರಗತಿ ಕಲ್ಪನೆಯನ್ನು ಪ್ರಶ್ನಿಸುವ ಛಾತಿ ಇಲ್ಲಿ ಮುಖ್ಯವಾದುದು:. ಪ್ರಗತಿಯ ಹೆಸರಲ್ಲಿ ನಡೆಯುವ ಯೋಜನೆಗಳ ಗುರಿ, ಉದ್ದೇಶಗಳೇನು?ಎನ್ನುವುದು ಸ್ಪಷ್ಟವಾಗಬೇಕು. ಮುಖ್ಯವಾಗಿ ಅಂತಹ ಯೋಜನೆಗಳು ಬಳಸಿಕೊಳ್ಳುವ ನೈಸರ್ಗಿಕ ಸಂಪನ್ಮೂಲಗಳು ಯಾವ ಪ್ರಮಾಣದಲ್ಲಿವೆ? ಅವುಗಳನ್ನು ಹೇಗೆ ನಿರ್ವಹಿಸಲಾಗುತ್ತದೆ ಎನ್ನುವುದು ಕೂಡ ಖಚಿತವಾಗಬೇಕು. ಸಾಮಾನ್ಯವಾಗಿ ಇಂತಹ ಬೃಹತ್ ಯೋಜನೆಗಳು ಜನರನ್ನು ಕತ್ತಲಲ್ಲಿಟ್ಟು ಲಾಭದತ್ತ ಗಮನ ಹರಿಸಿರುತ್ತವೆ. ಜನರಿಂದ ಜನರಿಗಾಗಿ ಎಂಬ ಆಶಯಗಳನ್ನು ಹೊಂದಿದ ಪ್ರಜಾಪ್ರಭುತ್ವವಾದಿ ದೇಶವು ಜನರ ಹಕ್ಕುಗಳನ್ನು ದಮನ ಮಾಡಿ ಉಳ್ಳವರ ಹಿತಾಸಕ್ತಿಗಳನ್ನು ಎತ್ತಿಹಿಡಿಯುತ್ತಿದೆಯೆಂಬ ಪ್ರಭುತ್ವ ವಿಮರ್ಶೆಯನ್ನೂ ಮೇಧಾ ಮತ್ತು ಅವರ ಜೊತೆಗಾರರ ಹೋರಾಟ ತೋರಿಸಿಕೊಟ್ಟಿತು.

ಮೇಧಾ ಅವರು ತಮ್ಮ ಹೋರಾಟವನ್ನು ಜಾಗತಿಕ ಮಟ್ಟಕ್ಕೆ ಸಂವಾದಿಯಾಗಿಸಿದರು. ನರ್ಮದಾ ಬಚಾವೋ ಆಂದೋಲನವು ಮೇಲ್ನೋಟಕ್ಕೆ ಅಣೆಕಟ್ಟು ವಿರೋಧೀ ಚಳವಳಿಯಾದರೂ ಅದರೊಳಗೆ ಅನೇಕ ಒಳಸುಳಿಗಳಿವೆ. ಪ್ರಾದೇಶಿಕವಾದ ಕಟ್ಟೋಣವೊಂದು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ನೆಲೆಗಳನ್ನು ತಾಗಿಕೊಂಡಿದೆ. ರಾಷ್ಟ್ರಗಳ ಪ್ರಗತಿಯ ನಡೆಗಳು, ಅಂತಾರಾಷ್ಟ್ರೀಯ ಪ್ರಗತಿಯ ಮಾನದಂಡಗಳ ಅನುಸಾರಿಯಾಗಿ ರೂಪುಗೊಳ್ಳುವುದರಿಂದ ನದಿ ಪಾತ್ರವೊಂದು ಸಂಪನ್ಮೂಲದ ಸಂಗತಿಯಾಗಿ ಆರ್ಥಿಕವಾಗಿ ಗಮನ ಸೆಳೆಯುವ ಸಂಗತಿಯಾಗುತ್ತದೆ.ಜಾಗತೀಕರಣದ ನಂತರ ಆರ್ಥಿಕತೆಯ ವಿವರಣೆಯು ಪ್ರಕೃತಿಯನ್ನು ಭೌತವಸ್ತುವನ್ನಾಗಿ ನೋಡುತ್ತಾ ಭೌತಿಕ ಸಂಪನ್ಮೂಲದ ಬಳಕೆಯ ಬಗ್ಗೆ ನೀತಿಗಳನ್ನು ರೂಪಿಸುತ್ತದೆ. ಇದರಿಂದ ಇಡೀ ಜಗತ್ತನ್ನು ಪರಿಸರ ನಾಶದತ್ತ ಒಯ್ಯುವುದು ನರ್ಮದಾ ಆಣೆಕಟ್ಟಿನ ವಿರೋಧಿ ಆಂದೋಲನ ತೋರಿಸಿತು.ಇದರಿಂದ ಅದು ಏಕಕಾಲಕ್ಕೆ ಪ್ರಾದೇಶಿಕವೂ ಅಂತಾರಾಷ್ಟ್ರೀಯವೂ ಆಯಿತು.ಜಾಗತೀಕರಣದ ಪ್ರಕ್ರಿಯೆಯಲ್ಲಿ ಪರಿಸರವನ್ನು ಮುನ್ನೆಲೆಗೆ ತಂದು ಚರ್ಚಿಸಬೇಕಾದ ಒತ್ತಡವನ್ನು ಹೆಚ್ಚಿಸಿತು. ಜೊತೆಗೆ ವಸಾಹತೋತ್ತರ ಸಮಾಜಗಳು ಪ್ರಗತಿಯ ಮಾದರಿಯನ್ನು ಪಾಶ್ಚಾತ್ಯ ದೇಶಗಳಿಂದಲೇ ಪಡೆಯುತ್ತವಾದ್ದರಿಂದ ಅಂತಾರಾಷ್ಟ್ರೀಯ ನೆಲೆಯಲ್ಲಿ ಇಂತಹ ಯೋಜನೆಗಳ ಪರಿಶೀಲನೆ ಅಗತ್ಯ ಎನ್ನುವುದನ್ನು ಈ ಹೋರಾಟ ನಿರೂಪಿಸಿತು.

ಮೇಧಾ ನರ್ಮದಾ ಕಣಿವೆಗೆ ಪ್ರವೇಶ ಮಾಡಿದ ಮೇಲೆ ನರ್ಮದಾ ಬಚಾವೊ ಆಂದೋಲನದ ಮೂಲಕ ಕೆಲವು ತಾತ್ವಿಕ ಪ್ರಶ್ನೆಗಳನ್ನು ಎತ್ತಿದರು. ಅಣೆಕಟ್ಟು ಯೋಜನೆಗಳ ಖರ್ಚು ವೆಚ್ಚಗಳೇನು?ಅದರ ಫಲಾನುಭವಿಗಳು ಯಾರು?




ಎಂಬುದನ್ನು ಕೇಳಿಕೊಳ್ಳಲೇಬೇಕಾದ ಅಗತ್ಯ ಪ್ರಶ್ನೆಗಳೆಂದು ಅವರು ಭಾವಿಸಿದರು. ಏಕೆಂದರೆ ಇಂತಹ ಯೋಜನೆಗಳಿಗೆ ಹಣ ಹೂಡುವ ಸಂಸ್ಥೆಗಳು, ಅವುಗಳ ಹೂಡಿಕೆಯ ಹಿಂದಿನ ಉದ್ದೇಶಗಳು ವ್ಯಾಪಕವಾದ ಉದಾರೀಕರಣದ ನೀತಿಗಳಿಗನುಗುಣವಾಗಿದ್ದು ಕೆಲವು ನಿರ್ದಿಷ್ಟ ರಾಜಕೀಯ ಹಿತಾಸಕ್ತಿಗಳನ್ನು ಕಾಪಾಡುತ್ತಿರುತ್ತವೆ. ಆದುದರಿಂದ ಒಂದು ಪ್ರಾದೇಶಿಕ ಹಂತದಲ್ಲಿ ನಡೆಯುವ ಅಣೆಕಟ್ಟು ನಿರ್ಮಾಣಗಳು ಸೂಕ್ಷ್ಮವಾಗಿ ನೋಡಿದಾಗ ಸಮಗ್ರ ಆರ್ಥಿಕ, ಸಾಮಾಜಿಕ ನೀತಿಗಳ ಬೀಜವಾಗಿರುತ್ತವೆ. ಉದಾರೀಕರಣ, ಗೋಳೀಕರಣಗಳ ನೀತಿಗಳು ಸಾಮಾಜಿಕ ನ್ಯಾಯಗಳನ್ನು ಬದಿಗೆ ಸರಿಸುತ್ತವೆ; ಜೀವಜಗತ್ತಿನ ನ್ಯಾಯಗಳನ್ನು ನಿರ್ಲಕ್ಷಿಸುತ್ತವೆ. ಈ ಹಿನ್ನೆಲೆಯಲ್ಲಿ ನರ್ಮದಾ ಕಣಿವೆಯ ಯೋಜನೆಯಲ್ಲಿ ವಿಶ್ವಬ್ಯಾಂಕಿನ ಮಧ್ಯಪ್ರವೇಶದ ಬಗ್ಗೆ ಮೇಧಾ ದನಿ ಎತ್ತಿದರು. ತಮ್ಮ ಸಂದರ್ಶನವೊಂದರಲ್ಲಿ ಹೇಳಿದಂತೆ ಅಣೆಕಟ್ಟು ಯೋಜನೆಗಳನ್ನು ಪ್ರಗತಿಯ ಹೆಸರಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ದೆಹಲಿ ಮುಂಬಯಿಯಲ್ಲೋ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಜಿನೀವಾ ಅಥವಾ ವಾಷಿಂಗ್‌ಟನ್ನಿನಲ್ಲಿಯೊ ಕುಳಿತು ನಿರ್ಧಾರ ತೆಗೆದುಕೊಳ್ಳಲಾಗದು.ಇದು ಒಂದು ರಾಷ್ಟ್ರದ ಸಾರ್ವಭೌಮತ್ವದ ಸಂಗತಿಯಾಗಿರುವಂತೆಯೇ ಒಂದು ಪ್ರದೇಶದ ಜನರ ಸಾಂವಿಧಾನಿಕ ಹಕ್ಕು ಸಹ ಆಗಿದೆ. ಕೇಂದ್ರೀಕೃತಗೊಂಡ ಎಲ್ಲ ಯೋಜನೆಗಳೂ ತಮ್ಮ ಬುಡದಲ್ಲಿ ಕತ್ತಲನ್ನು ಸಾಕಿಕೊಂಡಿವೆ. ಆದುದರಿಂದ ನರ್ಮದಾ ಕಣಿವೆಯ ಯೋಜನೆಯು ಏಕಕಾಲಕ್ಕೆ ಸ್ಥಳೀಯ ಮತ್ತು ಅಂತಾರಾಷ್ಟ್ರೀಯ; ಸೂಕ್ಷ್ಮ(micro) ಹಾಗು ಸಮಗ್ರ(macro) ನೆಲೆಗಳಲ್ಲಿದ್ದು ಅದನ್ನು ಎರಡೂ ಹಂತಗಳಲ್ಲಿ ಹೋರಾಡಬೇಕಿದೆ ಎನ್ನುವುದನ್ನು ಮೇಧಾ ತೋರಿಸಿಕೊಟ್ಟರು.

ಮೇಧಾ ಅವರ ಹೋರಾಟಗಳು ಗಾಂಧೀವಾದದ ಮೇಲೆ ರೂಪುಗೊಂಡಿವೆ. ಉಪವಾಸ, ಧರಣಾ, ಪಾದಯಾತ್ರೆ, ಅಸಹಕಾರ ಪ್ರತಿಭಟನೆಗಳ ಎಂಬ ಸಾಂಪ್ರದಾಯಿಕ ಮಾದರಿಗಳನ್ನು ಬಳಸಿ ಸರ್ಕಾರಗಳನ್ನೂ ವಿಶ್ವಬ್ಯಾಂಕ್ ಪ್ರಣೀತ ಆರ್ಥಿಕ ನೀತಿಗಳನ್ನೂ ಎದುರಿಸಬಹುದೆಂಬ ವಿಶ್ವಾಸವನ್ನು ಅವರ ಹೋರಾಟಗಳು ತಂದುಕೊಟ್ಟವು. ೧೯೮೭ರಲ್ಲಿ ವಿಶ್ವಬ್ಯಾಂಕ್ ನರ್ಮದಾ ಕಣಿವೆಯ ಯೋಜನೆಗಳಿಗೆ ಹಣಕಾಸಿನ ನೆರವು ನೀಡಲೆಂದು ಆ ಯೋಜನೆಯಲ್ಲಿ ಭಾಗಿಯಾಗುವ ರಾಜ್ಯಗಳ ನಾಯಕರುಗಳನ್ನು ಒಂದು ಸಭೆಗೆ ಆಹ್ವಾನಿಸಿತು.ಇದನ್ನು ತಡೆಗಟ್ಟಲೆಂದು ಮೇಧಾ ಅವರು ಮಧ್ಯಪ್ರದೇಶದಿಂದ ಗುಜರಾತಿನ ತನಕ ೩೬ ದಿನಗಳ ಪಾದಯಾತ್ರೆಯನ್ನು ಮಾಡಿದರು. ತಮ್ಮ ಜಾಥಾವು ಅಹಿಂಸಾತ್ಮಕವಾಗಿರಬೇಕು ಮತ್ತು ಸತ್ಯಾಗ್ರಹದ ಆಚರಣೆಯನ್ನು ಮಾಡಬೇಕು ಎನ್ನುವ ತತ್ವಗಳಿಗೆ ಬದ್ಧರಾಗಿರಬೇಕೆಂದು ತಮ್ಮ ಸಹಚರರಿಗೆ ಮೊದಲೇ ತಿಳಿಸಿದ್ದರು. ಆದರೆ ಗುಜರಾತನ್ನು ಪ್ರವೇಶಿಸಲು ಬಂದಾಗ ಅವರ ಗುಂಪು ರಾಜ್ಯದೊಳಗೆ ಪ್ರವೇಶ ಮಾಡಲು ಬಿಡದಂತೆ ಪೊಲೀಸ್ ಪಡೆಯನ್ನು ನಿಯೋಜಿಸಲಾಗಿತ್ತು.ಸತ್ಯಾಗ್ರಹಿಗಳ ಮೇಲೆ ಹಿಂಸಾಚಾರ ನಡೆಯಿತು; ಅವರನ್ನು ಬಂಧಿಸಿ ಜೈಲಿಗೆ ತಳ್ಳಲಾಯಿತು. ಅಕ್ಷರಶ: ಬ್ರಿಟಿಷ್ ವಸಾಹತುಶಾಹಿಯನ್ನು ನೆನಪಿಸುವಂತೆ ಪೊಲೀಸ್ ಮತ್ತು ಮಿಲಿಟರಿಗಳನ್ನು ಬಳಸಿ ಜನಮುಖೀ ಚಳವಳಿಗಳನ್ನು ಹತ್ತಿಕ್ಕಲಾಯಿತು. ಇದಕ್ಕೆ ಮೇಧಾ ಅವರ ಹೋರಾಟಗಳು ಹೊರತಲ್ಲ. ಆದರೆ ಅವರು ತಮ್ಮ ಹೋರಾಟಗಳನ್ನು ಅಹಿಂಸಾತ್ಮಕವಾಗಿ ಸಂಘಟಿಸುವ ಮೂಲಕ ಹಿಂಸಾತ್ಮಕವಾದ ಧೋರಣೆಗಳಿಗೆ ಸ್ಪಷ್ಟವಾದ ಉತ್ತರ ನೀಡಿದರು. ಇದಲ್ಲದೆ ಸಾಮಾಜಿಕ ನ್ಯಾಯ, ಹಕ್ಕುಗಳ ಬೆಂಬಲ ನೀಡಿದ ಭಾರತದ ಸಂವಿಧಾನದ ಆಶಯಗಳನ್ನು ಮೇಧಾ ತಮ್ಮ ಹೋರಾಟಗಳಲ್ಲಿ ಮತ್ತೆ ಮತ್ತೆ ಮುನ್ನೆಲೆಗೆ ತಂದರು.ಜನರ ಹಕ್ಕುಗಳ ಜಾಗೃತಿಯನ್ನು ಅವರು ಮಂಡಿಸಿದ್ದು ಇದೇ ಸಂವಿಧಾನದ ಆಶಯಗಳ ಮೇಲೆಯೇ. ಜನಮುಖೀ ಚಳವಳಿಗಳನ್ನೆಲ್ಲ ಸೇರಿಸಿ ಅವರು ನ್ಯಾಶನಲ್ *ಅಲಯನ್ಸ್ ಆಫ್ ಪೀಪಲ್ಸ್ ಮೂವ್‌ಮೆಂಟ್* ಎಂಬ ಸಂಘಟನೆ ಮಾಡಿದರು. ಅವರ ಪ್ರಕಾರ ಜಾತಿ, ಕೋಮುವಾದಿ ಹಾಗು ಕಾರ್ಪೊರೇಟ್ ಆದ ರಾಜಕಾರಣದ ರಾಜಕೀಯ ಸಂಸ್ಕೃತಿಯನ್ನು ಬದಲಿಸಬೇಕಿದೆ. ಏಕೆಂದರೆ ಅದು ಭ್ರಷ್ಟವೂ ದಮನಕಾರಿಯೂ ಆಗಿದ್ದು ಜನರ ಸಾಂವಿಧಾನಿಕ ಹಿತಾಸಕ್ತಿಗಳನ್ನು ಬಲಿಕೊಡುವಂತದ್ದು.

ಮೇಧಾ ತಮ್ಮ ಸಂದರ್ಶನವೊಂದರಲ್ಲಿ ಹೇಳಿದಂತೆ ಪ್ರತಿಭಟನೆ, ಆಂದೋಲನಗಳು ಪ್ರಜಾಪ್ರಭುತ್ವವನ್ನು ಜೀವಂತವಾಗಿಡುವಂತವು. ಆದುದರಿಂದ ಅದರಲ್ಲಿ ಸಕ್ತಿಯವಾಗಬೇಕು ಎನ್ನುವುದು ಅವರ ಅಭಿಪ್ರಾಯ. ಮೇಧಾ ಅವರು ನಡೆಸಿದ ಜಾಥಾಗಳು, ಉಪವಾಸ ಸತ್ಯಾಗ್ರಹಗಳು, ಧರಣಾಗಳು ಅಸಂಖ್ಯ. ಎಷ್ಟೋ ಬಾರಿ ಅವರ ಹೋರಾಟಗಳಿಂದ ಅವರ ಪ್ರಾಣಕ್ಕೆ ಕುತ್ತು ಬಂದಿದೆ. ಒಮ್ಮೆ ಮೇಧಾ ಅಹಮದಾಬಾದಿನಲ್ಲಿ ತಂಗಿದ್ದಾಗ ನರ್ಮದಾ ಯೋಜನೆಯ ತಡೆಯುವಿಕೆಯಿಂದ ರಾಜ್ಯಕ್ಕೆ ಅನ್ಯಾಯವಾಗಿದೆ ಎಂಬ ಪೂರ್ವಾಗ್ರಹದಲ್ಲಿ ಕೆಲಜನರ ಗುಂಪು ಅವರ ಮೇಲೆ ದಾಳಿ ಮಾಡಿತು. ಹೀಗೆ ಅನೇಕ ಬಾರಿ ಮೇಧಾ ತಮ್ಮ ಹೋರಾಟಗಳಿಗಾಗಿ ದೈಹಿಕವಾಗಿ ಪೆಟ್ಟು ತಿಂದಿದ್ದಾರೆ. ಅವರ ದೀರ್ಘಕಾಲೀನ ಉಪವಾಸ ಸತ್ಯಾಗ್ರಹ ಅವರನ್ನು ಸಾವಿನಂಚಿಗೆ ಕರೆದೊಯ್ದಿತ್ತು.ಸರ್ದಾರ್ ಸರೋವರ ಅಣೆಕಟ್ಟಿನ ಎತ್ತರ ಏರಿಸುವುದನ್ನು ತಡೆಯಲೆಂದು ಮುಳುಗಡೆಯಾಗುವ ಪ್ರದೇಶದಲ್ಲಿ 'ಜಲಸಮರ್ಪಣ'ವೆಂಬ ನೀರಿನಲ್ಲಿ ನಿಂತು ಪ್ರತಿಭಟನೆ ಮಾಡುವ ಆಂದೋಲನ ಮಾಡಲಾಯಿತು. ಸತತವಾಗಿ ಐದು ಗಂಟೆಗಳ ಕಾಲ ನಡುಮಟ್ಟದ ತನಕ ನೀರಿನಲ್ಲಿ ಮೇಧಾ ಜೊತೆ ಮಹಿಳೆಯರು ಪ್ರತಿಭಟನೆ ಮಾಡಿದರು. ಕಳೆದ ವರ್ಷ ನಡೆದ ಸಿ.ಎ.ಎ ವಿರೋಧೀ ಆಂದೋಲನಗಳಲ್ಲಿಯೂ ಮೇಧಾ ಅವರು ಉತ್ಸಾಹದಿಂದ ಭಾಗವಹಿಸಿ ಸಂವಿಧಾನಾತ್ಮಕ ಆಶಯಗಳ ಪರ ನಿಂತರು. ರಾಜಕೀಯ ಸಹ ಒಂದು ಚಳವಳಿ ಎಂದು ಹೇಳಿ ಆಮ್ ಆದ್ಮೀ ಪಕ್ಷಕ್ಕೆ ಸೇರಿ ಅದರಿಂದ ಲೋಕಸಭೆಗೂ ಸ್ಪರ್ಧಿಸಿದರು.

ಮೇಧಾ ಅವರ ಹೋರಾಟಗಳು ನಿರಂತರವಾಗಿ ಜನಜಾಗೃತಿಯನ್ನು ಮೂಡಿಸುವಲ್ಲಿ ಕ್ರಿಯಾಶೀಲವಾಗಿದ್ದಾವೆ. ನರ್ಮದಾ ಬಚಾವೋ ಆಂದೋಲನವು ವಿಶ್ವ ಮಟ್ಟದಲ್ಲಿ ಕಾರ್ಪೊರೇಟ್ ಶೈಲಿಯ ಆರ್ಥಿಕತೆಯಿಂದ ಹೆಚ್ಚಾಗುತ್ತಿರುವ ಪರಿಸರದ ವಿಕೋಪ ಮತ್ತು ಅಸಂತುಲನದ ವಿಷಯಗಳನ್ನು ಮುನ್ನೆಲೆಗೆ ತಂದಿತು. ಇದರಿಂದ ಮುಂದುವರೆದ ಮತ್ತು ಮುಂದುವರೆಯುತ್ತಿರುವ ರಾಷ್ಟ್ರಗಳೆಲ್ಲ ತಂತಮ್ಮ ಪ್ರಗತಿಯ ಕಲ್ಪನೆಗಳನ್ನು ಮರುಪರಿಶೀಲನೆ ಮಾಡಬೇಕೆನ್ನುವ ಒತ್ತಡ ಉಂಟಾಯಿತು; ವಿಶ್ವಬ್ಯಾಂಕ್ ನರ್ಮದಾ ಕಣಿವೆಯ ಯೋಜನೆಗಳಿಂದ ಹಿಂದೆಗೆಯಿತು; ಜಪಾನ್ ಸರ್ಕಾರ ನರ್ಮದಾ ಕಣಿವೆಯ ಯೋಜನೆಯಲ್ಲಿ ಕೆಲಸ ಮಾಡುತ್ತಿದ್ದ ತನ್ನ ದೇಶದ ಕಂಪೆನಿಗಳಿಗೆ ಸಾಲ ನೀಡುವುದನ್ನು ನಿಲ್ಲಿಸಿತು; ವಿಶ್ವಸಂಸ್ಥೆಯ ಕಡೆಯಿಂದ ಮೋರ್ಸ್ ಸಮಿತಿ ಬಂದು ನಿರಾಶ್ರಿತರ ಪುನರ್‌ವಸತಿ ಯೋಜನೆಯ ಸಾಧಕ ಬಾಧಕಗಳನ್ನು ಅವಲೋಕಿಸಿತು. ಇವು ಅವರ ಹೋರಾಟಗಳಿಗೆ ಸಂದ ಯಶಸ್ಸು. ಎಲ್ಲಕ್ಕಿಂತ ಹೆಚ್ಚಾಗಿ ಅವರು ಮಾಡಿದ್ದು ಜನಜಾಗೃತಿ ಮೂಡಿಸುವ ಕೆಲಸವು ಒಂದು ಜನಾಂಗದ ಕಣ್ಣು ತೆರೆಸುವ ಕೆಲಸ.


ಇಷ್ಟಾದರೂ ಕೆಲವು ಪ್ರಶ್ನೆಗಳಿವೆ. ಮೇಧಾ ಪಾಟ್ಕರ್ ಹೋರಾಟಗಳು ವೈಯಕ್ತಿಕವಾಗಿ ಅವರಿಗೆ ಅನೇಕ ಪ್ರಶಂಸೆ, ಪ್ರಶಸ್ತಿಗಳನ್ನು ತಂದುಕೊಟ್ಟವು.ಆದರೆ ಅವರ ಹೋರಾಟಗಳು ನಿರೀಕ್ಷಿತ ಫಲ ಕೊಡಲಿಲ್ಲವೇಕೆ? ನರ್ಮದಾ ಬಚಾವೊ ಆಂದೋಲನ ಎಷ್ಟೆಲ್ಲಾ ಜನಬೆಂಬಲ ಪಡೆದು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುದ್ದಿ ಮಾಡಿದರೂ ಪ್ರಭುತ್ವವೇ ಗೆದ್ದಿತೇಕೆ ಎನ್ನುವದನ್ನು ನಾವು ಕೇಳಿಕೊಳ್ಳಬೇಕು.ನರ್ಮದಾ ಕಣಿವೆಯ ತೀರ್ಪು ನ್ಯಾಯಾಲಯದಲ್ಲಿ ಒಮ್ಮೆ ಚಳವಳಿಗಾರರ ಪರವಾಗಿ ಬಂದಿತಾದರೂ ಅಂತಿಮವಾಗಿ ಸರ್ಕಾರದ ಪ್ರಗತಿಯ ನೀತಿಗೇ ಜಯ ಸಂದಿತು .ಹಾಗಾಗಿ ಕಾನೂನಾತ್ಮಕವಾಗಿ ಆಂದೋಲನ ಬಿಟ್ಟುಕೊಡಬೇಕಾಯಿತು.ಪೊಲೀಸ್ ಶಕ್ತಿ ಬಳಕೆಯಿಂದ ಪ್ರಭುತ್ವವು ಚಳವಳಿಗಾರರನ್ನು ಹಿಮ್ಮೆಟ್ಟಿಸಿತು. ಈ ಬೆಳವಣಿಗೆಗಳನ್ನು ಗಮನಿಸಿದರೆ ಹೊಸಗಾಲದ ತೀರ್ಪುಗಳೂ ತಮ್ಮ ಆತ್ಮಸಾಕ್ಷಿಗಳನ್ನು ಕಳೆದುಕೊಂಡಿವೆಯೋ ಅಥವಾ ಹೋರಾಟಗಳ ಐಡಿಯಾಲಾಜಿ, ಅವು ಬಳಸುವ ತಂತ್ರಗಳಲ್ಲಿ ದೋಷವಿದೆಯೊ ಎನ್ನುವ ಸಂದಿಗ್ಧ ಉಂಟಾಗುತ್ತದೆ.ಹೀಗೇಕಾಗುತ್ತಿದೆ? ಎನ್ನುವ ಪ್ರಶ್ನೆಯನ್ನು ಮೇಧಾ ಅವರಂತಹ ಹೋರಾಟಗಾರ್ತಿಯನ್ನು ನೆನಪಿಸಿಕೊಳ್ಳುತ್ತಲೇ ಕೇಳಬೇಕಾದ ಪ್ರಶ್ನೆ. ಹೋರಾಟಗಳು ಎಲ್ಲಿ ಸೋಲುತ್ತಿವೆ ಎನ್ನುವುದನ್ನು ಗುರುತಿಸಿಕೊಳ್ಳುವುದು ಇಂದಿನ ತುರ್ತು. ಇಲ್ಲಿ ಕೇಳಲೇಬೇಕಾದ ಇನ್ನೊಂದು ಪ್ರಶ್ನೆ ಎಂದರೆ ಈ ಹೊತ್ತಿನ ಹೋರಾಟಗಳೆಲ್ಲ ಮಹಿಳೆಯರು ನಾಯಕತ್ವ ವಹಿಸಿದ, ಮಹಿಳಾ ಕ್ರಿಯಾಶೀಲತೆಯ ಫಲವಾಗಿ, ಜೀವ ಕಾರುಣ್ಯದ ಪರವಾಗಿ ಹುಟ್ಟಿಕೊಂಡವು ಎನ್ನುವ ಕಾರಣಕ್ಕೇನಾದರೂ ಈ ಚಳವಳಿಗಳು ಸೋಲುತ್ತಿವೆಯೇ? ಎಂದು.ಮೇಧಾ ಅವರ ವ್ಯಕ್ತಿತ್ವದ ಘನತೆಯನ್ನು ನೆನೆಯುವ ಹೊತ್ತಲ್ಲೇ ವಿನಾಶಕಾರೀ, ಜನವಿರೋಧಿ ರಾಜಕಾರಣದ ಧೋರಣೆಗಳು ಹೆಚ್ಚಾಗುತ್ತಿರುವ ಬಗ್ಗೆ ವಿಷಾದ ಮೂಡುತ್ತಿದೆ.



(ಕವಯತ್ರಿ ಮತ್ತು ಸಾಹಿತ್ಯ ಚಿಂತಕಿಯಾಗಿರುವ ಚಿತ್ರದುರ್ಗದ ಈ ಲೇಖಕಿ ವೃತ್ತಿಯಿಂದ ಇಂಗ್ಲಿಷ್ ಅಧ್ಯಾಪಿಕೆಯಾಗಿದ್ದಾರೆ)

ಆಧುನಿಕ ವಿಜ್ಞಾನದ ಎದುರು ದೇಸಿಜ್ಞಾನ: ವಂದನಾ ಶಿವ ಎಂಬ ಕ್ರಾಂತಿಕಾರಿ ಚಿಂತಕಿ

–ರಾಜೇಂದ್ರ ಚೆನ್ನಿ



ವಂದನಾ ಶಿವ ಸಮಕಾಲೀನ ಜಗತ್ತಿನ ಬಹುಚರ್ಚಿತ ಮಹಿಳಾ ಪರಿಸರವಾದಿ ಮತ್ತು ಹೋರಾಟಗಾರ್ತಿ. ಅವರು ಕಟ್ಟಿದ ನವಧಾನ್ಯ ಸಂಸ್ಥೆಯು ಸಹಜಕೃಷಿ ಹಾಗೂ ಬೀಜರಕ್ಷಣೆಗಳಲ್ಲಿ ಉನ್ನತ ಸಂಶೋಧನೆಯನ್ನು ನಡೆಸುವ ಜೊತೆಗೆ ರೈತರು ಪಾರಂಪರಿಕ ಜ್ಞಾನದ ಮೂಲಕ ಕಂಡುಹಿಡಿದ ನೂರಾರು ತಳಿಗಳ ಬೀಜಗಳನ್ನು ಸಂರಕ್ಷಿಸುತ್ತಿದೆ. ಇಪ್ಪತ್ತಕ್ಕೂ ಹೆಚ್ಚು ಮುಖ್ಯ ಕೃತಿಗಳನ್ನು, ಅಸಂಖ್ಯಾತ ಲೇಖನಗಳನ್ನು ಬರೆದು ಜಗತ್ತಿನ ಮೂಲೆಮೂಲೆಗಳಲ್ಲಿ ಮಾತು, ಭಾಷಣ, ಸಂಭಾಷಣೆ ನಡೆಸುತ್ತಾ ಅನೇಕಾನೇಕ ಅರ್ಥಪೂರ್ಣ ಚಳುವಳಿಗಳಲ್ಲಿ ಭಾಗವಹಿಸಿದ್ದಾರೆ. ಭೌತವಿಜ್ಞಾನದ ವಿದ್ಯಾರ್ಥಿಯಾಗಿ ಕ್ಯಾನಡಾದ ವಿಶ್ವವಿದ್ಯಾಲಯವೊಂದರಲ್ಲಿ ಕ್ವಾಂಟಮ್ ಸಿದ್ಧಾಂತದ ಬಗ್ಗೆ ಪಿಎಚ್‌ಡಿ ಪಡೆದಿರುವ ವಂದನಾ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದು ಪರಿಸರ ರಕ್ಷಣೆಗೆ ಸಂಬಂಧಿಸಿದ ಅಧ್ಯಯನ ಹಾಗೂ ಹೋರಾಟಗಳಲ್ಲಿ. ಜಗತ್ತಿನ ಬಹುಮುಖ್ಯ ತತ್ವಜ್ಞಾನಿಗಳಲ್ಲಿ ಒಬ್ಬರಾದ ಅವರು ಶ್ರೇಷ್ಠ ಕಾವ್ಯದಲ್ಲಿ ಸಿಕ್ಕುವಂಥ ರೂಪಕಗಳ ಮೂಲಕ ಕಟ್ಟಿಕೊಟ್ಟಿರುವುದು ನಮ್ಮ ಬದುಕಿಗೆ ಬೆಂಬಲವಾಗಬಲ್ಲ ಜೀವಪರವಾದ, ಸಕಲ ಜೀವಾತ್ಮಗಳಿಗೆ ಲೇಸನ್ನು ಬಯಸುವ, ಭೂಮಿ(ವಸುಧೆ) ಒಂದು ಕುಟಂಬವೆಂದು ನಂಬುವ, ಅಂತಃಕರಣವಿಲ್ಲದ ಭಾವದರಿದ್ರ ಬುದ್ಧಿಯನ್ನು ಪ್ರಶ್ನಿಸುವ, ಎಲ್ಲಾ ಜೀವಿಗಳ ಸಮಗ್ರತೆ, ಬಹುತ್ವ, ಸೃಜನಶೀಲತೆಯನ್ನು ಪ್ರೀತಿಸುವ ಲೋಕದೃಷ್ಟಿಯೊಂದನ್ನು. ಆಧುನಿಕ ವಿಜ್ಞಾನವನ್ನು ತಮ್ಮ ಅಂಗೈಯಂತೆ ಬಲ್ಲ ಅವರು ಕಲಿತದ್ದು ಕಾಡುಗಳಿಂದ. ಒಂದು ನೈಸರ್ಗಿಕ ಅರಣ್ಯವು ವಿವಿಧ ಜೀವಿಗಳ ವೈವಿಧ್ಯವನ್ನು, ಸೃಷ್ಟಿಶೀಲತೆಯನ್ನು, ಸಮಾನತೆಯನ್ನು ಹಾಗೂ ಬಿಡಿಸಲಾಗದ ಕಳ್ಳುಬಳ್ಳಿಯ ಸಂಬಂಧಗಳನ್ನು ಪೋಷಿಸಿ ಬೆಳೆಸುತ್ತದೆ. ಅಲ್ಲಿ ಯಾರೂ ಮುಖ್ಯರಲ್ಲ; ಯಾರೂ ಅಮುಖ್ಯರಲ್ಲ, ಯಾರೂ ಯಜಮಾನರಲ್ಲ; ಯಾರೂ ಆಳುಗಳಲ್ಲ. ಆಕಾಶ ಮುಟ್ಟುವ ಮರ, ಮುಟ್ಟಿದರೆ ಮುರುಟುವ ಬಳ್ಳಿ ಇವೆಲ್ಲವುಗಳು ಕಾಡಿನ ಈ ಶುದ್ಧ ಪ್ರಜಾಪ್ರಭುತ್ವವಾದಿ ಲೋಕದಲ್ಲಿ ಸಮಾನರೆ. ಅಲ್ಲಿ ಸಹಕಾರವಿಲ್ಲದೆ, ಪರಸ್ಪರ ಅವಲಂಬನೆ ಇಲ್ಲದೆ ಅಸ್ತಿತ್ವವೇ ಇಲ್ಲ. ಎಷ್ಟೋ ಬಿಲಿಯನ್ ವರ್ಷಗಳಿಂದ ಪ್ರಕೃತಿಯು ಇಂಥ ಅದ್ಭುತ ಸಮಾಜವಾದಿ ಪ್ರಭುತ್ವವನ್ನು ಸೃಷ್ಟಿಸಿದೆ. ಇದರಾಚೆಗೆ ಕಲಿಯುವುದೇನಿದೆ? ವಂದನಾ ಅವರ ಪ್ರಸಿದ್ಧ ಲೇಖನದ ಶೀರ್ಷಿಕೆ "ನಾನು ಕಲಿತಿದ್ದೆಲ್ಲವನ್ನೂ ಅರಣ್ಯಗಳಿಂದಲೇ ಕಲಿತೆ". ಅವರ ಬರಹಗಳಲ್ಲಿ ನಾವು ನೋಡುವಂತೆ ಆಧುನಿಕ ವಿಜ್ಞಾನದಿಂದ, ಅಂದರೆ ಬಂಡವಾಳಶಾಹಿ, ವಸಾಹತುಶಾಹಿ ಹಾಗೂ ಇಂದಿನ ಕಾರ್ಪೋರೇಟ್ ಖೂಳರು ದುರ್ಬಳಕೆ ಮಾಡಿದ ವಿಜ್ಞಾನದಿಂದ, ಕಲಿಯುವುದಕ್ಕಿಂತ ಮರೆಯಬೇಕಾದದ್ದು, unlearn ಮಾಡಬೇಕಾದದ್ದು ಬಹಳ ಇದೆ.

ಮನುಷ್ಯನನ್ನು ನಿಸರ್ಗದಿಂದ ಬೇರ್ಪಡಿಸಿದ ವಿಜ್ಞಾನ

ಇದು ವಂದನಾ ಅವರ ಚಿಂತನೆಯ ಒಂದು ಅರ್ಥಪೂರ್ಣ ಭಾಗವಾಗಿದೆ. ಯೂರೋಪಿನಲ್ಲಿ ೧೭ನೇ ಶತಮಾನದಿಂದಾಚೆಗೆ ಪ್ರಬಲವಾಗಿ ಬೆಳೆದ ವಿಜ್ಞಾನವು ವಂದನಾ ಅವರು ಸರಿಯಾಗಿ ಗುರುತಿಸುವಂತೆ ಪುರುಷಪ್ರಧಾನ, ಸ್ತ್ರೀ ವಿರೋಧಿ, ಹಿಂಸಾತ್ಮಕ ಹಾಗೂ ಆಕ್ರಮಣಶೀಲರಾದ ಚಿಂತನೆಯಾಗಿತ್ತು. ಇದು ಅತಿಶಯೋಕ್ತಿಯಾಗಿ ಕಂಡರೆ ನಾವು ವಂದನಾ ಅವರ ಕೃತಿಗಳನ್ನು ವಿವರವಾಗಿ ಓದಬೇಕು. ಆಧುನಿಕ ವಿಜ್ಞಾನದ ಪ್ರತಿಪಾದಕನಾದ ಫ್ರಾನ್ಸಿಸ್ ಬೇಕನ್ ಈ ವಿಜ್ಞಾನದ ಪ್ರಣಾಳಿಕೆಯನ್ನು ರಚಿಸಿದ. ಅದು ಮಾಡುವ ಮೊದಲ ಕೆಲಸವೆಂದರೆ ಮನುಷ್ಯರನ್ನು ಪ್ರಕೃತಿಯಿಂದ ಬೇರ್ಪಡಿಸುವುದು. ಸಾವಿರಾರು ವರ್ಷಗಳಿಂದ ಅನೇಕ ನಾಗರೀಕತೆಗಳು ಮನುಷ್ಯರನ್ನು ಇತರ ಎಲ್ಲಾ ಜೀವಿಗಳಂತೆ ಪ್ರಕೃತಿಯ ಜೊತೆಗೆ ಅವಿನಾ ಸಂಬಂಧಹೊಂದಿದಂತೆಯೆ ನೋಡಿದ್ದವು. ಆದರೆ ಯೂರೋಪಿನ ಈ ಆಧುನಿಕ ವಿಜ್ಞಾನವು ಮೊದಲು ಮಾಡಿದ್ದು ಪ್ರಕೃತಿಯ ಭಾಗವಾಗಿ ಬೆಳೆದ ಮನುಷ್ಯ ಪ್ರಜ್ಞೆಯನ್ನು ಅದರಿಂದ ಬೇರ್ಪಡಿಸಿ ಮನುಷ್ಯರ ಸೃಜನಶೀಲನ ಕಲ್ಪನೆಯನ್ನು(imagination)ನಾಶಮಾಡತೊಡಗಿದ್ದು. ವಂದನಾ ಹೇಳುವಂತೆ ಆ ವರೆಗೆ Alma mater (ಭೂಮಿತಾಯಿ) ಆಗಿದ್ದ ಭೂಮಿ ಈಗ Terra Nullius ಅಂದರೆ ಜೀವವಿಲ್ಲದ ಖಾಲಿ ವಸ್ತುವಾಗುತ್ತದೆ. ಈ ವಿಜ್ಞಾನದ ಜೊತೆಗೇ ಆರಂಭವಾದ ವಸಾಹುತಶಾಹಿಯ ಹಿಂದಿನ ವೈಚಾರಿಕ ಆಕೃತಿ ಕೂಡ ವಸಾಹುತುಗಳನ್ನು ಕಬಳಿಸಲು ಕಾಯುತ್ತಿರುವ ನಿರ್ಜನ ಪ್ರದೇಶಗಳನ್ನಾಗಿ ಕಾಣುತ್ತದೆ. ಯಾಕೆಂದರೆ ಅಲ್ಲಿರುವ ಆದಿವಾಸಿಗಳು, ಮೂಲನಿವಾಸಿಗಳು ಈ ವೈಚಾರಿಕ ಆಕೃತಿಯ ಪ್ರಕಾರ "ಮನುಷ್ಯರು ನಾಗರೀಕರು ಅಲ್ಲ" ಏಕೆಂದರೆ ಯೂರೋಪಿನ ಆಧುನಿಕ ಮಾನವನಂತೆ ಅವರು ಭೂಮಿಯನ್ನು ಪಳಗಿಸುವುದಿಲ್ಲ; "ಅಭಿವೃದ್ಧಿಗೊಳಿಸುವುದಿಲ್ಲ". ಇಂಗ್ಲೆಂಡ್‌ನಿಂದ ಅಮೇರಿಕ ಖಂಡಕ್ಕೆ ಬಂದ ಈ ಆಧುನಿಕರು ಅಲ್ಲಿಯ ಮೂಲನಿವಾಸಿ ಇಂಡಿಯನ್ನರನ್ನು ನೀವು ಯಾಕೆ ಭೂಮಿ ಉಳುವುದಿಲ್ಲ ಎಂದಾಗ ಅವರ ನಾಯಕನೊಬ್ಬ "ಅದು ಹೇಗೆ ನನ್ನ ತಾಯಿಯ ಗರ್ಭದಲ್ಲಿ ನೇಗಿಲನ್ನು ನೆಟ್ಟು ಅವಳನ್ನು ಸೀಳುವುದು" ಎಂದನಂತೆ!

ಮನುಷ್ಯ ಕೇಂದ್ರಿತ ಚಿಂತನೆಯಾದ ಆಧುನಿಕ ವಿಜ್ಞಾನ

ಎರಡನೆಯದಾಗಿ ಈ ಆಧುನಿಕ ವಿಜ್ಞಾನವು ನಾವಂದುಕೊಂಡಂತೆ ಗಂಡು–ಹೆಣ್ಣು, ಸ್ಥಳೀಯ–ಸಾರ್ವತ್ರಿಕ ಇವುಗಳ ಬಗ್ಗೆ ನಿರಪೇಕ್ಷವಾಗಿರಲಿಲ್ಲ. ವಂದನಾ ವಾದಿಸುವಂತೆ ಈ ವಿಜ್ಞಾನವು ಗಂಡು ಜ್ಞಾನವೇ ಆಗಿತ್ತು. ಹೀಗಾಗಿ ಭೂಮಿಯ ಮೊದಲ ಕೃಷಿಕಳಾಗಿದ್ದು, ಪರಿಸರದ ಬಹುತ್ವವನ್ನೂ ಪೋಷಿಸಿದ ಸ್ತ್ರೀಯರನ್ನು, ಅವರ ಜ್ಞಾನವನ್ನು ಅದು ಹೊರಗಿಟ್ಟಿತು. ಸ್ತ್ರೀಯನ್ನು ಭೋಗಿಸುವಂತೆ ಪ್ರಕೃತಿಯನ್ನು ಭೋಗಿಸುವುದು ಈ ವಿಜ್ಞಾನದ ಗುರಿಯಾಯಿತು. ಇಲ್ಲಿ ವಂದನಾ ಮಂಡಿಸುವ ಮುಖ್ಯವಾದವೆಂದರೆ ಆಧುನಿಕವಿಜ್ಞಾನದ ತಳಹದಿಯಲ್ಲಿರುವುದು ಸಾಂಪ್ರದಾಯಕವಾದ, ನೆಲದ ಜ್ಞಾನ ಪರಂಪರೆಗಳನ್ನು ಮತ್ತು ಸ್ತ್ರೀಲೋಕವು ತಮ್ಮ ದಿನನಿತ್ಯದ ಹೊರೆಗಳಿಂದ ಸಂಪಾದಿಸಿದ ಅಮೂಲ್ಯವಾದ ಜ್ಞಾನವನ್ನು ಅಮಾನ್ಯ ಮಾಡಿ ಹೊರಗಿಡುವ ಪ್ರವೃತ್ತಿ. ಹೀಗಾಗಿಯೇ ಅದು ಅನೇಕ ಜೀವಪರ, ಜೀವಂತ ಚಿಂತನಾ ಪರಂಪರೆಗಳಿಂದ ದೂರವಾಗಿ ಆಕ್ರಾಮಕವಾಗತೊಡಗಿತು. ಮನುಷ್ಯನೇ ಈ ವಿಶ್ವದ ಕೇಂದ್ರವೆನ್ನುವ ತಾತ್ವಿಕತೆಯನ್ನು ಈ ವಿಜ್ಞಾನವು ಒಪ್ಪಿಕೊಂಡಿತು. ಂಟಿಣುಡಿಂಠಿಂಭಿಜಟಿಣಡುಟ ಎಂದು ಕರೆಯುವ ಈ ಚಿಂತನೆ ಇಂದಿಗೂ ಪರಿಸರ ವಿನಾಶದ ಕ್ರಿಯೆಗಳ ಮೂಲದಲ್ಲಿದೆ. ಇಲ್ಲಿ ಚಟಿಣುಡಿಂಠಿಂಥ ಮಾನವ ಅಂದರೆ ಗಂಡಸು ಎನ್ನುವುದೂ ನೆನಪಿನಲ್ಲಿರಬೇಕು.

ಅಲ್ಲಿಂದಾಚೆಗೆ ಆಧುನಿಕ ಮಾನವರು ಹುಡುಕತೊಡಗಿದ್ದು ಭೂಮಿಯನ್ನು ಪರಿಸರವನ್ನು ಲಾಭಕ್ಕಾಗಿ, ಲೋಭಕ್ಕಾಗಿ ಬಳಸಿಕೊಳ್ಳುವ ಜ್ಞಾನವನ್ನು. ಅವರು ಮರೆತದ್ದು ಏನೆಂದರೆ ಹಲವು ಬಿಲಿಯನ್ ವರ್ಷಗಳಿಂದ ಈ ಭೂಮಿ, ಅದರಲ್ಲಿ ಹುಟ್ಟಿದ ಸಸ್ಯಗಳು, ಪ್ರಾಣಿಗಳು ಅತ್ಯಂತ ಸಂಕೀರ್ಣವಾದ, ಶ್ರೀಮಂತವಾದ ಜೀವಜಾಲವನ್ನು ಆಗಲೇ ನಿರ್ಮಿಸಿಕೊಂಡಿದ್ದವು. ಇವು ನಮಗೆ ಇನ್ನೂ ಅರ್ಥವಾಗಿಲ್ಲ, ಏಕೆಂದರೆ ಇದರಲ್ಲಿ ಸಕಲಜೀವಿಗಳೂ ಭಾಗವಹಿಸಿವೆ. ವಂದನಾ ಕೆಲವೊಮ್ಮೆ ಬಳಸುವ ಭಾಷಾಡಂಬರದಿಂದಾಗಿ ಅವರು ಇವೆಲ್ಲವನ್ನು ರಮ್ಯಗೊಳಿಸುತ್ತಿದ್ದಾರೆ ಎನ್ನಿಸಬಹುದು. ಆದರೆ ಅವರು ದಾಖಲಿಸುತ್ತಿರುವುದು ಚಾರಿತ್ರಿಕ ವಾಸ್ತವಗಳನ್ನೇ. ಸಾವಿರಾರು ವರ್ಷ ಮನುಷ್ಯರು ತಮ್ಮ ಅಸ್ತಿತ್ವಕ್ಕೆ ಮಾತ್ರ ಸಾಕಾಗುವ ಉತ್ಪಾದನಾ ವ್ಯವಸ್ಥೆ, ಕೃಷಿ ಇವುಗಳನ್ನು ಏಕೆ ಅವಲಂಬಿಸಿದರು? ಭಾರತದ ರೈತರು ೧ ಲಕ್ಷದಷ್ಟು ಭತ್ತದ ತಳಿಗಳನ್ನು ಶೋಧಿಸಿ, ಬೆಳೆಸಿದ್ದು ಯಾವ ಜೈವಿಕ ವಿಜ್ಞಾನದಿಂದ, ತಂತ್ರಜ್ಞಾನದಿಂದ? ಒಂದು ಉದಾಹರಣೆ ನೋಡಿ. ಸುನಾಮಿಯಿಂದಾಗಿ ಸಮುದ್ರದ ನೀರು ಕೃಷಿಭೂಮಿಗೆ ನುಗ್ಗಿ ಭೂಮಿಯಲ್ಲಿ ಲವಣ ಸೇರಿಕೊಂಡು ಭತ್ತ ಹೇಗೆ ಬೆಳೆಯುವುದು ಎಂದು ಸಂಕಟದಲ್ಲಿದ್ದಾಗ ವಂದನಾ ಅವರ 'ನವಧಾನ್ಯ' ಸಂಸ್ಥೆಯು ನಮ್ಮ ರೈತರೇ ಕಂಡುಹಿಡಿದಿದ್ದ ಲವಣ ಪ್ರತಿಶೋಧ



ಶಕ್ತಿ ಇರುವ ಭತ್ತವನ್ನು ಅಲ್ಲಿಯ ರೈತರಿಗೆ ತಲುಪಿಸುತ್ತಾರೆ, ಚೆನ್ನಾಗಿ ಇಳುವರಿ ಬರುತ್ತದೆ! ಇಂಥ ವಿಶಿಷ್ಟತಳಿಗಳಿಗೆ ಯಾವ ಲ್ಯಾಟಿನ್ ಭಾಷೆಯ ಹೆಸರು ಇಲ್ಲ. ರೈತರ ಆಡುಮಾತಿನ ಹೆಸರುಗಳೇ ಇವೆ. ಒಂದು ತಳಿಯ ಹೆಸರು 'ರಾವಣ!'

ಸ್ತ್ರೀ ಭ್ರೂಣ ಹತ್ಯೆಯೂ, ಹಸಿರು ಕ್ರಾಂತಿಯೂ

ಆಧುನಿಕ ವಿಜ್ಞಾನಕ್ಕೆ ಬಂಡವಾಳದ ಅಗಾಧ ಶಕ್ತಿ ದೊರೆತಾಗ ಅದು ಮಾಡಿದ್ದೇನೆಂದರೆ ನಮ್ಮ ರೈತರ ಈ ಅದ್ಭುತ ಜೈವಿಕ ತಂತ್ರಜ್ಞಾನವನ್ನು ಕದ್ದಿದ್ದು ಅಥವಾ ಕೆಲವೊಮ್ಮೆ ಅದನ್ನು ನಾಶಮಾಡಿದ್ದು. ವಂದನಾ ಅವರ ಪ್ರಕಾರ ವಸಾಹತುಶಾಹಿಯು ಭೂಮಿಯನ್ನು, ಜ್ಞಾನವನ್ನು, ತಿಳುವಳಿಕೆಯನ್ನು ವಸಾಹತೀಕರಣಗೊಳಿಸಿತು. ಮುಖ್ಯ ಕಾರಣವೆಂದರೆ ಆಧುನಿಕ ಜ್ಞಾನ-ವಿಜ್ಞಾನಗಳು ಜ್ಞಾನದ ಬಹುಮುಖತೆಯನ್ನು ತಿರಸ್ಕರಿಸಿ ಏಕಮುಖೀ ಚಿಂತನೆಯನ್ನು ಬಲಪಡಿಸುತ್ತದೆ. ಉದಾಹರಣೆಗೆ ಸಾವಿರಾರು ತಳಿಗಳ ಬದಲಾಗಿ ಹೆಚ್ಚು ಇಳುವರಿ ಕೊಡುವ ಒಂದು ತಳಿಯನ್ನು ಶೋಧಿಸುತ್ತದೆ. ಬೆಳೆಗಳಿಗೆ ಕಂಟಕವಾಗುವ pestಗಳನ್ನು ಸಂಭಾಳಿಸುವ ಸಾಂಪ್ರದಾಯಿಕ ಕ್ರಮಗಳನ್ನು ಬಿಟ್ಟು pesticide(ಕೀಟನಾಶಕ) ಹೆಸರಲ್ಲಿ ಸಾಕ್ಷಾತ್ ವಿಷವನ್ನೇ ಬಳಸಲು ಪ್ರೇರೇಪಿಸುತ್ತದೆ. ಏಕೆಂದರೆ ಈ ಜ್ಞಾನವು ಸಮಗ್ರವಲ್ಲ; ಅದು ತುಂಡರಿಸಿದ (fragmented) ಜ್ಞಾನ. ಹೀಗಾಗಿ ಹತ್ತಿಬೆಳೆಗೆ ಕಂಟಕವಾದ ಬಾಲ್‌ಕ್ರಿಮಿಯನ್ನು ಪ್ರತಿರೋಧಿಸುವ ತಳಿಯನ್ನು ಸಂಶೋಧಿಸುವಾಗ ಅದರ ದೂರಗಾಮಿ ಪರಿಣಾಮಗಳನ್ನು ಅದು ಕಾಣುವುದಿಲ್ಲ, ವಂದನಾ ಶಿವ ಅವರ ಬಹುಪ್ರಸಿದ್ಧ ವಿಮರ್ಶೆಯು ಭಾರತದ ಹೆಮ್ಮೆಯ ಹಸಿರುಕ್ರಾಂತಿಯ ಬಗ್ಗೆ ಇದೆ. ಈ ಹಸಿರುಕ್ರಾಂತಿ ಭಾರತದ ಬಡತನವನ್ನು ನಾಶಮಾಡುತ್ತದೆ ಎಂದು ಮಹಾಕಾವ್ಯಗಳನ್ನೇ ಬರೆಯಲಾಯಿತು. ವಂದನಾ ಅವರ Staying Alive, Soil not Oil ಈ ಕೃತಿಗಳನ್ನು ಓದಿದರೆ ಈ ಕ್ರಾಂತಿಯ ಹೂರಣವು ಗೊತ್ತಾಗುತ್ತದೆ. ಈ ಕ್ರಾಂತಿಯು ಬಳಸಿದ 'ಪವಾಡ ಸದೃಶ' ತಳಿಗಳು ಅಪಾರವಾದ ಪ್ರಮಾಣದ ರಾಸಾಯನಿಕ ಗೊಬ್ಬರವನ್ನು, ಹೆಚ್ಚಿನ ನೀರನ್ನು ಕೀಟನಾಶಕಗಳನ್ನು ಬಯಸುವ ತಳಿಗಳು. ವಂದನಾ ಅವುಗಳನ್ನು high yield ತಳಿಗಳು ಎಂದು ಕರೆಯುವುದನ್ನೇ ವಿರೋಧಿಸುತ್ತಾರೆ. ಈ ತಳಿಗಳು ವಿಸ್ತಾರವಾದ ಭೂಮಿ ಹಿಡುವಳಿ, ಹೆಕ್ಟರ್‌ಗಳು, ನೀರಿನ ಸರಬರಾಜು ಇವುಗಳನ್ನು ಅವಲಂಬಿಸಿದ್ದರಿಂದ ಅವುಗಳ ಕೃಷಿ ಪದ್ಧತಿಯು ಪುರುಷಪ್ರಧಾನವಾಯಿತು. ಏಕಾಏಕಿ ಮಹಿಳೆಯರು ಅನುತ್ಪಾದಕ ಹೊರೆಗಳಾಗಿ ಕಾಣತೊಡಗಿದರು. ಹಸಿರು ಕ್ರಾಂತಿಯಿಂದ ಹುಟ್ಟಿಕೊಂಡ ನವ ಶ್ರೀಮಂತವರ್ಗವು ಸ್ತ್ರೀ ಭ್ರೂಣಹತ್ಯೆಯನ್ನು ವ್ಯಾಪಕವಾಗಿ ಬಳಸಿಕೊಂಡಿತು. ಕೆಲವು ವರ್ಷಗಳಲ್ಲಿ ಜಮೀನು ಜವುಗು ಹಿಡಿದು ಹಾಳಾಯಿತು. ಸಣ್ಣ ರೈತರು, ಮಹಿಳೆಯರು ಪರಾವಲಂಬಿಗಳಾದರು. ಇದೇ ರೀತಿ ಬಿ.ಟಿ.ಕಾಟನ್ ಬೀಜಗಳ ಮೇಲೆ ಏಕಸ್ವಾಮ್ಯವನ್ನು ಪಡೆದ Mansanto ಕಂಪನಿಯು ಎಲ್ಲಾ ಕಾನೂನುಗಳನ್ನು ಮೀರಿ ಈ ತಳಿಯನ್ನು ಪ್ರಚಾರಕ್ಕೆ ತಂದಿತು. ಅದು ಸುಳ್ಳು ವಿಜ್ಞಾನವನ್ನು ಆಧರಿಸಿದ್ದು, ಸೋತಿದ್ದರಿಂದ ಅಪಾರ ಸಂಖ್ಯೆಯ ರೈತರು ಆತ್ಮಹತ್ಯೆ ಮಾಡಿಕೊಂಡರು.

ಆದ್ದರಿಂದಲೇ ವಂದನಾ ಅವರ ಹೋರಾಟವು genetically modified ವಸ್ತುಗಳ ವಿರುದ್ಧವೇ ಇದೆ. ಸ್ವತಃ ವಿಜ್ಞಾನಿಗಳೇ ಈ ತಂತ್ರಜ್ಞಾನವು ಇನ್ನೂ ಪರಿಪೂರ್ಣವಾಗಿಲ್ಲವೆಂದು ಹೇಳಿದರೂ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಪಾಶವೀ ಶಕ್ತಿಯನ್ನು ಬಳಸಿಕೊಂಡು ಅವುಗಳನ್ನು ಮಾರುಕಟ್ಟೆಗೆ ತರುತ್ತಿವೆ. ವಿಶೇಷವಾಗಿ ಕೃಷಿ ವಲಯದಲ್ಲಿ ವಂದನಾ ಅವರ ಪ್ರಕಾರ ಇದು agroecologyಯನ್ನು ಅಂದರೆ ಕೃಷಿಪರಿಸರವಾದವನ್ನು ಧಿಕ್ಕರಿಸುವ agribusineಸ ಫಲವಾಗಿದೆ. ಇದರ ಹಿಂದಿರುವ ಅಂತರ್‌ರಾಷ್ಟ್ರೀಯ ಬಂಡವಾಳಶಾಹಿ ಕಾರ್ಪೋರೇಟ್‌ಗಳು ತಮ್ಮ ಲಾಭಕ್ಕಾಗಿ ಪರಿಸರವನ್ನು ಮನುಷ್ಯರನ್ನೂ ಬಲಿಕೊಟ್ಟಿರುವ ಅಂಕಿ ಸಂಖ್ಯೆ ದಾಖಲೆಗಳನ್ನು ವಂದನಾ ಒದಗಿಸಿಕೊಡುತ್ತಾರೆ. ಅವು ಎಂಥ ಭೀಕರ ಸತ್ಯಗಳನ್ನು ತೆರೆದಿಡುತ್ತವೆಯೆಂದರೆ ಯಾರಿಗಾದರೂ ಮೈನಡುಕವುಂಟಾಗಬೇಕು. ಇದು ಎಷ್ಟು ನಿಜವೆನ್ನುವುದು ಇಪ್ಪತ್ತು ವರ್ಷಗಳ ಹಿಂದೆ ನನ್ನ ಅನುಭವಕ್ಕೆ ಬಂದಿತು. ನಾನು ಮಾನ್‌ಸ್ಯಾಂಟೋ ಕಂಪನಿ ಮತ್ತು ಅದನ್ನು ಬೆಂಬಲಿಸುವ ವಿಜ್ಞಾನಗಳ ಬಗ್ಗೆ Deccan Heraldನಲ್ಲಿ ಲೇಖನವೊಂದನ್ನು ಬರೆದೆ. ಆ ಲೇಖನದ ಜೊತೆಗೆ ಮಂಜುಳಾ ಬರೆದ ಲೇಖನದಲ್ಲಿ ಬೆಂಗಳೂರಿನ ಪ್ರತಿಷ್ಠಿತ ವಿಜ್ಞಾನ ಸಂಸ್ಥೆಯಲ್ಲಿ ಇದೇ ಮೊನಸ್ಯಾಂಟೋ ಕಂಪನಿಗೆ ಸಂಶೋಧನೆಗೆ ಅನುವು ಮಾಡಿಕೊಡಲಾಗಿದೆ ಎಂದು ಬರೆದರು. ಎರಡೇ ದಿನಗಳಲ್ಲಿ ಆ ಸಂಸ್ಥೆಯ ನಿರ್ದೇಶಕರು ಈ ಪತ್ರಿಕೆಯಲ್ಲಿ ಪ್ರಕಟಿಸಿದ ತಮ್ಮ ಪತ್ರದಲ್ಲಿ ನಮ್ಮಿಬ್ಬರನ್ನು ವಿಜ್ಞಾನ ವಿರೋಧಿ ಎಡಪಂಥೀಯರು ಎಂದು ಖಾರವಾಗಿ ಟೀಕಿಸಿದರು. ವಂದನಾ ಶಿವ ಅವರು ಇಂಥ ವಿಜ್ಞಾನಿಗಳು ಹಾಗೂ ಸಂಸ್ಥೆಗಳಿಂದ ಅನುಭವಿಸಿದ ಹಿಂಸೆ, ಅವಮಾನ ಅಷ್ಟಿಷ್ಟಲ್ಲ. ಒಂದು ಸಾರಿಯಂತೂ golden rice ಅನ್ನು ಭಾರತಕ್ಕೆ ತರಕೂಡದು ಎಂದು ವಿರೋಧಿಸಿದ್ದರಿಂದ ಅವರಿಗೆ Shit Award ಘೋಷಿಸಲಾಯಿತು! ಸ್ಟ್ಯಾನ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಭಾಷಣಕ್ಕಾಗಿ ಆಹ್ವಾನ ನೀಡಿದ್ದಕ್ಕಾಗಿ ನೂರಾರು ವಿಜ್ಞಾನಿಗಳು ವಿರೋಧಿಸಿ ಬರೆದರು. ವಂದನಾರವರ ವಾದಗಳು ಅವೈಜ್ಞಾನಿಕವೆಂದು ಅನೇಕ ನೋಬೆಲ್ ಪ್ರಶಸ್ತಿ ವಿಜೇತರು ಬರೆದರು. ಈ ನೋಬೆಲ್ ರಾಜಕೀಯದ ಬಗ್ಗೆ ವಂದನಾ ಬರೆದಿದ್ದನ್ನು ನೀವೆ ಓದಿನೋಡಿ!

ಆದರೆ ವಂದನಾ ಅವರು ಈ ರಾಜಕೀಯವನ್ನು ಮೀರಿದ ಬಹು ಆಳದ ವಿಚಾರಗಳನ್ನು ಮಂಡಿಸುತ್ತಾರೆ. ಆಧುನಿಕ ವಿಜ್ಞಾನದ ಏಕಮುಖಿ ಚಿಂತನೆಯು ಬಂಡವಾಳಶಾಹಿಗೆ ಅತ್ಯಂತ ಅನುಕೂಲಕರವಾಗಿ ಕಂಡಿತು. ಏಕೆಂದರೆ ಅವರ ಚಲನೆಯು ಸದಾ ಏಕಸ್ವಾಮ್ಯದ ಕಡೆಗೆ ಇರುತ್ತದೆ, ಅಲ್ಲದೆ ಈ ಶಕ್ತಿಗಳು ಮೂಲತಃ ಪ್ರಜಾಪ್ರಭುತ್ವ ಹಾಗು ಸಮಾನತೆಯ ವಿರೋಧಿಗಳು. ಅವು ಯಜಮಾನಿಕೆ ಹಾಗೂ ಸರ್ವಾಧಿಕಾರವನ್ನು ಬಯಸುತ್ತವೆ. ವಂದನಾ ಅವರು ಬಂಡವಾಳಶಾಹಿಗಳನ್ನು Robber Baron ಅಂದರೆ ದರೋಡೆಕೋರ ದಣಿಗಳು ಎಂದೇ ಕರೆಯುತ್ತಾರೆ. ಏಕೆಂದರೆ ಅವರ ಶ್ರೀಮಂತಿಕೆ ಬಂದಿದ್ದು ತಮ್ಮದಲ್ಲದ ಭೂಮಿ, ತಮ್ಮದಲ್ಲದ ಉತ್ಪಾದನೆ, ತಮ್ಮದಲ್ಲದ ಹಣ ಇವುಗಳನ್ನು ದರೋಡೆ ಮಾಡಿದ್ದರಿಂದಲೇ ಬಂದದ್ದು. ಆಧುನಿಕ ಜಗತ್ತಿನ ಪ್ರಥಮ ಕಾರ್ಪೋರೇಟ್ ಕಂಪನಿಯಾದ East India Company ಬಂಡವಾಳಶಾಹಿ-ವಸಾಹತುಶಾಹಿಯ ಜಂಟಿ ಕಾರ್ಯಾಚರಣೆಯ ದ್ಯೋತಕವಾಗಿದ್ದನ್ನು ಅವರು ಚರ್ಚಿಸುತ್ತಾರೆ. ಇತ್ತೀಚಿಗೆ ವಿಲಯಂ ಡ್ಯಾರ್‌ಲಿಂಪಲ್ ಈ ಕಂಪನಿಯ ಚರಿತ್ರೆಯನ್ನು The Anarchy ಎನ್ನುವ ಕೃತಿಯಲ್ಲಿ ಅದ್ಭುತವಾಗಿ ದಾಖಲಿಸಿದ್ದಾನೆ. ಈ ಕೃತಿಯ ಕೊನೆಯ ಪುಟಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳ ದರೋಡೆಕೋರ ಸ್ವರೂಪವನ್ನು ಅಲ್ಲಿಂದಲೆ ಕಾಣಬಹುದು ಎಂದು ಎಚ್ಚರಿಸಿದ್ದಾನೆ.

ವಂದನಾ ಶಿವ ಅಪಾರ ತಾಳ್ಮೆ ಹಾಗೂ ವಿದ್ವತ್ತಿನಿಂದ ಇದೇ ವಾಸ್ತವಗಳನ್ನು ದಾಖಲಿಸುತ್ತಾರೆ. ಹೀಗಾಗಿ ವಿಜ್ಞಾನವೇ ನಮ್ಮ ಕಾಲದ ಪುರಾಣವಾಗಿರುವ (myth) ಈ ಕಾಲದಲ್ಲಿ ಅದರ ಚರಿತ್ರೆಯನ್ನು ವಂದನಾ ಅವರಿಂದ ಕೇಳಿಸಿಕೊಳ್ಳುವ ಅವಶ್ಯಕತೆ ಇದೆ. ವಂದನಾ ಅವರು ನಂಬುವ ಮೌಲ್ಯಗಳು ಶಾಂತಿ, ನ್ಯಾಯ ಮತ್ತು ತಾಳಿಕೆ (sustainability). ಈ ಮೌಲ್ಯಗಳು ನಮ್ಮ ಸೃಷ್ಟಿಯಲ್ಲ, ವಿಶ್ವದ ಅನೇಕ ಜನಾಂಗಗಳು ಈ ಮೌಲ್ಯಗಳನ್ನು ನಂಬಿ, ಪಾಲಿಸಿ ಬೆಳೆಸಿವೆ. ರೆಡ್ ಇಂಡಿಯನ್ ನಾಯಕನ ಮಾತುಗಳು ವಂದನಾ ಅವರ ಪ್ರಣಾಳಿಕೆಯಾಗಿವೆ. "ಭೂಮಿ ಮನುಷ್ಯನಿಗೆ ಸೇರಿದ್ದಲ್ಲ; ಮನುಷ್ಯ ಭೂಮಿಗೆ ಸೇರಿದ್ದಾನೆ". ಹಾಗೆಯೆ ಗಾಂಧಿಯವರ ಮಾತು ಕೂಡ." The Earth has enough for every one's needs! But not for someone's greed". ವಂದನಾ ಅವರ ಚಿಂತನೆಗೆ ಗುರು ಎಂದರೆ ಬಿಶ್ನೋಯೀ ಜನಾಂಗದ (tribe) ಗುರು ಹೇಳಿದ ಮಾತುಗಳು: "ಮರಗಳನ್ನು ಸಂರಕ್ಷಿಸಿ: ಅವು ಪವಿತ್ರವಾಗಿವೆ. ನಿಮ್ಮ ಪ್ರಾಣ ಕೊಟ್ಟಾದರೂ ಅವುಗಳನ್ನು ಉಳಿಸಿ". ಇದೇ ಜಗತ್ತಿನ ಮೊದಲ "ಅಪ್ಪಿಕೋ" ಚಳುವಳಿಯ ಮೂಲ ಆಧಾರವಾಗಿದೆ.

ಅಭಿವೃದ್ಧಿಯಿಂದ ಸುಸ್ತಾಗಿದೆ; ನಾವಿನ್ನು ಬದುಕಬೇಕಿದೆ!

ದೊರೆಯೊಬ್ಬನ ಅರಮನೆಗಾಗಿ ಮರಗಳನ್ನು ಕಡಿಯಲು ಬಂದಾಗ ತಮ್ಮ ತಲೆಗಳನ್ನು ಕಡಿಯಲು ಬಿಟ್ಟು ಮರಗಳನ್ನು ಅಪ್ಪಿಕೊಂಡ ಮಹಿಳೆಯರೇ ಈ ವಿಶ್ವದ ಶ್ರೇಷ್ಠ ಪರಿಸರವಾದಿಗಳು. ಘಡ್‌ವಾಲ್ ಪ್ರದೇಶದಲ್ಲಿ ಮರಗಳನ್ನು ಕಡಿಯಲು ಬಂದವರಿಗೆ ನಡುಹಗಲಿನಲ್ಲಿ ಕಂದೀಲುಗಳನ್ನು ಹಿಡಿದುಕೊಂಡು ಬಂದು, "ನೀವು ಕುರುಡರು; ಅದಕ್ಕೇ ನಿಮಗೆ ಈ ಮರಗಳಲ್ಲಿ ಕೇವಲ ಮರಗಟ್ಟು(timber) ಕಾಣುತ್ತದೆ. ಅವುಗಳ ಜೀವ ಕಾಣುವುದಿಲ್ಲ" ಎಂದು ಹಾಡಿನ ಮೂಲಕ ಹೇಳಿಕೊಟ್ಟ ಮಹಿಳೆಯರು ನಮ್ಮ ಕಾಲದ ಸಂತರು. ಒಬ್ಬ ಚಿಂತಕ "ಅಭಿವೃದ್ಧಿ"ಯ ಬಗ್ಗೆ ಹೇಳಿದ ಮಾತು ವಂದನಾ ಅವರಿಗೆ ಪ್ರಿಯವಾಗಿದೆ. "ನನ್ನ ಜನ ಅಭಿವೃದ್ಧಿಯಿಂದಾಗಿ



ಸುಸ್ತಾಗಿ ಬಿಟ್ಟಿದ್ದಾರೆ. ಅವರು ಈಗ ಕೇವಲ ಬದುಕಲು ಬಯಸುತ್ತಾರೆ". ಬಾಸಮತಿ ಅಕ್ಕಿಯನ್ನು patent ಮಾಡಿದವರಿಗೆ ರೈತರು ಬರೆಯುತ್ತಾರೆ, "ಸ್ವಾಮಿ ನೀವು ಹೀಗೆ ಮಾಡಿದ್ದೀರಿ ಎಂದು ಕೇಳಿದ್ದೇವೆ. ಇದು ತಪ್ಪು. ಎಷ್ಟೋ ಕಾಲದಿಂದ ನಮ್ಮ ಹಿರೀಕರು ಇದನ್ನು ಬಳಸಿದ್ದಾರ!"

ಆದರೆ ನಾವು ಈಗ ಯಾವ ಸ್ಥಿತಿಯಲ್ಲಿದ್ದೇವೆ? ಮಾಹಿತಿ ತಂತ್ರಜ್ಞಾನ, ಅಂತರ್‌ರಾಷ್ಟ್ರೀಯ ಬಂಡವಾಳಶಾಹಿ, ಆಧುನಿಕ ವಿಜ್ಞಾನ ಇವುಗಳು ಒಂದಾಗಿ ಜಗತ್ತಿನ ೧% ಇರುವ ಬಲಾಢ್ಯ ಕಂಪನಿಗಳು ಜಗತ್ತಿನ ೯೯% ಜನ ಸಮುದಾಯಗಳನ್ನು ಅನಾಥರನ್ನಾಗಿಸುತ್ತಿವೆ. ಆಧುನಿಕ ಪ್ರಜಾಪ್ರಭುತ್ವಗಳು ಅವುಗಳಿಗೆ ಅನುಕೂಲ ಮಾಡಿಕೊಡುತ್ತವೆ. ಮಾಧ್ಯಮಗಳು, ವಿಜ್ಞಾನಿಗಳು ಅವುಗಳ ಪರವಾಗಿ ದುಡಿಯುತ್ತಾರೆ. ಈ ಕಂಪನಿಗಳು "ಬರೆದ" "ವಿದ್ವತ್" ಪ್ರಬಂಧಗಳನ್ನು ಪ್ರಸಿದ್ಧ ವಿಜ್ಞಾನಿಗಳು ಪ್ರಕಟಿಸುತ್ತಾರೆ. ಅತ್ಯಂತ ಪ್ರಸಿದ್ಧ ಸಂಸ್ಥೆಯೊಂದು ೬೫% ನಿಂದ ೭೦% ನೋಬೆಲ್ ವಿಜೇತರ ಸಂಶೋಧನೆಯನ್ನು ಪ್ರಾಯೋಜಿಸಿದೆ. ಆದರೆ ಅದು ಪರಿಸರ ವಿರೋಧಿ, ರೈತ ವಿರೋಧಿ ರಾಜಕೀಯವನ್ನೂ ಬೆಂಬಲಿಸಿದೆ!

ಇದೆಲ್ಲವನ್ನೂ ಹೇಳಿ, ಬರೆದ ವಂದನಾ ಇಷ್ಟೊತ್ತಿಗೆ ಒಬ್ಬ ಸಿನಿಕರಾಗಬೇಕಿತ್ತು ಅಥವಾ ವಿಷಾದದ ಕಡುನೀಲಿಯಲ್ಲಿ ಮುಳುಗಬೇಕಿತ್ತು. ಆದರೆ ವಸ್ತುಸ್ಥಿತಿಯು ಸಂಪೂರ್ಣವಾಗಿ ಬೇರೆಯಾಗಿದೆ. ವಂದನಾ ಶಿವ ಅವರನ್ನು ನೋಡಿದವರಿಗೆ ಅಚ್ಚರಿಯಾಗುತ್ತದೆ. ಅಗಲವಾದ ಕುಂಕುಮವನ್ನು ಮತ್ತು ಸಾಂಪ್ರದಾಯಿಕ ಸೀರೆಯನ್ನು ಧರಿಸುವ ವಂದನಾ ಅವರ ಜೀವನ ಪ್ರೀತಿ, ಅವರ ಹಾಸ್ಯ, ಗಟ್ಟಿಗತನ ಇವುಗಳನ್ನು ನೋಡಿದರೆ ಅರೇ ಅನ್ನಿಸುತ್ತದೆ. ಅದಕ್ಕೆ ಅವರ ವ್ಯಾಖ್ಯಾನವೇ ಸರಿಯಾಗಿದೆ. "ನನ್ನ ಚಿಂತನೆ, ಬರಹ, ಹೋರಾಟಗಳ ಹಿಂದೆ ಇರುವುದು ಕೇವಲ ಪ್ರೀತಿ ಮತ್ತು ಅಂತಃಕರಣ. ಅದ್ಭುತವಾದ ಸೃಷ್ಟಿಯನ್ನು ನಾವೆಲ್ಲರು ಸಮಾನವಾಗಿ, ಖುಷಿಯಿಂದ, ಇನ್ನೊಬ್ಬರಿಗೆ ತೊಂದರೆಯಾಗದಂತೆ ಅನುಭವಿಸೋಣ. ಇದು ಭೂಮಿಯ ಮೇಲಿನ ಎಲ್ಲಾ ಮನುಷ್ಯ ಜೀವಿಗಳ ಹಕ್ಕು". ಅಂದರೆ ಅವರಿಗೆ ಒಂದು ಕಡೆಗೆ ಬಂಡವಾಳವು ತನ್ನ ದೈತ್ಯಶಕ್ತಿಯಿಂದಾಗಿ ಜಗತ್ತಿನ ಚರ್ಯೆಯನ್ನು ಬದಲಿಸಿರುವುದರ ಅರಿವು ಇದೆ. ಅದು ಇಂದು ಮಾಹಿತಿ ತಂತ್ರಜ್ಞಾನದಿಂದ ಬೆಂಬಲದಿಂದ ಬೆಳೆಯುತ್ತಿರುವ ಬಗೆಯ ಅರಿವೂ ಇದೆ. ಆದರೆ, ಈ ವಿದ್ಯಮಾನಗಳನ್ನು ವಿರೋಧಿಸುವ ಶಕ್ತಿಗಳ ಬಗ್ಗೆ ನಂಬಿಕೆಯೂ ಇದೆ. ಕಾರಣವೆಂದರೆ ಅವರು ಸ್ವತಃ ಈ ಚಳುವಳಿಗಳಲ್ಲಿ ಭಾಗವಹಿಸಿದ್ದಾರೆ. ಇವು ಅವರ ಆತ್ಮವಿಶ್ವಾಸಕ್ಕೆ ಕಾರಣವಾಗಿದೆ. ಅಮೇರಿಕದ ವಿಶ್ವವಿದ್ಯಾಲಯವೊಂದರಲ್ಲಿ ಅವರ ಭಾಷಣದ ನಂತರ ಒಬ್ಬ ಮಹಿಳೆ ಕೇಳಿದ ಪ್ರಶ್ನೆಯೆಂದರೆ "ಇಷ್ಟೆಲ್ಲಾ ವಿರೋಧ, ದ್ವೇಷ, ಅನುಭವಿಸಿದ ಮೇಲೆಯೂ ನೀವು ನಿಮ್ಮ ಸಮತೋಲವನ್ನು ಹೇಗೆ ಕಾಯ್ದುಕೊಂಡಿದ್ದೀರಿ?" ವಂದನಾ ಅವರ ಉತ್ತರವೆಂದರೆ ಇದನ್ನು ನಾನು ನನ್ನ ತಾಯಿಯಿಂದ ಕಲಿತಿದ್ದೇನೆ. ನನ್ನ ನಂಬಿಕೆಯೆಂದರೆ ನಾವು ಸಹಾನುಭೂತಿಯನ್ನು(compassion) ಸಾರ್ವತ್ರಿಕಗೊಳಿಸಬೇಕೇ ಹೊರತು ಬಂಡವಾಳಶಾಹಿಯನ್ನಲ್ಲ".

ರೈತಾಪಿ ಮಹಿಳೆಯರೇ ನಮ್ಮ ನಿಜವಾದ ಸ್ತ್ರೀವಾದಿಗಳು

ಇವೆಲ್ಲಕ್ಕಿಂತ ಮುಖ್ಯ ಕಾರಣವೆಂದರೆ ಅವರಿಗೆ ಪರ್ಯಾಯ ಚಿಂತನೆ, ಜೀವನ ಪದ್ಧತಿಗಳಲ್ಲಿ ಗಾಢವಾದ ನಂಬಿಕೆಯಿದೆ. ಈ ನಂಬಿಕೆಯ ಮೂಲವಿರುವುದು ವೈಚಾರಿಕತೆಯಲ್ಲಿ ಅಲ್ಲ. ಅವರು ಹತ್ತಿರದಿಂದ ನೋಡಿದ ಮಹಿಳೆಯರಲ್ಲಿ ಇರುವ ಅಪಾರ ತಿಳುವಳಿಕೆ, ಕ್ರಿಯಾಶೀಲತೆ ಹಾಗೂ ಸಮನ್ವಯತೆಯಲ್ಲಿ, ಮಹಿಳೆಯರು ಕೇವಲ ಶೋಷಿತ ಬಲಿಪಶುಗಳು ಎನ್ನುವ ಒಂದು ಮಾದರಿಯ ಸ್ತ್ರೀವಾದವನ್ನು ಅವರು ಎಂದೂ ಒಪ್ಪಿಯೇ ಇಲ್ಲ. ಅವರ ಪ್ರಕಾರ ಮಹಿಳೆಯರೇ ಪರಿಸರ ಸಂರಕ್ಷಣೆಯ ಕ್ರಿಯಾಶೀಲರು. ಅವರು ಅಂದರೆ ಅನಕ್ಷರಸ್ಥ, ಸಾಮಾನ್ಯ ರೈತಾಪಿವರ್ಗದ ಮಹಿಳೆಯರೇ ಜಗತ್ತಿನ ಶ್ರೇಷ್ಠ ಪರಿಸರವಾದಿಗಳು. ಅವರೇ ನಿಸರ್ಗದ ಬಹುತ್ವವನ್ನು ಪೊರೆದವರು, ಇದು ಅತ್ಯಂತ ಮುಖ್ಯವಾದುದು. ಜಗತ್ತಿನ ಪ್ರಭಾವಿ ಸ್ತ್ರೀವಾದವು ಮಧ್ಯಮ ಹಾಗೂ ಮೇಲುವರ್ಗದ ಮಹಿಳೆಯರ ಚಿಂತನೆಯಾಗಿ ಬೆಳೆದಿದೆ. ಈ ಸ್ತ್ರೀವಾದಕ್ಕೆ ಕಪ್ಪು ಮಹಿಳೆಯರನ್ನು, ಮೂರನೇ ಜಗತ್ತಿನ ಮಹಿಳೆಯರನ್ನು ಒಳಗೊಳ್ಳಲು ಬಹಳ ಸಮಯಬೇಕಾಯಿತು. ಆದರೆ ವಂದನಾ ಶಿವ ತಮ್ಮ ಅರಿವನ್ನು ಈ ಸೀಮಿತ ಸಾಮಾಜಿಕ ವಲಯದ ಆಚೆಗಿನ ಮಹಿಳೆಯರ ಮೂಲಕ ಬೆಳೆಸಿಕೊಂಡರು.

ದೀರ್ಘವಾದ ಚಿಂತನೆಯ ಮೂಲಕ ಅವರು ಕಂಡುಕೊಂಡ ವೈಚಾರಿಕ ಆಕೃತಿಗಳೆಂದರೆ 'Earth Democracy ಮತ್ತು 'Oneness vs 1%' ಎನ್ನುವ ಪರಿಕಲ್ಪನೆಗಳು. 'Earth Democracy' ಎಂದರೆ ಭೂಮಿಯ ಜೊತೆಗಿನ ನಮ್ಮ ಬದುಕು ಕಲ್ಪಿಸಿಕೊಟ್ಟ ಮೌಲ್ಯಗಳನ್ನು ಆಧರಿಸಿದ ಸಾಮಾಜಿಕ ರಾಜಕೀಯ ವ್ಯವಸ್ಥೆಯಾಗಿದೆ. ತಾವು ಅರಣ್ಯಗಳಿಂದ ಕಲಿತಿದ್ದನ್ನು ಆಧಾರವಾಗಿರಿಸಿಕೊಂಡು ವಂದನಾ ಈ ಪರಿಕಲ್ಪನೆಯನ್ನು ಕಟ್ಟಿಕೊಟ್ಟಿದ್ದಾರೆ. ಇದು ಶಾಂತಿ, ಸಹಜೀವನ, ಸಮಾನತೆ ನ್ಯಾಯ ಹಾಗೂ ಪರಿಸರದ ಬಗೆಗಿನ ಪ್ರಾಮಾಣಿಕ ಕಾಳಜಿಯನ್ನು ಸಮರ್ಥಿಸುತ್ತದೆ. ನನಗೆ ಗೊತ್ತಿರುವಂತೆ ಇಂದಿನ ಆಧುನಿಕೋತ್ತರ ವೈಚಾರಿಕ ಪರಿಸರದಲ್ಲಿ ಇವುಗಳನ್ನು ಭಾವುಕ, ಆದರ್ಶಪರ, ರಮ್ಯ ಎಂದು ಕರೆಯಲಾಗುತ್ತಿದೆ. ಈ ಸುಲಭವಾದ ಪದಗಳನ್ನು ಬಳಸುವ ಮೊದಲು ವಂದನಾಶಿವ ಎತ್ತುವ ಪ್ರಶ್ನೆಗಳಿಗೆ ನಾವು ಉತ್ತರ ಕೊಡಲೇಬೇಕು:

೧. ವಿಜ್ಞಾನವು ಇಂದಿನ ಪರಿಸ್ಥಿತಿಯ ಎಡವಟ್ಟುಗಳಿಗೆ ಕಾರಣವೇ ಅಲ್ಲವೆನ್ನುವುದಾದರೆ ಅದು ಯಾಕೆ ಇಷ್ಟು ಸುಲಭವಾಗಿ ಬಂಡವಾಳಶಾಹಿಗೆ ಬೆಂಬಲವಾಗಿದೆ?

೨. ಜಗತ್ತಿನ ಇತಿಹಾಸದಲ್ಲಿ ಅನೇಕ ಜ್ಞಾನ ಪರಂಪರೆಗಳು ಹುಟ್ಟಿ ಬೆಳೆದಿವೆ. ಹಾಗಿದ್ದರೆ ಯಾಕೆ ಯೂರೋಪು– ಕೇಂದ್ರಿತ ಆಧುನಿಕ ಜ್ಞಾನವು ಮಾತ್ರ ಜ್ಞಾನವೆಂದು ಸ್ವೀಕೃತವಾಗಿದೆ?

೩. ಬಂಡವಾಳಶಾಹಿಯನ್ನು ವಿರೋಧಿಸುವವರು ಹಳೆಯ ಕಾಲದ ಸಮಾಜವಾದಿಗಳು ಎನ್ನುವುದಾದರೆ ವಿಪರೀತ ಬಡತನ, ಭೀಕರ ಅಸಮಾನತೆ, ರೈತರ ಆತ್ಮಹತ್ಯೆ ಇವೆಲ್ಲವುಗಳಿಗೆ ಕಾರಣವಾದ ಸಂಗತಿಗಳು ಯಾವುವು?


೪. ಇಂದಿನ ಕಾರ್ಪೋರೇಟ್ ಬಂಡವಾಳಶಾಹಿಯು ನಾಗರೀಕತೆಯ ಅತ್ಯುನ್ನತ ಸ್ಥಿತಿಯೆಂದರೆ ಅದು ಯಾಕೆ ಸುಳ್ಳು, ಮೋಸ, ಹಿಂಸೆ, ಭ್ರಷ್ಟಾಚಾರವನ್ನು ಅವಲಂಬಿಸಿದೆ?

೫. ಖಾಸಗೀಕರಣ, ಜಾಗತೀಕರಣಗಳು ಎಲ್ಲಾ ಸಮಸ್ಯೆಗಳಿಗೆ ರಾಮಬಾಣಗಳಾಗಿದ್ದರೆ ಅವು ಎಲ್ಲಿ ಪರಿಹಾರವನ್ನು ತಂದಿವೆ ಎನ್ನುವ ಸಣ್ಣ ಪಟ್ಟಿಯನ್ನು ಕೊಡಬಹುದೆ?

ಡಿಮಾನಿಟೈಜೇಷನ್, ಜಿಎಸ್‌ಟಿ ಮತ್ತು ಬಿಲ್ ಗೇಟ್ಸ್

ವಂದನಾ ಶಿವ ಅವರು ಇತ್ತೀಚಿನ ಎರಡು ಕೃತಿಗಳು ನನ್ನ ಮಟ್ಟಿಗೆ ತುಂಬಾ disturbing ಆಗಿವೆ. ಜಗತ್ತಿನ ಜನಸಂಖ್ಯೆಯ ಒಟ್ಟು ೧% ಆಗಿರುವ ಕೆಲವರು ಇಡೀ ಜಗತ್ತನ್ನು ನಾಶಮಾಡುವ ಶಕ್ತಿ ಪಡೆಯುತ್ತಿರುವಾಗ ನಮ್ಮ ಕ್ರಿಯೆಗಳು ಏನಾಗಿರಬೇಕು? ನಾನೂ ಸೇರಿದಂತೆ ಈವರೆಗೆ ಮುಗ್ಧವಾಗಿ ನಂಬಿದ್ದ ಬಿಲ್‌ಗೇಟ್ಸ್‌ನಂಥವರು ಈ ಪ್ರಮಾಣದ ಮಾನವ ದ್ರೋಹಿಗಳಾಗಿದ್ದಾರೆಯೇ? ಪ್ರತಿಯೊಬ್ಬ ಭಾರತೀಯರು ವಂದನಾ ಶಿವ ಅವರ ಇತ್ತೀಚಿನ ಕೃತಿಯಲ್ಲಿ ಓದಲೇಬೇಕಾದ ಕೆಲವು ಭಾಗಗಳು ಹೀಗಿವೆ. ನಮ್ಮ ಪ್ರಧಾನ ಮಂತ್ರಿಗಳು ಏಕಾಏಕಿ ಘೋಷಿಸಿದ demonetizationನ ಕರಾಳ ಪರಿಣಾಮಗಳನ್ನು ಕಂಡ ಅನೇಕರು ಇದು ಅವರ ವ್ಯಕ್ತಿತ್ವದ ದ್ಯೋತಕವಾಗಿದೆ ಎಂದು ಹೇಳಿದ್ದಾರೆ. ಆದರೆ ವಂದನಾ ಶಿವ ಕರಾರುವಾಕ್ಕಾಗಿ ದಿನಾಂಕಗಳೊಂದಿಗೆ ಏನು ತೋರಿಸುತ್ತಾರೆಂದರೆ, demonetisation ಮೂಲಕ digital ಅಥವಾ cashless economy ತರಬಹುದೆನ್ನುವುದನ್ನು ಅಂತರ್‌ರಾಷ್ಟ್ರೀಯ ಕಂಪನಿಗಳು ಪ್ರಚಾರ ಮಾಡಿ, ಪ್ರಧಾನ ಮಂತ್ರಿ ಹಾಗೂ ಅವರ ಮಂತ್ರಿಗಳಿಗೆ ಪಾಠ ಹೇಳಿಕೊಟ್ಟಮೇಲೆ, ಈ ಘೋಷಣೆಯ ಮತ್ತು ಬಿಲ್‌ಗೇಟ್ಸ್‌ನ ಅಧೀನ ಸಂಸ್ಥೆಗಳು, GSTಯನ್ನು ಹೇಗೆ ಲೆಕ್ಕಮಾಡಬೇಕೆಂದು ಸಂಪೂರ್ಣವಾಗಿ ತಯಾರಾದ ಮಾದರಿಯನ್ನು ಕೊಟ್ಟ ಮೇಲೆ ಮಧ್ಯರಾತ್ರಿ GST ಯನ್ನು ಘೋಷಿಸಲಾಯಿತು! ಅಂದರೆ ನಮ್ಮ ಪ್ರಜಾಪ್ರಭುತ್ವದ ಪ್ರತಿಯೊಂದು ನೀತಿಯನ್ನು ಈಗ ನಿರೂಪಿಸುತ್ತಿರುವವರು ಮಹಾಪ್ರಬಲ ವ್ಯಕ್ತಿತ್ವದ ನಾಯಕರಲ್ಲ! ಅಂತರ್‌ರಾಷ್ಟ್ರೀಯ ಬಂಡವಾಳಶಾಹಿ ಶಕ್ತಿಗಳು. ನಮ್ಮ ಸಿಂಹಗಳು ಒಂದು ತೊಟ್ಟು ಹಾಲು ಹಾಕಿದರೆ ವಿಧೇಯವಾಗಿ ಮೀಯಾಂ ಎನ್ನುವ ಬೆಕ್ಕಿನ ಮರಿಗಳು!

ಗೆಳೆಯರೇ, ವಂದನಾ ಶಿವ ಅವರನ್ನು ಓದೋಣ, ಅವರ ಮಾತುಗಳನ್ನು ಕೇಳೋಣ. ಜಾಗತೀಕರಣದ ಅಪಾಯಗಳ ಬಗ್ಗೆ ನಮಗಿರುವ ಕಾಳಜಿಗಳಿಗೆ ಅದರಿಂದ ಬೆಂಬಲ ದೊರೆಯುತ್ತದೆ.



(ಶಿವಮೊಗ್ಗ ನಿವಾಸಿಯಾದ ಲೇಖಕರು ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರು ಮತ್ತು, ಕನ್ನಡದ ಹಿರಿಯ ಸಾಹಿತ್ಯ ಚಿಂತಕರು)

ಮೋದಿ ಸೇರಿಗೆ ಸವ್ವಾಸೇರು: ಮಮತಾ ಬ್ಯಾನರ್ಜಿ!

-ದಿನೇಶ್ ಅಮೀನ್‌ಮಟ್ಟು



ತೃಣಮೂಲ ಕಾಂಗ್ರೆಸ್ ನಾಯಕಿ ಮಮತಾ ಬ್ಯಾನರ್ಜಿಯವರು ಭಾರತೀಯ ಜನತಾ ಪಕ್ಷದ ನರೇಂದ್ರಮೋದಿಯವರಿಗೆ ಪರ್ಯಾಯವಾಗಬಲ್ಲರೇ ? ಎಂಬ ಪ್ರಶ್ನೆ ಎತ್ತಿದೊಡನೆ ಅದಕ್ಕೆ ಸಂಬಂಧಿಸಿದ ಹತ್ತಾರು ಉಪಪ್ರಶ್ನೆಗಳು ಸಹಜವಾಗಿಯೇ ಏಳಬಹುದು. ಇಂತಹದ್ದೊಂದು ಚರ್ಚೆ ರಾಜಕಾರಣದ ಒಳಚಾವಡಿಗಳಲ್ಲಿ, ಸುದ್ದಿಯ ಮನೆಗಳಲ್ಲಿ ಆಗಾಗ ನಡೆಯುತ್ತಿರುವುದು ನಿಜವಾದರೂ ಈ ಕ್ಷಣದಲ್ಲಿ ಇದೊಂದು ಅವಸರದ ಪ್ರಶ್ನೆಯಂತೆಯೂ ಕಾಣಬಹುದು.

ಇದೊಂದು ಅವಸರದ ಪ್ರಶ್ನೆಯಾಗಿ ಕಾಣಲು ಮೊದಲ ಕಾರಣ ಮಮತಾ ಬ್ಯಾನರ್ಜಿ ಅವರು ಮುಂದಿನ ವರ್ಷದ ಮೇ ತಿಂಗಳಲ್ಲಿ ಎದುರಿಸಲಿರುವ ವಿಧಾನಸಭಾ ಚುನಾವಣೆ. ಆ ಚುನಾವಣೆಯ ಫಲಿತಾಂಶ ರಾಷ್ಟ್ರರಾಜಕಾರಣದಲ್ಲಿ ಮಮತಾ ಬ್ಯಾನರ್ಜಿ ಅವರ ಪ್ರಸ್ತುತತೆಯನ್ನು ನಿರ್ಧರಿಸಲಿದೆ.

ಎರಡನೇ ಕಾರಣ, ಬಿಜೆಪಿಗೆ ಪರ್ಯಾಯ ಹುಟ್ಟುಹಾಕುವ ಕಸರತ್ತಿನ ಅಂಗವಾಗಿಯೇ ಕಳೆದ ವರ್ಷ ಲೋಕಸಭಾ ಚುನಾವಣೆಯ ಪೂರ್ವದಲ್ಲಿ ಮಮತಾ ಬ್ಯಾನರ್ಜಿ ಅವರೇ ಆಸಕ್ತಿ ವಹಿಸಿ ಕಟ್ಟಲು ಪ್ರಯತ್ನಿಸಿದ ಮಹಾಘಟಬಂಧನದ ಗರ್ಭಪಾತ. ಕೊನೆಕ್ಷಣದಲ್ಲಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ ಹಿಂದೆ ಸರಿದದ್ದು ಮಾತ್ರವಲ್ಲ, ಕಾಂಗ್ರೆಸ್ ಸೇರಿಕೊಂಡರೆ ನಾವಿಲ್ಲ ಎಂದಿದ್ದ ಮಾಯಾವತಿ, ನವೀನ್ ಪಟ್ನಾಯಕ್, ಕೆ.ಚಂದ್ರಶೇಖರ ರಾವ್ ಕೂಡಾ ಅದರಲ್ಲಿ ಪಾಲ್ಗೊಳ್ಳಲಿಲ್ಲ. ಮಮತಾ ಬ್ಯಾನರ್ಜಿ ಅವರ ನೆರಳು ಕಾಣಿಸಿಕೊಂಡ ಕಡೆ ನಾವಿರುವುದಿಲ್ಲ ಎಂದು ಮೊದಲೇ ನಿರ್ಧರಿಸಿರುವ ಎಡಪಕ್ಷಗಳು ನಿರೀಕ್ಷೆಯಂತೆ ಸೇರಿಕೊಳ್ಳಲಿಲ್ಲ. ಅಷ್ಟರಲ್ಲಿ ಬಿಜೆಪಿಗೆ ಪರ್ಯಾಯ ಕಟ್ಟಲು ಹೊರಟಿದ್ದ ಮಮತಾ ಬ್ಯಾನರ್ಜಿ ಅವರ ಬಸ್‌ನಲ್ಲಿ ಮುಕ್ಕಾಲು ಪಾಲು ಸೀಟುಗಳು ಖಾಲಿ ಬಿದ್ದಿದ್ದವು.

ಕೊನೆಗೆ ಉಳಿದುಕೊಂಡದ್ದು ಅರವಿಂದ್ ಕೇಜ್ರಿವಾಲ್, ಎಚ್.ಡಿ.ಕುಮಾರಸ್ವಾಮಿ, ತೇಜಸ್ವಿ ಯಾದವ್, ಎಂ.ಕೆ.ಸ್ಟಾಲಿನ್, ಚಂದ್ರಬಾಬು ನಾಯ್ಡು, ಶರದ್ ಪವಾರ್ ಮತ್ತು ಇತರ ಸಣ್ಣಪಕ್ಷಗಳ ನಾಯಕರು ಅಷ್ಟೆ. ಹೀಗಿರುವಾಗ ಫಲಿತಾಂಶ ಗೊತ್ತಿದ್ದರೂ ಮತ್ತೆ ಮತ್ತೆ ಪರೀಕ್ಷೆ ಎದುರಿಸುವುದು ಯಾಕೆ ಎನ್ನುವ ಪ್ರಶ್ನೆ ಸಹಜವಾದುದು. ಫೇಲಾಗುತ್ತೇವೆ ಎಂಬ ಭಯದಲ್ಲಿ ಪರೀಕ್ಷೆ ಎದುರಿಸುವುದನ್ನೇ ನಿಲ್ಲಿಸಿ ಬಿಟ್ಟರೆ ಪಾಸಾಗುವುದು ಯಾವಾಗ ಎನ್ನುವ ಪ್ರಶ್ನೆ ಕೂಡಾ ಇದೆಯಲ್ಲಾ?

ಹೌದು, ಮಮತಾ ಬ್ಯಾನರ್ಜಿ ಅವರನ್ನು ಒಮ್ಮೆ ಪ್ರಯತ್ನಿಸಿ, ಪರೀಕ್ಷಿಸಿ, ಸಾಬೀತು ಪಡಿಸಿಯಾಗಿದೆಯಲ್ಲಾ, ಮತ್ತೊಮ್ಮೆ ಅವರ ಹೆಸರು ಯಾಕೆ ಎನ್ನುವ ಪ್ರಶ್ನೆಯನ್ನು ಕೂಡಾ ಕೆಲವರು ಕೇಳಬಹುದು. ಈ ದಿನದ ರಾಜಕೀಯ ಪರಿಸ್ಥಿತಿಯನ್ನಷ್ಟೇ ಗಮನದಲ್ಲಿಟ್ಟುಕೊಂಡು ಮುಂದಿನ ಲೋಕಸಭಾ ಚುನಾವಣೆಯ ಫಲಿತಾಂಶವನ್ನು ಊಹಿಸುವುದಾದರೆ ಕಾಂಗ್ರೆಸ್ ಪಕ್ಷ ತನ್ನ ಬಲವನ್ನು ಎಷ್ಟೇ ವರ್ಧಿಸಿಕೊಂಡರೂ ಸ್ವಂತ ಬಲದಿಂದ ಸರ್ಕಾರ ರಚಿಸುವಷ್ಟು ಸ್ಥಾನಗಳು ಆ ಪಕ್ಷಕ್ಕೆ ಖಂಡಿತ ಸಿಗಲಾರವು. ಅಕಸ್ಮಾತ್ ಕಾಂಗ್ರೆಸ್ ಪಕ್ಷ ನೂರರ ಗಡಿಯನ್ನು ದಾಟಿದರೆ ಆ ಪಕ್ಷಕ್ಕೆ ಸೇರಿದವರೇ ಪ್ರಧಾನಿ ಪಟ್ಟಕ್ಕೇರಲು ಮುಂದಾಗಬಹುದು, ಇಲ್ಲವಾದರೆ ಉಳಿದ ಬಿಜೆಪಿ ವಿರೋಧಿ ಪಕ್ಷಗಳ ಜೊತೆ ಸೇರುವುದು ಕಾಂಗ್ರೆಸ್ ಪಕ್ಷಕ್ಕೆ ಅನಿವಾರ್ಯವಾಗಬಹುದು. ಈ ಬಿಜೆಪಿ ವಿರೋಧಿ ಪಕ್ಷಗಳ ನಾಯಕರ ಪೈಕಿ ಸದ್ಯಕ್ಕೆ ಕಣ್ಣಿಗೆ ಕಾಣುವ ದೊಡ್ಡ ನಾಯಕಿ ಮಮತಾ ಬ್ಯಾನರ್ಜಿ ಮಾತ್ರ.

ಇದಕ್ಕೆ ಹಲವು ಕಾರಣಗಳಿವೆ. ದೇಶದ ೩೧ ರಾಜ್ಯಗಳಲ್ಲಿ ಬಿಜೆಪಿ ಸ್ವಂತಬಲದಿಂದ ಮತ್ತು ಮೈತ್ರಿ ಮೂಲಕ ಹದಿನೇಳು ರಾಜ್ಯಗಳಲ್ಲಿ ಅಧಿಕಾರದಲ್ಲಿದೆ. ಉಳಿದ ಹದಿನಾಲ್ಕು ರಾಜ್ಯಗಳ ಪೈಕಿ ಹದಿಮೂರರಲ್ಲಿ ಕಾಂಗ್ರೆಸ್ ಮತ್ತು ಪ್ರಾದೇಶಿಕ ಪಕ್ಷಗಳ ಸರ್ಕಾರ ಇದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ರಾಷ್ಟ್ರಪತಿ ಆಳ್ವಿಕೆ ಇದೆ.

ವಿರೋಧ ಪಕ್ಷಗಳು ಅಧಿಕಾರದಲ್ಲಿರುವ ಹದಿಮೂರು ರಾಜ್ಯಗಳ ಪೈಕಿ ಹನ್ನೊಂದು ರಾಜ್ಯಗಳಲ್ಲಿ ಮುಂದಿನ ಲೋಕಸಭಾ ಚುನಾವಣೆಯ ಮೊದಲು(೨೦೨೪) ವಿಧಾನಸಭಾ ಚುನಾವಣೆ ನಡೆಯಲಿದೆ. ಅವುಗಳಲ್ಲಿ ಮುಂದಿನ ವರ್ಷ ವಿಧಾನಸಭೆ ಚುನಾವಣೆ ನಡೆಯಲಿರುವ ನಾಲ್ಕು ರಾಜ್ಯಗಳೆಂದರೆ ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ ಮತ್ತು ಅಸ್ಸಾಂ. ಪಶ್ಚಿಮ ಬಂಗಾಳ ರಾಜ್ಯವನ್ನೇನಾದರೂ ಮಮತಾ ಬ್ಯಾನರ್ಜಿ ಅವರು ಉಳಿಸಿಕೊಂಡರೆ ಖಂಡಿತ ಅವರು ಪ್ರಧಾನ ಮಂತ್ರಿ ಹುದ್ದೆಗೆ ಪ್ರಮುಖ ಅಭ್ಯರ್ಥಿಯಾಗಿ ತಮ್ಮನ್ನು ಬಿಂಬಿಸಿಕೊಳ್ಳುವ ಅರ್ಹತೆ ಪಡೆಯುತ್ತಾರೆ. ಉಳಿದ ವಿರೋಧ ಪಕ್ಷಗಳು ಅವರನ್ನು ಒಪ್ಪಿಕೊಳ್ಳುತ್ತವೆಯೇ ಎನ್ನುವುದನ್ನು ಕಾಲವಷ್ಟೇ ನಿರ್ಧರಿಸಲು ಸಾಧ್ಯ.

ಪರ್ಯಾಯ ನಾಯಕರಾಗಿ ಬಿಂಬಿಸಿಕೊಳ್ಳಲು ಮಮತಾ ಬ್ಯಾನರ್ಜಿ ಅವರಿಗೆ ಪಶ್ಚಿಮ ಬಂಗಾಳದ ಜನಮತದ ಬಲ ಒಂದೇ ಸಾಕೇ ಎನ್ನುವ ಪ್ರಶ್ನೆ ಕೂಡಾ ಇಲ್ಲಿದೆ. ಖಂಡಿತ ಸಾಕಾಗಲಾರದು. ರಾಜಕೀಯದಲ್ಲಿ ಒಬ್ಬ ನಾಯಕನೆಂದರೆ ಆತ ಒಂದು ಸಿದ್ಧಾಂತದ ಪ್ರತಿನಿಧಿ. ಆದ್ದರಿಂದ ರಾಜಕೀಯ ಪರ್ಯಾಯವನ್ನು ಹುಡುಕುವಾಗ ನಾಯಕನ ವಯಸ್ಸು, ಎತ್ತರ, ತೂಕ, ಎದೆಯಗಲ, ವೈಯಕ್ತಿಕವಾದ ನಡವಳಿಕೆಗಳಷ್ಟೇ ಅಲ್ಲ, ಹುಡುಕಾಟದಲ್ಲಿ ಗಮನದಲ್ಲಿರಬೇಕಾಗಿರುವುದು ಸಿದ್ಧಾಂತದ ಮಾಪನ.

ಈ ಹಿನ್ನೆಲೆಯಿಂದ ಮಮತಾ ಬ್ಯಾನರ್ಜಿ ಎಂಬ ಪರ್ಯಾಯದ ವ್ಯಕ್ತಿತ್ವವನ್ನು ಬಿಚ್ಚಿ ಬಿಡಿಸಿ ನೋಡಬೇಕಾಗುತ್ತದೆ. ನರೇಂದ್ರಮೋದಿ ಕೋಮುವಾದದ ರಾಜಕಾರಣದ ಉತ್ಪನ್ನ. ಸಂಘ ಪರಿವಾರದ ಸುಮಾರು ೯೫ ವರ್ಷಗಳ ಸೈದ್ಧಾಂತಿಕ ಹೋರಾಟದ ಅದೃಷ್ಟವಂತ ಫಲಾನುಭವಿ. ಕೋಮುವಾದದ ರಾಜಕಾರಣ ನರೇಂದ್ರಮೋದಿಯವರ ಮೇಲಿನ ಒಂದು ಆರೋಪವಾದರೆ ಅಭಿವೃದ್ಧಿಶೂನ್ಯ ನೋಟ ಎರಡನೆಯದ್ದು. ಈ ಕೋಮುವಾದದ ರಾಜಕಾರಣ ಮತ್ತು ಅಭಿವೃದ್ಧಿಶೂನ್ಯ ನೋಟದ ಆಡಳಿತಕ್ಕೆ ಪರ್ಯಾಯವೆಂದರೆ ಅದು ಜಾತ್ಯತೀತ ರಾಜಕಾರಣ ಮತ್ತು ಅಭಿವೃದ್ಧಿಯ ಮುನ್ನೋಟ. ನರೇಂದ್ರಮೋದಿಯವರಿಗೆ ಪರ್ಯಾಯವನ್ನು ಹುಡುಕುವಾಗ ಈ ಎಚ್ಚರ ನಮ್ಮಲ್ಲಿರಬೇಕಾಗುತ್ತದೆ.

ವೈಯಕ್ತಿಕ ಬದುಕು ಮತ್ತು ಗುಣಸ್ವಭಾವಗಳಲ್ಲಿ ನರೇಂದ್ರಮೋದಿ ಮತ್ತು ಮಮತಾ ಬ್ಯಾನರ್ಜಿಯವರ ನಡುವೆ ಅನೇಕ ಸಾಮ್ಯತೆಗಳಿವೆ. ಮೊದಲನೆಯದಾಗಿ ಈ ಇಬ್ಬರು ನಾಯಕರ ಕೌಟುಂಬಿಕ ಹಿನ್ನೆಲೆ. ನರೇಂದ್ರಮೋದಿಯವರು ರಾಜಕೀಯ ಹಿನ್ನೆಲೆ ಇಲ್ಲದ ಬಡಕುಟುಂಬದಲ್ಲಿ ಹುಟ್ಟಿದವರು. ಅವರ ತಂದೆ-ತಾಯಿ, ಬಾಲ್ಯ ಜೀವನದ ಬಗ್ಗೆ ನೂರೆಂಟು ಕತೆ-ದಂತಕತೆಗಳಿವೆ. ಅವುಗಳಲ್ಲಿ ದೃಢೀಕರಿಸಬಹುದಾದ ಮತ್ತು ದೃಢೀಕರಿಸಲಾಗದ ಹಲವಾರು ಮಾಹಿತಿಗಳಿವೆ. ಅವುಗಳನ್ನೆಲ್ಲ ಪಕ್ಕಕ್ಕಿಟ್ಟರೂ ಮೋದಿಯವರು ಸಾಮಾನ್ಯ ಹಿಂದುಳಿದ ಜಾತಿಯ ಬಡಕುಟುಂಬದಲ್ಲಿ ಜನಿಸಿದವರು ಎನ್ನುವುದನ್ನು ಒಪ್ಪಿಕೊಳ್ಳಬಹುದು.

ಮಮತಾ ಬ್ಯಾನರ್ಜಿಯವರು ಕೂಡಾ ಸಾಮಾನ್ಯ ಬಡ ಕುಟುಂಬದಲ್ಲಿ ಹುಟ್ಟಿದವರು. ಅಧಿಕಾರ ರಾಜಕಾರಣದ ಸಂಬಂಧ ಇಲ್ಲದೆ ಇದ್ದರೂ ಇವರ ತಂದೆ ಸ್ವಾತಂತ್ರ್ಯಹೋರಾಟದಲ್ಲಿ ಭಾಗವಹಿಸಿದವರು ಮಾತ್ರವಲ್ಲ ಸರ್ಕಾರದಿಂದ ಸ್ವಾತಂತ್ರ್ಯಹೋರಾಟಗಾರರಿಗೆ ಸಿಗುವ ಮಾಸಾಶನ ಪಡೆಯಲು ನಿರಾಕರಿಸಿದ್ದ ಸ್ವಾಭಿಮಾನಿ. ಮಮತಾ ಬ್ಯಾನರ್ಜಿ ಹುಟ್ಟಿ ಬೆಳೆದದ್ದು ಕೊಲ್ಕೊತ್ತಾದ ಕಾಳಿಘಾಟ್ ಸಮೀಪದ ಕೊಳೆಗೇರಿಯಂತಹ ಪ್ರದೇಶದ ಹಳೆಯ ಮನೆಯಲ್ಲಿ. ಸ್ಕೂಲ್ ಫೀಸ್ ಕಟ್ಟಲು ಬಸ್ ನಿಲ್ದಾಣದಲ್ಲಿ ಸಾಮಾನು ಹೊರುವ ಕೆಲಸ ಮಾಡಿದವರು ಮಮತಾ ಬ್ಯಾನರ್ಜಿ.

ಬಾಲ್ಯದ ಬಡತನದ ವರ್ಣರಂಜಿತ ಬಣ್ಣನೆಯನ್ನು ರಾಜಕೀಯವಾಗಿ ಅನುಕಂಪ ಗಿಟ್ಟಿಸಿಕೊಳ್ಳಲಷ್ಟೇ ನರೇಂದ್ರಮೋದಿ ಬಳಸಿದರೇ ಹೊರತು ಅಂತಹ ಹಿನ್ನೆಲೆಯಿಂದ ಬಂದಿರಬಹುದೆಂಬ ನಂಬಿಕೆಯನ್ನು ಜನರಲ್ಲಿ ಹುಟ್ಟಿಸಲು ಅವರಿಗೆ ಸಾಧ್ಯವಾಗಿಲ್ಲ. ಹಳೆಜುಬ್ಬಾ, ಹೆಗಲಚೀಲ, ಸವೆದ ಚಪ್ಪಲಿಯ ಪ್ರಚಾರಕನ ಪೂರ್ವಾಶ್ರಮದ ಜೀವನವನ್ನು ಪ್ರಧಾನಿ ನಿವಾಸದ ಬಾಗಿಲಲ್ಲಿಯೇ ಕಳಚಿಟ್ಟು ಒಳಪ್ರವೇಶಿಸಿದ್ದ ನರೇಂದ್ರಮೋದಿ. ಶ್ರೀಮಂತ ಜೀವನಶೈಲಿಗೆ ಹೆಸರಾಗಿದ್ದ ಪಂಡಿತ ಜವಾಹರಲಾಲ ನೆಹರೂ ಅವರನ್ನೂ ಮೀರಿಸಿದ ಶೋಕಿಲಾಲ ಪ್ರಧಾನಿಯಾಗಿ ಬದಲಾಗಿರುವುದನ್ನು ದೇಶ ಕಂಡಿದೆ.

ಹತ್ತಿಯ ಸೀರೆ ಉಟ್ಟುಕೊಂಡು, ಕಾಲಿಗೆ ಸ್ಲಿಪ್ಪರ್ಸ್ ಮೆಟ್ಟಿಕೊಂಡು ಯಾವ ಆಡಂಬರಗಳ ಶೋಕಿಗಳಿಲ್ಲದೆ ಸರಳವಾಗಿ ಬದುಕುತ್ತಿರುವವರು ಮಮತಾ

ಬ್ಯಾನರ್ಜಿ. ಕೇಂದ್ರ ಸಚಿವರಾಗಿದ್ದಾಗಲೂ ತನ್ನ ಹಳೆಯ ಅಂಬಾಸಿಡರ್ ಕಾರು ಮತ್ತು ಕಾಳಿಘಾಟ್‌ನಲ್ಲಿರುವ ತನ್ನ ಮನೆಯನ್ನು ಬದಲಾಯಿಸಿರಲಿಲ್ಲ.

ಎರಡನೆಯದಾಗಿ ಮೋದಿ ಮತ್ತು ಮಮತಾ ಬ್ಯಾನರ್ಜಿಯವರು ಇಬ್ಬರಿಗೂ ಸ್ವಂತ ಸಂಸಾರ ಇಲ್ಲ. ಮೋದಿ ಮದುವೆಯಾಗಿ ಪತ್ನಿಯಿಂದ ದೂರವಾದವರು, ಮಮತಾ ಮದುವೆಯೇ ಆಗದೆ ಉಳಿದವರು. ಮೋದಿಯವರು ತಮ್ಮ ಕುಟುಂಬವನ್ನು ಆಗಾಗ ರಾಜಕೀಯ ಪ್ರಚಾರಕ್ಕಾಗಿ ಬಳಸಿಕೊಳ್ಳುತ್ತಿರುವುದನ್ನು ಹೊರತುಪಡಿಸಿದರೆ ಅಧಿಕಾರ ರಾಜಕೀಯದಿಂದ ಮತ್ತು ತಮ್ಮ ವೈಯಕ್ತಿಕ ಬದುಕಿನಿಂದ ಅವರನ್ನು ದೂರ ಇಟ್ಟಿದ್ದಾರೆ. ಮಮತಾ ಬ್ಯಾನರ್ಜಿ ಈಗಲೂ ತಮ್ಮ ಕೂಡು ಕುಟುಂಬದೊಂದಿಗೆ ವಾಸಿಸುತ್ತಿರುವವರು. ಇದರಿಂದಾಗಿ ಅಣ್ಣ-ತಮ್ಮಂದಿರ ಮಕ್ಕಳ ರಾಜಕೀಯ ಮಧ್ಯಪ್ರವೇಶದ ಆರೋಪವನ್ನು ಆಗಾಗ ಎದುರಿಸುತ್ತಿದ್ದಾರೆ.

ಮೂರನೆಯದಾಗಿ, ಇಬ್ಬರಲ್ಲಿಯೂ ಇರುವ ಸರ್ವಾಧಿಕಾರಿ ಸ್ವಭಾವದ ಸಾಮ್ಯತೆ. ಆಂತರಿಕ ಪ್ರಜಾಪ್ರಭುತ್ವ, ಸಾಮೂಹಿಕ ನಿರ್ಧಾರ, ಅಧಿಕಾರ ವಿಕೇಂದ್ರೀಕರಣ ಮೊದಲಾದ ಪ್ರಜಾತಾಂತ್ರಿಕ ನಡವಳಿಕೆಗಳ ಬಗ್ಗೆ ಇಬ್ಬರು ನಾಯಕರಿಗೂ ತಿರಸ್ಕಾರ ಇದೆ. ನರೇಂದ್ರಮೋದಿಯವರೊಳಗಿನ ಸರ್ವಾಧಿಕಾರಿಯನ್ನು ಇಡೀ ದೇಶ ನೋಡುತ್ತಿದೆ ಮತ್ತು ಅನುಭವಿಸುತ್ತಿದೆ. ಮೋದಿಯವರ ಸರ್ಕಾರದಲ್ಲಿ ಅಧಿಕಾರ ಎಷ್ಟೊಂದು ಕೇಂದ್ರೀಕೃತವಾಗಿದೆಯೆಂದರೆ ಒಂದು ಪಕ್ಕದಲ್ಲಿ ಅಮಿತ್ ಶಹಾ ಮತ್ತು ಇನ್ನೊಂದು ಪಕ್ಕದಲ್ಲಿ ಆಗಾಗ ಸುಳಿದಾಡುವ ನಿರ್ಮಲಾ ಸೀತಾರಾಮನ್ ಹೆಸರು ಹೊರತುಪಡಿಸಿದರೆ ಬೇರೆ ಯಾವ ಮುಖಗಳೂ ಕಾಣಲಾರವು, ಯಾರು ಯಾವ ಖಾತೆಗೆ ಸಚಿವರೆನ್ನುವುದನ್ನು ಜನರು ಕೂಡಾ ಮರೆತುಬಿಟ್ಟಂತಿದೆ.

ಪಕ್ಷ ಮತ್ತು ಸರ್ಕಾರದಲ್ಲಿ ಅವರದ್ದೇ ಕೊನೆ ಮಾತು. ಸಂಸದರು, ಸಚಿವರಲ್ಲಿ ಯಾರಿಗೂ ಅವರಿಗೆ ಇದಿರಾಗಿ ಮಾತನಾಡುವ ಧೈರ್ಯ ಇಲ್ಲ. ಪಕ್ಷದ ಸಂಸದರ ಸಭೆಯಲ್ಲಿ ಪ್ರತಿಯೊಬ್ಬ ಸಂಸದನೂ ಶಾಲೆಯಲ್ಲಿ ಮೇಸ್ಟ್ರ ಎದುರು ವಿದ್ಯಾರ್ಥಿಗಳು ಕೈಕಟ್ಟಿ ನಿಂತುಕೊಂಡು ಪಾಠ ಒಪ್ಪಿಸುವಂತೆ ನಿಂತು ವರದಿ ಓದುವ ಫೋಟೊಗಳು ಇದಕ್ಕೆ ಸಾಕ್ಷಿ. ನೋಟ್‌ಬ್ಯಾನ್‌ನಿಂದ ಹಿಡಿದು ಸರ್ಜಿಕಲ್ ಸ್ಟ್ರೈಕ್ ವರೆಗೆ ಯಾವ ಪ್ರಮುಖ ನಿರ್ಧಾರವೂ ಸಂಪುಟದಲ್ಲಿ ಚರ್ಚೆಗೆ ಬರದೆ ಪ್ರಧಾನಿ ಕಚೇರಿಯಿಂದಲೇ ಆದೇಶಗಳು ಹೊರಡುತ್ತವೆ. ತನ್ನನ್ನು ಪೋಷಿಸಿ ರಕ್ಷಿಸಿದ್ದ ಅಡ್ವಾಣಿಯಂತಹವರನ್ನೇ ಕಡ್ಡಾಯವಾಗಿ ನಿವೃತ್ತಿಗೊಳಿಸಿದ್ದ ನರೇಂದ್ರ ಮೋದಿ ಪಕ್ಷ, ಪರಿವಾರ ಮತ್ತು ಸರ್ಕಾರದಲ್ಲಿ ಭಿನ್ನ ದನಿ ಹುಟ್ಟಿಕೊಳ್ಳಲೇ ಬಿಟ್ಟಿಲ್ಲ.

ಈ ವಿಷಯದಲ್ಲಿ ಮೋದಿಯವರ ತದ್ರೂಪು ಮಮತಾ ಬ್ಯಾನರ್ಜಿ. ಮಾಯಾವತಿ ಮತ್ತು ದಿವಂಗತ ಜಯಲಲಿತಾ ಅವರಿಂದ ಹಿಡಿದು ಅರವಿಂದ್ ಕೇಜ್ರಿವಾಲ್‌ವರೆಗೆ ಬಹುತೇಕ ಪ್ರಾದೇಶಿಕ ನಾಯಕರೊಳಗೆ ಸರ್ವಾಧಿಕಾರಿಯೊಬ್ಬ ಅಡಗಿ ಕುಳಿತಿರುತ್ತಾನೆ. ಆತ ಹೊರಗೆ ಕಾಣಿಸಿಕೊಳ್ಳುವ ರೀತಿ, ನೀತಿ, ಸಮಯ, ಸಂದರ್ಭಗಳಲ್ಲಿ ಮಾತ್ರ ವ್ಯತ್ಯಾಸ. ಮಮತಾ ಬ್ಯಾನರ್ಜಿ ಕೂಡಾ ಇದೇ ಸ್ವಭಾವದ ಪ್ರಾದೇಶಿಕ ಪಕ್ಷಗಳ ನಾಯಕರ ಸಾಲಿಗೆ ಸೇರಿದವರು. ಕಾಂಗ್ರೆಸ್ ಪಕ್ಷ ಮತ್ತು ಬಿಜೆಪಿ ಎಂಬ ಎರಡು ರಾಷ್ಟ್ರೀಯ ಪಕ್ಷಗಳ ಒಳಗೆ ಇರಲಾಗದೆ ಹೊರಬರಲು ಕೂಡಾ ಈ ಸ್ವಭಾವ ಕಾರಣ.

ಏಕಚಕ್ರಾಧಿಪತಿಯಂತೆ ವರ್ತಿಸುವ ಮಮತಾ ಬ್ಯಾನರ್ಜಿ ಅವರಿಗೆ ಪಕ್ಷ ಮತ್ತು ಸರ್ಕಾರ – ಎರಡೂ ಕಡೆ ನಂಬರ್ ಎರಡು, ನಂಬರ್ ತ್ರಿ ಯಾರೂ ಇಲ್ಲ, ಅವರೇ ಎಲ್ಲ. ತಮ್ಮ ಹಿತೈಷಿಗಳ ಅಭಿಪ್ರಾಯಕ್ಕೂ ಬೆಲೆ ಕೊಡುವವರಲ್ಲ. ರಾಷ್ಟ್ರೀಯ ಚಾನೆಲ್‌ಗಳಲ್ಲಿ ಪಕ್ಷದ ವಕ್ತಾರರು ಆಗಾಗ ಕಾಣಿಸಿಕೊಳ್ಳುವುದನ್ನು ಬಿಟ್ಟರೆ ಅವರ ಪಕ್ಷಕ್ಕೆ ಅವರೇ ವಕ್ತಾರರು. ಸಂಪುಟದ ಯಾವುದೇ ಸಚಿವರು ಸ್ವತಂತ್ರವಾಗಿ ಹೇಳಿಕೆ ನೀಡುವಂತಿಲ್ಲ, ಸ್ವಂತ ನಿರ್ಧಾರವನ್ನೂ ಕೈಗೊಳ್ಳುವ ಹಾಗಿಲ್ಲ.

ಈ ಇಬ್ಬರು ನಾಯಕರ ನಡುವೆ ಇರುವ ನಾಲ್ಕನೇ ಸಾಮ್ಯತೆ ಎಂದರೆ ರಾಜಕೀಯ ಹಿಂಸೆ ಬಗ್ಗೆ ಅವರಿಗಿರುವ ಅಸೂಕ್ಷ್ಮತೆ. ಅಸೂಕ್ಷ್ಮತೆ ಎಂಬ ಪದ ಬಳಕೆ ಬಹಳ ಸೌಮ್ಯವಾಯಿತು ಎಂದು ಕೆಲವರಿಗೆ ಅನಿಸಬಹುದು. ೨೦೦೨ರಲ್ಲಿ ಗುಜರಾತ್‌ನ ಬೀದಿಗಳಲ್ಲಿ ನಡೆದದ್ದನ್ನು, ಪಶ್ಚಿಮಬಂಗಾಳದ ಬೀದಿಗಳಲ್ಲಿ ಈಗಲೂ ನಡೆಯುತ್ತಿರುವುದಕ್ಕೆ ಹೋಲಿಸುವುದು ಎಷ್ಟು ಸರಿ ಎಂದು ಕೆಲವರು ಪ್ರಶ್ನಿಸಲೂಬಹುದು. ಪ್ರಮಾಣದಲ್ಲಿ ವ್ಯತ್ಯಾಸಗಳಿದ್ದರೂ ಈ ಇಬ್ಬರೂ ನಾಯಕರು ಹಿಂಸೆಯನ್ನು ತಮ್ಮ ರಾಜಕೀಯ ಹೋರಾಟದ ಅನಿವಾರ್ಯ ಭಾಗವಾಗಿ ಸ್ವೀಕರಿಸಿದವರು ಎನ್ನುವುದನ್ನು ಒಪ್ಪಬೇಕಾಗುತ್ತದೆ.

ದೆಹಲಿಯಿಂದ ಹೇರಲಾದ ನಾಯಕನ ರೂಪದಲ್ಲಿ ಮುಖ್ಯಮಂತ್ರಿಯಾಗಿ ಗುಜರಾತ್ ಪ್ರವೇಶಿಸಿದ್ದ ನರೇಂದ್ರಮೋದಿಯವರ ಸ್ಥಾನ ಭದ್ರವಾಗಿದ್ದು ಗುಜರಾತ್ ಹಿಂಸಾಚಾರದ ನಂತರ. ಸುಮಾರು ೨೦೦೦ ಅಮಾಯಕರನ್ನು ಬಲಿ ತೆಗೆದುಕೊಂಡ ಆ ಕೋಮುಗಲಭೆಯ ಬಗ್ಗೆ ಇನ್ನೂ ಕನಿಷ್ಠ ವಿಷಾದವನ್ನೂ ವ್ಯಕ್ತಪಡಿಸದೆ ಇರುವ ನರೇಂದ್ರ ಮೋದಿ ಅವರ ಹಿಂಸಾಚಾರದ ಬಗೆಗಿನ ಅಸೂಕ್ಷ್ಮತೆ ಪ್ರಧಾನಿಯಾದ



ನಂತರವೂ ಮುಂದುವರಿದಿದೆ. ಇದಕ್ಕೆ ದೇಶದಾದ್ಯಂತ ನಡೆಯುತ್ತಲೇ ಇರುವ ದಲಿತರು, ಅಲ್ಪಸಂಖ್ಯಾತರು ಮತ್ತು ಮಹಿಳೆಯರ ಮೇಲೆ ನಡೆಯುತ್ತಿರುವ ದೈಹಿಕ ಹಿಂಸಾಚಾರಗಳು ಸಾಕ್ಷಿಯಾಗಿವೆ.

ಮಮತಾ ಬ್ಯಾನರ್ಜಿಯವರು ಯುವಕಾಂಗ್ರೆಸ್, ಮಹಿಳಾಕಾಂಗ್ರೆಸ್ ನಾಯಕರಾಗಿದ್ದ ದಿನಗಳಿಂದಲೇ ಕೊಲ್ಕೊತ್ತಾದ ಬೀದಿಗಳಲ್ಲಿ ಹೊಡೆದಾಡಿಕೊಂಡು ರಾಜಕೀಯ ನಡೆಸಿದವರು. ಕಮ್ಯುನಿಸ್ಟ್ ಮತ್ತು ತೃಣಮೂಲ ಕಾಂಗ್ರೆಸ್ ನಡುವಿನ ಸಂಘರ್ಷದಲ್ಲಿ ಎರಡೂ ಕಡೆಗಳಲ್ಲಿ ನೂರಾರು ಕಾರ್ಯಕರ್ತರು ಪ್ರಾಣ ಕಳೆದುಕೊಂಡಿದ್ದಾರೆ. ಇತ್ತೀಚೆಗೆ ರಾಜ್ಯದಲ್ಲಿ ನಡೆದಿದ್ದ ಪಂಚಾಯತ್ ಚುನಾವಣೆಯಲ್ಲಿ ತೃಣಮೂಲ ಕಾಂಗ್ರೆಸ್‌ನ ಗೂಂಡಾಗಳ ಭೀತಿಯಿಂದ ಶೇಕಡಾ ೩೪ರಷ್ಟು ಕ್ಷೇತ್ರಗಳಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಎಡಪಕ್ಷಗಳ ಅಭ್ಯರ್ಥಿಗಳು ನಾಮಪತ್ರವನ್ನೇ ಸಲ್ಲಿಸಿರಲಿಲ್ಲ. ತೃಣಮೂಲ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಈ ಒಂಬತ್ತು ವರ್ಷಗಳಲ್ಲಿ ಕಮ್ಯುನಿಸ್ಟ್ ಕಾರ್ಯಕರ್ತರು ಮತ್ತು ಬಿಜೆಪಿ ಬೆಂಬಲಿಗರ ಸರಣಿ ಹತ್ಯೆಗಳಾಗಿವೆ. ಕಮ್ಯುನಿಸ್ಟರ ವಿರುದ್ಧದ ಹೋರಾಟದಲ್ಲಿ ಮಮತಾ ಬ್ಯಾನರ್ಜಿಯವರು ಹಿಂಸೆಗೆ ಪ್ರತಿ ಹಿಂಸೆ ಎಂಬ ನೀತಿಯನ್ನೇ ನಂಬಿಕೊಂಡು ಬಂದಿದ್ದಾರೆ.

ನರೇಂದ್ರಮೋದಿಯವರ ಜೊತೆಗಿನ ಮಮತಾ ಬ್ಯಾನರ್ಜಿ ಹೋಲಿಕೆ ಇಲ್ಲಿಗೆ ನಿಂತುಬಿಡುತ್ತದೆ. ಮೋದಿಯವರು ಕಣ್ಕಟ್ಟಿನ ಪ್ರಚಾರ ಮತ್ತು ವರ್ಚುವಲ್ ಜಗತ್ತಿನ ವಾಮಾಚಾರದ ಮೂಲಕ ತಮ್ಮ ಸುತ್ತ ಸುಳ್ಳಿನ ಕೋಟೆಯನ್ನು ಕಟ್ಟಿಕೊಂಡಿದ್ದಾರೆ. ಬಹಳ ಎಚ್ಚರಿಕೆಯಿಂದ ಹೆಣೆದಿರುವ ಈ ಸುಳ್ಳಿನ ಸರಮಾಲೆ ಬಾಲ್ಯದ ಚಹಾ ಮಾರಾಟ ಮತ್ತು ಅವರು ಪಡೆದ ಶಿಕ್ಷಣದಿಂದಲೇ ಪ್ರಾರಂಭವಾಗುತ್ತದೆ. ವೈಯಕ್ತಿಕ ಬದುಕಿನಿಂದ ಪ್ರಾರಂಭವಾದ ಈ ಸುಳ್ಳಿನ ದಾರಿಯ ಪಯಣ ರಾಜಕೀಯ ಬದುಕಿನಲ್ಲಿ ಮುಂದುವರಿದಿದೆ. ತನ್ನ ಪದವಿ ಸರ್ಟಿಫಿಕೇಟ್‌ನಿಂದ ಹಿಡಿದು ಪಿಎಂ ಕೇರ್ಸ್ ನಿಧಿಯ ವರೆಗೂ ಮತ್ತೆಮತ್ತೆ ಇವರೇನನ್ನೋ ಬಚ್ಚಿಡುತ್ತಿದ್ದಾರೆ ಎಂಬ ಅನುಮಾನ ಮೂಡಿಸುವ ರೀತಿಯಲ್ಲಿಯೇ ಮೋದಿಯವರ ನಡವಳಿಕೆ ಇದೆ.

ಇದಕ್ಕೆ ಹೋಲಿಸಿದರೆ ಮಮತಾ ಬ್ಯಾನರ್ಜಿಯವರ ಬದುಕು ತೆರೆದ ಪುಸ್ತಕ. ನೇರಾನೇರ ಮಾತು, ಆತ್ಮವಂಚನೆಯಿಲ್ಲದ ನಡವಳಿಕೆ, ಅಪ್ರಿಯವಾದುದನ್ನು ಹೇಳಲು ಹಿಂಜರಿಯದ ದಿಟ್ಟತನ, ಬಡವರ ಬಗ್ಗೆ ತುಡಿಯುವ ಪ್ರಾಮಾಣಿಕ ಮನಸ್ಸು-ಈ ಗುಣ ಸ್ವಭಾವಗಳೇ ಮಮತಾ ಬ್ಯಾನರ್ಜಿಯವರನ್ನು ಜನನಾಯಕಿಯಾಗಿ ರೂಪಿಸಿರಬಹುದು.

ಹೋರಾಟದ ಬದುಕಿನಲ್ಲಿಯೂ ಮಮತಾ ಬ್ಯಾನರ್ಜಿ ಅವರಿಗೆ ನರೇಂದ್ರಮೋದಿ ಸಾಟಿ ಅಲ್ಲ. ನರೇಂದ್ರ ಮೋದಿಯವರು ಮುಖ್ಯಮಂತ್ರಿಯಾಗುವವರೆಗೆ ಸಾರ್ವಜನಿಕವಾಗಿ ಹೆಚ್ಚು ಕಾಣಿಸಿಕೊಂಡವರೇ ಅಲ್ಲ, ಕಾಣಿಸಿಕೊಂಡರೂ ತಮ್ಮ ನಾಯಕರ ಹಿಂಬಾಲಕರಾಗಿ ಮಾತ್ರ. ಅವರೊಬ್ಬ ನಾಯಕರೆಂದು ಅವರ ತವರು ರಾಜ್ಯದಲ್ಲಿಯೇ ಯಾರೂ ಒಪ್ಪಿಕೊಂಡವರಲ್ಲ. ಲಾಲ್ ಕೃಷ್ಣ ಅಡ್ವಾಣಿಯವರು ರಾಮಜನ್ಮಭೂಮಿ ಯಾತ್ರೆ ಹೊರಟಾಗ ರಥಕ್ಕೆ ಸಾರಥಿಯಾಗಿ ಅವರೊಂದಿಗೆ ತಿರುಗಿದ್ದು ಬಿಟ್ಟರೆ ಆ ಚಳುವಳಿಯಲ್ಲಿಯೂ ಸಕ್ರಿಯ ಪಾತ್ರ ವಹಿಸಿದವರಲ್ಲ. ಜೆಪಿ ಚಳುವಳಿ ಗುಜರಾತ್‌ನಿಂದಲೇ ಪ್ರಾರಂಭವಾದರೂ ಲಾಲುಪ್ರಸಾದ್, ಮುಲಾಯಂಸಿಂಗ್ ಯಾದವ್ ಇಲ್ಲವೇ ಸುಶೀಲ್ ಮೋದಿ ರೀತಿ ಅದರಲ್ಲಿ ಸಕ್ರಿಯವಾಗಿ ಭಾಗವಹಿಸಿದವರೂ ಅಲ್ಲ.

ಅವರು ಯಾವುದೇ ನಿರ್ದಿಷ್ಟ ಹೋರಾಟವನ್ನು ಮುನ್ನಡೆಸಿದ ದಾಖಲೆಗಳು ಇಲ್ಲ. ಅಂತಹ ಹೋರಾಟ ನಡೆಸಿದ್ದರೆ ಈಗಾಗಲೇ ಅದರ ಬಗ್ಗೆ ಸರಣಿಪುಸ್ತಕಗಳೇ



ಪ್ರಕಟವಾಗುತ್ತಿದ್ದವು. ಮೋದಿ ರಾಜಕೀಯ ಬದುಕಿನ ನಿಜವಾದ ಹೋರಾಟ ಪ್ರಾರಂಭವಾಗಿದ್ದು ಗುಜರಾತ್ ಮುಖ್ಯಮಂತ್ರಿಯಾದ ನಂತರ. ಹದಿಮೂರು ವರ್ಷಗಳ ಕಾಲ ಮುಖ್ಯಮಂತ್ರಿ ಸ್ಥಾನವನ್ನು ಉಳಿಸಿಕೊಳ್ಳಲು ಮತ್ತು ಈಗ ಆರು ವರ್ಷಗಳಿಂದ ಪ್ರಧಾನ ಮಂತ್ರಿಯಾಗಿ ಉಳಿಯಲು ಸಾಮ, ದಾನ, ಭೇದ, ದಂಡ ಪ್ರಯೋಗ ನಡೆಸಿದ್ದ ಮತ್ತು ನಡೆಸುತ್ತಿರುವ ಹೋರಾಟವನ್ನಷ್ಟೇ ಅವರ ಹೋರಾಟದ ಬದುಕಿನ ಲೆಕ್ಕಕ್ಕೆ ಜಮೆ ಮಾಡಬಹುದು.

ಮಮತಾ ಬ್ಯಾನರ್ಜಿ ಹುಟ್ಟಿನಿಂದಲೆ ಬೀದಿ ಹೋರಾಟಗಾರರು. ಮಹಿಳಾ ಕಾಂಗ್ರೆಸ್ ಮತ್ತು ಯುವಕಾಂಗ್ರೆಸ್ ಪದಾಧಿಕಾರಿಯಾಗಿ ತಮ್ಮ ವಿದ್ಯಾರ್ಥಿ ಜೀವನವನ್ನು ಕಳೆದಿರುವ ಬ್ಯಾನರ್ಜಿ ಹದಿಹರಯದ ದಿನಗಳಿಂದಲೇ ಬೀದಿಯಲ್ಲಿ ಕಮ್ಯುನಿಸ್ಟ್ ಕಾರ್ಯಕರ್ತರ ಜೊತೆ ಹೊಡೆದಾಡಿಕೊಂಡು ಬಂದವರು. ಅರುವತ್ತರ ದಶಕದಲ್ಲಿ ಪಶ್ಚಿಮ ಬಂಗಾಳದ ಜನತೆ ನಕ್ಸಲೀಯರೆಂದರೆ ನಡುಗುತ್ತಿದ್ದ ಕಾಲದಲ್ಲಿ ಹದಿನೈದರ ಬಾಲಕಿ ಮಮತಾ ತಾನು ವಾಸಿಸುತ್ತಿದ್ದ ಭವಾನಿಪುರದಲ್ಲಿ ನಕ್ಸಲೀಯರ ಚೂರಿಗೆ ಎದೆಕೊಟ್ಟು ನಿಂತು ಎದುರಿಸಿದ್ದನ್ನು ಅವರ ಹಿರಿಯ ಸಹದ್ಯೋಗಿಗಳು ಈಗಲೂ ನೆನೆಸಿಕೊಳ್ಳುತ್ತಾರೆ.

ಕಮ್ಯುನಿಸ್ಟ್ ಪಕ್ಷದ ದಾದಾಗಳು ಹತ್ತಾರು ಬಾರಿ ಮಮತಾ ಬ್ಯಾನರ್ಜಿ ಮೇಲೆ ಮಾರಕ ಹಲ್ಲೆ ನಡೆಸಿದ್ದಾರೆ. ಒಮ್ಮೆ ಲಾಠಿ ಏಟಿಗೆ ಒಡೆದುಹೋದ ತಲೆಗೆ ೨೪ ಹೊಲಿಗೆ ಹಾಕಿ ವೈದ್ಯರು ಬದುಕಿಸಿದ್ದರು. ಕತ್ತಿಯ ಹೊಡೆತಕ್ಕೆ ಸಿಕ್ಕಿದ್ದ ಒಂದು ಕೈ ಮೇಲೆ ಅವರಿಗೆ ಈಗಲೂ ಸಂಪೂರ್ಣ ನಿಯಂತ್ರಣ ಇಲ್ಲ. ೨೦೦೫ರಲ್ಲಿ ಲೋಕಸಭೆಗೆ ರಾಜೀನಾಮೆ ನೀಡಿದ ಮರುದಿನ ಮಮತಾ ಬ್ಯಾನರ್ಜಿ ಕಣ್ಣಿನ ಚಿಕಿತ್ಸೆಗಾಗಿ ಆಸ್ಪತ್ರೆ ಸೇರಿದ್ದರು. ವರ್ಷಗಳ ಹಿಂದೆ ಕಮ್ಯುನಿಸ್ಟ್ ಕಾರ್ಯಕರ್ತರ ಜೊತೆ ನಡೆಸಿದ್ದ ಸಂಘರ್ಷದಲ್ಲಿ ಅವರ ಕಣ್ಣು ಸೇರಿದ್ದ ಗಾಜಿನ ಚೂರು ತೆಗೆಯಲು ವೈದ್ಯರು ಶಸ್ತ್ರ ಚಿಕಿತ್ಸೆ ನಡೆಸಿದ್ದು ದೊಡ್ಡ ಸುದ್ದಿಯಾಗಿತ್ತು.

ಇಷ್ಟೆಲ್ಲ ರಾಜಕೀಯ ಸಾಧ್ಯಾಸಾಧ್ಯತೆಗಳು ಮತ್ತು ಗುಣಾವಗುಣಗಳ ವಿಶ್ಲೇಷಣೆಯ ನಂತರ ಮೂಲ ಪ್ರಶ್ನೆಯನ್ನು ಎತ್ತಿಕೊಳ್ಳೋಣ. ನರೇಂದ್ರಮೋದಿಯವರ ಕೋಮುವಾದದ ರಾಜಕಾರಣ ಮತ್ತು ಅಭಿವೃದ್ಧಿಶೂನ್ಯ ಕುರುಡುನೋಟದ ಆಡಳಿತಕ್ಕೆ ಪರ್ಯಾಯವಾಗಿ ಬೇಕಾಗಿರುವ ಜಾತ್ಯತೀತ ರಾಜಕಾರಣ ಮತ್ತು ಅಭಿವೃದ್ಧಿಯ ಮುನ್ನೋಟದ ಪ್ರತಿನಿಧಿಯಾಗಿ ಮಮತಾ ಬ್ಯಾನರ್ಜಿ ಅವರನ್ನು ಕಾಣಲು ಸಾಧ್ಯವೇ ಎನ್ನುವುದು ಈ ಪ್ರಶ್ನೆ.

ಅಭಿವೃದ್ಧಿಯ ಮುನ್ನೋಟದ ವಿಷಯಕ್ಕೆ ಬಂದರೆ ನರೇಂದ್ರಮೋದಿ ಮತ್ತು ಮಮತಾ ಬ್ಯಾನರ್ಜಿ ವೈಫಲ್ಯದಲ್ಲಿ ಪರಸ್ಪರ ಪೈಪೋಟಿಯಲ್ಲಿದ್ದಾರೆ. ಕಳೆದ ಆರು ವರ್ಷಗಳಲ್ಲಿ ದೇಶದ ಕೃಷಿ, ಉದ್ಯಮ, ಉದ್ಯೋಗ, ಆರೋಗ್ಯ, ಶಿಕ್ಷಣ ಕ್ಷೇತ್ರಗಳು ಸೇರಿದಂತೆ ದೇಶ ಹಿಡಿದಿರುವ ಪತನದ ಹಾದಿಯನ್ನು ನೋಡಲು ವಿಶೇಷ ಕನ್ನಡಕ ಬೇಕಾಗಿಲ್ಲ, ಬಿಜೆಪಿಗೆ ಮತಹಾಕಿದವರು ಧರಿಸಿಕೊಂಡಿರುವ ಕೇಸರಿ ಕನ್ನಡಕವನ್ನು ಕಳಚಿಟ್ಟರೆ ಸಾಕು ಎಲ್ಲವೂ ಢಾಳಾಗಿ ಕಾಣುತ್ತದೆ.

ಮೂವತ್ತನಾಲ್ಕು ವರ್ಷಗಳ ಕಮ್ಯುನಿಸ್ಟರ ರಾಜ್ಯಭಾರ ಕೊನೆಗೊಂಡು ಮಮತಾ ಬ್ಯಾನರ್ಜಿ ಅಲ್ಲಿನ ಎಲ್ಲ ಜನವರ್ಗಗಳ ಆಶೋತ್ತರದ ರೂಪದಲ್ಲಿ ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿದಾಗ ಸಂಭ್ರಮಿಸಿದ ಪಶ್ಚಿಮ ಬಂಗಾಳದ ಜನತೆಯ ಸ್ಥಿತಿ ಕೂಡಾ ಒಟ್ಟು ಭಾರತದ ಜನತೆಯ ಸ್ಥಿತಿಗಿಂತ ಭಿನ್ನವಾಗಿಲ್ಲ. ಸಿಂಗೂರು, ನಂದಿಗ್ರಾಮದಲ್ಲಿ ಮುಖ್ಯಮಂತ್ರಿ ಬುದ್ಧದೇವ ಭಟ್ಟಾಚಾರ್ಯ ಅವರು ಕಟ್ಟಲೆತ್ನಿಸಿದ ಹೊಸ ಅಭಿವೃದ್ಧಿಯ ಸೌಧವನ್ನು ಕೆಡವಿ ಹಾಕಿದ್ದಕ್ಕೆ ಬಹುಮಾನದ ರೂಪದಲ್ಲಿ ಮುಖ್ಯಮಂತ್ರಿ ಪದವಿಯನ್ನು ಪಡೆದ ಮಮತಾ ಬ್ಯಾನರ್ಜಿ, ತನ್ನ ಮುನ್ನೋಟದ ಅಭಿವೃದ್ಧಿಯ ಹೊಸ ಸೌಧವನ್ನೇನು ಕಟ್ಟಿಲ್ಲ. ನರೇಂದ್ರಮೋದಿಯವರ ಕುರುಡು ಅಭಿವೃದ್ಧಿಯ ನೋಟಕ್ಕೆ ಪರ್ಯಾಯವಾದ ಅಭಿವೃದ್ಧಿಯ ಮುನ್ನೋಟ ತನ್ನಲ್ಲಿದೆ ಎನ್ನುವ ನಿರೀಕ್ಷೆಯನ್ನು ಕೂಡಾ ಅವರು ಕಳೆದ ಒಂಬತ್ತು ವರ್ಷಗಳಲ್ಲಿ ನೀಡಿಲ್ಲ.

ನರೇಂದ್ರ ಮೋದಿ ಮತ್ತು ಮಮತಾ ಬ್ಯಾನರ್ಜಿ ಇಬ್ಬರಿಗೂ ಕಮ್ಯುನಿಸ್ಟರ ಬಗ್ಗೆ ನಖಶಿಖಾಂತ ದ್ವೇಷ ಇದೆ. ಆದರೆ ಇಬ್ಬರ ಈ ದ್ವೇಷ ಇಲ್ಲವೇ ವಿರೋಧದಲ್ಲಿ ವ್ಯತ್ಯಾಸವೂ ಇದೆ. ಕಮ್ಯುನಿಸ್ಟರ ಬಗೆಗಿನ ಮೋದಿ ದ್ವೇಷಕ್ಕೆ ಸೈದ್ಧಾಂತಿಕ ಹಿನ್ನೆಲೆ ಇರುವುದರಿಂದ ಅದರಲ್ಲಿ ಸ್ಪಷ್ಟತೆ ಇದೆ, ಇದು ವೈಯಕ್ತಿಕ ವಿರೋಧ ಅಲ್ಲ. ತನ್ನ ಪರಿವಾರದ ಮೂಲಕ ಹರಿದು ಬಂದ ವಿರೋಧವನ್ನು ಅವರು ಮೈಗೂಡಿಸಿಕೊಂಡಿದ್ದಾರೆ. "ಮುಸ್ಲಿಮರು ,ಕ್ರಿಶ್ಚಿಯನರು ಮತ್ತು ಕಮ್ಯುನಿಸ್ಟರು ಆಂತರಿಕ ಶತ್ರುಗಳು" ಎಂದು ಹೇಳಿಕೊಟ್ಟು ಹೋಗಿರುವ ಎಂ.ಎಸ್.ಗೋಲ್‌ವಾಲ್ಕರ್ ಪಾಠವನ್ನಷ್ಟೇ ಅವರು ಪಾಲಿಸುತ್ತಿದ್ದಾರೆ.

ಮಮತಾ ಬ್ಯಾನರ್ಜಿಯವರ ಸೈದ್ಧಾಂತಿಕ ಬದ್ಧತೆ ಗಟ್ಟಿಯಾದುದಲ್ಲ, ಬಹಳ ತೆಳುವಾದದ್ದು. ಅವರು ಕಾಂಗ್ರೆಸ್ ತೊರೆದು ಎನ್ ಡಿ ಎ ಸೇರಿಕೊಂಡು ಮತ್ತೆ ಕಾಂಗ್ರೆಸ್ ಜೊತೆ ಹೊಂದಾಣಿಕೆ ಮಾಡಿಕೊಂಡು ಮತ್ತೊಮ್ಮೆ ಆ ಕಡೆ ಹೋಗಿ ಈ ಕಡೆ ಬಂದವರು. ಎಡಪಕ್ಷಗಳ ಬಗೆಗಿನ ಅವರ ವಿರೋಧ ಹೆಚ್ಚು ವೈಯಕ್ತಿಕವಾದುದು. ಪಶ್ಚಿಮ ಬಂಗಾಳದ ಕಮ್ಯುನಿಸ್ಟರ ಬಗ್ಗೆ ಅವರು ಹೊಂದಿರುವ ಅಭಿಪ್ರಾಯ ಕೇರಳದ ಕಮ್ಯುನಿಸ್ಟರ ಬಗ್ಗೆ ಅವರಿಗಿರಲಾರದು. ಕಮ್ಯುನಿಸ್ಟ್ ವಿರೋಧದಲ್ಲಿ ತಮ್ಮ ಪಕ್ಷದ ರಾಜಕೀಯ ಅಸ್ತಿತ್ವ ಇದೆ ಎಂದು ಅವರಿಗೆ ತಿಳಿದಿದೆ.

ಈ ಕಾರಣಕ್ಕಾಗಿಯೇ ಮಮತಾ ಬ್ಯಾನರ್ಜಿಯವರಿಗೆ ಬಿಜೆಪಿಗಿಂತಲೂ ಕಮ್ಯುನಿಸ್ಟರ ಮೇಲೆ ಹೆಚ್ಚು ದ್ವೇಷ ಇದೆ ಎನ್ನುವುದನ್ನು ಪಶ್ಚಿಮ ಬಂಗಾಳದ ರಾಜಕೀಯ ಬಲ್ಲವರು ಯಾರೂ ನಿರಾಕರಿಸಲಾರರು. ಕಮ್ಯುನಿಸ್ಟರಿಗೆ ಬಿಜೆಪಿಗಿಂತಲೂ ಹೆಚ್ಚಿನ ದ್ವೇಷ ಮಮತಾ ಬ್ಯಾನರ್ಜಿ ಅವರ ಮೇಲಿದೆ. ಪಶ್ಚಿಮಬಂಗಾಳದಲ್ಲಿ ಬಿಜೆಪಿ ಕಾಲೂರಲು ಮಮತಾ ಬ್ಯಾನರ್ಜಿ ಮತ್ತು ಕಮ್ಯುನಿಸ್ಟರ ವೈಯಕ್ತಿಕ ದ್ವೇಷ-ಪ್ರತಿಷ್ಠೆಗಳು ಕೂಡಾ ಕೊಡುಗೆ ನೀಡಿವೆ ಎನ್ನುವುದನ್ನು ಮೂರೂ ಪಕ್ಷಗಳು ನಿರಾಕರಿಸಲಿಕ್ಕಿಲ್ಲ. ಕಳೆದ ಲೋಕಸಭಾ ಚುನಾವಣೆಯಲ್ಲಿ ಹಲವಾರು ಕಮ್ಯುನಿಸ್ಟ್ ನಾಯಕರು ಬಿಜೆಪಿ ಪಕ್ಷದಿಂದ ಸ್ಪರ್ಧಿಸಿದ್ದಾರೆ. ತೃಣಮೂಲ ಕಾಂಗ್ರೆಸ್‌ನಿಂದಲೂ ಬಿಜೆಪಿ ಕಡೆ ವಲಸೆ ಹೋಗುತ್ತಲೇ ಇದ್ದಾರೆ.

ಸೈದ್ಧಾಂತಿಕ ಹಿನ್ನೆಲೆಯಿಂದ ನೋಡುವುದಾದರೆ ಮಮತಾ ಬ್ಯಾನರ್ಜಿ ಅವರು ಬಿಜೆಪಿಯನ್ನು ವಿರೋಧಿಸಲು ಕಾರಣಗಳೇ ಇಲ್ಲ. ಎರಡೆರಡು ಬಾರಿ ಆ ಪಕ್ಷದ ಜೊತೆ ಮೈತ್ರಿ ಮಾಡಿಕೊಂಡು ಸಚಿವರಾದವರು ಮಮತಾ ಬ್ಯಾನರ್ಜಿ. ಈ ಎರಡೂ ಪಕ್ಷಗಳು ಸದ್ಯಕ್ಕೆ ಕಾಂಗ್ರೆಸ್ ಮತ್ತು ಎಡಪಕ್ಷಗಳನ್ನು ಸಮಾನ ದೂರದಲ್ಲಿಟ್ಟಿವೆ. ಪಶ್ಚಿಮ ಬಂಗಾಳದಲ್ಲಿ ತಮ್ಮ ಪಕ್ಷವನ್ನು ಮುನ್ನಡೆಸುವ ಪ್ರಬಲ ನಾಯಕರು ಬಿಜೆಪಿಯಲ್ಲಿಯೂ ಇಲ್ಲ. ಒಂದೊಮ್ಮೆ ಮಮತಾಬ್ಯಾನರ್ಜಿ ಬಿಜೆಪಿ ಸೇರಬಯಸಿದರೆ ಆ ಪಕ್ಷ ಮತ್ತು ಪರಿವಾರ ಸಂತೋಷದಿಂದ ಸ್ವಾಗತಿಸಿ ಪಶ್ಚಿಮ ಬಂಗಾಳದ ಪೂರ್ಣ ಸುಪರ್ದಿಯನ್ನು ಅವರಿಗೆ ಬಿಟ್ಟುಕೊಡಲೂಬಹುದು.

ತೃತೀಯ ರಂಗದ ಸರ್ಕಾರ ಎಂದರೆ ತಂತಿ ಮೇಲಿನ ನಡಿಗೆ. ಯಾವ ಕ್ಷಣದಲ್ಲಿ ಯಾರೂ ತಂತಿಯನ್ನು ಎಳೆಯಬಹುದು. ಇಂತಹವರನ್ನು ಸಂಭಾಳಿಸಿಕೊಂಡು ಹೋಗುವ ಸಾಮರ್ಥ್ಯ ನಾಯಕನಿಗಿರಬೇಕಾಗುತ್ತದೆ. ಇದಕ್ಕೆ ಬೇಕಾಗಿರುವುದು ರಾಜಕೀಯ ಬಲ ಅಲ್ಲ, ಸಹನೆ, ವಿಶಾಲ ಮನಸ್ಸು ಮತ್ತು ಹೊಂದಾಣಿಕೆಯ ಗುಣ. ತಾಳ್ಮೆ ಕಳೆದುಕೊಂಡು ಲೋಕಸಭೆಯಲ್ಲಿಯೇ ವಿರೋಧಿಗಳ ಕತ್ತು ಪಟ್ಟಿಗೆ ಕೈಹಾಕಿರುವ, ಸಭಾಧ್ಯಕ್ಷರ ಕಡೆ ಕಾಗದದ ಕಂತೆಗಳನ್ನೆಸೆದಿರುವ ಮತ್ತು ಹೊಂದಾಣಿಕೆ ಮಾಡಿಕೊಳ್ಳಲು ಒಪ್ಪದೆ ನಾಲ್ಕು ಬಾರಿ ಮೈತ್ರಿಕೂಟ-ಪಕ್ಷ-ಸಿದ್ಧಾಂತವನ್ನು ಬದಲಿಸಿರುವ ಮಮತಾ ಬ್ಯಾನರ್ಜಿ ಅವರಲ್ಲಿ ಇಂತಹ ಗುಣವಿಶೇಷಗಳನ್ನು ನಿರೀಕ್ಷಿಸುವುದು ಸಾಧ್ಯವೇ?

ಅತೀ ಶೀಘ್ರದಲ್ಲಿ ಪ್ರಚೋದನೆಗೊಳಗಾಗುವ ಮಮತಾ ಬ್ಯಾನರ್ಜಿಯವರ ತಂತಿಯ ಮೇಲಿನ ನಡಿಗೆಯ ಆಯ ತಪ್ಪಿಸುವುದಾಗಲಿ, ಆಯ ತಪ್ಪಿದರೆ ಬೀಳದಂತೆ ಕಾಪಾಡಿ ಎತ್ತಿಕೊಂಡು ಹೋಗುವುದಾಗಲಿ, ಇತ್ತೀಚಿನ ವರ್ಷಗಳಲ್ಲಿ ಉಳಿದೆಲ್ಲ ರಾಜಕೀಯ ಪಕ್ಷಗಳನ್ನು ಮೀರಿಸುವ ಹಾಗೆ ರಾಜಕೀಯ ಅಖಾಡದ ಪಟ್ಟುಗಳನ್ನೆಲ್ಲ ಕಲಿತಿರುವ ಭಾರತೀಯ ಜನತಾ ಪಕ್ಷದ ನಾಯಕರಿಗೆ ಕಷ್ಟದ ಕೆಲಸ ಅಲ್ಲ. ಮುಂದಿನ ದೃಶ್ಯಗಳನ್ನು ಸುಲಭದಲ್ಲಿ ಊಹಿಸಿಕೊಳ್ಳಬಹುದು.



(ಲೇಖಕರು ಹಿರಿಯ ಪತ್ರಕರ್ತರು ಮತ್ತು ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ಅವರಿಗೆ ಮಾಧ್ಯಮ ಸಲಹಾಕಾರರಾಗಿದ್ದವರು)

ಕಥೆ

ಹರಿಯಿತು ಕರುಳಬಳ್ಳಿ

–ಅಮರೇಶ ನುಗಡೋಣಿ

ರಾಜಶೇಖರನ ಮನಸ್ಸು ಯಾಕೋ ನೆನಪಿನ ಸುಳಿಗೆ ಸಿಕ್ಕಿತ್ತು: ತನಗೆ ಕೆಲಸ ಸಿಕ್ಕು ಇಪ್ಪತ್ತು ವರ್ಷಗಳಾಗಿದ್ದವು. ಕೆಲಸ ತಡವಾಗಿಯೇ ಸಿಕ್ಕಿತ್ತು. ಮದುವೆಯಾದ. ಸಂಸಾರ ಹೂಡಿದ. ಎರಡು ಮಕ್ಕಳಾದವು. ಅವುಗಳನ್ನು ಪೋಷಿಸುವುದರಲ್ಲಿ ವರ್ಷಗಳು ಕಳೆದದ್ದೇ ಗೊತ್ತಾಗಲಿಲ್ಲ. ಊರಲ್ಲಿ ಅಪ್ಪ – ಅಮ್ಮನನ್ನು ತಮ್ಮನಾದ ಗುರುಲಿಂಗ ನೋಡಿಕೊಳ್ಳುತ್ತಿದ್ದ. ಹಿರಿಯರು ಸಂಪಾದಿಸಿದ್ದ ಸ್ವಲ್ಪ ಜಮೀನಿತ್ತು. ತಮ್ಮನೇ ವ್ಯವಸಾಯ ಮಾಡುತ್ತಿದ್ದ. ಅವನಿಗೂ ಮದುವೆಯಾಗಿತ್ತು. ಮಕ್ಕಳು ಇದ್ದವು. ಹಿರಿಯ ಮಗನಾಗಿ ತಾನೇ ಅಪ್ಪ– ಅಮ್ಮನನ್ನು ಕರೆತಂದು ಮನೆಯಲ್ಲಿಟ್ಟುಕೊಂಡು ಸಾಕಬೇಕಾಗಿತ್ತು. ತನಗೂ ಆಸೆಯಿತ್ತು. ಆದರೆ ಗಂಡ ತೆಗೆದುಕೊಳ್ಳುವ ನಿರ್ಧಾರಗಳನ್ನು ಹೆಂಡತಿ ಮಾನ್ಯ ಮಾಡಿದರೆ ಮರ್ಯಾದೆ ಇರುತ್ತದೆ. ಇಲ್ಲದಿದ್ದರೆ ಗಂಡ ಅಸಹಾಯಕನಾಗಬೇಕಾಗುತ್ತದೆ. ಅಪ್ಪ – ಅಮ್ಮನನ್ನು ಕರೆತರುವ ವಿಷಯ ಹೆಂಡತಿಯ ತಕರಾರಿನಿಂದ ನೆನೆಗುದಿಗೆ ಬಿದ್ದಿತ್ತು.

ಕೊನೆಗೆ ರಾಜಶೇಖರ ತಾನೇ ಕಾರನ್ನು ಡ್ರೈವ್ ಮಾಡಿಕೊಂಡು ತನ್ನೂರಿಗೆ ಹೋಗಲು ಸಿದ್ಧನಾದ. ಇವತ್ತು ಮಂಗಳ ಬೇಗ ಏಳುವುದಿಲ್ಲ. ಮಗನಿಗೆ ಶಾಲೆಯಿಲ್ಲದ್ದು ಗೊತ್ತಿದ್ದರಿಂದ ಬೇಗ ಏಳುವ ಪ್ರಶ್ನೆಯೇ ಇರಲಿಲ್ಲ. ತಾಯಿ, ಮಗ ಇಬ್ಬರೂ ಒಂದೊಂದು ಮೊಬೈಲ್ ಹಿಡಿದು ರಾತ್ರಿ ಒಂದು ಗಂಟೆಯ ತನಕವಾದರೂ ಕೆದರುತ್ತ ಕುಳಿತಿರುವುದಂತೂ ನಿಜ.



ನಿನ್ನೆ ರಾತ್ರಿ : 'ನಾನು ಊರಿಗೆ ಹೋಗಿ ಬರ್ತೀನಿ. ಸಂಜೆ ಆರೇಳು ಗಂಟೆಗೆ ಮರಳಿ ಬರ್ತೀನಿ!' ಎಂದು ಮಂಗಳಗೆ ಹೇಳಿದ್ದ. 'ನಾಳೆ ಸಂಡೇ! ಈಗ ಯಾಕೆ ನಿಮ್ಮೂರಿಗೆ ಹೋಗದು? ಅಲ್ಲೇನೈತೆ? ಹೊಲ– ಮನೆ ಪಾಲು ಮಾಡಿಕೊಂಡು ಹತ್ತು ವರ್ಷಾಗಾಕ ಬಂತು. ನಿಮ್ಮ ಪಾಲಿನ ಭೂಮಿಯನ್ನು ನಿಮ್ಮ ತಮ್ಮನ ಕೈಗಿಟ್ಟು ಕುಂತಿದ್ದೀರಿ! ಬೆಳೆ ಬೆಳಿತಾನ. ಒಂದು ವರ್ಷವಾದ್ರೂ ಪಾಲು ಕೊಟ್ಟಾನೇನು? ಅತ್ತೆ–ಮಾವನ್ನ ನೋಡಿಕೊಂಡಿರ್ತಾನಂತ ಪಾಲು ಕೇಳದೆ ಸುಮ್ಮನಿದ್ರಿ, ಅತ್ತೆ–ಮಾವ ಕಣ್ಮುಚ್ಚಿಯೇ ಐದು ವರ್ಷ ಕಳದವಲ್ಲ.......' ಮಂಗಳನ ಪ್ರಶ್ನೆಗಳಿವು. ತಾನು 'ರೈತರು ಕಳೆದ ಹದಿನೈದು ವರ್ಷಗಳಿಂದ ಕಷ್ಟದಾಗ ಇದ್ದಾರ. ಅವರಿಗೆ ಸಂಕಟಗಳು ಬಾಳಾವ' ಎಂದು ನಿರ್ಲಿಪ್ತವಾಗಿಯೇ ಹೇಳಿದ್ದ. 'ನಿಮ್ಮ ಉದಾರ ಗುಣ ನೋಡಿಕೊಂಡಾರ. ಅಲ್ಲ, ನಿಮ್ಮ ತಮ್ಮನಿಗೆ ತಿಳಿದಿಲ್ಲೇನು? ನಾವು ಸೈಟ್ ತಗಂಡಾಗ ಬಂದು ನೋಡಿ ಸ್ವಲ್ಪ ಹಣಕಾಸಿನ ಸಹಾಯ ಮಾಡ್ಬೇಕಂತ? ನಾವು ಲೋನ್ ತೆಗೆದು ಮನೆ ಕಟ್ಟಿಸಾಕ ನಿಂತಾಗ ಆತ ಇತ್ತಗ ಮುಖ ಮಾಡ್ಲಿಲ್ಲ. ನೋಡಿದ್ರೆಲ್ಲ ಕೊನೆಕೊನೆಗೆ ಮನೆ ಪೂರ್ಣ ಆಗದೆ ಹಣವಿಲ್ಲದೆ ನಾಲ್ಕು ತಿಂಗಳು ನಿಂತೇ ಹೋಗಿತ್ತು! ನಾನೇ ಬ್ಯಾಂಕಿನ ಮ್ಯಾನೇಜರ್ ಮುಂದೆ ಕುಂತು 'ಸರ್, ಮನೆಗೆ ಲೋನ್ ಹಣ ಸಾಲಲಿಲ್ಲ. ಇನ್ನೂ ಸ್ವಲ್ಪ ಕೆಲ್ಸ ಐತೆ. ಮೂರು ಲಕ್ಷ ಹೆಚ್ಚಿಗೆ ಲೋನ್ ಮಾಡಿ ಕೊಡ್ರಿ' ಎಂದು ರಿಕ್ವೆಸ್ಟ್ ಮಾಡಿಕೊಂಡೆ. ಪಾಪ ಮ್ಯಾನೇಜರ್ ಕರಗಿ 'ಮನೆ ಮೇಲೆ ಎರಡು ರೂಮ್ ಕಟ್ಟಸ್ತೀವಿ. ಅದನ್ನ ಬಾಡಿಗೆ ಕೊಡ್ತೀವಿ – ಎಂದು ಬರೆದು ಕೊಡಿ ನೋಡೋಣ' ಎಂದು ಸೂಚಿಸಿ ಮತ್ತೆ ಮೂರು ಲಕ್ಷ ಹೆಚ್ಚಿಗೆ ಕೊಟ್ಟದ್ದಕ್ಕೆ ಈ ಮನೆಯಾಯ್ತು! ಆಗಲಾದ್ರೂ ನಿಮ್ಮ ತಮ್ಮ ಬಂದು ಸಹಾಯ ಮಾಡ್ಬೇಕಿತ್ತು. ದಾನ ಕೇಳ್ತಿವೇನು? ನಮ್ದು ಭೂಮಿ ಅವರ ಕೈಯಲ್ಲಿ ಇದೆ. ಬಿತ್ತಿ ಬೆಳಿತಾನ. ಪಾಲು ಮಾತ್ರ ಕೊಡದಿಲ್ಲಂತದ್ರೇನು?'

ಮಂಗಳ ಇಂತಹ ಮಾತಾಡುತ್ತಲೇ ಬಂದಿದ್ದಳು. ತಾನು ಕೇಳುತ್ತಲೇ ಬಂದಿದ್ದ. ಈಗ ಅವು ಒಣ ಮಾತುಗಳಾದ್ದರಿಂದ ಉದ್ವೇಗವೇನೂ ಯಾರಿಗೂ ಇರಲಿಲ್ಲ. ಜಗಳ ಆಡುವ ಸಿಟ್ಟು ಉಳಿದಿರಲಿಲ್ಲ. 'ಅಪ್ಪ, ನಾಳೆ ಸಂಡೇ. ನಾನು ಕಾರಿನಲ್ಲಿ ಬರ್ತೀನಿ. ಅಲ್ಲಿ ಕೆನಾಲ್‌ನಲ್ಲಿ ಈಜಾಡ್ತೀನಿ' ಮಗ ಉತ್ಸಾಹಗೊಂಡು ಕೇಳಿದ. 'ಹೋಮ್ ವರ್ಕ್ ಐತೆ. ಗೊತ್ತಿಲ್ಲೇನು? ರಾಡಿ ನೀರಿನ್ಯಾಗ ಈಜಾಡಿ ಜಡ್ಡತ್ತಿ ಬಿದ್ರೆ.....' ಅಮ್ಮನ ಮಾತಿಗೆ 'ನಿಂದು ಬರಿ ಗೋಳು' ಎಂದು ಮಗ ಸುಮ್ಮನಾಗಿದ್ದ.

ಊರು ದಾಟಿದ ಕಾರು ಗುಡ್ಡಬೆಟ್ಟಗಳ ನಡುವೆ ಹರಿದಿದ್ದ ರಾಜ್ಯ ಹೆದ್ದಾರಿಯಲ್ಲಿ ನಿರುಮ್ಮಳವಾಗಿ ಓಡುತ್ತಿತ್ತು. ಕಾರನ್ನು ಡ್ರೈವ್ ಮಾಡುತ್ತಿದ್ದೇನೆ ಎಂದು ಅನ್ನಿಸಲಿಲ್ಲ. ರಸ್ತೆ ಬದಿಯ ಊರುಗಳು, ಆ ಊರುಗಳನ್ನು ದಾಟುವತನಕ ಎದುರಾಗುವ ರೋಡ್‌ಬ್ರೇಕ್‌ಗಳ ಹಾವಳಿಗೆ ಬೇಸರ ಬರುತ್ತಿತ್ತು. ಬೆಳಗಿನ ಜಾವದಲ್ಲಿ ಊರುಗಳು ಬಂದರೆ ಸಾಕು ಮಹಾಜನರು ತಂಬಿಗೆ ಹಿಡಿದು ಮಹಾನ್ ಕಾರ್ಯಕ್ಕೆ ತಲೆಯೆತ್ತಿ ಬಯಲ ಕಡೆ ಹೊರಟವರ ದರ್ಶನ. ನಿರ್ಭಯವಾಗಿ ರಸ್ತೆಯ ಅಂಚಿನಲ್ಲಿ ಕೂಡುವವರಿಗೆ ಶೌಚಾಲಯದ ಪ್ರಜ್ಞೆ ಮೂಡಿಸುವ ಅವತಾರ ಪುರುಷ ಇನ್ನೂ ಹುಟ್ಟಿರಲಿಲ್ಲ. ಅಮ್ಮ 'ತೊಡೆ ಮರೆಯಲ್ಲಿ ಉಣ್ಣು; ಗಿಡ ಮರೆಯಲ್ಲಿ ಕೂಡು' ಎಂದು ಹೇಳುತ್ತಿದ್ದ ಮಾತು ರಾಜಶೇಖರನಿಗೆ ನೆನಪಾಯ್ತು. ಅದೂ ಜಾರಿಯಾಗಿಲ್ಲ. ಕಾರು ಗುಡ್ಡ ಬೆಟ್ಟಗಳ ನಡುವೆ ಹರಿಯುತ್ತ ಸ್ವಲ್ಪ ಬಯಲಿಗೆ ಬಂತೋ ಸೂರ್ಯೋದಯ ಕಂಡಿತು. ಈ ದಾರಿಯಲ್ಲಿ ಅದೆಷ್ಟು ಸಲ ಬಂದರೂ ತಪ್ಪದೆ ಬಾಲರವಿಯ ದರ್ಶನವಾಗುತ್ತಿತ್ತು. ಬೆಳಗು ಬಲಿಯತೊಡಗಿತ್ತು. ವಾಹನಗಳ ಓಡಾಟ ಆರಂಭವಾಗಿತ್ತು. ಎಚ್ಚರಿಕೆಯಿಂದ ಕಾರನ್ನು ಚಲಿಸುತ್ತಿದ್ದ ರಾಜಶೇಖರನಿಗೆ ಆ ಸುದ್ದಿ ಪಕ್ಕನೇ ಮೈಗೆ ಅಡರಿದಂತಾಯಿತು! ಊರಲ್ಲಿ ತಮ್ಮ ಮಾಡಿದ್ದ ಮೂರ್ಖ ಕೆಲ್ಸವನ್ನು ಕೇಳಿಯೇ ಎದೆಯಲ್ಲಿ ಮುಳ್ಳು ಮುರಿದಂತಾಗಿತ್ತು. ಆ ಮೂರ್ಖ ಕೆಲ್ಸವನ್ನು ನೋಡುವ ಯಾವ ಆಸಕ್ತಿ ತನ್ನಲ್ಲಿ ಉಳಿದಿರಲಿಲ್ಲ. ಆದರೂ ಕಂಡು ಬರಬೇಕೆನ್ನುವ ಸಲುವಾಗಿ ಯಾಂತ್ರಿಕವಾಗಿ ಹೊರಟಿದ್ದ ರಾಜಶೇಖರ. ಆದರೂ ಮನಸ್ಸು ನೋವುಣ್ಣುತ್ತಿತ್ತು. ಬಳಕೆಯ ವಸ್ತುಗಳು ಕೈತಪ್ಪಿ ಒಡೆದು ಹೋದರೆ ಇನ್ನೊಂದು ತರಬಹುದು. ತಮ್ಮ ಮಾಡಿದ್ದ ಮೂರ್ಖ ಕೆಲ್ಸಕ್ಕೆ ಸಮಾಧಾನ ಮಾಡಿಕೊಳ್ಳಲು ಸಾಧ್ಯವಾಗಲೇ ಇಲ್ಲ. ರಿಪೇರಿಯಾಗದಂತಹ ಎಡವಟ್ಟು ಮಾಡಿದ್ದ. ಮನಸ್ಸು ಮಾಡಿ ರಿಪೇರಿ ಮಾಡಲು ತೊಡಗಿದರೆ ತನ್ನ ಜೀವಿತಾವಧಿಯಲ್ಲಿ ರಿಪೇರಿಯಾಗಲು ಸಾಧ್ಯವಿರಲಿಲ್ಲ ಅನ್ನಿಸಿತು....

'ಸ್ವಲ್ಪ ದಾರಿ ಬಿಟ್ಟು ನಿಂತುಕೊಳ್ರಿ' ರಾಜಶೇಖರ ಕಾರು ನಿಲ್ಲಿಸಿ ಹೇಳಬೇಕಾಯ್ತು.

"ಬರ್ರಿ ನಿಮ್ದು ಲಾರಿಯೇನಲ್ಲ. ಕಾರಿಗೆಷ್ಟು ಬೇಕು ದಾರಿ?" ಎಂದು ಧಿಮಾಕಿನಿಂದ ಹೇಳುತ್ತ ರೋಡು ಬಿಟ್ಟು ಸರಿದರು ಮುವ್ವರು. ಅವರಲ್ಲಿ ಒಬ್ಬಾತ ತಂಬಿಗೆ ಹಿಡಿದಿದ್ದ. ಯಾವುದೋ ಹಳ್ಳಿ ಬಂದಿತ್ತು. ರಾಜ್ಯ ಹೆದ್ದಾರಿಯಾದರೂ ರೋಡ್‌ಬ್ರೇಕ್‌ಗಳು. ಇದ್ದಕ್ಕಿದ್ದ ಹಾಗೆ ರಾಜಶೇಖರನಿಗೆ ಈಗ ಊರಿಗೆ ಹೋಗಿ ತಾನೇನು ಮಾಡುವುದಿದೆ? ನಡೆಯಬಾರದ್ದು ನಡೆದು ಹೋಗಿದೆ. ತಾನು ಊರಿಗೆ ಹೋದರೆ ಊರಮಂದಿ ಗೌರವ ಕೊಡುತ್ತಾರೆ ನಿಜ. ನಾಕಾರು ಮಂದಿ ಊರ ಹಿರಿಯರಂತೂ ತನ್ನನ್ನು ಹೆಮ್ಮೆಯಿಂದ ಕಾಣುತ್ತಾರೆ. ಆದ್ರೆ ತಮ್ಮ ಮಾಡಿದ್ದ ಮೂರ್ಖ ಕೆಲ್ಸವನ್ನು ಕಂಡು ಯಾರೂ ತನಗೆ ಕರೆ ಮಾಡಿ ತಿಳಿಸಿಲ್ಲ. ಹೋಟಲಿಟ್ಟುಕೊಂಡಿರುವ ಲಿಂಗ ತಿಳಿಸಿದ್ದ. ಆ ವಿಷಯ ನಿಜವೇ ಎಂದು ತಿಳಿದುಕೊಳ್ಳಲು ತಾನೇ ಪರಿಚಯಸ್ಥನಿಗೆ ಕರೆ ಮಾಡಿದಾಗ 'ಹೌದಂತಪ್ಪ, ನಾನೂ ನೋಡಿಲ್ಲ. ಮಾತಾಡೋದನ್ನ ಕೇಳಿನಿ' ಎಂದು ತಣ್ಣಗೆ ಹೇಳಿದ್ದ. ಹಳ್ಳಿಗಳು, ಅಲ್ಲಿಯ ಜನಗಳು ಈಗಂತೂ ಸಂಪೂರ್ಣ ಬದಲಾಗಿ ಹೋಗಿವೆ! ಮೊಬೈಲ್, ಟಿ.ವಿ, ಸಿನೆಮಾಗಳೇ ಜನರನ್ನು ಬದಲಿಸಿವೆ ಎಂಬ ಚರ್ಚೆಯನ್ನು ಹಲವಾರು ಸಲ ಕೇಳಿದ್ದ ರಾಜಶೇಖರ. ಬದಲಾವಣೆ ಬೇಕು. ಅದು ಜನರಿಗೆ ಪೂರಕವಾಗಿರಬೇಕು.

ರಾಜಶೇಖರನ ಮನಸ್ಸು ಯಾಕೋ ನೆನಪಿನ ಸುಳಿಗೆ ಸಿಕ್ಕಿತ್ತು: ತನಗೆ ಕೆಲಸ ಸಿಕ್ಕು ಇಪ್ಪತ್ತು ವರ್ಷಗಳಾಗಿದ್ದವು. ಕೆಲಸ ತಡವಾಗಿಯೇ ಸಿಕ್ಕಿತ್ತು. ಮದುವೆಯಾದ. ಸಂಸಾರ ಹೂಡಿದ. ಎರಡು ಮಕ್ಕಳಾದವು. ಅವುಗಳನ್ನು ಪೋಷಿಸುವುದರಲ್ಲಿ ವರ್ಷಗಳು ಕಳೆದದ್ದೇ ಗೊತ್ತಾಗಲಿಲ್ಲ. ಊರಲ್ಲಿ ಅಪ್ಪ – ಅಮ್ಮನನ್ನು ತಮ್ಮನಾದ ಗುರುಲಿಂಗ ನೋಡಿಕೊಳ್ಳುತ್ತಿದ್ದ. ಹಿರಿಯರು ಸಂಪಾದಿಸಿದ್ದ ಸ್ವಲ್ಪ ಜಮೀನಿತ್ತು. ತಮ್ಮನೇ ವ್ಯವಸಾಯ ಮಾಡುತ್ತಿದ್ದ. ಅವನಿಗೂ ಮದುವೆಯಾಗಿತ್ತು. ಮಕ್ಕಳು ಇದ್ದವು. ಹಿರಿಯ ಮಗನಾಗಿ ತಾನೇ ಅಪ್ಪ– ಅಮ್ಮನನ್ನು ಕರೆತಂದು ಮನೆಯಲ್ಲಿಟ್ಟುಕೊಂಡು ಸಾಕಬೇಕಾಗಿತ್ತು. ತನಗೂ ಆಸೆಯಿತ್ತು. ಆದರೆ ಗಂಡ ತೆಗೆದುಕೊಳ್ಳುವ ನಿರ್ಧಾರಗಳನ್ನು ಹೆಂಡತಿ ಮಾನ್ಯ ಮಾಡಿದರೆ ಮರ್ಯಾದೆ ಇರುತ್ತದೆ. ಇಲ್ಲದಿದ್ದರೆ ಗಂಡ ಅಸಹಾಯಕನಾಗಬೇಕಾಗುತ್ತದೆ. ಅಪ್ಪ – ಅಮ್ಮನನ್ನು ಕರೆತರುವ ವಿಷಯ ಹೆಂಡತಿಯ ತಕರಾರಿನಿಂದ ನೆನೆಗುದಿಗೆ ಬಿದ್ದಿತ್ತು. ಯಾವಾಗಲೋ ಊರಿಗೆ ಹೋದಾಗ 'ನೀವೂ ಬರ್ರಿ, ನಮ್ಮ ಜತೆಗೆ ಇದ್ದು ಬಿಡಿ' ಎಂದು ರಾಜಶೇಖರ ಸುಮ್ಮನೇ ಹೇಳುತ್ತಿದ್ದ. 'ಇಲ್ಲಿ ಹೊಲ ಮನೆ ದನಕರ ಇವೆ. ಕೆಲ್ಸ ಅಂತ ಇರ್ತದ. ನಿನ್ನ ನಗರಕ್ಕೆ ಬಂದ್ರೆ

ಕುಂತು ತಿನ್ನದಾದೀತು. ಕೈಕಾಲು ಗಟ್ಟಿಗಿರತನಕ ಇಲ್ಲೇ ಇರ್ತೀವಿ' ಎಂದು ಹೆತ್ತವರು ಹೇಳಿದ್ದು ಕೇಳಿ ನಿರುಮ್ಮಳವೇ ಆಗಿತ್ತು. ಗುರುಲಿಂಗನಿಗೂ ಎರಡು ಮಕ್ಕಳಾದ್ದರಿಂದ ಅಪ್ಪ – ಅಮ್ಮನ ಅಗತ್ಯವಿತ್ತು. ಆಗಾಗ ತಾನು ತಮ್ಮನಿಗೆ ಹಣಕಾಸಿನ ನೆರವು ನೀಡುತ್ತಿದ್ದ. ಬರುಬರುತ್ತ ರಾಜಶೇಖರನಿಗೆ ತನ್ನ ಸಂಸಾರವನ್ನು ಕಟ್ಟಿಕೊಳ್ಳಲು ಹಣದ ಕೊರತೆಯಾಗುತ್ತಿತ್ತು. ಸೈಟ್ ಕೊಳ್ಳುವುದು, ಮನೆ ಕಟ್ಟುವುದು, ಮಕ್ಕಳ ವಿದ್ಯಾಭ್ಯಾಸದ ಖರ್ಚು ನಿಭಾಯಿಸುವುದೇ ಕಷ್ಟವಾಗುತ್ತಿತ್ತು. ಅಂಥ ಸಂದರ್ಭದಲ್ಲಿ ತಮ್ಮನಿಗೆ ನೆರವು ನೀಡಲಾಗುತ್ತಿರಲಿಲ್ಲ. ವ್ಯವಸಾಯ ಸುಖಕರವಾಗಿರಲಿಲ್ಲ. ರೈತರ ಸಾವುಗಳನ್ನು ಗಮನಿಸುತ್ತಿದ್ದ. ರೈತರ ಸಂಕಷ್ಟಗಳನ್ನು ಅರಿಯುವ ಮನಸ್ಸು ರಾಜಶೇಖರನಿಗಿತ್ತು! ತಮ್ಮನ ಮೇಲೆ ಪ್ರೀತಿಯಿಟ್ಟುಕೊಂಡಿದ್ದ.......

ಕಾರು ರಸ್ತೆ ಬಿಟ್ಟು ಡಾಬಾದ ಮುಂದೆ ಬಂದು ನಿಂತಿತು!

೨

"ಸರ್, ಬಿಸಿ ಬಿಸಿ ಪೂರಿ. ಉಳ್ಳಾಗಡ್ಡೆ ಪಲ್ಯ, ಬೆಳ್ಳೊಳ್ಳಿ ಪುಡಿ ರೆಡಿಯಿದೆ. ಬೆಳಗ್ಗೆ ಮಾಡಿದ್ದು. ಮತ್ತೆ ಬಿಸಿ ಬಿಸಿ. ದೋಸೆನೂ ಬಿಸಿ" ಎನ್ನುತ್ತ ಹುಡುಗ ಬಂದ. ಬರುವಾಗಲೇ ನೀರಿನ ಬಾಟಲ್ ತಂದಿದ್ದ. ರಾಜಶೇಖರ ನಾಸ್ಟಕ್ಕೆ ಆರ್ಡರ್ ಮಾಡಿ ಕುಂತ. ರಾಜಶೇಖರನಿಗೆ ಒಂದು ಸಂಗತಿ ತಿಳಿಯಲೇ ಇಲ್ಲ ಕೊನೆಯವರೆಗೆ! ಅಪ್ಪ ತನ್ನನ್ನು ಒಮ್ಮೆ ಏಳೆಂಟು ವರ್ಷಗಳ ಕೆಳಗೆ ಕರೆಸಿದ್ದ. ಅಪ್ಪ – ಅಮ್ಮನಿಗೆ ಎಪ್ಪತ್ತು ದಾಟಿತ್ತು. 'ಅಣ್ಣ, ತಮ್ಮ ಎಂದಿದ್ದರೂ ಪಾಲು ಹಂಚಿಕೊಂಡು ಬೇರೆ ಇರ್ಬೇಕಾಗ್ತದ. ನನ್ನ ಧರ್ಮ ನಿಮ್ಮಿಬ್ಬರಿಗೆ ಆಸ್ತಿನ್ನ ಹಂಚಿ ನಾನು ನಿರುಮ್ಮಳಾಗ್ತೀನಿ' ಅಂದ. 'ಈಗ್ಯಾಕೆ ಈ ವಿಷಯ? ಗುರುಲಿಂಗ ಪಾಲು ಕೇಳಿದನೇನು?' ಎಂದು ವಿಚಾರಿಸಿದೆ. ಯಾವುದನ್ನು ಬಿಚ್ಚಿ ಹೇಳಲಿಲ್ಲ. ಆಸ್ತಿ ಏನಿತ್ತು? ಊರಲ್ಲಿ ಮನೆ. ಅಡವಿಯಲ್ಲಿ ಏಳೆಂಟು ಎಕರೆ ಭೂಮಿಯಿತ್ತು. ತಮ್ಮನಿಗೆ ಹೇಳಿ ಎರಡು ಭಾಗ ಮಾಡಿಸಿದ. ಎರಡು ಹೊಲಗಳಿದ್ದವು. ಗುರುಲಿಂಗ ಬಿಟ್ಟಿದ್ದು ತನಗೆ ಉಳಿದಿತ್ತು. ಊರಲ್ಲಿನ ಮನೆ ಮಾತ್ರ ಗುರುಲಿಂಗನಿಗೆ ಸೇರಿತು. ಅದರಲ್ಲಿ ಎರಡು ಪಾಲು ಮಾಡಲು ಅಪ್ಪ – ಅಮ್ಮ ಹಠ ಹಿಡಿದರು. 'ನಾನು ಸದ್ಯ ಇಲ್ಲಿಗೆ ಬಂದಿರುವುದು ಕನಸ್ಸಿನ ಮಾತು. ತಮ್ಮನಿಗೆ ಇರಲಿ' ಅಂದಿದ್ದ. 'ಹಾಗಾದ್ರೆ ನಿನ್ಗ ನಮ್ದೆ ಎರಡು ಎಕರೆ ಹೊಲ ಗುಡ್ಡದ ಕೆಳಗ ಐತೆ. ಅದು ನಿನಗಿರಲಿ' ಎಂದು ಅಪ್ಪ ಹೇಳಿದಾಗ ತಮ್ಮ ಗುರುರಾಜ ಒಂದೇ ಮಾತಿಗೆ ಆಯ್ತು. ಈ ಮನೆ ನನ್ಗೆ ಇರ್ತದ' ಎಂದು ಹಿಗ್ಗಿದ್ದು ರಾಜಶೇಖರನ ಗಮನಕ್ಕೆ ಬಂದಿತ್ತು. 'ಸಧ್ಯ ಅಪ್ಪ – ಅಮ್ಮ ನಿನ್ನಲ್ಲೇ ಇರ್ತಾರ, ಇರಲಿ. ಆದ್ದರಿಂದ ನನ್ನ ಪಾಲಿನ ಭೂಮಿಯನ್ನು ನೀನೇ ಪಾಲಿಗೆ ಮಾಡು. ಬೆಳೆದ ಪಾಲು ನೀನೇ ಇಟ್ಟುಕೊಂಡಿರು' ಎಂದು ರಾಜಶೇಖರ ಹೇಳುವಾಗ ಅಪ್ಪ – ಅಮ್ಮ ಮನಸ್ಸಿನಲ್ಲಿದ್ದರು.

'ಆಸ್ತಿ ಹಂಚಿಕೊಂಡ ಮೇಲೆ ನಿಮಗೆ ಬಂದ ಆಸ್ತಿ ಏನು ಮಾಡಿದ್ರಿ?' ಎಂದು ಮಂಗಳ ಕೇಳಿದ್ದು ರಾಜಶೇಖರನಿಗೆ ನೆನಪಾಯ್ತು. ಆ ದಿನ ಸಿಟ್ಟೇ ಬಂತು. 'ನನ್ನ ಬಕ್ಕಣದಲ್ಲಿ ಐತೆ. ಬೇಕೇನು?' ಎಂದು ಕೇಳಿದ್ದ. ಮತ್ತೆ ಆಕೆ ಮಾತು ತೆಗೆಯಲಿಲ್ಲ. ವಾರದ ನಂತರ, 'ಮಂಗಳ, ನಿನಗ್ಯಾಕೆ ಆಸ್ತಿ ಮ್ಯಾಲೆ ಚಿಂತೆ? ಊರಲ್ಲಿ ಅಪ್ಪ – ಅಮ್ಮನನ್ನು ನೀನೂ ನೋಡಿಕೋ. ನನಗೊಬ್ಬನಿಗೇ ಯಾಕೆ? ಎಂದು ತಮ್ಮ ಹೇಳಿದ್ರೆ ಏನು ಮಾಡ್ಬೇಕು? ನಮ್ಮ ಮನೆಗೆ ಕರೆ ತಂದ್ರೆ ನೀನು ಸಲಹುತ್ತಿಯಾ?' ಎಂದು ಕೇಳಿದ್ದ. ಹೆಂಡತಿ ಸುಮ್ಮನಾಗಿದ್ದಳು. ರಾಜಶೇಖರ 'ಅಪ್ಪ – ಅಮ್ಮ ಬದುಕಿರುವ ತನಕ ನನ್ನ ಭೂಮಿಯ ಉತ್ಪನ್ನ ಅವರಿಗೆ. ತಮ್ಮ ಸಲಹುತ್ತಾನೆ. ಅದೇ ನಮ್ಮ ಪುಣ್ಯ' ಎಂದು ತಾಳ್ಮೆಯಿಂದ, ಪ್ರೀತಿಯಿಂದ ಹೇಳಿದ ಮೇಲೆ ಮಂಗಳ ತಣ್ಣಗಾಗಿದ್ದಳು.

'ಒಂದು ಮಾತು ಗುರುಲಿಂಗ ನನಗ್ಯಾಕೆ ತಿಳಿಸಲಿಲ್ಲ ಮೂರ್ಖ? ಯಾಕೆ ಅಂಥ ಕೆಲ್ಸ ಮಾಡಿದ?' ಎಂದು ಒಂದೇ ಸವುನೆ ರಾಜಶೇಖರನಲ್ಲಿ ಹುಟ್ಟುವ ಪ್ರಶ್ನೆಗಳಿಗೆ ಉತ್ತರ ಇರಲಿಲ್ಲ. ಊರಿಗೆ ಹೋಗಿ ನಿಂತರೆ ಮಾತ್ರ ಉತ್ತರ ಸಿಕ್ಕೀತು ಎಂದುಕೊಂಡ. ಊರ ಮನೆ ಮಾಳಿಗೆ ಕುಸಿದು ಬಿದ್ದಾಗ ಗುರುಲಿಂಗ 'ಎದೆ ಒಡೆದು ಈಗೇನು ಮಾಡದಣ್ಣ?' ಎಂದು ಕೇಳಿದ್ದ. ಅದು ನೆನಪಾಯ್ತು.........

ಆ ಮಳೆಗಾಲ ಸಾಧಾರಣವೇ ಇತ್ತು. ಆದ್ರೆ ಆ ರಾತ್ರಿ ಶುರುವಾದ ಮಳೆ ಜಲ್ದಿ ನಿಲ್ಲಲಿಲ್ಲ. ರಾತ್ರಿಯಿಡಿ ಸುರಿಯಿತು. ಮರುದಿನ ಮಳೆಯಿಂದ ಆದ ಅನಾಹುತಗಳನ್ನು ಸುದ್ದಿ ಮಾಧ್ಯಮಗಳು ಉಸಿರಾಡಲು ಪುರುಸೊತ್ತು ಇಲ್ಲದಂತೆ ತೋರಿಸಿದವು. ತಮ್ಮ ತನ್ನ ಮೊಬೈಲಿನಿಂದ ಕರೆ ಮಾಡಿ ಬಾಣ್ಣ ಎಂದ. ಹೋಗಿ ನೋಡುತ್ತೇನೆ. ಊರಮನೆಯ ಅಂಕಣದ ಮ್ಯಾಲಿದ್ದ ಎಡಬಲ ಅಟ್ಟಗಳು ನಿಂತ ನೀರಿಗೆ ನೆನೆದು ಕುಸಿದಿದ್ದವು. ಊರಲ್ಲಿ ಹಲವರ ಮನೆಗಳೂ ಕುಸಿದಿದ್ದವು. ಗುರುಲಿಂಗ ಭಯಗೊಂಡಿದ್ದ. ರಾತ್ರಿಯೇ ಸುರಿವ ಮಳೆಯಲ್ಲಿ ಅಪ್ಪ, ಅಮ್ಮ, ತಮ್ಮ, ತಮ್ಮನ ಹೆಂಡತಿ ಇಬ್ಬರು ಮಕ್ಳು ಎಲ್ಲರೂ ಮನೆಯಿಂದ ಹೊರಬಂದಿದ್ದರು. ತಮ್ಮ ದನಕರುಗಳನ್ನು ಬಿಚ್ಚಿ ಹೊರ ಓಡಿಸಿದ್ದರಿಂದ ಅವುಗಳಿಗೂ ಏನಾಗಿರಲಿಲ್ಲ. ಮನೆ ಮುಂದಿದ್ದ ಬೇವಿನಮರದ ಕೆಳಗೆ ಮನೆಮಂದಿ ಬೀಡುಬಿಟ್ಟಿದ್ದರು. ಮರುದಿನ ಮಳೆ ನಿಂತಿತ್ತು. 'ಹಿಂಗಾಗ್ಯಾದ ಈಗೇನು ಮಾಡದಣ್ಣ?' ಎಂದು ಕೇಳಿದಾಗ ರಾಜಶೇಖರನೂ ದಿಕ್ಕುಗೇಡಿಯಾಗಿದ್ದ. ಆದರೂ ಮನೆಯನ್ನು ಹೊಕ್ಕು ಪರಿಶೀಲಿಸಿದಾಗ, ಮನೆಗೆ ಧಕ್ಕೆಯಾಗಿರಲಿಲ್ಲ. ತಲಬಾಗಿಲಿನಿಂದ ಮನೆಯಲ್ಲಿ ನೀರು ನುಗ್ಗಿ ಅಂಕಣದಲ್ಲಿ ನಿಂತಿತ್ತು. ಎಂಟತ್ತು ತಾಸು ನೀರು ನಿಂತಿದ್ದರಿಂದ ಅಟ್ಟದ ಕಂಬಗಳು ನೆಲಕ್ಕೆ ಕುಸಿದಿದ್ದವು. ಅದು ಬಿಟ್ಟರೆ ಮನೆಗೆ ಏನೂ ಆಗಿರಲಿಲ್ಲ. ಆದ್ರೆ ರಾತ್ರಿಯೆಲ್ಲ ಮನೆಯಲ್ಲಿದ್ದು, ಆ ಮಳೆಯ ಆರ್ಭಟಕ್ಕೆ ಹೆದರಿದ್ದರು. ಹೆಂಡತಿ ಮಕ್ಕಳು ಗೋಳೋಂತ ಅತ್ತಿದ್ದರು. ಹೆತ್ತವರು ಮಾತ್ರ ಧೈರ್ಯಗೆಡದೆ ಎಲ್ಲರೊಂದಿಗೆ ಮನೆಯ ಹೊರಗೆ ಬಂದು, ಬೇವಿನಗಿಡದ ಕಟ್ಟೆ ಮೇಲೆ ನಿಂತು ಬೆಳಗಾಗುವುದನ್ನು ಕಾಯ್ದಿದ್ದರು. ಮಳೆಯೂ ನಿಂತಿತ್ತು. ಮನೆಯಿಂದ ಅಗತ್ಯ ವಸ್ತುಗಳನ್ನು ತಮ್ಮನೆ ತಂದು ಬೇವಿನಮರದಡಿ ಇಡುತ್ತಿದ್ದ. ಮನೆಯೊಳಗೆ ಹೋಗಲು ಭಯಗೊಂಡಿದ್ದ. ರಾಜಶೇಖರ ಮನೆಮಂದಿಯನ್ನು ಕೂಡಿಸಿಕೊಂಡು ಚಿಂತಿಸಿದ. ತಮ್ಮ 'ನನ್ಗೆ ಈ ಮನೆ ಬ್ಯಾಡ' ಎಂದು ಹಠ ಹಿಡಿದುಬಿಟ್ಟ. ರಾಜಶೇಖರ ಯೋಚಿಸಿದ. ತನ್ನ ಭಾಗಕ್ಕೆ ಬಂದಿದ್ದ, ಗುಡ್ಡದ ಕೆಳಗಿದ್ದ ತುಂಡು ಹೊಲ ನೆನಪಾಯ್ತು. ಅದು ಊರಿಂದ ಒಂದು ಕಿಲೋಮೀಟರ್ ದೂರದಲ್ಲಿತ್ತಷ್ಟೆ. ಅದನ್ನು ಉತ್ತಿ, ಬಿತ್ತುತಿದ್ದರು. ತಕ್ಕಮಟ್ಟಿಗೆ ಬೆಳೆ ಬರುತಿತ್ತು. ಒಂದು ವರ್ಷ ಮಳೆ ಬೇಶ್ ಆಗಿತ್ತು. ಬಿಳಿಜೋಳ ಬಿತ್ತಿದ್ದರು. ಆ ವರ್ಷ ಏಳು ಚೀಲ ತುಂಬಿದ್ದವು. ಅದೆಲ್ಲ ನೆನೆಸಿಕೊಂಡ ಅಲ್ಲೇ ಮೊದ್ಲು ತಾತ್ಕಾಲಿಕ ಗುಡಿಸಲು ಹಾಕಿಸಿದ ರಾಜಶೇಖರ. ಮನೆಮಂದಿಯನ್ನೆಲ್ಲ ಗುಡಿಸಿಲಿಗೆ ಬಿಟ್ಟ, ತಮ್ಮನಿಗೆ ಒಂದಷ್ಟು ಹಣ ನೀಡಿ ಬಂದಿದ್ದ. ನಂತರ ಊರಲ್ಲಿದ್ದ ಮನೆಯನ್ನು ರಾಜಶೇಖರ ತನಗಾಗಿ ರಿಪೇರಿ ಮಾಡಿಸಿದ್ದ. ಸರಿಯಾಗಿಯೇ ರಿಪೇರಿ ಮಾಡಿಸಿದ್ದನ್ನು ಕಂಡು ಗುರುಲಿಂಗನ ಕಣ್ಣು ಕುಕ್ಕಿತು. ಮನೆ ಮುಂದಿದ್ದ ಬೇವಿನಗಿಡದ ಕೆಳಗೆ ಕಲ್ಲುಬೆಂಚು ಹಾಕಿಸಿದ. ಬ್ಯಾಚುಲರ್ ಆಗಿದ್ದ ಇಬ್ಬರು ಊರ ಶಾಲೆಯ ಮಾಸ್ತಾರರಿಗೆ ಇರಲು ಮತ್ತು ಮಕ್ಕಳಿಗೆ ಉಚಿತ ರಾತ್ರಿ ಪಾಠ ಹೇಳಲು ವಿನಂತಿಸಿದ್ದ. ಮನೆಯನ್ನು ಜತನಾಗಿ ನೋಡಿಕೊಂಡಿರಲು ಒಪ್ಪಿಸಿದ್ದ ರಾಜಶೇಖರ....

'ಸರ್, ಚಹಾ ತರ್ತೀನಿ' ಡಾಬಾದ ಹುಡುಗ ಕೇಳಿದ. ರಾಜಶೇಖರ ಸೂಚನೆ ಕೊಟ್ಟ, ಆ ಗುಡ್ಡದ ಹೊಲದಲ್ಲಿ ತಮ್ಮನ ಸಂಸಾರದೊಂದಿಗೆ ಅಪ್ಪ–ಅಮ್ಮ ಅಚ್ಚರಿ ಪಡವಷ್ಟು ಖುಷಿಯಿಂದ ನೆಲೆಸಿದ್ದರು. ಬೋರ್‌ವೆಲ್ ಹಾಕಿಸುವ ಸಾಹಸವನ್ನು ತಮ್ಮ ಮಾಡಲು ಹಣಕಾಸಿನ ನೆರವನ್ನು ಕೇಳಿದ್ದ. ತೊಂದರೆಗಳ ಮಧ್ಯ ರಾಜಶೇಖರ ನೆರವು ನೀಡಿ 'ಮುಂದೆ ಯಾವುದಕ್ಕೋ ನೀನು ಹಣ ಕೇಳಿದರೆ ಕೊಡಲು ನನ್ಗೂ ಅಸಾಧ್ಯವಪ್ಪ' ಎಂದು ಎಚ್ಚರಿಸಿದ್ದ. ಮನೆಮಂದಿಗೆ, ದನಕರಗಳಿಗೆ ಸಾಕಾಗುವಷ್ಟು ನೀರು ಬೋರ್‌ವೆಲ್ಲಿನಿಂದ ಸಿಕ್ಕದ್ದೇ ಸಮಾಧಾನವಾಯಿತ್ತು. ಅಪ್ಪ, ತಮ್ಮ ಎಲ್ಲರು ಸೇರಿ ಮಳೆಗಾಲ ಬಂದಾಗ ಬೇವು, ಹುಣಸೆ, ನೇರಳೆ, ಬಿಲ್ವಪತ್ರೆ, ಬನ್ನಿ, ಮಾವಿನ ಸಸಿಗಳನ್ನು ನೆಟ್ಟರು. ಐದಾರು ವರ್ಷಗಳಲ್ಲಿ ಆ ಹೊಲ ಗಿಡಗಳಿಂದ ತುಂಬಿತು. ಜತೆಗೆ ತರಕಾರಿಯನ್ನು ಬೆಳೆಯುತ್ತಲೇ ಇದ್ದರು. ರಾಜಶೇಖರನೇ ಅನೇಕ ಗಿಡಗಳ ಸಸಿಗಳನ್ನು ತಂದು ಕೊಟ್ಟಿದ್ದ. ರಾಜಶೇಖರನಿಗೆ ಉದ್ಯೋಗ, ಮಕ್ಕಳ ವಿದ್ಯಾಭ್ಯಾಸ ಮನೆ ಕಟ್ಟಿಸುವ ಮುಂತಾದ ಕೆಲಸಗಳಲ್ಲಿ ಮುಳುಗಿ ಊರಿನ ಕಡೆ ಹೋಗಿ ಬರುವುದು ಕಮ್ಮಿಯಾಗಿತ್ತು. ಹೆಚ್ಚೆಂದರೆ ಅಪ್ಪ – ಅಮ್ಮನ ಯೋಗಕ್ಷೇಮ ಕೇಳುವುದಕ್ಕೆ ಸೀಮಿತವಾಯ್ತು. ಆದರೂ ಮೂರೋ ನಾಲ್ಕೋ ವರ್ಷಗಳಿಗೆ ಒಮ್ಮೆ ಹೋಗಿ ಬರುತ್ತಿದ್ದ. ಹತ್ತು ವರ್ಷಗಳಲ್ಲಿ ಆ ಪ್ರದೇಶದಲ್ಲಿ ಆ ಹೊಲ ನಂದನ ವನದಂತೆ ಕಾಣುತ್ತಿತ್ತು. ರಾಜಶೇಖರ ಸಂಸಾರದೊಂದಿಗೆ ಬಂದು ಎರಡು ದಿನವಿದ್ದು ಹೋಗುತ್ತಿದ್ದ. ಆದ್ರೆ ವಯಸ್ಸಾದ ಅಪ್ಪ ತೀರಿಕೊಂಡ. ಅದಾಗಿ ವರ್ಷವೂ ಆಗಿರಲಿಲ್ಲ ಅಮ್ಮನೂ ತೀರಿಕೊಂಡಳು.


ನಂದನವನ ಇಂದು ರಣರಣ! ನಂದನ ವನವಾಗುವುದಕ್ಕೆ ಹತ್ತಾರು ವರ್ಷ ಹಿಡಿದಿತ್ತು. ರಣರಣವಾಗಲಿಕ್ಕೆ ಒಂದೇ ದಿನ ಸಾಕಾಗಿತ್ತು! ಬಿಸಿಲು ಇತ್ತು. ಅದಕ್ಕಿಂತ ಎದೆಯಲ್ಲಿ ಹುಟ್ಟುತ್ತಿದ್ದ ಧಗೆ ದುಪ್ಪಟ್ಟು. ಹೊಲದಲ್ಲಿ ನಡೆಯುತ್ತ ಬಂದ. ಅದೆಷ್ಟು ಚಂದವಾಗಿ ಕರಗಸದ ಮಿಷನ್‌ಗಳು ಕೆಲ್ಸ ನಿರ್ವಹಿಸಿದ್ದವು! ಆ ಮೂಲೆಗೆ ಬಂದ. ಬಿಲ್ವಪತ್ರೆ ಗಿಡವಿಲ್ಲ. ಬನ್ನಿಮರವಿಲ್ಲ. ತಾತ, ಅವ್ವ, ಅಪ್ಪ, ಅಮ್ಮನವರ ಗದ್ದುಗೆಗಳು ಅಸ್ತವ್ಯಸ್ತವಾಗಿ ಕುಂತಿದ್ದವು. ನೆತ್ತಿ ಸುಡುತ್ತಿದ್ದಕ್ಕೋ ಅವು ಬಳಲಿದ್ದವು. ಇನ್ನೊಂದು ಗದ್ದುಗೆ ಕಂಡಿತು. ಅದು ಶರಣೆ ಅಮ್ಮವ್ವನದು. ರಾಜಶೇಖರ ಒಮ್ಮೆ ಆಕಸ್ಮಿಕವಾಗಿ ಊರಿಗೆ ಬಂದಾಗ ಶರಣೆ ಇದ್ದಳು. ಮುಪ್ಪು ಮುತ್ತಿತ್ತು! ನೆಲದ ಮೇಲೆ ಹಾಸಿದ್ದ ಹಾಸಿಗೆ ಮ್ಯಾಲೆ ಕುಂತಿದ್ದಳು, ಮಗುವಿನಂತೆ. ಅಪ್ಪನ ಕಡೆ ನೋಡಿದ. 'ರಾಜಣ್ಣ, ಈ ತಾಯಿ ವಾರದಿಂದ ನಮ್ಮಲ್ಲಿಗೆ ಬಂದಳು. ಈ ಜಾಗ ಮನಸ್ಸಿಗೆ ಗೋಚರಿಸಿತಂತೆ. ನಡೆಯುತ್ತ ಬಳಲಿ ಬಂದಳು. 'ಮಗ, ಈ ಜಾಗ ಕಲ್ಯಾಣದಂಗ ಕಾಣ್ತೆದೆ. ನೋಡಿದ್ದೆ ತಡ ಕಾಲುಗಳು ಇತ್ತಲೆ ಎಳದವು. ನಾನು ನಾಕುದಿನ ಇಲ್ಲಿ ಇರ್ತೀನಿ' ಎಂದು ಉಶ್ ಎಂದು ಕುಂತಳು. ಅಂದದ ಹಕ್ಕಿ ಹಾರಿ ಬಂದು ಕುಂತಂಗಾಯ್ತು!

ಅದೇ ಹೊಲದಲ್ಲಿ ಅಪ್ಪ – ಅಮ್ಮನನ್ನು ಮಣ್ಣು ಮಾಡಲಾಯಿತು. ಹೆತ್ತವರು ಇಲ್ಲದ್ದರಿಂದ ಅಲ್ಲಿಂದ ಊರಕಡೆ ಆಸಕ್ತಿ ಕಮ್ಮಿಯಾಯ್ತು. ಆದರೂ ಗುರುಲಿಂಗ ಆಗಾಗ ಹಣ ಕೇಳತೊಡಗಿದ್ದ. 'ಸಾಲವೆಂದು ಕೊಡು' ಎಂದು ಒತ್ತಾಯಿಸಿದ್ದ. ರಾಜಶೇಖರ 'ನನ್ನ ಭಾಗದ ಭೂಮಿಯನ್ನು ನೀನೇ ನೋಡುತ್ತಿದ್ದಿ. ಯಾವತ್ತಾದರೂ ಬೆಳೆಯಲ್ಲಿ ಪಾಲು ತಂದು ಕೊಟ್ಟಿಯೇನು?' ಎಂದು ನಿಷ್ಠುರವಾಗಿ ಕೇಳಿದ ಮೇಲೆ ತಮ್ಮ ಸಂಬಂಧವನ್ನು ಮುರಿದುಕೊಂಡಿದ್ದ.

ರಾಜಶೇಖರ ಬಿಲ್ ಕೊಟ್ಟು ಹೋಗಲು ಎದ್ದ. ಅದೇ ಹೊತ್ತಿಗೆ ಒಂದು ಕಾರು ಬಂತು. ಇಳಿದವರು ಪರಿಚಿತರಂತೆ ಕಂಡರು. ಅವರೆಲ್ಲ ಡಾಬಾದ ಒಳಗೆ ಬರುತ್ತಿದ್ದಂತೆ ತನ್ನೂರಿನವರು, ತನ್ನ ಓರಿಗೆಯವರು ಎಂದು ಅರಿವಿಗೆ ಬಂತು. "ಅರೆ, ರಾಜಪ್ಪನವರು! ಇಲ್ಲಿ?" ಎಂದು ಮುನಿಯಪ್ಪ ನಗುತ್ತ ಬಂದೇ ಬಿಟ್ಟ. "ನೀವು ಎಲ್ಲಿಗೋ ಹೊರಟಂಗಿದೆ?" ಎಂದು ಕೇಳಿ ಕೈಚಾಚಿದ. ಉಳಿದವರು ಬಂದರು. ಶಂಕರಗೌಡ, ಪಂಪನಗೌಡ ಊರಿನವರೇ ಆಗಿದ್ದರು. "ನಾಷ್ಟ ಮಾಡನು ಬಾಪ್ಪ" ಎಂದು ಕರೆದು ಅವರೆಲ್ಲ ಕುಂತರು. "ಒಂದೆರಡು ನಿಮಿಷ ಕೂಡ್ತೀನಿ. ಅಂದಂಗ ನೀವೆಲ್ಲ.....?" ರಾಜಶೇಖರ ಕೇಳಿದ. "ರಾಮಣ್ಣನ ಮಗನಿಗೆ ಹೆಣ್ಣು ನೋಡಿ ಬರಕಂತ ಹೊಂಟಿವಿ. ಸಂಜೆ ಹೊಳ್ಳಿ ಬರ್ತೀವಿ. ನೀನಣ್ಣ?" ಶಂಕರಗೌಡ ಹೇಳಿದ. "ನಾನು ಊರಿಗೆ ಹೋಗ್ತಿದ್ದೀನಿ. ಸಂಡೇ ಇತ್ತಲ್ಲ....." ಎಂದ ರಾಜಶೇಖರ ಎದ್ದ. "ನೌಕರಿಗೆ ಸೇರಿ ತಣ್ಣಗಿದ್ದ ನೋಡಪ್ಪ. ನಮ್ಮ ಕತೆ ನೋಡು" ಎಂದು ಮುನಿಯಪ್ಪ ಎದ್ದು ಕಳಿಸಲು ಡಾಬಾದ ಹೊರಗೆ ಬಂದ. ರಾಜಶೇಖರನಿಗೆ ಕುತೂಹಲ ತಡೆಯದೆ "ಮತ್ತೇನು? ಊರಲ್ಲಿ ವಿಶೇಷ" ಎಂದು ಕೇಳಿದ. "ಏನಿರ್ತದಪ್ಪ, ರೈತರ ಬಾಳೇವು ಗೊತ್ತಲ್ಲ?" ಅಂದ. "ತಮ್ಮ ಗುರುಲಿಂಗನನ್ನು ಮಾತಾಡ್ಸಿ ಬರ್ತೀನಿ" ಎಂದ. "ಏನಪ್ಪ, ಆತ ನಿನ್ನಂಗಲ್ಲ. ಮಂದ್ಯಾಗ ಜಮ ಆಗದಿಲ್ಲ. ನಿನ್ನೆ ಕಂಡಿದ್ದ. ತಲೆ ಬಗ್ಗಿಸಿಕೊಂಡು ಹೊಂಟಿದ್ದ" ಅಂದ. ಆದ್ರೆ ತಮ್ಮ ಮಾಡಿದ್ದ ಮೂರ್ಖ ಕೆಲಸ ಇವರಿಗೆ ತಿಳಿದಂಗಿಲ್ಲ, ತಿಳಿಬೇಕಾಗಿತ್ತು. ನಮ್ಮೂರೇನು ದೊಡ್ಡದಲ್ಲ ಎಂದುಕೊಂಡು "ಬರ್ತೀನಿ" ಎಂದು ಹೇಳುತ್ತ ಉಳಿದವರಿಗೂ ಕೈ ಮಾಡಿ ಕಾರಿನತ್ತ ನಡೆದ ರಾಜಶೇಖರ.

೩

ಬಂಡಿ ದಾರಿಯಲ್ಲಿ ಕಾರು ನಿಧಾನವಾಗಿ ಚಲಿಸುತ್ತ ಗುಡ್ಡದ ಬದಿಯ ಹೊಲಕ್ಕೆ ಬಂದು ನಿಂತಿತು. ಕಾರಿನಲ್ಲಿ ಕುಳಿತಿದ್ದ ರಾಜಶೇಖರನಿಗೆ ಇಳಿವ ಮೊದಲೇ ಬಣಬಣ ಎನ್ನುವ ವಾತಾವರಣ ಮನಸ್ಸಿಗೆ ಬಡಿಯಿತು. ಕಾರಿನಿಂದ ಇಳಿದು ನಿಂತ! ಅಪರಿಚಿತ ಸ್ಥಳಕ್ಕೆ ಬಂದಂತೆ ಕಂಡಿತು. ನೋಡುತ್ತಿದ್ದಂತೆ ಮನಸ್ಸಿಗೆ ಸಂಕಟವಾಗತೊಡಗಿತು. ಈ ಹಿಂದಿನ ಸಲ ಬಂದಾಗ, ಯಾಕೆ ಹಲವು ಸಲ ಇಲ್ಲಿಗೆ ಬರುತ್ತಿದ್ದಂಗೆ ಮನಸ್ಸು ಮುದಗೊಳ್ಳುತ್ತಿತ್ತು! ಆದರೆ ಇವತ್ತು ಉಸಿರಾಟವೇ ಕಷ್ಟವಾಗತೊಡಗಿತು. ಎದುರಿಗೆ ಗುಡ್ಡದ ಮೇಲಿದ್ದ ರಾಮಲಿಂಗ ದೇವರ ಚಿಕ್ಕ ಗುಡಿ ಕಣ್ಣಿಗೆ ಒಡೆಯುವಂತೆ ಕಾಣುತ್ತಿದೆ. ಹಿಂದೆ ಆ ಗುಡ್ಡ, ಗುಡಿ ಕಾಣದಷ್ಟು ಹೊಲದಲ್ಲಿ ನೂರಾರು ಮರಗಳಿದ್ದವು. ತೂಗಾಡುತ್ತಿದ್ದವು. ವಾರದ ಹಿಂದೆ ತಮ್ಮ ಗುರುಲಿಂಗ ಎಲ್ಲ ಗಿಡ–ಮರಗಳನ್ನು ಸಾಮಿಲ್ಲಿಗೆ ಒಪ್ಪಿಸಿದ್ದ. ಅವರೋ ಕರಗಸದ ಮಿಷನ್ ತಂದು ಕೊಯ್ದು, ಲಾರಿಗೆ ಹಾಕಿಕೊಂಡು ಒಯ್ದಿದ್ದ ಸುದ್ದಿ ಕೇಳಿ ಸಂಕಟವಾಗಿ ಓಡಿ ಬಂದಿದ್ದ ರಾಜಶೇಖರನಿಗೆ ಇಲ್ಲಿ ಎಲ್ಲವೂ ಗೋಚರಿಸುತ್ತಿದೆ. ಗುಡಿಸಲುಗಳೂ ಇಲ್ಲ. ಗುಡಿಸಲುಗಳನ್ನು ಮುಚ್ಚುವಂತಿದ್ದ ಬೇವಿನಮರಗಳಿಲ್ಲ. ನಂದನವನ ಇಂದು ರಣರಣ! ನಂದನ ವನವಾಗುವುದಕ್ಕೆ ಹತ್ತಾರು ವರ್ಷ ಹಿಡಿದಿತ್ತು. ರಣರಣವಾಗಲಿಕ್ಕೆ ಒಂದೇ ದಿನ ಸಾಕಾಗಿತ್ತು! ಬಿಸಿಲು ಇತ್ತು. ಅದಕ್ಕಿಂತ ಎದೆಯಲ್ಲಿ ಹುಟ್ಟುತ್ತಿದ್ದ ಧಗೆ ದುಪ್ಪಟ್ಟು. ಹೊಲದಲ್ಲಿ ನಡೆಯುತ್ತ ಬಂದ. ಅದೆಷ್ಟು ಚಂದವಾಗಿ ಕರಗಸದ ಮಿಷನ್‌ಗಳು ಕೆಲ್ಸ ನಿರ್ವಹಿಸಿದ್ದವು! ಆ ಮೂಲೆಗೆ ಬಂದ. ಬಿಲ್ವಪತ್ರೆ ಗಿಡವಿಲ್ಲ. ಬನ್ನಿಮರವಿಲ್ಲ. ತಾತ, ಅವ್ವ, ಅಪ್ಪ, ಅಮ್ಮನವರ ಗದ್ದುಗೆಗಳು ಅಸ್ತವ್ಯಸ್ತವಾಗಿ ಕುಂತಿದ್ದವು. ನೆತ್ತಿ ಸುಡುತ್ತಿದ್ದಕ್ಕೋ ಅವು ಬಳಲಿದ್ದವು. ಇನ್ನೊಂದು ಗದ್ದುಗೆ ಕಂಡಿತು. ಅದು ಶರಣೆ ಅಮ್ಮವ್ವನದು. ರಾಜಶೇಖರ ಒಮ್ಮೆ ಆಕಸ್ಮಿಕವಾಗಿ ಊರಿಗೆ ಬಂದಾಗ ಶರಣೆ ಇದ್ದಳು. ಮುಪ್ಪು ಮುತ್ತಿತ್ತು! ನೆಲದ ಮೇಲೆ ಹಾಸಿದ್ದ ಹಾಸಿಗೆ ಮ್ಯಾಲೆ ಕುಂತಿದ್ದಳು, ಮಗುವಿನಂತೆ. ಅಪ್ಪನ ಕಡೆ ನೋಡಿದ. 'ರಾಜಣ್ಣ, ಈ ತಾಯಿ ವಾರದಿಂದ ನಮ್ಮಲ್ಲಿಗೆ ಬಂದಳು. ಈ ಜಾಗ ಮನಸ್ಸಿಗೆ ಗೋಚರಿಸಿತಂತೆ. ನಡೆಯುತ್ತ ಬಳಲಿ ಬಂದಳು. 'ಮಗ, ಈ ಜಾಗ ಕಲ್ಯಾಣದಂಗ ಕಾಣ್ತೆದೆ. ನೋಡಿದ್ದೆ ತಡ ಕಾಲುಗಳು ಇತ್ತಲೆ ಎಳದವು. ನಾನು ನಾಕುದಿನ ಇಲ್ಲಿ ಇರ್ತೀನಿ' ಎಂದು ಉಶ್ ಎಂದು ಕುಂತಳು. ಅಂದದ ಹಕ್ಕಿ ಹಾರಿ ಬಂದು ಕುಂತಂಗಾಯ್ತು! 'ಅವ್ವ ತಾಯಿ, ನಿನ್ನ ಜಾಗಕ್ಕ ನೀನು ಬಂದಿದ್ದಿ. ಕೇಳ್ತಿದ್ದೇನು? ಬಾ. ಕೈಕಾಲು ಮುಖ ತೊಳಕ. ಬಳಲಿದ್ದಿ. ಮೊದ್ಲು ಉಣ್ಣು' ಎಂದು ಆ ಶರಣೆಯ ಪಾದಕ್ಕೆ ಬಿದ್ದೆ. ಇದ್ದದ್ದು ನಾಕು ದಿನ. ಆ ನಾಕು ದಿನ ಅದೇನು ತಂಗಾಳಿ, ಅದೇನು ಹಕ್ಕಿ – ಪಕ್ಷಿಗಳ ಹಾಡು! ಬೆಳಗು–ಸಂಜೆಗಳಲ್ಲಿ 'ನಮಃ ಶಿವಾಯ' ಎಂಬ ಝೇಂಕಾರ ನಾದ! ನಾನು, ನಿಮ್ಮಮ್ಮ ಹೊಸ ರಕ್ತ ಪಡಕಂಡಂತೆತೆ ಓಡಾಡಿದೆವು. ಆದ್ರೆ ಗುರುಲಿಂಗನ ಸಂಸಾರ ಊರಮನೆ ಸೇರಿತ್ತು! ಮೂರೊತ್ತು ಅನ್ನ–ನೀರು ತಂದಿಟ್ಟು ಹೋಗಲು ಶುರು ಮಾಡಿದ್ದ. ತಾಯಿಯ ಆಶೀರ್ವಾದ ಅವನಿಗೆ ಸಿಗಲಿಲ್ಲ! ಆ ಬೆಳಗು ಯಾಕೋ ತಾಯಿಯ ಶಕ್ತಿ ಕುಂದಿತ್ತು. ಈ ವನದಲ್ಲಿ ಗಾಳಿ ಮಾಯವಾಗಿತ್ತು? ಹಕ್ಕಿಗಳು ಸಿಟ್ಟಾಗಿದ್ದವು. ಹೂ ಬಿಸಿಲು ಮಂಕಾಗಿತ್ತು! ಅವ್ವ ಶರಣೆ ಕಣ್ಮುಚಿದ್ದಳು. ಊರಮಂದಿಗೆ ಸುದ್ದಿ ತಿಳಿಸಿದೆ. ಅವರ್‍ಯಾರಿಗೂ ಅವ್ವ ಬಂದುದು ತಿಳಿದಿರಲಿಲ್ಲ. ನಾನೇ ಹೇಳಿದೆ. 'ಶರಣೆಯ ಮಹಿಮೆ ಮರಣದಲ್ಲಿ ಕಂಡಿತು. ಊರ ಮಂದಿ ಭಜನೆ ಮಾಡಿದ್ರು. ಸಂಜೆ ಬಿಲ್ವಪತ್ರೆಯನ್ನೇ ಹೊದಿಸಿ ಮಣ್ಣು ಮಾಡಿದ್ರು' ಇದು ಅಪ್ಪ ಹೇಳಿದ್ದ ಕತೆ. ಆ ತಾಯಿಯ ಸಮಾಧಿ ಬಿಸಿಲಿಗೆ ಮೈ ಒಡ್ಡಿ ಕುಂತಿತ್ತು! ಈ ಮೂರ್ಖ ಈ ಜೀವಗಳಿಗೆ ನೆರಳು ನೀಡುತ್ತಿದ್ದ ಬನ್ನಿಮರ, ಬಿಲ್ವಪತ್ರೆ ಮರ, ಬೇವಿ ಮರಗಳನ್ನಾದರೂ ಉಳಿಸಿಲ್ಲ ಎಂದರೆ....? ಹೆಜ್ಜೆಯಿಟ್ಟಲೆಲ್ಲ ಗಿಡಮರಗಳ ಎಲೆಗಳು ತಲೆಗೆ ಸವರುತ್ತಿದ್ದವು. ಈಗ.....?



ರಾಜಶೇಖರನ ಗಮನ ಪಶ್ಚಿಮದ ಕಡೆ ಹೊರಳಿತು! ತನ್ನ ಹೊಲದಿಂದ ಒಂದು ಕಚ್ಚಾ ರಸ್ತೆ ನಿರ್ಮಾಣವಾಗಿತ್ತು. ಅದು ಅನತಿ ದೂರದಲ್ಲಿ ವಾಹನಗಳು ಓಡಾಡುತ್ತಿದ್ದ ರಸ್ತೆ ಕಡೆ ಹರಿದಿತ್ತು. ಇದೇನು ಎಂದು ಯೋಚಿಸಿ ಚಿಂತಿಸಿದ. ಊಹೆಗೂ ಮೀರಿತ್ತು ಆ ಕಚ್ಚಾ ರಸ್ತೆಯ ನಿರ್ಮಾಣ. ಮತ್ತೇನೇನು ಸಂಭವಿಸಿವೆ ಎಂದು ಸುತ್ತಲೂ ಕಣ್ಣಾಡಿದ. ನಾಲ್ಕು ದಿಕ್ಕುಗಳ ದಿಗಂತಗಳು ರಣ ಗುಡುವಂತೆ ಕಂಡವು. ಅದೆಷ್ಟು ಸಂಕಟವಾಯ್ತು ಎಂದರೆ... ತಲೆಗೆ ಅಂಗೈ ಅಗಲದ ನೆರಳಿಲ್ಲವಲ್ಲ ಎಂದು ದುಃಖ ಒತ್ತಿ ಬಂತು. ಈ ಮೂರ್ಖನಿಗೆ ಗಿಡಮರಗಳಿಗೆ ಕೊಡಲಿ ಇಡುವ ಯೋಚನೆ ಬಂತಾದರೂ ಹೇಗೆ? ಏನು ಒತ್ತಡ? ಇವನ ಮನಃಸ್ಥಿತಿ ಅರಿತು ಈ ವನವೇ ಬೇಡಲೇ ಎಂದು ತಿವಿದು ಹೇಳಲಿಲ್ಲವೋ! ಅಪ್ಪ, ಅಮ್ಮ, ಶರಣೆ ನೀವಾದರೂ ಇಲ್ಲೆ ಇದ್ದು ಮರಗಳಿಗೆ ಕೊಡಲಿ ಇಡಲು ಬಂದವರನ್ನು ತಡೆಯಲಿಲ್ಲ ಯಾಕೆ? ಅರೆ ರಾಮಲಿಂಗಾ ನೀನು ಎಲ್ಲಿ ಹೋಗಿದ್ದಿ? ಯಾವ ಶಕ್ತಿಯೂ ಕಡಿಯುವ ಕೈಗಳನ್ನು ತಡೆಯಲಿಲ್ಲವೆಂದರೇನು? ಛೇ...... ಬೈಕ್ ಸಪ್ಪಳವಾಯ್ತು. ನೋಡಿದರೆ ತಮ್ಮ ಗುರುಲಿಂಗ ಬೈಕ್ ನಿಲ್ಲಿಸಿ ಬರುತ್ತಿದ್ದ. ಬಿಳಿಲುಂಗಿ, ಕರಿ ಟೀಶರ್ಟ ತೊಟ್ಟಿದ್ದ. ಟವಲ್ಲಿನಿಂದ ಮುಖ ವರೆಸಿಕೊಳ್ಳುತ್ತ ಬಂದ. ಮುಖ ಕಳೆಗೆಟ್ಟಿತ್ತು. ರಾಜಶೇಖರನನ್ನು ಒಮ್ಮೆ ನೋಡಿದಂತೆ ಮಾಡಿ, ಮುಖ ತಪ್ಪಿಸಿಕೊಳ್ಳುವಂತೆ ನಿಂತು "ಯಾವಾಗ ಬಂದಿ ಅಣ್ಣ? ಮನೆ ಕಡೆ....." ಎಂದು ಕೇಳಿದ.

"ನಾನು ಯಾವಾಗ ಬಂದರೂ ಇಲ್ಲಿಗೆ ಬರ್ತಿದ್ದೆನೆಂದು ನಿನ್ಗ ಗೊತ್ತದಲ್ಲ?"

"ಅದು ಕರೆವು. ನಾವು ಊರಗಳ ಮನೆ......"

"ಒಂದು ಚೋಟುದ್ದದ ಗಿಡ ಬುಡದಂತೆ ಎಲ್ಲ ಮರಗಳಿಗೆ ಕೊಡಲಿ ಇಕ್ಕಿದ್ಯಾಕೆ?" ರಾಜಶೇಖರ ಕೂಗಿದ. ಗುರುಲಿಂಗ ಅಳ್ಳಾಡಿದಂತೆ ಕಾಣಲಿಲ್ಲ. ಬದಲಾಗಿ

"ನಮ್ಮ ಬಾಳೇವು ಕೆಟ್ಟಾದಂತ ಯಾರಿಗೆ ಹೇಳಿದಪ್ಪ? ನಿನ್ನನ್ನು ಕೇಳಿ, ಕೈ ಒಡ್ಡಿದ್ರೇನೂ ಪ್ರಯೋಜನ ಇಲ್ಲ ಅನ್ನಿಸಿತ್ತು" ಗುರುಲಿಂಗ ಮುಖ ಕೊಟ್ಟು ಹೇಳಲಿಲ್ಲ.

"ಅರೆ ಅದು ಸರಿ. ನನ್ಗೂ ಬಾಳೇವು ಐತೆ. ನಿನ್ನ ಬಾಳೇವು ನನ್ನ ವಜ್ಜೆಯಲ್ಲೇನು? ಅದ್ಕ ನನ್ನ ಭಾಗದ ಹೊಲ ನಿನ್ಗ ಬಿಟ್ಟಿಲ್ಲೇನು?" ರಾಜಶೇಖರನ ಸಂಕಟ ಹೆಚ್ಚಾಗುತ್ತಿತ್ತು.

"ನಿನ್ಗೇನು ತಿಳಿತದ? ಈ ಮಣ್ಣಿನಿಂದ ಹೊಟ್ಟೆ ತುಂಬುವ ಕಾಲ ಹೋಯ್ತು! ಉಳುಮೆಯಿಂದ ಸುಖವಿಲ್ಲ"

"ಈ ವನಕ್ಕೆ ಕೊಡಲಿ ಇಡುವ ಮುನ್ನ ನನ್ನನ್ನು ಒಂದು ಮಾತು ಕೇಳಬೇಕಿತ್ತಿಲ್ಲ?"

"ಕೇಳಿದ್ರೆ ಏನಾಗ್ತಿತಪ್ಪ? ನಾಕೈದು ವರ್ಷದ ಹಿಂದೇನೇ "ನಿನ್ನ ಬಾಳ್ವೆ ನಿನ್ಗ – ನನ್ನ ಬಾಳ್ವೆ ನಮ್ಗ' ಅಂತ ಮುಖಕ್ಕೆ ಹೊಡದಂಗ ಹೇಳಿ ಕಳಿಸಿದ್ದಿ...." ಎಂದು ಗುರುಲಿಂಗ ಅಣ್ಣನ ಮುಖ ನೋಡಿ ಹೇಳಿದ.

"ಹೌದು, ಅಂದಿದ್ದು ನಿಜ! ನನ್ನ ಕೈ ಖಾಲಿಯಾದಾಗ ಅಂದಿದ್ದೆ. ನಾನು ಕೋಟ್ಯಾಧೀಶನೇನು? ನನ್ನದು ಸಣ್ಣ ನೌಕರಿ ಒಂದು ಸಂಸಾರ ಐತೆ. ನಗರದಾಗ

ಇದ್ದೀನಿ. ಒಂದು ಸೂರು ಮಾಡಿಕೊಳ್ಳಲು ಹೆಣಗಿದ್ದೀನಿ. ಮಕ್ಕಳಿಬ್ಬರ ಕಾಲೇಜಿನ ಖರ್ಚು ಬೆಟ್ಟದಷ್ಟು ಇರ್ತದ. ನನ್ನ ಹೆಂಡತಿ ನಾನು ಖರ್ಚಿಗೆ ಹೆಣಗಾಡಿದಾಗಲೆಲ್ಲ 'ಆಸ್ತಿ ಭಾಗ ಮಾಡಿಕೊಂಡಿದ್ರಿ. ನಿಮ್ಗೂ ಆಸ್ತಿ ಬಂದೈತೆ! ಆ ಆಸ್ತಿಯಿಂದ ಒಂದು ಪೈಸ ಮನೆಗೆ ತಂದಿದ್ದಿರೇನು?' ಎಂದು ಕೇಳ್ತಾಳ. ಕೇಳಾಕ ಆಕೆಗೂ ಹಕ್ಕು ಇದೆ. ಆದ್ರೆ ಮೂರ್ಖ, ನಿನ್ನ ಮುಖನೋಡಿ, ನಿನ್ನದೂ ಬಾಳ್ವೆ ಚಂದ ಇರ್ಲಿ ಅಂತ ತಿಳಕಂಡು, ನಾನು ಹೆಂಡತಿ ಬಾಯಿ ಮುಚ್ಚಿಸುತ್ತ ಬಂದಿದ್ದೇನೆ....."

"ಅದೇ ಹೇಳಿದ್ನೆಲ್ಲಪ್ಪ, ಈ ಮಣ್ಣಿನಿಂದ ಹೊಟ್ಟೆ ತುಂಬದಿಲ್ಲಂತ. ನನ್ನ ಮಗ್ಳು ಹತ್ತನೇ ತರಗತಿ ಮುಗಿಸಿದ್ಲು. ವಿಜ್ಞಾನ ಕಾಲೇಜಿಗೆ ಕಳಿಸು. ಹಾಸ್ಟೇಲಿನ್ಯಾಗ ಇರ್ತೀನಿ. ಮುಂದ ಬಿ.ಇ. ಓದುತ್ತೇನಪ್ಪ' ಅಂತ ಹಠ ಹಿಡದಾಳ. ಹೆಂಡ್ತಿ ಅದನ್ನೆ ಹೇಳ್ತಾಳ. ಅದ್ಕ ಹಣ ಬೇಕಿತ್ತಲ್ಲ. ಈ ಮರಗಳನ್ನು ಮಾರಿದ್ದೀನಿ" ಎಂದ ಭಂಡ ಧೈರ್ಯದಿಂದ.

ರಾಜಶೇಖರನಿಗೆ ಮಾತೇ ನಿಂತವು! ದಮ್ಮು ಹತ್ತಿತ್ತು. ಸಮಾಧಾನ ಹೊಂದುತ್ತ "ನಿನ್ಗ ನೆನಪಾದಿಲ್ಲ? ಊರಾಗಿನ ಮನೆ ನಿನ್ನ ಪಾಲಿಗೆ ಬಂದಿತ್ತು! ನಾನೇನು ಇಲ್ಲಿ ಇರದಿಲ್ಲ ಎಂದು ಸುಮ್ಮನಾಗಿದ್ದೆ. ಅಪ್ಪ–ಅಮ್ಮ ತಿಳಿದವರು. ಈ ಗುಡ್ಡದ ಬದಿ ಬೀಳು ಬಿದ್ದ ಈ ಹೊಲ ನನ್ಗ ಕೊಟ್ಟಿದ್ದರು. ನೆನಪಾದಿಲ್ಲ? ಅಂದ್ರೆ ಈ ಹೊಲ ನಂದಾಯ್ತಲ್ಲ. ಇದರ ಮ್ಯಾಲೆ ನನ್ನ ಹಕ್ಕು ಐತೆ ನಿನ್ನದಿಲ್ಲ. ಒಂದು ಮಾತು ಕೇಳಬೇಕಿತ್ತು ನೀನು?"

"..........................."

"ಮಳಿಗೆ ಮನೆ ಕುಸಿದಿತ್ತು. 'ನನ್ಗ ಈ ಮನೆ ಬ್ಯಾಡ' ಎಂದು ಹಠ ಹಿಡಿದು ಕುಂತಿದ್ದಿ. ನಾನೇ ಈ ಹೊಲಕ್ಕ ನಿಮ್ಮನೆಲ್ಲ ತಂದು, ಗುಡಿಸಲು ಹಾಕಿಕೊಟ್ಟೆ. ಆಮೇಲೆ ಮೂರು ನಾಕು ವರ್ಷದ ಮ್ಯಾಲೆ ನಾನು ಊರಾಗಿನ ಮನೆಯನ್ನು ನನಗಾಗಿ ರಿಪೇರಿ ಮಾಡ್ಸಿದ್ದೆ. ಮನೆ ಚಂದ ಕಂಡಿತು. ಶಾಲಾ ಮಾಸ್ತಾರರಿಗೆ ಇರಲೆಂದು ಕೊಟ್ಟಿದ್ದೆ. ನೀನೇನು ಮಾಡಿದ್ದಿ? ಆ ಮಾಸ್ತಾರರನ್ನು ಓಡಿಸಿ, ಮತ್ತೆ ಅಲ್ಲಿಗೆ ಬಂದು ಸೇರಿದ್ದಿ. ಆಗ ನನ್ಗ ಹೇಳಿದ್ರೇನು? ನಾಕೈದು ಲಕ್ಷ ರೂಪಾಯಿ ಖರ್ಚ ಮಾಡಿ, ಮನೆ ರಿಪೇರಿ ಮಾಡಿಸಿದ್ದೆ. ಯಾಕೇಳು? ನನ್ನೂರಲ್ಲಿ ನನ್ನದು ಒಂದು ಮನೆ ಇರ್ಲಿ ಅಂತ. ಈ ತುಂಡು ನೆಲ ನಂದು ಗೊತ್ತದೇನು?"

"ಈಗೇನು? ಆ ಮನೆ ಖಾಲಿ ಮಾಡ್ತೀವಿ. ನೀನೇ ಬಂದಿರು! ನನ್ಗ ಈ ಹೊಲ ಇರ್ಲಿ" ಎಂದ ಗುರುಲಿಂಗ.

"ಅದು ಬೇಕು; ಇದು ಬ್ಯಾಡ. ಇದು ಬೇಕು; ಅದು ಬ್ಯಾಡ ಅಂತ ಆಟಕ್ಕೆ ನಿಂತಿದ್ದೇನು? ಲೇ ಮೂರ್ಖ, ನಿನ್ಗ ಯಾವತ್ತೂ ನಾನು ಒಂದು ಮಾತು ಅಂದಿಲ್ಲ ಗೊತ್ತದೇನು? ಛೇ....." ಎಂದು ಬೇಸತ್ತು ನಿಂತ ರಾಜಶೇಖರನಿಗೆ ಆ ಕಚ್ಚ ರಸ್ತೆ ಕಂಡಿತು. "ಅದೇನು ಹೊಸ ದಾರಿ? ನಮ್ಮ ಹೊಲಕ್ಕೆ ಬಂದು ನಿಂತದ?" ಎಂದು ಕೇಳಿದ.

"ಅಣ್ಣ, ಊರ ಮ್ಯಾಲೆ ಐತಲ್ಲ ಸಿಂಗಲ್ ರಸ್ತೆ, ಅದು ಡಬ್ಬಲ್ ರಸ್ತೆ ಆಗಕತ್ತೈತೆ. ಹೈವೆ ಆಗ್ತದ. ಕಾಂಟ್ರ್ಯಾಕ್ಟರ್ ಬಂದು 'ಈ ಜಾಗ ನನ್ಗ ಬಾಡಿಗೆಗೆ ಕೊಡು. ನಮ್ಮ ಕಚ್ಚಾ ಮಾಲು ತಂದು ಸಂಗ್ರಹ ಮಾಡ್ತೀವಿ. ಮತ್ತೆ ಲಾರಿಗಳು, ಜೆಸಿಬಿಗಳು, ಕಾರು ಜೀಪುಗಳು ನಿಲ್ಸಕೂ ಸ್ಥಳ ಬೇಕು. ಕೆಲ್ಸ ನಡಿವ ಹೈವೆಗೆ ಈ ಜಾಗ ಸಮೀಪ ಆಗ್ತದ' ಎಂದು ಮೊನ್ನೆ ಬಂದು ಹೇಳಿದ್ದ. 'ನಾನು ನೋಡಮು' ಅಂದಿದ್ದೆ. ಆದ್ರೆ ನಿನ್ನೆ ಒಂದೇ ದಿನದಲ್ಲಿ ಆ ಕಚ್ಚಾ ದಾರಿ ಮಾಡ್ಸಿದ್ದಾನ" ಎಂದು ತಪ್ಪು ಒಪ್ಪಿಕೊಳ್ಳುವ ದನಿಯಲ್ಲಿ ಹೇಳಿ ಟವೆಲ್ಲಿನಿಂದ ಮುಖ ತಿಕ್ಕಿಕೊಳ್ಳುತ್ತ ನಿಂತ.

ರಾಜಶೇಖರನಿಗೆ ಅದನ್ನು ಕೇಳಿದ ಮೇಲೆ ಮನಸ್ಸು ನಿರಾಶೆಯ ತಳ ಸೇರಿತು.

ಅಷ್ಟರಲ್ಲಿ ಒಬ್ಬ ಬೈಕ್ ಮೇಲೆ ಬಂದು "ಗುರುಲಿಂಗ" ಎಂದು ಕರೆಯುತ್ತ ಬಂದು "ಈ ಹೊಲದ ಗರಸು ಮಣ್ಣನ್ನು ನಾಳೆಯಿಂದನೆ ರಸ್ತೆಗೆ ಹಾಕಲು ಒಯ್ತಾರಂತ. ಜೆ.ಸಿ.ಬಿ. ಬರ್ತದ. ಲಾರಿಗಳೂ ಬರ್ತವ. ನಮ್ಮ ದಣಿ ನಿನ್ಗ ಹೇಳಿ ಬಾ ಅಂತ ಕಳಿಸಿದ" ಎಂದು ಹೇಳಿದ.


"ಏನು? ಈ ಹೊಲದ ಮಣ್ಣನ್ನು ಮಾರ್ತಿದ್ದೇನು?" ರಾಜಶೇಖರ ಕೇಳಿದ.

ಗುರುಲಿಂಗ ಮಾತಾಡಲಿಲ್ಲ. "ಹೇ ಹೋಗು" ಎಂದು ಗದರಿಸಿದ ಬಂದವನಿಗೆ.

"ಅಲ್ಲಲೇ, ಹಿರಿಯರ ಜೀವಗಳು ಅಲ್ಲಿ ವಿರಮಿಸಿವೆ. ಅವುಗಳ......."

"ಅವರ ಮಗ್ಗಲಾಗ ನಿನ್ಗೂ ಜಾಗ ಕೊಡ್ತೀನಿ. ಅಣ್ಣ, ಬೇಕಾದ್ರೆ ಬರದು ಕೊಡ್ತೀನಿ" ಅಂದ ಗುರುಲಿಂಗ.

"ಹ್ಹಾಂ ಏನಂದಿ?" ಎಂದು ಕೇಳುತ್ತ, ಅದು ಅರಿವಿಗೆ ಬರತೊಡಗಿತು. ರಾಜಶೇಖರನ ಮೈಯಲ್ಲಿದ್ದ ಜೀವಶಕ್ತಿ ಒತ್ತುತ್ತಿರುವಂತೆ ಅನುಭವಕ್ಕೆ ಬರತೊಡಗಿತು! ತಮ್ಮನ ಮುಂದೆ ನಿಲ್ಲಲು ಜಿಗುಪ್ಸೆ ಬಂತು.



(ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿರುವ ಲೇಖಕರು ಕನ್ನಡದ ಪ್ರಮುಖ ಕಥೆಗಾರರಲ್ಲೊಬ್ಬರಾಗಿದ್ದಾರೆ)

ಲಲಿತ ಪ್ರಬಂಧ

ಕಾಡು ಮತ್ತು ಬಯಲು

–ಗೀತಾ ವಸಂತ

.."....ಇಂಥ ಅಜ್ಜ ಎಂಬತ್ತು ದಾಟಿದ ಮೇಲೂ ಅದೇ ಕೆಂಪು ಬಸ್ಸೇರಿ ಟಾರು ರೋಡಿನಲ್ಲಿಳಿದು ಕಾಡುದಾರಿಯಲ್ಲಿ ನಡೆದು ಬರುವುದನ್ನು ಮರೆಯಲಿಲ್ಲ. ಮರಿಮಕ್ಕಳಿಗೆ ಅದೇ ಖರ್ಜೂರ, ಕಲ್ಲುಸಕ್ಕರೆ ಸೇಬು ತರುವುದನ್ನು ಮರೆಯಲಿಲ್ಲ. ಅವನು ಕಟ್ಟಿದ ಮನೆ ಹಳತಾದರೂ ಅವ ಹಳಬನಾಗಲಿಲ್ಲ. ನಾವೆಲ್ಲ ಅವನನ್ನು ಬಿಟ್ಟು ಟಾರುರೋಡಿನ ನಾಡುಗಳಿಗೆ ವಲಸೆ ಬಂದೆವು. ಅವನು ಮಣ್ಣನೆ ನಡಿನ ಹಾಗೆ ಉಳಿದುಹೋದ. ತುಂತುರುಮಳೆಗೇಳುವ ಘಮದಂತೆ ಆಗಾಗ ಸ್ಮೃತಿಯಲ್ಲಿ ಸುಳಿಯುತ್ತ ಉಳಿದ. ಊರಿಗೆ ಹೋದಾಗಲೆಲ್ಲ ಈ ತೊಂಬತ್ತರ ಆಸುಪಾಸಿನ ಅಜ್ಜ ಪಾಗಾರದಂಚಿಗೆ ಶೂನ್ಯದಿಟ್ಟಿಸುತ್ತ ಕುಳಿತಿರುತ್ತಿದ್ದ. ನಮಗೂ ಲೋಕಕ್ಕೂ ಸೇತುವೆ ಕಟ್ಟಿದ ಅಜ್ಜನಿಗೆ ನಾವು ಹೇಗೆ ಸೇತುವೆಯಾಗಬೇಕುಂಬುದೇ ತಿಳಿಯಲಿಲ್ಲ."



ಜುಮುರು ಮಳೆಗೆ ಪಾಚಿಗಟ್ಟಿದ ಪಾಗಾರದ ಅಂಚಿಗೆ ಕುಳಿತ ಅಜ್ಜ ಒಂದು ಕಾಲದಲ್ಲಿ ಇಡೀ ಕುಟುಂಬದ ಕೋಳು ಕಂಬವಾಗಿದ್ದವನು. ಅವನ ಮಂಜುಗಣ್ಣಲ್ಲಿ ಹನಿಯೊಂದು ಹರಳುಗಟ್ಟುತ್ತಿರುವಂತೆ ಭಾಸವಾಗುತ್ತಿತ್ತು ನನಗೆ. ಜೋರು ಮಳೆ ಸುರಿದು ಹೋದಮೇಲೆ ಆವರಿಸುವ ತಣ್ಣಗಿನ ಮೌನದಹಾಗೆ ಸುಂಯ್ಯೆಂದು ತೀಡುವ ಗಾಳಿಗೆ ಮರಗಿಡಗಳೆಲ್ಲ ತೊನೆದಾಡಿ. ಕೊನೆಗೆ ನಿಶ್ಚಲ ನೀರವಕ್ಕೆ ಸಂದಂತೆ ಆತ ಭಂಗಿ ಬದಲಿಸದೇ ಕುಳಿತಿರುತ್ತಿದ್ದ. ಹಾಗೆನೋಡಿದರೆ ಸುಮ್ಮನೇ ಕುಳಿತಿರುವ ಜಾಯಮಾನವೇ ಅಲ್ಲ ಅವನದು. ಬುಗುರಿಯಂತೆ ತಿರುತಿರುಗಿ ಚಲನೆ ನಿಲ್ಲಿಸಿ ಒರಗಿದ ಆ ಭಂಗಿಯನ್ನು ಯಾಕೋ ಕೊನೆವರೆಗೂ ಒಪ್ಪಿಕೊಳ್ಳಲಾಗಲೇ ಇಲ್ಲ.

ಚಿಕ್ಕಂದಿನಲ್ಲಿ ಅಜ್ಜನೆಂದರೆ ದೂರದ ಟಾರು ರೋಡಿನ ನಾಡಿನಿಂದ ಕೆಂಪು ಬಸ್ಸೇರಿ ಬರುವ ಧೀರ. ದಟ್ಟ ಕಾಡಿನ ನಿಗೂಢ ಗಹನತೆಯ ನಡುವೆ ನಾಗರೀಕವಾದುದು ಏನೆಂದರೇನೂ ಗೊತ್ತಿರದ ನನಗೆ ಹಾಗು ನನ್ನ ಪುಟ್ಟ ತಮ್ಮನಿಗೆ ಈ ಅಜ್ಜ ದೇವಲೋಕದಿಂದ ಬಂದ ಜಾದೂಗಾರನಂತೆ ತೋರುತ್ತಿದ್ದ. ಬಂಗಾರ ಬಣ್ಣವೊಡೆದ ಗದ್ದೆಯಂಚಿನ ಹೊನ್ನೆಮರಗಳ ನಡುವಿನ ಕಡಿದಾದ ಕಾಲುದಾರಿಯಲ್ಲಿ ಬೆಳ್ಳಗೆ ಏನಾದರೂ ಹೊಳೆಯಿತೆಂದರೆ ಸಾಕು, ನಾವು ಜೀವ ಪಣಕ್ಕಿಟ್ಟವರಂತೆ ಓಡಿಹೋಗುತ್ತಿದ್ದೆವು. ಅಜ್ಜನ ಬಿಳಿಯ ಖಾದಿ ಪಂಚೆ, ಅಂಗಿ ಹಾಗೂ ಅದೇ ಬಿಳಿಯ ಗಾಂಧಿ ಟೊಪ್ಪಿಗೆ ನಮ್ಮ ಎದೆಯೊಳಗೆ ಸಂಚಲನವನ್ನೇ ಮೂಡಿಸುತ್ತಿತ್ತು. ಅವನ ನೀಲಿ ಕೈಚೀಲ ಹಿಡಿದುಕೊಳ್ಳಲು ನಾವಿಬ್ಬರೂ ಸ್ಪರ್ಧೆಗೆ ಬೀಳುತ್ತಿದ್ದೆವು. ಅದರಲ್ಲಿರಬಹುದಾದ ಅಪರೂಪದ ವಸ್ತುಗಳ ಬಗ್ಗೆ ಸದಾ ಕುತೂಹಲ. ಖರ್ಜೂರ, ಕಲ್ಲುಸಕ್ಕರೆ, ಸೇಬು..ಹೀಗೆ ಆಯಾಯ ಶ್ರಾಯಕ್ಕೆ ತಕ್ಕಂತೆ ನಮಗೆ ದಕ್ಕುತ್ತಿದ್ದವು. ಅವು ಪೇಟೆಯಿಂದ ತಂದವು ಎಂಬುದೇ ಒಂದು ಥ್ರಿಲ್ ನಮಗೆ. ಮನೆಯವರೆಗೂ "ಅಜಾ ಎಂಥಾ ತಂಜೇ.." ರಾಗವೆಳೆಯುತ್ತಲೇ ಅಮೂಲ್ಯ ಅತಿಥಿಯನ್ನು ಕರೆತರುತ್ತಿದ್ದೆವು.

ಮನೆಯೆಂದರೆ ಅಲ್ಲಿ ಏನಿತ್ತು ಮಣ್ಣು? ಅದೇ ಮಣ್ಣಿನ ನೆಲ, ಮಣ್ಣಿನ ಗೋಡೆಗಳ ಮೇಲೆ ಹೊದೆಸಿದ ಅಡಿಕೆ ಸೋಗೆ. ಅಡಿಗೆಮನೆ ಮಲಗುವ ಮನೆ ಎಲ್ಲ ಅದೊಂದೇ. ಹೊರಗಿನ ತುಸು ಅಗಲವಾದ ಕಟ್ಟೆಗೆ ಅಡಿಕೆ ದಬ್ಬೆಗಳನ್ನು ಸಾಲಾಗಿ ಪೇರಿಸಿ ತಳಿ ಕಟ್ಟಲಾಗಿತ್ತು. ಅದೇ ಜಗುಲಿಯೆಂಬೋ ಮಹಾಮಂಟಪ. ಅಲ್ಲೊಂದು ಚಾಪೆಯೋ ಕಂಬಳಿಯೋ ಇರುತ್ತಿದ್ದ ನೆನಪು. ರಸ್ತೆಯಿಲ್ಲದ ಕರೆಂಟಿಲ್ಲದ ಆ ಒಂಟಿಮನೆಗೆ ಲೋಕದ ನಂಟು ಇದ್ದದ್ದು ತುಂಬ ಕಡಿಮೆ. ಅಜ್ಜ ಹೊರಲೋಕಕ್ಕೂ ನಮಗೂ ಸೇತುವೆಯಂತೆ ಇದ್ದ. ತೋಟಕ್ಕೆ ಗದ್ದೆಗೆ ನುಗ್ಗುವ, ಕಾಡುಹಂದಿ, ಕಾಡೆಮ್ಮೆ, ಕಡ, ಮಿಕ, ಮುಳ್ಳುಹಂದಿ. ರಾತ್ರಿ ದನ, ನಾಯಿಗಳ ಹೊತ್ತೊಯ್ಯುವ ಕಿರುಬ, ತೋಟದಾಚೆಗಿನ ಹೊಳೆಗೆ ನೀರು ಕುಡಿಯಲು ಬರುವ ಹುಲಿಯ ಹೆಜ್ಜೆ, ರಾತ್ರಿ ಕಂಡ ಅದರ ಬ್ಯಾಟರಿ ಕಣ್ಣುಗಳ ಬಗ್ಗೆ ಕೇಳುತ್ತಿದ್ದ ತರಹೇವಾರಿ ಕಥನಗಳು....ಇಂಥ ಭಯ ತುಂಬಿದ ಲೋಕಕ್ಕೆ ನಮ್ಮನ್ನು ತಂದುಬಿಟ್ಟವ ಇದೇ ಅಜ್ಜನಂತೆ. ಮೂಲ ಮನೆಯ ಭವ್ಯ ಕಥಾನಕಗಳನ್ನು ಬೆರಗಿನಿಂದ ಕೇಳುವ ಕಾಡು ಮೊಮ್ಮಕ್ಕಳು ನಾವು.

ಅಲ್ಲಿಂದ ಅಪ್ಪ ಅಮ್ಮ ಬರಿಗೈಯಲ್ಲಿ ಹೊರಬಂದಾಗ ಕಾಡೇ ನನಗೆ ತೊಟ್ಟಿಲು. ತಮ್ಮ ಆಮೇಲೆ ಹುಟ್ಟಿದವನು. ಹಿತ್ತಲಲ್ಲಿ ಸುರಿದಿಟ್ಟ ಬೂದಿ ರಾಶಿಯೇ ನನ್ನ ಆಟದ ವಸ್ತು. ಮೈಮೇಲೆ ಬೂದಿ ಸುರುವಿಕೊಳ್ಳುತ್ತ ಎಷ್ಟು ಹೊತ್ತು ಬೇಕಾದರೂ ಸದ್ದಿಲ್ಲದೇ ಇರುತ್ತಿದ್ದ ನಾನು ಧ್ಯಾನದಂಥ ಎಂಥದೋ ದಿವ್ಯಕ್ಷಣಗಳ ರುಚಿಯನ್ನು ಅಲ್ಲೇ ಹತ್ತಿಸಿಕೊಂಡೆನೆಂದು ಈಗನಿಸುತ್ತದೆ. ಏನೋ ಉಸುರಿಹೋಗಿದೆ ಕಿವಿಯೊಳಗೊಂದು ಗಹನ ಮಂತ್ರವ. ಮೌನದಾಳದಲ್ಲಿ ಹೂತ ಅದೇನೆಂದು ಈಗಲೂ ಹುಡುಕುತ್ತಿದ್ದೇನೆ. ಗಲಗಲ ಜಗತ್ತಿನಾಚೆ ಈ ಏಕಾಂತಕ್ಕೆ ದೂಡಿ ನನ್ನದೇ ಲೋಕವ ಕಾಣಲು ಕಾರಣನಾದ ಅಜ್ಜನಿಗೆ ಧನ್ಯವಾದ ಹೇಳಬೇಕೆನಿಸುತ್ತದೆ ಈಗ.

ಆದರೆ ಆಗೆಲ್ಲ ಯಾವಾಗಬೇಕಾದರೂ ಬಿದ್ದು ಬಯಲಾಗಿ ಹೋಗುವಂತಿದ್ದ ಮನೆಯಲ್ಲಿದ್ದುದಕ್ಕಾಗಿ ದುಃಖವಾಗುತ್ತಿತ್ತು. ಮಳೆಗಾಲದಲ್ಲಿ ರಾತ್ರಿಯಿಡೀ ಆರ್ಭಟಿಸುತ್ತಿದ್ದ ಗುಡುಗು, ಸಿಡಿಲು. ಆ ಅಡಿಕೆ ದಬ್ಬೆಗಳ ಸೀಳಿ ಬರುತ್ತಿದ್ದ ಕೋಲ್ಮಿಂಚು... ದೂರದಲೆಲ್ಲೋ ಮರ 'ಮುರಿದು ಧರೆಗುರುಳಿದ ಧಡಲ್ಧಡಲ್ ಸದ್ದು...ಮನೆಯ ಮಧ್ಯೆ ಗುಜ್ಜು ಕೊಟ್ಟು ನಿಲ್ಲಿಸಿದ ಕೋಳುಕಂಬ....ದೇವರೇ ಈ ರಾತ್ರಿಯೊಂದು ಕಳೆಯುವಂತೆ ಪಾರುಮಾಡು ಎಂದು ಎಲ್ಲರೂ ಸುತ್ತಲೂ ಕುಳಿತು ಮೊರೆಯಿಡುತ್ತಿದೆವು. ಅಭಯ ನೀಡುತ್ತಿದ್ದ ಕೃಶ ದೇಹದ ಸಾಮಾನ್ಯ ಎತ್ತರದ ಅಜ್ಜ ನಮ್ಮ ಪಾಲಿನ ಹೀ–ಮ್ಯಾನ್ ಆಗಿರುತ್ತಿದ್ದ. ಅಲ್ಲೇ ನಿದ್ದೆ ಹತ್ತಿ ಬೆಳಗಾದಾಗ ಎಳೆಬಿಸಿಲು ಇಣುಕಿಹಾಕುತ್ತಿತ್ತು. ಆಯಿ ಸೋರಿ ಗುಳಿಬಿದ್ದ ನೆಲಕ್ಕೆ ಮಣ್ಣು ಮೆತ್ತುತ್ತಾ, ಕಟ್ಟಿಗೆ, ಅಡಿಕೆ ಹಾಳೆ ಮೆತ್ತಾಗದಂತೆ ಒಲೆ ಬುಡದ ಮಣ್ಣಿನ ಕಟ್ಟೆಯೊಳಗೆ ಪೇರಿಸಿಡುತ್ತಾ ದೈನಿಕ ಕಾವುಗೊಳ್ಳುತ್ತಿತ್ತು. ಹಿಂದಿನ ದಿನ ಹೊಳೆಗೆ ನೆಗಸು ಉಕ್ಕಿ ತೇಲಿಹೋದ ಬಡಪಾಯಿ ಎಮ್ಮೆ ಕರುವಿನ ಕರುಣಾರ್ದ್ರ ಕತೆ ಕೇಳುತ್ತಾ ಅಜ್ಜನ ಬಳಿ ಕೇಳಿದ್ದೆ "ಅಜಾ ನಮಗೂ ಹೊಸಮನೆ ತಗಂಡು ಬಾರಾ...ಆ ಮನಿಗೆ ಮೆತ್ತು(ಮಾಳಿಗೆ) ಇರವು ಮತ್ತೆ!" .

ನನ್ನ ಪಾಲಿಗೆ ಮನೆಯೂ ಅಜ್ಜ ಪೇಟೆಯಿಂದ ತರುವ ವಸ್ತು!! ಅಜ್ಜ ನಸುನಗುತ್ತ ಅಭಯವಿತ್ತಿದ್ದ "ಆತು ತಪ್ಪನ ಸ್ವಲ್ಪ ದುಡ್ಡು ಸೇರಲಿ." ಈ ದುಡ್ಡು ಅನ್ನೋ ಕಾಗದದ ವಸ್ತು ಯಾಕಾದರೂ ಇಷ್ಟು ತಡಮಾಡುತ್ತದೋ ಬಂದು ಸೇರಲು ಅನಿಸಿತ್ತು. ಅಜ್ಜ ಅಜ್ಜಿ ಚಿಕ್ಕಪ್ಪಂದಿರೆಲ್ಲ ಇದ್ದ ಬಿಟ್ಟು ಬಂದ ಆ ಮೂಲಮನೆಯ ಜೊತೆ ನನ್ನ ಯಾವ ಸ್ಮೃತಿಗಳೂ ಇರಲಿಲ್ಲ. ಆದರೆ ಅದೊಂದು ಕನಸಿನಂತೆ ನನ್ನ ಕಾಡುತ್ತಿತ್ತು. ಹೊಳೆವ ನುಣ್ಣನೆ ಕೆಂಪು ಸಿಮೆಂಟು ನೆಲ, ದೊಡ್ಡ ಜಾಲರಿಗಳಿರುವ ಕಿಡಕಿಗಳು. ಜಗುಲಿಯ ಮೇಲಿನ ಮರದ ಖುರ್ಚಿ, ಮೇಜುಗಳು, ಅದರ ಮೇಲೆ ಹಾಸಿರುತ್ತಿದ್ದ ಮೆತ್ತೆಗಳು... ಟೇಬಲ್ ಮೇಲೆ ಹರವಿರುತ್ತಿದ್ದ ಪತ್ರಿಕೆಗಳು, ಚಂದದ ಕೆತ್ತನೆಯ ಪ್ರಧಾನ ಬಾಗಿಲು, ಅದರ ಸುತ್ತಲೂ ಹೂಬಳ್ಳಿಯ ಚಿತ್ರಗಳ ಅಲಂಕಾರ, ಎಲ್ಲರೂ ತಾವು ಮಾತ್ರ ಒಳಹೋಗಿ ಬಾಗಿಲು ಹಾಕಿಕೊಳ್ಳುತ್ತಿದ್ದ ಪ್ರತ್ಯೇಕ ಕೋಣೆಗಳು, ದೊಡ್ಡ ದೇವರ ಕೋಣೆ. ಮಜಬೂತಾದ ಪೀಠದಲ್ಲಿ ಅಲಂಕೃತ ದೇವರು, ಎಲ್ಲಕ್ಕಿಂತ ಮಿಗಿಲಾಗಿ ಮೆಟ್ಟಿಲು ಹತ್ತಿ ಮೇಲೆ ಹೋದರೆ ಇರುವ ಮಾಳಿಗೆ. ಅದನ್ನು ಮೆತ್ತು ಅನ್ನುತ್ತಿದ್ದೆವು ಈ ಇಂಥ ಸೋರದಿರುವ ಮಾಳಿಗೆ ಮನೆಯೊಳಗೆ ಭಯವಿಲ್ಲದೇ ಮಲಗುವ ಕನಸು... ಮಣ್ಣು ಮೆತ್ತಿ ಸಗಣಿ ಸಾರಿಸುವ ಅಮ್ಮನ ಬೆರಳಿಗೆ ಮುಕ್ತಿ ಕೊಡುವ ಕನಸು... ಜಗುಲಿಯ ಪುಸ್ತಕದ ಘಮಕ್ಕೆ ನವಿರೇಳುವ ಮನಸು... ಅಬ್ಬಾ ಮನೆಯೆಂದರೆ ಏನೆಲ್ಲ ಬೆಸೆದಿರುತ್ತದೆ ಭಾವಕೋಶದೊಳಗೆ! ಅಜ್ಜ ಕೊನೆಗೂ ಅಂತ ಮನೆಯೊಂದನ್ನು ನಮಗಾಗಿ ಸಾಧ್ಯವಾಗಿಸಿದ.

ಅಕ್ಷರಲೋಕವೊಂದು ನನ್ನೊಳಗೆ ಸೇರಿಕೊಂಡಮೇಲೆ ಅಜ್ಜನನ್ನು ಕಾಯುವ ಕಾರಣಗಳೇ ಬೇರೆಯಾದವು ಈಗ ಅವನ ನೀಲಿ ಚೀಲದಲ್ಲಿ ಹುಡುಕುತ್ತಿದ್ದುದು ಚಂದಮಾಮ, ಬೊಂಬೆಮನೆ ಇಂಥ ಕಥೆಯ ಕಣಜಗಳನ್ನು. ಅವು ಮೂಡಿಸಿದ ಅಗಾಧ ಕಲ್ಪನೆಗಳು, ಅನೂಹ್ಯ ಮಾಯಕತೆಗಳು ಪ್ರಜ್ಞೆಯೊಳಗೆ ಸೇರಿಹೋದವು. ಬಡವ ಶ್ರೀಮಂತ, ಜಾತಿ ಧರ್ಮ, ಶ್ರೇಷ್ಠ ಕನಿಷ್ಟ, ಒಳಿತು ಕೆಡುಕು ಈ ಯಾವ ದ್ವಂದ್ವ ವೈರುಧ್ಯಗಳೂ ಗೊತ್ತಿರದ ಬೂದಿಬಡಕ ಬಾಲ್ಯದಿಂದ ಆಚೆ ಜಿಗಿಯಲೂ ಅಜ್ಜನ ಸಾಂಗತ್ಯವಿತ್ತು. ರೇಡಿಯೋ ವಾರ್ತೆಯನ್ನು ತಪ್ಪದೇ ಕೇಳುತ್ತಿದ್ದ ಅವ ಜಗತ್ತಿನ


ಎಲ್ಲ ವಿದ್ಯಮಾನಗಳ ಅರಿವಿಗೆ ಹಸಿದಿರುತ್ತಿದ್ದ. ರಾಜಕೀಯವನ್ನು ಚರ್ಚಿಸುತ್ತಿದ್ದ. ಸಾಮಾಜಿಕ ಪರಿವರ್ತನೆಗಳಿಗೆ ತೆರೆದ ಕಣ್ಣಾಗಿದ್ದ. ಅವ ಗಾಂಧಿವಾದಿಯಾಗಿದ್ದ. ಅವನೊಳಗೊಂದು ದೇಸಿ ವಿವೇಕವಿತ್ತು. ದೇವರಪೂಜೆ ಮಾಡುತ್ತಿದ್ದ. ಆದರೆ ಕರ್ಮಠನಾಗಿರಲಿಲ್ಲ. ಯಾವತ್ತೂ ಮಡಿ-ಮೈಲಿಗೆಯೆನ್ನಲಿಲ್ಲ. ಪೂಜೆ ಅವನಿಗೆ ಸ್ವಶ್ರದ್ಧೆಯ ಸಂಗತಿಯಾಗಿತ್ತು. ದೇವರನ್ನು, ಆಚರಣೆಗಳನ್ನು ಅವ ಯಾರ ಮೇಲೂ ಹೇರಲಿಲ್ಲ. ಬೆಳಿಗ್ಗೆ ಎದ್ದು ಹೂ ಕೊಯ್ಯುವ ಅವನಲ್ಲಿ ಮಗುವಿನ ಮುಗ್ಧತೆಯಿರುತ್ತಿತ್ತು. ಅದರ ಬಣ್ಣ ನವಿರುಗಳಿಗೆ ಅವನ ಮನ ಅರಳುತ್ತಿತ್ತು. ಗಿಡಗಂಟಿಗಳ ತಲೆ ಸವರುವಾಗ ಅವ ಜಗದಮ್ಮನಂತೆ ತೋರುತ್ತಿದ್ದ. ಗಂಧ ತೇಯುವಾಗ. ಹೂಗಳನ್ನು ಸೃಜನಾತ್ಮಕ ಬಣ್ಣದ ಸಂಯೋಜನೆಯಲ್ಲಿ ಅಲಂಕರಿಸುವಾಗ ಅವನೊಳಗೊಬ್ಬ ಕಲಾವಿದ ಪುಟಿದೇಳುತ್ತಿದ್ದ. ದೇವರನ್ನು ಮೀಯಿಸುತ್ತ, ಗಂಧ ತೀಡುತ್ತ, ಮುಂಜಾನೆಗಳನ್ನು ಮಂತ್ರಮಯಗೊಳಿಸುತ್ತಿದ್ದ. ಅಲ್ಲಿ ಕರಗಿ ಹೋಗುವ ತಾದಾತ್ಮವೇ ಅವನ ಶುದ್ಧಾಂತಃಕರಣವನ್ನು ಕಾಪಿಡುತ್ತಬಂತು ಎಂದೆನಿಸುತ್ತದೆ. ನಾದ, ಬಣ್ಣ, ಗಂಧಗಳು ಬೆರೆತ ಭಕ್ತಿಯ ಭಾವಾರ್ದ್ರ ಘಳಿಗೆಗಳಲ್ಲಿ ಅಜ್ಜ ಅವನಿಗೇ ಗೊತ್ತಿರದಂತೆ ನನ್ನೊಳಗೆ ಹೊಸ ಸಾಧ್ಯತೆಗಳು ಬಿಚ್ಚಿಕೊಳ್ಳುವಂತೆ ಮಾಡುತ್ತಿದ್ದ.

ಹೌದು ಅಜ್ಜ ಜನಿವಾರ ಧರಿಸುತ್ತಿದ್ದ. ತನ್ನ ಶ್ರದ್ಧೆಗೆ ಬದ್ಧ ಎಂಬಂತೆ. ಆದರೆಂದೂ ಅದನ್ನು ಅಹಂಕಾರದ ಸಂಕೇತವೆಂಬಂತೆ ಕಾಣಲಿಲ್ಲ. ದೀಕ್ಷಾಬದ್ಧ ಸಾಧಕ ಸಂಕೇತಗಳ ಒಗಟು ಒಡೆಯದೆಯೂ ಧರಿಸುವಂತೆ ಅವನು ಅದನ್ನು ಧರಿಸಿದ. ಅದರಿಂದ ಯಾರಿಗೂ ನೋವಾಗದಂತೆ ನಡೆದುಕೊಂಡ. 'ಕಳಬೇಡ ಕೊಲಬೇಡ...' ವಚನದ ಅಂತರಾತ್ಮವನ್ನು ಒಡಲುಗೊಂಡಂತೆ ಸರಳ ತತ್ವಜ್ಞಾನವನ್ನು ಘನವಾಗಿ ಬದುಕಿ ತೋರಿಸಿದ. ಕಾಯಕವೇ ಕೈಲಾಸ ಎಂಬ ತತ್ವಕ್ಕಂಟಿಕೊಂಡಿದ್ದ ಅವನಲ್ಲಿ ರೈತಾಪಿ ಗುಣಗಳೆ ಅಧಿಕವಾಗಿದ್ದವು. ಶ್ರದ್ಧೆಯಿಂದ ದುಡಿಯಬೇಕು, ಜಮೀನು ಊರ್ಜಿತಗೊಳಿಸಬೇಕು, ಹೊಸದನ್ನು ಸ್ವೀಕರಿಸಬೇಕು ಎಂಬ ವಿವೇಕ ಅವನಲ್ಲಿತ್ತು. ಸೋಮಾರಿತನ, ಅಧೈರ್ಯ, ಅಪ್ರಾಮಾಣಿಕತೆ, ದ್ವಂದ್ವಗಳನ್ನು ಸುತರಾಂ ಒಪ್ಪದ ಗಟ್ಟಿ ದೇಸೀ ರೈತಾಪಿ ಮುದುಕ ಅವ. ಚುಮುಚುಮು ನಸುಕಲ್ಲೇ ಪೂಜೆ ಮುಗಿದು ಎರಡು ಪುಟ್ಟ ದೋಸೆಗಳನ್ನು ಹಿಂದಿನ ದಿನದ ಮಿಕ್ಕಿದ ಸಾಂಬಾರಿನಲ್ಲಿ ಅದ್ದಿ ತಿನ್ನುವುದರಲ್ಲೂ ಪೂಜೆಯದೇ ತಾದಾತ್ಮ್ಯ! ಎಂದೂ ರುಚಿಗಾಗಿ ಹೆಚ್ಚು ತಿಂದವನಲ್ಲ. ಊಟದಲ್ಲೂ ಅದೇ ಸಂಯಮ. ನಿಯಮಿತತನ. ಹೊರಬಿದ್ದವ ಸೀದಾ ಕಾಯಕಯೋಗಿ. ಕಷ್ಟಸಹಿಷ್ಣು. ಆತ ಸವಾಲುಗಳನ್ನು ಸ್ವೀಕರಿಸುವ ಹಾಗೂ ನಿಭಾಯಿಸುವ ಧಾರಣ ಶಕ್ತಿಗೆ ಮಾದರಿಯಂತೆ ಬದುಕಿದ್ದ.

ಇಂಥ ಅಜ್ಜ ಒಮ್ಮೆ ಮೂತ್ರಕೋಶದ ತೊಂದರೆಗೊಳಗಾಗಿ ಮಣಿಪಾಲ ಆಸ್ಪತ್ರೆಗೆ ಸೇರಿದಾಗ ಮನೆಯ ಕೋಳುಕಂಬ ಮತ್ತೆ ಅಲುಗಾಡಿತ್ತು. "ಅಜ್ಜಾ ಹುಶಾರಾಗಿ ಬಾ" ಎಂದು ತೊದಲು ಅಕ್ಷರಗಳನ್ನು ಪೋಸ್ಟ್‌ಕಾರ್ಡಿನಲ್ಲಿ ಬರೆಯುವಾಗ ನಿಜಕ್ಕೂ ಕೈ ಕಂಪಿಸುತ್ತಿತ್ತು. ಆದರೆ ಅಜ್ಜ ಮತ್ತೆ ಪುನರ್ಜನ್ಮ ಪಡೆದು ಬಂದ. ಚಂದಮಾಮದಾಚೆಗೆ ಬೆಳೆದ ನಮ್ಮ ಓದುಗಳನ್ನು ಕುತೂಹಲದಿಂದ ನೋಡುತ್ತಹೋದ. ಅವ ನಾಲ್ಕನೇ ಕ್ಲಾಸು ಓದಿದವ ಎಂದು ನಮಗನಿಸಲೇ ಇಲ್ಲ. ನಾವು ಬೆಳೆದಂತೆ ನಮ್ಮೊಳಗೆ ಅವನೂ ಬೆಳೆಯುತ್ತ ಹೋದ. ವಯಸ್ಸಿಗೆ ಬಂದ ನಮ್ಮನ್ನು ಸ್ನೇಹಿತರಂತೆ ಕಾಣುವ ಆತ ನಮಗೆ ಸದಾ ಹೊಸಬ. ಏನನ್ನೂ ಉಪದೇಶಿಸದೇ ಏನೆಲ್ಲ ನಿರ್ದೇಶಿಸಬಹುದೆಂಬುದಕ್ಕೆ ಸಾಕ್ಷಿಯಾದ. ನನ್ನ ಕವಿತೆಗಳು ರೇಡಿಯೋದಲ್ಲಿ ಪ್ರಸಾರವಾದರೆ, ಬರಹ ಪತ್ರಿಕೆಯಲ್ಲಿ ಪ್ರಕಟವಾದರೆ ಉತ್ಸುಕತೆಯಿಂದ ಕೇಳುತ್ತಿದ್ದ; ಓದುತ್ತಿದ್ದ. ಅರಿಯುತ್ತಿದ್ದ. ಆದರೆ ಎಂದೂ ಚರ್ಚಿಸಲಿಲ್ಲ. ನನ್ನ ಮೊದಲ ಕವನ ಸಂಕಲನವನ್ನು ಅವನಿಗೇ ಅರ್ಪಿಸಿದಾಗಲೂ ಅದೇ ಕಣ್ಣಹೊಳಪಲ್ಲಿ ಮೌನವಾಗಿ ನನ್ನ ಸಾಕ್ಷಿಪ್ರಜ್ಞೆಯಂತೆ ಸಮಾರಂಭದಲ್ಲಿ ಕುಳಿತಿದ್ದ. ಅಜ್ಜ ಕವಿತೆಗಳನ್ನು ಓದಿದನೋ ಇಲ್ಲವೋ ಗೊತ್ತಿಲ್ಲ ಆದರೆ ಕವಿತೆಗಳ ಸಾಂದ್ರ ಒಡಲಲ್ಲಿ ಅವನೂ ಇದ್ದ.

ಪಿತೃಪ್ರಧಾನ ಮೌಲ್ಯಗಳನ್ನೇ ಉಸಿರಾಡುವ ಕುಟುಂಬದಲ್ಲಿ ಬೆಳೆದು ಅದರ ಯಜಮಾನನಾದ ಅಜ್ಜ ಎಷ್ಟು ಅಂತಃಕರಣಿಯಾಗಿದ್ದನೆಂದರೆ, ಅವನೊಬ್ಬ ಪರಿಪೂರ್ಣ ಅಮ್ಮನಾಗಿದ್ದ. ನಾನು ಎಂ.ಎ. ಓದಲು ಹೋಗುವುದಾಗಿ ಹೇಳಿ ಆಶೀರ್ವಾದ ಪಡೆಯಲು ಹೋಗುವಾಗ ನನಗೆ ಒಳಗೊಳಗೇ ಕಳವಳ. ಎಂ.ಎ. ಯಾಕೆ? ನೀನು ಐ.ಎ.ಎಸ್. ಮಾಡು ಎಂದು ನನಗೇ ಅಚ್ಚರಿಯಾಗುವಂತೆಮಾಡಿಬಿಟ್ಟ! ಆತ ಗುಣಗ್ರಾಹಿಯಾಗಿದ್ದ. ಲಿಂಗ'ಪೂರ್ವಗ್ರಹದಾಚೆ ಯೋಚಿಸಬಲ್ಲವನಾಗಿದ್ದ. ನಾನು ಅಮ್ಮನಾದಾಗ ಆಸ್ಪತ್ರೆಗೆ ಬಂದಿದ್ದ ಆತ ಬಾಣಂತಿ ಯಾವ ಭಂಗಿಯಲ್ಲಿ ಮಲಗಬೇಕೇಂದು ಹೇಳಿಕೊಟ್ಟ!. ಹಾಲೂಡಿಸುವ ಕುರಿತೂ ಸಲಹೆ ನೀಡಿದ. ಅಜ್ಜನ ತೊಡೆ ಮೇಲೆ ಕುಳಿತು ಕೇಳಿದ "ನಂದಕುಮಾರ ಓಡಿ ಬಾ ಚಂಡು ಕೋಲಾಟವ ಆಡುವ ಬಾ" ಎಂಬ ಹಾಡಿನ ಗುಂಗು ಮಾಸುವ ಮುನ್ನವೇ ಆತ ನನ್ನ ಮಗಳೊಂದಿಗೂ ಆಟವಾಡಿದ.

ಇಂಥ ಅಜ್ಜ ಎಂಬತ್ತು ದಾಟಿದ ಮೇಲೂ ಅದೇ ಕೆಂಪು ಬಸ್ಸೇರಿ ಟಾರು ರೋಡಿನಲ್ಲಿಳಿದು ಕಾಡುದಾರಿಯಲ್ಲಿ ನಡೆದು ಬರುವುದನ್ನು ಮರೆಯಲಿಲ್ಲ. ಮರಿಮಕ್ಕಳಿಗೆ ಅದೇ ಖರ್ಜೂರ, ಕಲ್ಲುಸಕ್ಕರೆ ಸೇಬು ತರುವುದನ್ನು ಮರೆಯಲಿಲ್ಲ. ಅವನು ಕಟ್ಟಿದ ಮನೆ ಹಳತಾದರೂ ಅವ ಹಳಬನಾಗಲಿಲ್ಲ. ನಾವೆಲ್ಲ ಅವನನ್ನು ಬಿಟ್ಟು ಟಾರುರೋಡಿನ ನಾಡುಗಳಿಗೆ ವಲಸೆ ಬಂದೆವು. ಅವನು ಮಣ್ಣಿನ ನಪಿನ ಹಾಗೆ ಉಳಿದುಹೋದ. ತುಂತುರುಮಳೆಗೇಳುವ ಘಮದಂತೆ ಆಗಾಗ ಸ್ಮೃತಿಯಲ್ಲಿ ಸುಳಿಯುತ್ತ ಉಳಿದ. ಊರಿಗೆ ಹೋದಾಗಲೆಲ್ಲ ಈ ತೊಂಬತ್ತರ ಆಸುಪಾಸಿನ ಅಜ್ಜ ಪಾಗಾರದಂಚಿಗೆ ಶೂನ್ಯದಿಟ್ಟಿಸುತ್ತ ಕುಳಿತಿರುತ್ತಿದ್ದ. ನಮಗೂ ಲೋಕಕ್ಕೂ ಸೇತುವೆ ಕಟ್ಟಿದ ಅಜ್ಜನಿಗೆ ನಾವು ಹೇಗೆ ಸೇತುವೆಯಾಗಬೇಕುಂಬುದೇ ತಿಳಿಯಲಿಲ್ಲ. ಅಲ್ಲಿ ಮೂಲ ಮನೆಯಲ್ಲಿ ಅವನ ಪ್ರಿಯಪತ್ನಿ ಶಾರದೆ ಮಾತುಕಳೆದುಕೊಂಡು, ಈ ಲೋಕದ ಅರಿವನ್ನೇ ಕಳೆದುಕೊಂಡು ತೆವಳುವ ನೋವನ್ನು ಭರಿಸಲಾಗದೇ ಶೂನ್ಯವಾದನಾ? ಗಂಟಿಕ್ಕಿದ ಕಾಸನ್ನು ನಂಬಿದ ಯಾರೋ ಬರಿದುಮಾಡಿದ್ದ ಆಘಾತಕ್ಕೆ ಬಲಿಯಾದನಾ? ಅವ ಏನೂ ಹೇಳಿಕೊಳ್ಳಲೂ ಇಲ್ಲ. ಮೆಲುದನಿಯಿಂದ ಮೌನಕ್ಕೆ ಜಾರಿಬಿಟ್ಟ. ಪಾಚಿಗಟ್ಟಿದ ಪಾಗಾರದ ತುದಿಗೆ ಕುಳಿತ ಮಂಜುಗಣ್ಣಿನ ಅಜ್ಜನ ಚಿತ್ರ ಕಾಡುತ್ತಿರುವ ಕಾಲದಲ್ಲೇ ಒಂದು ಬೆಳ್ಳಂಬೆಳಿಗ್ಗೆ ಅವ ಇಲ್ಲವಾದ. ಅದೇ ಚತುಷ್ಪಥ ರಸ್ತೆಗಳನ್ನು ಹಾಯ್ದು ಅವನನ್ನು ತಲುಪಲು ಹೋಗುವಾಗ ಮನಸ್ಸು ಪುಟ್ಟಪೋರಿಯ ಹಾಗೇ ಆಕ್ರಂದಿಸುತ್ತಿತ್ತು. "ಅಜ್ಜಾ ಹುಶಾರಾಗಿ ಬೇಗ ಬಾ"...ನೂರಾರು ಮೈಲಿಸಾಗಿ ಕಾಡುದಾರಿ ಸೀಳಿಹೋದರೆ ಅಲ್ಲಿ ಅಜ್ಜ ಮಗುವಂತೆ ಚಟ್ಟದ ಮೇಲೆ ಮಲಗಿದ್ದ. ಸೋರುವ ಮನೆಯ ಮಾಳಿಗೆಯಿಂದ ಪ್ರಾಣಪಕ್ಷಿ ಹಾರಿಹೋಗಿತ್ತು. ಅಜ್ಜ ಬಯಲಾಗಿ ಹೋಗಿದ್ದ.



(ತುಮಕೂರಿನಲ್ಲಿ ಕನ್ನಡ ಅಧ್ಯಾಪಿಕೆಯಾಗಿರುವ ಲೇಖಕಿ ಕವಯಿತ್ರಿ, ಕಥೆಗಾರ್ತಿ ಮತ್ತು ಸಾಹಿತ್ಯ ವಿಮರ್ಶಕಿಯೂ ಹೌದು)

ಹೆಣ್ಣುನೋಟ: ವರ್ತಮಾನದ ಕಣ್ಣೋಟ : ಒಂದು ಸಂವಾದ

–ವಿನಯಾ ಮತ್ತು
ಸಬಿತಾ ಬನ್ನಾಡಿ




ಕಳೆದ ಶತಮಾನದಲ್ಲಿ ವಿವಿಧ ಆವೃತ್ತಿಗಳಲ್ಲಿ ಪ್ರಚಲಿತವಾಗಿದ್ದ ಸ್ತ್ರೀವಾದ ಈ ಶತಮಾನದಲ್ಲಿ 'ಹೆಣ್ಣೋಟ; ಎಂಬ ಹೊಸದೊಂದು ಪರಿಕಲ್ಪನೆಗೆ ದಾರಿ ಮಾಡಿಕೊಟ್ಟಿದೆ. ಪರಿಕಲ್ಪನೆಯಾಗಿ ಇದು ಹೊಸದಾದರೂ, ಇದು ಸ್ತ್ರೀವಾದದ ಒಡಲಲ್ಲೇ ಚಿಗುರಿದ ಲೋಕದೃಷ್ಟಿಯಷ್ಟೇ ಎಂದೂ, ಇದು ನಮ್ಮ ಪರಂಪರೆಯುದ್ದಕ್ಕೂ ಕಂಡೂ ಕಾಣದಂತೆ ಅಂತರಗಂಗೆಯಂತೆ ಹರಿದು ಬಂದಿದೆಯೆಂದೂ ವಿವರಿಸಲಾಗುತ್ತಿದೆ. ಸ್ತ್ರೀವಾದದ ನಿರೂಪಣೆಯ ಹಲವು ವೈಖರಿಗಳು ಅದು ಪುರುಷ ವಿರೋಧಿ ಎಂಬ ಟೀಕೆಗೆ ಒಳಗಾದ ಹಿನ್ನೆಲೆಯಲ್ಲಿ ಗಂಡು ಹೆಣ್ಣು ಎರಡನ್ನೂ ಒಟ್ಟಿಗೆ ಸಮಾನವಾಗಿ ಮುನ್ನಡೆಸಬಲ್ಲ ಮಾತೃಹೃದಯದ ಈ ಹೆಣ್ಣೋಟ ನಿರೂಪಿತವಾಗಿದೆ ಎನ್ನುವ ಸಮಕಾಲೀನ ಸ್ತ್ರೀ ಚಿಂತನೆಗೆ ಸಂಬಂಧಪಟ್ಟಂತೆ ನಮ್ಮ ನಡುವಣ ಇಬ್ಬರು ಪ್ರತಿನಿಧಿಗಳಂತಿರುವ ವಿನಯಾ ಮತ್ತು ಸಬಿತಾ ಬನ್ನಾಡಿಯವರು ಈ ಸಂವಾದದಲ್ಲಿ ಈ ಹೊಸ ಲೋಕಮೀಮಾಂಸೆಯ ಹುಟ್ಟು, ಹರಹು, ಅರ್ಥ ಮತ್ತು ಪರಿಣಾಮ ಸಾಧ್ಯತೆಗಳನ್ನು ಸೋದಾಹರಣವಾಗಿ ವಿವರಿಸುವ ಪ್ರಯತ್ನ ಮಾಡಿದ್ದಾರೆ.-ಸಂ.



ವಿನಯಾ: ಸಬಿತಾ, ಹೆಣ್ಣುನೋಟ ಎಂಬ ಲೋಕಮೀಮಾಂಸೆಯ ಪರಿಕಲ್ಪನೆಯು ಮುನ್ನೆಲೆಗೆ ಬಂದಿರುವ ಕಾಲ ನಮ್ಮದು. ಇದು ಸ್ತ್ರೀವಾದಿ ಚಿಂತನಾ ಕ್ರಮದ ವಿಸ್ತರಣೆ ಅಥವಾ ಸ್ತ್ರೀವಾದದ ಒಡಲಲ್ಲಿ ಅರಳಿದ ಹೊಸ ತ್ರಾಣ. ಆದರೆ, ಈ ಎರಡೂ ಪರಿಕಲ್ಪನೆಗಳ ಪರಸ್ಪರದ ಕುರಿತು ಸ್ಪಷ್ಟತೆ ಬೇಕಿದೆ. ಆ ಬಗ್ಗೆ ಒಂದಿಷ್ಟು . . .**ಸಬಿತಾ:** ಸ್ತ್ರೀವಾದ ಹೊಸ ಸವಾಲುಗಳನ್ನು ಎದುರಿಸುತ್ತಿರುವ ನಮ್ಮ ಕಾಲದಲ್ಲಿ ಈಗೀಗ ಹೆಚ್ಚು ಚಲಾವಣೆಗೆ ಬರುತ್ತಿರುವ ಪರಿಕಲ್ಪನೆ ಹೆಣ್ಣುನೋಟ. ಇದು ಕೇವಲ ಬದಲಾದ ಪದವಲ್ಲ. ನೀವೇ ಹೇಳಿದಂತೆ ಇದು ಸ್ತ್ರೀವಾದದ ಒಡಲಲ್ಲಿ ಅರಳಿದ ಹೊಸ ತ್ರಾಣ. ಸರಿಸುಮಾರು ಇನ್ನೂರು ವರ್ಷಗಳ ಅವಧಿಯಲ್ಲಿ ಸ್ತ್ರೀವಾದ ಪ್ರತೀ ಕಾಲಘಟ್ಟದಲ್ಲೂ ತನ್ನನ್ನು ತಾನು ನವೀಕರಿಸಿಕೊಳ್ಳುತ್ತಾ ಹೋಗಿದೆ. ಸ್ವವಿಮರ್ಶೆಗೆ ಒಳಪಡಿಸಿಕೊಂಡಿದೆ. ಜಗತ್ತಿನಾದ್ಯಂತ ಈ ಪ್ರಕ್ರಿಯೆ ನಡೆದಿದೆ. ಮುಖ್ಯವಾಗಿ ಕಪ್ಪು ಸ್ತ್ರೀವಾದಿಗಳು ಎತ್ತಿದ ಪ್ರಶ್ನೆಗಳಿಂದಾಗಿ ಸ್ತ್ರೀವಾದ ಎನ್ನುವುದು ಸ್ತ್ರೀವಾದಗಳು ಎಂಬ ಬಹುತ್ವದ ನೆಲೆಗೆ ಚಾಚಿಕೊಳ್ಳಲು ನೆರವಾಯಿತು. ಭಾರತದಲ್ಲೂ ದಲಿತ ಸ್ತ್ರೀವಾದ ಈ ಪ್ರಶ್ನೆಗಳನ್ನು ಎತ್ತಿದೆ. ಇಷ್ಟೆಲ್ಲಾ ಬೆಳವಣಿಗೆಗಳ ನಡುವೆಯೂ, ಸ್ತ್ರೀವಾದವು ಕಣ್ಣನೋಟವಾಗಿ ಎಲ್ಲರಿಗೂ ಸರಿ ಅರ್ಥದಲ್ಲಿ ದಕ್ಕಿತು ಎಂದು ಹೇಳಲಾಗುವುದಿಲ್ಲ. ಉದಾ: ಸಮಾನತೆ ಎಂಬ ವಿಚಾರವನ್ನೇ ತೆಗೆದುಕೊಳ್ಳೋಣ. ಹೀಗೆ ಹೇಳಿದ ತಕ್ಷಣ ಪುರುಷನಿಗೆ ಸಮಾನವಾಗುವುದು ಎಂಬ ಅರ್ಥವೇ ಮುನ್ನೆಲೆಗೆ ಬರುತ್ತದೆ. ಆಗ ಪುನಃ ಪುರುಷನ ಪರಿಪ್ರೇಕ್ಷ್ಯದಲ್ಲೇ ಹೆಣ್ಣನ್ನು ನೋಡಿದಂತಾಗುತ್ತದೆ. ಎಷ್ಟೋ ಸಲ ಇದು ಹೆಣ್ಣಿನ ಪ್ರತಿನಿಧೀಕರಣಕ್ಕಷ್ಟೇ ಸೀಮಿತವಾಗಿಬಿಡುತ್ತದೆ. ಹೆಣ್ಣು ಎಲ್ಲೆಡೆ ಅವಕಾಶ ಪಡೆಯುತ್ತಿದ್ದಾಳೆ ಎಂಬ ಸಮಾಧಾನಕ್ಕೆ ಸಂಕುಚಿತಗೊಂಡಿತು. ಇದೆಲ್ಲವೂ ಮಾಡಿದ್ದೇನೆಂದರೆ, ಈಗಾಗಲೇ ಪುರುಷನ ಅನುಕೂಲದ ಕಣ್ಣಿನಿಂದ ನಿರ್ಮಿಸಿದ ಚೌಕಟ್ಟಿನೊಳಗೆ ಇವಳನ್ನು ತೂರಿಸಿಬಿಡುವುದು. ಅವಳು ಆ ಚೌಕಟ್ಟಿನೊಳಗೆ ಫಿಟ್ ಆಗುವುದಕ್ಕೆ ಒದ್ದಾಡುವುದು, ತಾನೂ ಅವನಷ್ಟೇ ಶಕ್ತಳು ಎಂಬುದನ್ನು ಅವನ ಮಾದರಿಯಲ್ಲೇ ಸಾಧಿಸಿ ತೋರಿಸುವುದು ಎಂಬ ಹೊಸ ಒತ್ತಡವನ್ನು ಹುಟ್ಟು ಹಾಕಿತು. ಮಾತ್ರವಲ್ಲ, ಎಷ್ಟೋ ಸಲ ಈ ಚೌಕಟ್ಟಿನಲ್ಲಿ ನಾನು ಅವನಿಗಿಂತ ಉತ್ತಮ ಎಂದು ತೋರಿಸುವುದಕ್ಕೆ ಅವನಿಗಿಂತ ಕಠಿಣಳಾಗುವುದು ಎಂಬ ಹುಸಿತನಕ್ಕೆ ಅವಕಾಶ ಮಾಡಿಕೊಟ್ಟಿತು. ಹೆಣ್ಣುನೋಟ ಈ ಬಗೆಯದಲ್ಲ. ಅದು ಇಡೀ ಚೌಕಟ್ಟಿನಲ್ಲೇ ದೋಷವಿದೆ ಮತ್ತು ಅದನ್ನು ಎಲ್ಲರನ್ನೂ ಒಳಗೊಳ್ಳುವ, ಒತ್ತಡಕ್ಕಿಂತ ಹೆಚ್ಚಾಗಿ ಕ್ರೀಯಾಶೀಲತೆಯನ್ನು ಉದ್ದೀಪಿಸುವ, ವಿನಾಶಕಾರಿಯಲ್ಲದ ಸಾಮುದಾಯಿಕವಾದ ಏಳಿಗೆಗೆ ಪೂರಕವಾದ ಸಾರ್ವಜನಿಕ ಸಂಸ್ಥೆಗಳನ್ನು ರೂಪಿಸುವ ಗುರಿಯದು. ಇಲ್ಲಿ ಹೆಣ್ಣು ಅಥವಾ ಗಂಡು ಬಯಸುವುದು ಸಮಾನತೆಯಲ್ಲ, ಬದಲಿಗೆ ಸಮಾನ ಮೌಲ್ಯವನ್ನು.

ವಂದನಾಶಿವ ಒಂದು ಮಾತು ಹೇಳುತ್ತಾರೆ. ನಮ್ಮ ಆರ್ಥಿಕತೆಯು ಲಾಭ ನಷ್ಟವನ್ನು ದಾಟಿ, 'ಕೊಡುವುದು, ಪ್ರೀತಿಸುವುದು, ಹಂಚಿಕೊಳ್ಳುವುದು ಮತ್ತು ಕಾಳಜಿ ವಹಿಸುವುದು' ಎಂಬೆಡೆಗೆ ಹೆಚ್ಚು ಗಮನ ಕೊಡಬೇಕು ಅಂತ. ಶೇರ್ ಮಾರ್ಕೆಟ್ ಎಂಬ ಗಂಡು ರೂಪಿಸಿದ ಚೌಕಟ್ಟಿನೊಳಗೆ ನುಗ್ಗಿ ಹೆಣ್ಣು ಕೂಡಾ ಲಾಭ ಮಾಡಿಕೊಳ್ಳುವುದು ಹೆಣ್ಣುನೋಟದ ಗುರಿಯಲ್ಲ. ಶೇರ್ ಮಾರ್ಕೆಟ್ ಎಂಬ ಚೌಕಟ್ಟೇ ಸರಿ ಇಲ್ಲ, ನಾನು ಇನ್ನೊಂದು ದಾರಿ ತೋರುತ್ತಿದ್ದೇನೆ, ಆ ದಾರಿಯಲ್ಲಿ ಜೊತೆಯಾಗಿ ಹೋಗೋಣ ಎಂಬ ಹೆಣ್ಣಿನ ಮಾತಿಗೆ ಮನ್ನಣೆ ಸಿಗಬೇಕಾಗಿರುವುದು ಇದರ ಗುರಿ.




ಎಚ್.ಎಸ್. ಶ್ರೀಮತಿ


ಮೊದಲಿನಿಂದಲೂ, ಸಹನೆ, ಸಂಕೋಚ, ನಾಚಿಕೆ, ತಗ್ಗಿಬಗ್ಗಿ ನಡೆಯುವುದು, ತ್ಯಾಗ, ಅಳುಬುರುಕತನ ಇತ್ಯಾದಿಗಳನ್ನೆಲ್ಲ ಹೆಣ್ತನ ಅಂತಲೂ, ಧೈರ್ಯ, ಮುನ್ನುಗ್ಗುವುದು, ಕಾದಾಟ, ರಕ್ಷಿಸುವುದು, ಆಳುವುದು ಇದೆಲ್ಲ ಗಂಡುತನ ಅಂತಲೂ ಕೃತಕವಾದ ಕೋಶದೊಳಗೆ ಇಟ್ಟಿದ್ದರಲ್ಲ, ಅದನ್ನು ಅಳಿಸಿ ಇದು ಇಬ್ಬರಲ್ಲೂ ಇರಬಹುದಾದದ್ದು ಮತ್ತು ಇದು ಅಧಿಕಾರ ಚಲಾಯಿಸಲು ಇರುವ ಪರವಾನಗಿ ಅಲ್ಲ ಎಂಬುದನ್ನು ವಿವರಿಸಿ ಹೇಳುವುದು 'ಹೆಣ್ಣುನೋಟ' ಎಂಬ ಪರಿಕಲ್ಪನೆ. ಇದು ಹೆಣ್ಣಿನ ನೋಟ ಅಲ್ಲ. ಬದಲಿಗೆ ಹೆಣ್ಣುನೋಟ. ಅಂದರೆ, ಇದನ್ನು ಯಾರು ಬೇಕಾದರೂ ಹೊಂದಬಹುದು. ಮತ್ತು ಎಷ್ಟೋ ಸಲ ಹೆಣ್ಣು ಈ ನೋಟವನ್ನು ಹೊಂದದೆಯೂ ಇರಬಹುದು. ಹೆಣ್ಣಿನ ಸಮಸ್ಯೆಯನ್ನು ಗಂಡನ್ನು ಇದಿರಾಗಿಸಿ ನೋಡುವ ಆರಂಭಿಕ ಹೆಜ್ಜೆಗಳನ್ನು ದಾಟಿ ಇದು ಮುನ್ನಡೆದಿದೆ. ಇದೊಂದು ಲೋಕಗ್ರಹಿಕೆಯ ಕ್ರಮವಾಗಿದೆ. ಗಂಡು ಇದುವರೆಗೂ ಚಲಾವಣೆಗೆ ತಂದ ನೋಟಕ್ಕೂ, ಇದಕ್ಕೂ ಇರುವ ವ್ಯತ್ಯಾಸದ ಮೂಲಕ ನಾವಿದನ್ನು ತಿಳಿಯಬಹುದು. ಗಂಡಾಳಿಕೆಯ ನೋಟವು ತನ್ನನ್ನು ಕೇಂದ್ರವಾಗಿರಿಸಿಕೊಂಡು ಜಗತ್ತನ್ನು ಪರಿಭಾವಿಸುತ್ತದೆ. ಆಗ ಅದಕ್ಕೆ ಎದುರಿಗಿರುವ ಎಲ್ಲವೂ – ಹೆಣ್ಣನ್ನೂ ಸೇರಿಸಿಕೊಂಡು– ತಾನು ನಿಯಂತ್ರಿಸಬಹುದಾದ, ನಿಯಂತ್ರಿಸಬೇಕಾದ ವಸ್ತುವಾಗಿ ಕಾಣಿಸುತ್ತದೆ. ಆದರೆ ಹೆಣ್ಣುನೋಟವು ತನ್ನ ಬದುಕಿನೊಂದಿಗೆ ಹೆಣೆದುಕೊಂಡಿರುವ ಸುತ್ತಲಿನ ಎಲ್ಲ ಜೀವಿಗಳು, ಸಂಗತಿಗಳನ್ನು 'ಒಳಗೊಂಡು' ಲೋಕವನ್ನು ಗ್ರಹಿಸುತ್ತದೆ. ಇಲ್ಲಿ ಯಾವುದೂ ಕೇವಲ ವಸ್ತುವಲ್ಲ, ಸಾಂಗತ್ಯವಾಗಿರುತ್ತದೆ. ಗಂಡಿನ ದಬ್ಬಾಳಿಕೆಯನ್ನು ಇದು ನಿರಾಕರಿಸುತ್ತದೆ. ಆದರೆ ಗಂಡಿನ ಜಾಗದಲ್ಲಿ ಹೆಣ್ಣು ಯಜಮಾನಿಕೆಯನ್ನು ಇದು ಹೇಳುವುದಿಲ್ಲ. ಹಾಗಾಗಿ ಇಲ್ಲಿ ಯಾವುದೂ ಯಜಮಾನಿಕೆಯ ಕೇಂದ್ರಕ್ಕೆ ಬರುವುದಿಲ್ಲ. ಇದು ತಾಯಿಗುಣವನ್ನು ಮುನ್ನೆಲೆಗೆ ತರುತ್ತದೆ. ತಾಯ್ತನದ ವೈಭವೀಕರಣವನ್ನು ಪ್ರಶ್ನಿಸುತ್ತದೆ.

ವಿನಯಾ: ಹೆಣ್ಣುನೋಟ ಎಂಬ ಪರಿಭಾಷೆಯ ಬಗ್ಗೆ ಸಾಂಸ್ಕೃತಿಕ ವಿಮರ್ಶೆ ತೋರುತ್ತಿರುವ ಸಹಮತ, ಸ್ತ್ರೀವಾದ ಎಂಬ ಪರಿಭಾಷೆಯ ಬಗ್ಗೆ ಇರಲಿಲ್ಲ ಅನ್ನಿಸ್ತಿದೆ ಅಲ್ವಾ? ಇದಕ್ಕೆ ಕಾರಣ ಏನಿದ್ದೀತು? ಸ್ತ್ರೀವಾದಿ ತಾತ್ತ್ವಿಕತೆಯನ್ನು 'ಆಮದು ಚಿಂತನೆ' ಎಂದು ಗ್ರಹಿಸಿಕೊಂಡಿದ್ದಿರಬಹುದು. ಸ್ತ್ರೀವಾದವು ಸ್ಥಾಪಿತ ಏಕಪಕ್ಷೀಯತೆಯನ್ನು ತೀಕ್ಷ್ಣವಾಗಿ ಪ್ರಶ್ನಿಸಿದ್ದರಿಂದ ಪುರುಷ ವಿರೋಧಿ ಅನ್ನಿಸಿದ್ದಿರಬಹುದು. ೬೦–೭೦ರ ದಶಕದ ಪಾಶ್ಚಿಮಾತ್ಯ ಸ್ತ್ರೀವಾದದ ಹಲವು ಎಳೆಗಳು ನಿಷ್ಠುರವಾಗಿದ್ದುದು ಇರಬಹುದು. ಆದರೆ ವಾಸ್ತವವಾಗಿ ಸ್ತ್ರೀವಾದಿ ತಾತ್ವಿಕತೆಯು ತೆರೆದ ಬೆಳಕಿಂಡಿ ಲೋಕಮೀಮಾಂಸೆಯನ್ನೂ ಕಲಾ ಮೀಮಾಂಸೆಯನ್ನು ರೂಪಿಸುವ ಹೊಸ ದೃಷ್ಟಿಕೋನವೇ ಆಯಿತು ಅಲ್ಲವೇ?

ಸಬಿತಾ: ಹೌದು. ಬಹಶಃ ನಮ್ಮ ತಲೆಮಾರಿನ, ಸ್ತ್ರೀವಾದದ ಬಗೆಗೆ ಮಾತಾಡುವ ಎಲ್ಲರೂ ಸಮಾನವಾಗಿ ಎದುರಿಸಿದ ಸನ್ನಿವೇಶ ಅಂದ್ರೆ ಎಲ್ಲೇ ಮಹಿಳಾ ಚಿಂತನೆ





ಕುರಿತು ಮಾತಾಡಿದ್ರೂ ದೊಡ್ಡ ಗುಂಪಿನ ಮುಂದೆ ಒಂಟಿಯಾಗಿ ಸಮರ್ಥಿಸಿಕೊಳ್ಳುವ ಜರೂರತ್ತು. ಎಲ್ಲಾ ಕಡೆಯೂ ಒಂದೇ ರೀತಿಯ ಪ್ರತಿಕ್ರಿಯೆ ಮತ್ತು ಒಂದೇ ರೀತಿಯ ಪ್ರಶ್ನೆಗಳು. ಇದು ಏನು ಹೇಳುತ್ತೆ? ಅವರು ಕೇಳಿಸಿಕೊಳ್ಳಲೂ ಸಿದ್ಧರಿರಲಿಲ್ಲ ಎನ್ನುವುದನ್ನು. ಕಣ್ಣಿಗೆ ಕಾಣದ ಗಂಡು ಮೇಲುರಿಮೆಯು, ಹೆಂಗಸರು ಹೇಳುತ್ತಿರುವ ಮಾತು ನ್ಯಾಯಸಮ್ಮತವಾದದ್ದು ಎಂದು ಒಪ್ಪಿಕೊಳ್ಳಲು ಬಿಡುವುದಿಲ್ಲ. ಸಮಸ್ಯೆ ಎಂದರೆ, ಸ್ತ್ರೀವಾದವನ್ನಾಗಲೀ, ಹೆಣ್ಣುನೋಟವನ್ನಾಗಲೀ ಪರಿಕಲ್ಪನಾತ್ಮಕವಾಗಿ ಅರ್ಥೈಸಿಕೊಂಡು ಭಿನ್ನಮತ ಎತ್ತುತ್ತಿದ್ದಾರೆ ಅನ್ನಿಸುತ್ತಿಲ್ಲ. ಯಾಕೆಂದರೆ, ಯಾರು ಅರ್ಥೈಸಿಕೊಂಡಿದ್ದಾರೋ ಅವರು ಸಂವಾದಕ್ಕೆ ಬಂದಿದ್ದಾರೆಯೇ ಹೊರತು, ಸಂಘರ್ಷಕ್ಕೆ ಬಂದಿಲ್ಲ. ಇನ್ನು ಆಮದು ಚಿಂತನೆ ಎಂಬುದು ನಿರಂತರವಾಗಿ ಬಂದ ಆರೋಪ. ಹೀಗೆ ಹೇಳುವವರು, 'ನೀವು ಹಳ್ಳಿ ಹೆಂಗಸರನ್ನು ನೋಡಿ. ಕೆಳವರ್ಗದ ಸ್ತ್ರೀಯರು ಎಷ್ಟು ಸ್ವತಂತ್ರರಾಗಿದ್ದಾರೆ ನೋಡಿ. ಮಧ್ಯಮ ವರ್ಗದ ಕೆಲಸವಿಲ್ಲದ ಹೆಂಗಸರ ಸುಳ್ಳು ಸಮಸ್ಯೆ ಬಿಟ್ಟು ಕೂಲಿ ಕಾರ್ಮಿಕರನ್ನು ನೋಡಿ' ಎಂದೆಲ್ಲಾ ಹೇಳುತ್ತಾರಾದರೂ ಸ್ವತಃ ಅವರಿಗೇ ಅವರು ಉಲ್ಲೇಖಿಸುತ್ತಿರುವ ಮಹಿಳೆಯರ ಸ್ಥಿತಿಯ ನಿಜ ಚಿತ್ರಣ ತಿಳಿದಿರುತ್ತಿರಲಿಲ್ಲ.

ಸ್ತ್ರೀವಾದ ಎಂದಿಗೂ ಪುರುಷವಿರೋಧಿಯಾಗಿರಲೇ ಇಲ್ಲ. ಅದನ್ನು ತೀಕ್ಷ್ಣವಾಗಿಯಾದರೂ ಹೇಳಿರಬಹುದು, ನಿಷ್ಠುರವಾಗಿಯಾದರೂ ಇದ್ದಿರಬಹುದು. ಯಾವುದು ಅತಿರೇಕ ಅನ್ನಿಸಿದೆಯೋ ಅದು ಸಾಧ್ಯತೆಯೂ ಆಗಿತ್ತು. ಇದನ್ನು ಪುರುಷವಿರೋಧಿಯೆಂದು ಭಾವಿಸುವುದು ಅನವಶ್ಯಕ. ಹೆಣ್ಣು ಎದುರಿಸಿದ/ಎದುರಿಸುತ್ತಿರುವ ತಾರತಮ್ಯ, ಹಿಂಸೆ, ಕ್ರೌರ್ಯ ಇವುಗಳನ್ನೆಲ್ಲಾ ಮೆಲು ಮಾತಿನಲ್ಲಿ, ವಯ್ಯಾರದಲ್ಲಿ ಹೇಳಲಾಗುವುದಿಲ್ಲ. ಹಾಗೆ ಹೇಳಬೇಕೆಂದು ನಿರೀಕ್ಷಿಸುವುದೂ ಕ್ರೌರ್ಯವೇ. ಇಲ್ಲೊಂದು ವೈರುಧ್ಯವಿದೆ. ಮೂಕ ಹಸುವಿನಂತೆ ದುಡಿಯುವ, ಎಂದಿಗೂ ಎದುರು ಮಾತಾಡದ ಹೆಂಗಸರ ಮೇಲೇ ಹೆಚ್ಚು ದೌರ್ಜನ್ಯ ನಡೆಯುತ್ತಿರುತ್ತದೆ. ಮತ್ತು ಈ ದೌರ್ಜನ್ಯವನ್ನು ಸಹಿಸಿಕೊಂಡು ಮುಖದಲ್ಲಿ ನಗು ಧರಿಸಿ ಮುಚ್ಚಿಡುವುದೇ 'ಹೆಣ್ತನ' ಎಂದು ನಿರೂಪಿಸಲಾಗುತ್ತದೆ. ಹೀಗಿರುವಾಗ ಸ್ತ್ರೀವಾದ ಇದನ್ನೆಲ್ಲಾ ಸಾರ್ವಜನಿಕಗೊಳಿಸಿದ್ದನ್ನು ಸ್ವೀಕರಿಸುವುದು ಸಾಧ್ಯವಾಗಲಿಲ್ಲ. ಒಂದೆಡೆ ತಮ್ಮ ಸವಲತ್ತುಗಳನ್ನು ಕಳೆದುಕೊಳ್ಳುವ ಭಯ, ಇನ್ನೊಂದೆಡೆ ತಮ್ಮ ನಿಯಂತ್ರಣವನ್ನು ಬಿಟ್ಟುಕೊಡಬೇಕಾಗುವ ದುಃಖ, ಮತ್ತೊಂದೆಡೆ ದಮನಿಗಳಲ್ಲಿ ಹರಿದಾಡುತ್ತಿರುವ ಅಹಂಕಾರಗಳು ಸ್ತ್ರೀವಾದವನ್ನು ಅಷ್ಟು ಸುಲಭಕ್ಕೆ ಒಪ್ಪಿಕೊಳ್ಳಲು ಸಾಧ್ಯವಾಗಿಸಲಿಲ್ಲ. ಈಗೀಗ ಒಂದು ಹಂತದ ಸ್ವೀಕೃತಿ ಶುರುವಾಗಿದೆ.

ಆದ್ರೆ, ವಿನಯಾ, ನೀವು ಹೇಳಿದ್ರಲ್ಲ ಇದು ಲೋಕಮೀಮಾಂಸೆಯನ್ನೂ ಕಲಾಮೀಮಾಂಸೆಯನ್ನೂ ರೂಪಿಸುವ ಹೊಸ ದೃಷ್ಟಿಕೋನ ಆಯ್ತು ಅಂತ, ಅದ್ರ ಬಗ್ಗೆ ನಮ್ಮ ಗಮನ ಹೋಗಿದ್ದು ತುಂಬಾ ಕಡಿಮೆ ಅಲ್ವಾ?

ವಿನಯಾ: ಹೌದು. ನಾವು ಗಮನಿಸಿದ್ದು ಕಡಿಮೆಯೇ. ಆದ್ರೆ, ಒಂಚೂರು ೭೦ರ ದಶಕದ ನಂತರದ ಸಾಮಾಜಿಕ ಬೆಳವಣಿಗೆಗಳನ್ನು ಗಮನಿಸಿ. 'ಟುವರ್ಡ್ಸ್ ಈಕ್ವಾಲಿಟಿ'ಯ ಹಕ್ಕೊತ್ತಾಯಗಳ ಪರಿಣಾಮವಾಗಿ, ಸರ್ಕಾರಗಳು ಮಹಿಳಾ ಪರವಾಗಿರುವ ಸೆನ್ಸಿಬಿಲಿಟಿಯನ್ನು ಪ್ರಕಟಿಸಬೇಕಾಯ್ತು. ಭಾಂವ್‌ರಿದೇವಿ ಕೇಸ್‌ನಲ್ಲಿ, ಮಥುರಾ ಕೇಸ್‌ನಲ್ಲಿ, ಕುದುರೆಮೋತಿ ಪ್ರಕರಣಗಳಲ್ಲಿ ನ್ಯಾಯಾಂಗ ಕೊಟ್ಟ ತೀರ್ಪುಗಳ ವಿರುದ್ಧ ನಡೆದ ಚಳುವಳಿಯನ್ನು ಗಮನಿಸಿ – ತೀರ್ಪು ಬದಲಾಗಲಿಲ್ಲ. ಆದರೆ ಅದನ್ನು ತಪ್ಪು ಎಂದು ಬಿಂಬಿಸಲು ಮಹಿಳಾ ಚಳುವಳಿ ಯಶಸ್ವಿಯಾಯಿತು. ಈ ಅವಧಿಯಲ್ಲಿ ಸಾಮಾಜಿಕವಾದ ದುಡಿಮೆಗಾರಿಕೆಗೆ ಬರುತ್ತಿದ್ದ ಮಹಿಳೆಯರಿಗೆ ಇವೆಲ್ಲವೂ ನೈತಿಕ ಸಪೋರ್ಟ್ ಆಗಿತ್ತು. ಹೆಣ್ಣು ಎಂಬ ಕಾರಣಕ್ಕಾಗಿ ಅನುಭವಿಸುವ ಹಿಂಸೆಗಳ ಹಲವು ಪದರುಗಳು ಅನಾವರಣವಾಗತೊಡಗಿದವು. ಪ್ರಶ್ನಾರ್ಹವಾಗತೊಡಗಿದವು. ಇದು ಸ್ಥಾಪಿತ ಪುರುಷ ಪ್ರಾಬಲ್ಯವನ್ನು ಮುಜುಗರಕ್ಕೀಡು ಮಾಡುತ್ತ, ಆತ್ಮನಿರೀಕ್ಷಣೆಗೆ ಒತ್ತಾಯಿಸಿತು. ಇದು ಒಂಥರಾ, ಸಾರಿಗೆ ವ್ಯವಸ್ಥೆ ಬಂದು ಜಾತೀಯತೆಯನ್ನು ಲೇವಡಿ ಮಾಡ್ತು ಅಂತಾರಲ್ಲ ಹಾಗೆ. ಮನೆಯಲ್ಲಿ ಹೆಂಡತಿಯಾದವಳು, ಶಾಲೆಯಲ್ಲಿ ಸಹೋದ್ಯೋಗಿಯಾದಾಗ ಅವಳ ಈ ಎರಡು ಚಹರೆಗಳನ್ನು ನಿಭಾಯಿಸಲು ಗಂಡು ಅನುಭವಿಸಿದ ಪಡಿಪಾಟಲು ಮತ್ತು ಈ ಪಲ್ಲಟಗಳಿಗೆ ತನ್ನನ್ನು ಹೊಂದಿಸಿಕೊಂಡ ಗಂಡು ಪ್ರಜ್ಞೆಯಲ್ಲಿಯೂ ಲೋಕಮೀಮಾಂಸೆಯ ಚಿತ್ರಣ ಬದಲಾಯಿತು. ಸ್ಥಾಪಿತ ಸಾಮಾಜಿಕ ಚೌಕಟ್ಟು ಕದಲಿತು. ಇದನ್ನು ಆಧುನಿಕತೆಯ ಪರಿಣಾಮ ಅಂತ ಮಾತ್ರ ಗುರುತಿಸ್ತೀವಿ. ಆದ್ರೆ ಅದು ಆಧುನಿಕತೆಯ ಒಡಲಲ್ಲಿ ಬೆರೆತು ಬೆಳೆದ ಸ್ತ್ರೀವಾದಿ ಚಿಂತನೆಯ ಅಂತಃಸತ್ವವಾಗಿತ್ತು. ಆದರೆ, ಈ ಬೆರಕೆ ಸಂಘರ್ಷದ್ದಾಗಿತ್ತೆಂಬುದನ್ನು ಮರೆಯುವಂತಿಲ್ಲ.

ಸಾಹಿತ್ಯ ಕಲೆಗಳ ಸಂದರ್ಭದಲ್ಲಿ ನಡೆದ ಮೂಲಭೂತ ಪಲ್ಲಟಗಳು ಒಟ್ಟು ಆಲೋಚನಾ ವಿಧಾನವನ್ನು ಮಹಿಳಾ ಪರವಾಗಿಸಲು ಶ್ರಮಿಸಿವೆ. ಮರೆವಿಗೆ ಸಂದ ಮಹಿಳಾ ಚರಿತ್ರೆಯ ಮರು ನಿರ್ಮಿತಿಯು ನಡೆಯಿತು. ಪರಂಪರೆಯುದ್ದಕ್ಕೂ ಹೆಣ್ಣನ್ನು ಭೋಗದ ಸರಕಾಗಿಸಿಕೊಂಡು ಬಂದ ಸ್ತ್ರೀವಿರೋಧಿ ನೆಲೆಗಳನ್ನು ಪ್ರಶ್ನಿಸಲಾಯಿತು. ಈ ಸೈದ್ಧಾಂತಿಕ ಒತ್ತಾಯಗಳಿಂದಾಗಿ; ಹೆಣ್ಣುಲೋಕದ ಕುರಿತು ಎಚ್ಚರದ ಸ್ಪಂದನೆಯು ನಡೆಯಿತು. ಇದೊಂದು ಅರಿವಾಗಿ ಸೃಜನಶೀಲತೆಯ ಶಕ್ತಿಯಾಗಿ ಪರಿಗಣಿತವಾಯಿತು. ಎಷ್ಟರಮಟ್ಟಿಗೆ ಎಂದರೆ, ಈಗಿನ ಒಂದು ಕತೆಯನ್ನೋ ಕವಿತೆಯನ್ನೋ ಬರಹಗಾರರ ಹೆಸರಿಲ್ಲದೆ ಇಟ್ಟರೆ, ಅದನ್ನು ಗಂಡು ಬರಹ – ಹೆಣ್ಣು ಬರಹ ಎಂದು ಗುರುತಿಸಲು ಸಾಧ್ಯವಿಲ್ಲ. ಇದು ಸ್ತ್ರೀವಾದಿ ಚಿಂತನೆಯು ಸೃಜನಶೀಲತೆಯ ಅಂತಃಸತ್ವವಾಗಿ ಕಲೆತು ಹೆಣ್ಣುನೋಟವಾಗಿ ಅರಳುತ್ತಿರುವುದರ ನಿದರ್ಶನ. ಲೋಕಸಂಕಟಗಳಿಗೆ ಹೆಣ್ಣನ್ನು ಮಾನದಂಡವಾಗಿಸಿಕೊಳ್ಳುವಾಗಲೂ ಈ ಒತ್ತಡವೇ ಇರುವುದು. ಪುಟ್ಟಕ್ಕನ ಹೈವೇ, ದ್ವೀಪದಂತಹ ಸಿನಮಾಗಳು, ಒಂದು ತುಂಡು ಗೋಡೆ, ಸರ್ಕಸ್ಸಿನಲ್ಲೊಂದು ಹರಿಗೆಯಂಥ ಕಥೆಗಳು ಕಾಣಿಸಿದ್ದು ಈ ಪ್ರಬುದ್ಧತೆಯನ್ನೇ. ಈ ದೃಷ್ಟಿಯಿಂದ ಸಾಹಿತ್ಯ ಕಲೆಯ ಲೋಕವನ್ನು ಮರುಪ್ರವೇಶ ಮಾಡಬೇಕಿದೆ.

ಸಬಿತಾ: ಅಂದರೆ, ಹೆಣ್ಣುನೋಟ ಎಂಬ ಚಿಂತನಾಕ್ರಮ ಕೇವಲ ತಾತ್ವಿಕವಾಗಿಯಷ್ಟೇ ಅಲ್ಲ, ಜೀವನಾನುಭವದೊಳಗೇ ಕುಡಿಯೊಡೆಯುವಂತದ್ದೂ ಆಗಿರುತ್ತೆ.

ವಿನಯಾ: ಹೆಣ್ಣುನೋಟ ಎಂಬ ಚಿಂತನಾಕ್ರಮವು ಈ ಕಾಲದ ಪರಿಘದ ಉತ್ಪನ್ನ ನಿಜ. ಕನ್ನಡದಲ್ಲಿ ಎಚ್. ಎಸ್. ಶ್ರೀಮತಿಯವರು ತಮ್ಮ ಕೃತಿಗಳಲ್ಲಿ ಈ ಚರ್ಚೆಯನ್ನು ಮುನ್ನೆಲೆಗೆ ತಂದರು. ಆದರೆ, ಅಂತಹದೊಂದು ಜೀವದಾಯಿನಿ ಗುಣ, ಹೆಣ್ಣನ್ನು ಒಳಗೊಳ್ಳುವ ಗುಣ, ಅವಳನ್ನು ಬಳಕೆಯ ಪದಾರ್ಥವಾಗಿ ಮಾತ್ರ ನೋಡದ ಗುಣ – ಒರತೆಯ ನೀರಿನಂತೆ ಸಾಹಿತ್ಯ – ಸಂಸ್ಕೃತಿಯ ಚರಿತ್ರೆಯುದ್ದಕ್ಕೂ ಹರಿದಿದೆ ಅನಿಸುತ್ತದೆ. ಯಾಕೆಂದರೆ ಹೆಣ್ನೋಟ ಎನ್ನುವುದು ಸಂವೇದನಾಶೀಲತೆಯ ಚಹರೆಯೇ ಅಲ್ಲವೇ? ಹೆಣ್ಣಿಗೆ ಈ ಲೋಕ ಕಾಣುವ ಕ್ರಮ ಮತ್ತು ಅವಳದನ್ನು ಹದಗೊಳಿಸಿಕೊಳ್ಳುವ ಕ್ರಮ ಬೇರೆಯೇ ಎಂದು ದಾಖಲಿಸಿದ್ದು ಮಹಿಳಾ ಸಂವೇದನೆ ಮಾತ್ರವೇ ಅಲ್ಲವಲ್ಲ. ಕನ್ನಡದ ಓದುಗರಿಗೆಲ್ಲರಿಗೂ ಗೊತ್ತಿರುವ ಮಾಸ್ತಿಯವರ 'ಸುಬ್ಬಣ್ಣ'ದಲ್ಲಿ – ಸುಬ್ಬಣ್ಣ, ಮಡದಿ ಲಲಿತೆಯೊಂದಿಗೆ ದೇಶಾಂತರ ಹೋಗಿಯಾದ ಎಷ್ಟೋ ಕಾಲದ ನಂತರದ ಒಂದು ಘಟನೆಯಿದೆ. ಸುಬ್ಬಣ್ಣನ ತಂದೆ ತಾಯಿಯರು ಮುಪ್ಪಿನೊಂದಿಗೆ ಈ ವ್ಯಾಕುಲವನ್ನು ಅನುಭವಿಸುತ್ತಿದ್ದಾರೆ. ಆದರೆ ತಾಯಿ, 'ಮಗ ಸೊಸೆ ಎಲ್ಲಾದರೂ ಸುಖವಾಗಿರಲಿ' ಎಂದುಕೊಳ್ಳುತ್ತಾಳೆ. ನಾರಾಯಣಾಚಾರ್ಯರು ಮಾತ್ರ 'ನಮಗಿಲ್ಲದ್ದು ಹೇಗಿದ್ದೇನು?' ಅಂದುಕೊಳ್ಳುತ್ತಾರೆ ಒಂದು ಕ್ಷಣ ಮನಸ್ಸು ನಿಂತು ಬಿಡುತ್ತದೆ. ಇಂಥಲ್ಲಿ, ಇದು ಆಧುನಿಕತೆಯ ತಿಳಿವು ಅಂತನೂ ಅಲ್ಲ. ಜೀವಭಾವ ಹೆಣ್ಣಾಗದೇ, ಭಕ್ತಿ ಹದವಾಗದು ಎಂಬ ಭಕ್ತಿ ಪರಂಪರೆ ನೆನಪಾಗುತ್ತದೆ. ಭಕ್ತ ಕವಿ ಲಕ್ಷ್ಮೀಶ – ಮಗು ಸರ್ಪದ ಹೆಡೆ ಹಿಡಿದಂತೆ ಸೀತೆ ರಘುರಾಮನ ಕೈ ಹಿಡಿದಳು – ಎನ್ನುತ್ತಾನಲ್ಲಾ.

ಸಬಿತಾ: ಇದರ ಎಳೆಗಳು ನಮ್ಮ ಪರಂಪರೆಯಲ್ಲೂ ಸಿಗುತ್ತವೆ. ಆದರೆ ಅವು ಸಾಮುದಾಯಿಕ ಆಲೋಚನಾ ಕ್ರಮವಾಗಿ ಹೊಮ್ಮಿ ಬರಲಿಲ್ಲ. ಅಲ್ಲಲ್ಲಿ ಒಂಟಿ ನಡೆಗಳಾಗಿ ಕಾಣುತ್ತವೆ. ನೀವು ಹೇಳಿದ ಲಕ್ಷ್ಮೀಶನ ಜೊತೆಗೆ ನಮ್ಮ ಅಕ್ಕಮಹಾದೇವಿ, ಕಾರಂತರ ಸರಸಮ್ಮನ ಸಮಾಧಿ, ಮೈಮನಗಳ ಸುಳಿಯಲ್ಲಿ ಎತ್ತುವ ಪ್ರಶ್ನೆಗಳು. . . ಇಂತವು ಹಲವು ನೆನಪಾಗುತ್ತೆ

ಆದರೆ, ಆಧುನಿಕ ಕಾಲದಲ್ಲಿ ಹೆಣ್ಣುಮಕ್ಕಳಿಗೆ ಸಾರ್ವಜನಿಕವಾಗಿ ಸಿಕ್ಕಿದ ಅವಕಾಶಗಳಿಂದಾಗಿ ಅವರು ಒಂದು ಸಮುದಾಯವಾಗಿ ಆಲೋಚನೆ ಮಾಡುವ ಅನುಕೂಲ ಸಿಕ್ಕಿತು. ಮುಖ್ಯವಾಗಿ, 'ಪರ್ಸನಲ್ ಈಸ್ ಪೊಲಿಟಿಕಲ್' ಎಂಬ ಘೋಷವಾಕ್ಯ ಬಹಳ ದೊಡ್ಡ ಪಲ್ಲಟ. ಹೀಗಾಗಿ ಆತ್ಮಕಥನಗಳು, ಹೊಸ ಚರಿತ್ರೆಗಳೂ, ಅಸ್ತ್ರಗಳೂ, ಹೊಸ ಜೀವನ ನೋಟಗಳೂ ಆಗಿ ಮುನ್ನೆಲೆಗೆ ಬಂದವು. 'ಒಂಟಿ ಹೆಣ್ಣು'ಗಳ ಅನುಭವಗಳು ದನಿಗಳನ್ನು ಪಡೆಯುತ್ತಾ ಹೋದಂತೆ 'ಹೆಣ್ಣುಲೋಕ'ವನ್ನು ಆವರಿಸಿದ್ದ ವಿಸ್ಮೃತಿಯು ಹರಿಯಲು ತೊಡಗಿತು. ಪ್ರಜ್ಞಾ ಜಾಗೃತಿಯ ಸ್ಪಷ್ಟ ಸೂಚನೆಗಳು ಕಾಣತೊಡಗಿದವು' ಅಂತ ಎಚ್.ಎಸ್.ಶ್ರೀಮತಿ ಹೇಳ್ತಾರೆ. ಇದನ್ನೇ ಅವರು, ಹೆಣ್ಣುನೋಟದ ರಾಜಕಾರಣ ಅಂತಾರೆ. ಅಂದ್ರೆ, ಇದು ಒಂದು ನಿರ್ದಿಷ್ಟ ಹೆಣ್ಣಿನ ಹಲಕೆಲವು ಸಂದರ್ಭಗಳನ್ನು ನಿಭಾಯಿಸಲು ಒದಗುವ ತಂತ್ರಗಾರಿಕೆಯಾದರೆ, ಸ್ತ್ರೀವಾದೀ ದೃಷ್ಟಿಕೋನವು ಒಟ್ಟಾರೆಯ ಮಹಿಳಾ ಸಮುದಾಯದ ಪ್ರಶ್ನೆಗಳನ್ನು ಎದುರಿಸಲು ಅಗತ್ಯವಾದ ತಂತ್ರಗಾರಿಕೆ ಅಂತಾರೆ. ಇದೇನಂದ್ರೆ ಅದುವರೆಗೂ ನಿರೂಪಿತವಾದ ಜ್ಞಾನ ಮಾದರಿಗಳನ್ನು ನಿರಾಕರಿಸಿ ಹೆಂಗಸರ ವೈಯಕ್ತಿಕ ಅನುಭವಗಳಿಗೂ ಮಾನ್ಯತೆಯನ್ನು ದೊರಕಿಸಿಕೊಳ್ಳಲು ಹೆಂಗಸರು ಯಶಸ್ವಿಯಾದದ್ದರ ಕಥನ.

ಇಷ್ಟಾಗಿಯೂ, ಹೆಣ್ಣುನೋಟವೆಂಬ ತಿಳಿವು, ವರ್ತಮಾನದ ಜೀವನದೃಷ್ಟಿಯನ್ನು ಪ್ರಭಾವಿಸಿದೆ ಅನ್ನಿಸ್ತಿದೆಯಾ? ಇತ್ತೀಚಿನ ದಿನಗಳಲ್ಲಿ ಇನ್ನೊಂದು ರೀತಿಯ ಸವಾಲು ಕಾಣಿಸ್ತಿದೆ ಅಲ್ವಾ? ಹೆಣ್ಣುಮಕ್ಕಳೇ ಗಂಡು ರಾಜಕಾರಣದ ದಾಳವಾಗಿ ಪರಿಣಮಿಸ್ತಿದಾರೆ ಅಲ್ವಾ?

ವಿನಯಾ: ಖಂಡಿತ. ಇದು ಹೆಣ್ಣುನೋಟವನ್ನು ಅಸ್ತಿತ್ವಹೀನವಾಗಿಸುವ ಸಂದರ್ಭ. ಇದು ಬಂಡವಾಳವಾದವು ಜಾಗತಿಕವಾಗಿ ತಂದೊಡ್ಡಿದ ಸವಾಲು. ಸ್ತ್ರೀವಾದದ ತಾತ್ವಿಕ ಸ್ಪಷ್ಟತೆಯಿಲ್ಲದ ಸಮುದಾಯ ಮತ್ತು ಇಂತಹ ಸಮುದಾಯದ ನಿರ್ದೇಶಕ ಸೂತ್ರವನ್ನು ಹಿಡಿದಿರುವುದು ಪುರುಷ ಚಿಂತನೆಯ ಯಾಜಮಾನ್ಯ. ಸ್ವಾತಂತ್ರ್ಯ, ಸಮಾನತೆ, ಹಕ್ಕೊತ್ತಾಯ, ಹೋರಾಟದಂತಹ ಪರಿಭಾಷೆಗಳು ಮಾರುಕಟ್ಟೆಯ ಜಾಹೀರುಭಾಷೆಗಳಾಗಿವೆ. ಹೆಣ್ತನ ಎನ್ನುವುದನ್ನು ಬಂಡವಾಳಶಾಹಿ ತನ್ನ ಲಾಭಕ್ಕಾಗಿ ವಸ್ತು, ಪೋಷಾಕುಗಳ ಮಟ್ಟದಲ್ಲಿಟ್ಟಿದೆ. ಅತ್ಯಂತ ಸಾಂಪ್ರದಾಯಿಕ ಮತ್ತು ಅತಿನಾಗರಿಕ ಫ್ಯಾಶನ್ನಿನ ಎರಡು ವಲಯಗಳನ್ನು ಸೃಷ್ಟಿಸಿದೆ. ವಿದ್ಯಾವಂತ ಮಹಿಳಾ ಪ್ರಜ್ಞೆಯನ್ನು ದಿಕ್ಕುತಪ್ಪಿಸಲು ಯಶಸ್ವಿಯಾದ ಬಂಡವಾಳವಾದವು ಅತ್ಯಂತ ಕಡಿಮೆ ಕಾಲದಲ್ಲಿ ಅತ್ಯಂತ ಆಳದ ಗಾಯಗಳನ್ನು ಮಾಡಿದೆ. ಗಂಡಾಳಿಕೆಯು ಹೊಸ ನವೀಕೃತ ವೇಷದಲ್ಲಿದೆ. ಹೆಣ್ಣಿನ ಮನೋಭೂಮಿಕೆಯಲ್ಲದು ಮರುಸ್ಥಾಪನೆಗೊಂಡಿದೆ. ಹೆಣ್ಣಾಗಿರುವುದು ಎಂದರೆ, ದೇಹದ ವೈಭವೀಕರಣವಾಗಿದೆ. ಸಂಪ್ರದಾಯ, ಮೌಢ್ಯಗಳನ್ನು ಎಗ್ಗಿಲ್ಲದೆ ಅನುಸರಿಸುವುದು ಎಂದಾಗಿದೆ. ಪುರುಷ ಕಟ್ಟುಪಾಡಿನ ಚೌಕಟ್ಟಿನಲ್ಲಿ ತನ್ನನ್ನು ಅಲಂಕರಿಸಿಕೊಳ್ಳುವುದು ಎಂದಾಗಿದೆ. 'ನಾನು ಹೆಣ್ಣು' ಎನ್ನುವುದು ಎಷ್ಟೋ ಸಂದರ್ಭದಲ್ಲಿ ದುರ್ಬಳಕೆಯ ಅಸ್ತ್ರವಾಗಿದೆ. ಅಧಿಕಾರಶಾಹಿ, ರಾಜಕಾರಣ ಯಾವೆಲ್ಲ ವಲಯಗಳಲ್ಲಿ ಗಂಡು ಚಿಂತನೆಯ ಸೂತ್ರದ ಗೊಂಬೆಯಾಗಿ ಸಂತಸಪಡುವುದಾಗಿದೆ. ಸ್ತ್ರೀವಾದಿ ಚಿಂತನೆಯು ಎದುರಿಸುತ್ತಿರುವ ಬಲುದೊಡ್ಡ ಸವಾಲಿದು. ನಾವೀಗ ಅಪವ್ಯಾಖ್ಯಾನದ ಮತ್ತು ತಪ್ಪು ಅನುಸಂಧಾನದ ಬಿಕ್ಕಟ್ಟಿನಲ್ಲಿದ್ದೇವೆ. ಹೆಣ್ಣಿನ ಚಿಂತನೆ, ಕ್ಷಮತೆಗಳು ದುರ್ಬಳಕೆಯಾಗುತ್ತಿರುವ ಕಟ್ಟಕಡೆಯ ದಮನದ ಸ್ಥಿತಿಯಿದು. ಸುಮ್ಮನೇ ಸುತ್ತಲಿನ ಸ್ಥಿತಿಯನ್ನು ಅವಲೋಕಿಸಿ. ಹೆಣ್ಣುಗಳ ಮೇಲಿನ ದೌರ್ಜನ್ಯದ ಅಂಕಿ ಅಂಶಗಳು ನಿರ್ಭೀತವಾಗಿ ಏರಿಕೆಯಾಗುತ್ತಿವೆ. ಇದನ್ನು ಹೆಣ್ಣು ಬಲಿಪಶುವಾಗಿರೋ ವ್ಯವಸ್ಥೆ ಎಂದು ಮಾತ್ರವಲ್ಲ; ಹೆಣ್ಣಿನ ದಮನವನ್ನು ಕಾಣಿಸುತ್ತಿರುವ ವ್ಯವಸ್ಥೆ ಎಂದೂ ಕಾಣಬಹುದಲ್ಲ. ಯಾಕೆಂದರೆ, ನಮ್ಮ ತಲೆಮಾರಿನ ಬಾಲ್ಯದಲ್ಲಿ – ಕಾಡಿಗೆ ಹೊಲಕ್ಕೆ ದುಡಿಯಲು ಹೋದ ಹೆಂಗಸರು ಕರಡಿ ಹಿಡಿದು ಸತ್ತಿರುತ್ತಿದ್ದರು. ಹೆಣ ಊರೊಳಕ್ಕೆ ತರ್‍ತಿರಲಿಲ್ಲ. ಹೊಟ್ಟೆನೋವಿನಿಂದ ಹೊಳೆಹಾರಿ ಸತ್ತವರು ಲೆಕ್ಕಬಾಕಿ ಮೀರಿದ್ದರು. ಅಲ್ಲವೇ?

ಸಬಿತಾ: ನನ್ನ ಅಮ್ಮ 'ನೀವೇ ಪುಣ್ಯವಂತರು ಮಗಾ, ಓದಿದ್ರಿ, ದುಡೀತಿದೀರಿ. ಐದು ಪೈಸಕ್ಕೂ ಗಂಡನ ಕೈ ನೋಡೋದು ತಪ್ತು' ಅಂತ ನಮ್ಮ ತಲೆಮಾರಿನವರ ಕುರಿತು ಹೇಳ್ತಿದ್ದಳು. ಅವಳಿಗೆ ಇದು ಕನಸು. ನಮಗೂ ಕನಸು ನನಸಾದ ತೃಪ್ತಸ್ಥಿತಿಯೆಂದರೆ ಇದೇ ಇರಬೇಕು ಅನ್ನಿಸಿತ್ತು. ಆದರೆ ಈಗ ದೌರ್ಜನ್ಯದ ಹೊಸ ಹೊಸ ಮುಖ ಕಾಣಿಸುತ್ತಿರುವಾಗ ಇದು ಇಲ್ಲಿಗೇ ನಿಂತಿಲ್ಲ ಅನ್ನುವುದು ಕಾಣುತ್ತೆ.

ವಿನಯಾ: ಹೌದು, ಹಿಂಸೆ ಅಗೋಚರವಾಗಿರುವ ಕಾಲ ಇದು. ಕರೋನಾ ಕ್ರಿಮಿಯ ಹಾಗೆ ಈ ಯಾಜಮಾನ್ಯ. ಸೋಂಕಿನ ಪರಿಣಾಮ ಕಾಣುತ್ತದೆ ಅಷ್ಟೇ. ಅಸಹಾಯಕವಾಗಿ ನಿಲ್ಲಬೇಕಾಗುತ್ತದೆ. ಹೆಣ್ಣುನೋಟ ಎಲ್ಲರ ಬಾಳಿನ ನೋಟಕ್ರಮವಾಗಿ ಅಂತರ್ಗತವಾದರೆ ಬದಲಾವಣೆ ಸಾಧ್ಯ ಅನ್ನಿಸುತ್ತೆ.

ಸಬಿತಾ: ಖಂಡಿತಾ. ಯಾಕೆಂದರೆ, ಇದು ಪರಿಸರದಿಂದ ಹಿಡಿದು, ಮಾರುಕಟ್ಟೆ ಮತ್ತು ನಗರ ಕೇಂದ್ರಿತ ಆರ್ಥಿಕತೆಯ ತನಕದ ಎಲ್ಲ ಎಡವಟ್ಟುಗಳನ್ನು ನಿರಾಕರಿಸುವ ವಿಸ್ತಾರವಾದ ಕಣ್ನೋಟ ಕೂಡಾ ಹೌದು. ಜಾಗತಿಕ ಚಿಂತನೆಗಳು ದೀಪವಾಗಿ ಒದಗಿದರೆ, ನಮ್ಮದೇ ನೆಲದಲ್ಲಿ ಹುಟ್ಟಿಬೆಳೆದ ಚಿಂತನೆಗಳು ಬೇರುಗಳಾಗಿ ನಮ್ಮೊಂದಿಗಿವೆ. ತಾನು ಅರ್ಧಹೆಣ್ಣು ಎಂದ ಗಾಂಧಿಯ ತಂತ್ರಗಾರಿಕೆಯಲ್ಲಿ, ಹೆಣ್ಣಿಗೆ ಘನತೆ ಸಿಗಬೇಕೆಂದರೆ, ಅವಳ ದುಡಿಮೆ, ಅಂತಸ್ತಿನಲ್ಲಿ ಸಮಾನ ಮೌಲ್ಯ ಸಿಗಲೇಬೇಕು ಎಂದು ದಿಟ್ಟ ಹೆಜ್ಜೆಯಿಟ್ಟು ಕಾನೂನು ರೂಪಿಸಹೊರಟ ಅಂಬೇಡ್ಕರ್‌ರಲ್ಲಿ, ಫುಲೆ, ಸಾವಿತ್ರಿಯರಲ್ಲಿ, ನಮ್ಮ ದಿನ–ದಿನದ ಬದುಕಿನ ಅಗ್ನಿದಿವ್ಯವನ್ನು ಹಾದು ಹೋಗುತ್ತಲೇ ಬದುಕು ಕಟ್ಟಿಕೊಡುತ್ತಿರುವ ಹೆಂಗಳೆಯರ ಅನುಭವದ ಸೆಲೆಗಳಲ್ಲಿ ಈ ಹೆಣ್ಣುನೋಟಗಳಿವೆ. ನಮ್ಮ ಸಾಹಿತ್ಯ, ಕಲೆಗಳೊಳಗೆ ಅಡಗಿ ಕುಳಿತಿರುವ ಈ ನೋಟಗಳನ್ನು ಮರುಶೋಧ ಮಾಡುವ ಮೂಲಕ ಇದನ್ನು ಇನ್ನಷ್ಟು ಗಟ್ಟಿಗೊಳಿಸಲು ಸಾಧ್ಯವಿದೆ. ಗ್ರೆಟಾ ಥನ್‌ಬರ್ಗ್ ಅಂತ ಪುಟ್ಟ ಹುಡುಗಿಯರು ತೋರುತ್ತಿರುವ ದಾರಿ, ಈಚೆಗೆ ಕೋವಿಡ್–೧೯ನ್ನು ಅತ್ಯಂತ ಸಮರ್ಥವಾಗಿ ನಿಭಾಯಿಸಿದ ನಾಯಕಿಯರು, ವಿನಾಶಕಾರಿ ಅಭಿವೃದ್ಧಿಯನ್ನು, ಸರ್ವಾಧಿಕಾರಿ ಧೋರಣೆಗಳನ್ನು, ದುರ್ಬಲರು ಮತ್ತು ಸಹಜೀವಿಗಳ ಮೇಲಿನ ದಬ್ಬಾಳಿಕೆಯನ್ನು ಸದಾ ವಿರೋಧಿಸುವ ಪುರುಷರು ಇವರೆಲ್ಲರೂ ಈ ಹೆಣ್ಣುನೋಟದ ದೀವಟಿಗೆ ಹಿಡಿದವರೇ. ಈ ಭರವಸೆಯೊಂದಿಗೆ ನಮ್ಮ ಮಾತು ಮುಗಿಸಬಹುದೇನೋ.

ಥ್ಯಾಂಕ್ಯೂ ಸಬಿತಾ, ನಿಮ್ಮೊಂದಿಗೆ ಮಾತಾಡ್ತಾ ಏನೋ ತಿಳಿದಂತೆ ಏನೋ ಹೊಳೆದಂತೆ ಮನಸ್ಸು ತೃಪ್ತವಾಯಿತು.


ಥ್ಯಾಂಕ್ಯೂ ವಿನಯಾ..

(ಈ ಸಂವಾದದಲ್ಲಿ ಪಾಲ್ಗೊಂಡಿರುವ ಧಾರವಾಡ ನಿವಾಸಿಯಾದ ವಿನಯಾ ವೃತ್ತಿಯಿಂದ ಕನ್ನಡ ಅಧ್ಯಾಪಿಕೆಯಾಗಿದ್ದು ಕವಯತ್ರಿ, ಕಥೆಗಾರ್ತಿ ಮತ್ತು ಚಿಂತಕಿಯಾಗಿ, ಸಬಿತಾ ಬನ್ನಾಡಿ ಭದ್ರಾವತಿ ಬಳಿಯ ಶಂಕರಘಟ್ಟದ ನಿವಾಸಿಯಾಗಿದ್ದು, ವೃತ್ತಿಯಿಂದ ಕನ್ನಡ ಅಧ್ಯಾಪಕಿಯಾಗಿ ಕವಯತ್ರಿ ಮತ್ತು ಚಿಂತಕಿಯಾಗಿ ಹೆಸರಾಗಿದ್ದಾರೆ)

ಎಲ್ಲ ಎಲ್ಲಿಗೆ ಹೋದರು?: ಕಮಲಾದೇವಿಯವರ ನೆನಪುಗಳ ಚೂರುಪಾರು...

ಸಂಗ್ರಹ ಕಥನ: ವೈದೇಹಿ

ಮಂಗಳೂರಿನ ಕನ್ನಡತಿ ಕಮಲಾದೇವಿ ಚಟ್ಟೋಪಾಧ್ಯಾಯ ಉಜ್ವಲ ಬಹುಮುಖ ಪ್ರತಿಭೆ. ತಮ್ಮ ಬದುಕನ್ನೇ ಒಂದು ಹೋರಾಟ ಮಾಡಿಕೊಂಡು ಅದನ್ನು ಸ್ವತಃ ಕಟ್ಟಿಕೊಂಡ ಅವರು ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿ, ಸಮಾಜವಾದಿ ಪಕ್ಷದ ಸ್ಥಾಪಕ ಸದಸ್ಯೆಯಾಗಿ ಸ್ತ್ರೀ ಸ್ವಾತಂತ್ರ್ಯದ ಪ್ರಬಲ ಪ್ರತಿಪಾದಕಿಯಾಗಿ, ಭಾರತೀಯ ಕರಕುಶಲ ಜ್ಞಾನದ ಅಧ್ಯಯನಕಾರ್ತಿಯಾಗಿ, ಆ ಕಲೆಯ ಪುನರುಜ್ಜೀವನಕ್ಕಾಗಿ . . . . Inner recesses and Outer spaces ಎಂಬ ಅವರ ನೆನಪುಗಳ ಪುಸ್ತಕವನಾಧರಿಸಿ ಒಂದು ಏಕವ್ಯಕ್ತಿ ಪ್ರದರ್ಶನದ ಹಸ್ತಪ್ರತಿಯೊಂದನ್ನು ಸಿದ್ಧಪಡಿಸಿದ ಕನ್ನಡದ ಹಿರಿಯ ಲೇಖಕಿ ವೈದೇಹಿಯವರು ಅದರ ಪ್ರದರ್ಶನದಲ್ಲಿ ಸೇರದೆ ಹೋದ ಕೆಲವು ಭಾಗಗಗಳನ್ನು ಇಲ್ಲಿ ನಮಗೆ ನೀಡಿದ್ದಾರೆ. ಈ ಭಾಗಗಳು ಬದುಕನ್ನು ಕುರಿತ ಕಮಲಾದೇವಿಯವರ ಸೂಕ್ಷ್ಮ ಗ್ರಹಿಕೆಗಳನ್ನು ಹೇಗೋ ಹಾಗೇ ವೈದೇಹಿಯವರು ಅವನ್ನು ಕನ್ನಡದಲ್ಲಿ ನಿರ್ವಹಿಸುವಲ್ಲಿ ತೋರಿರುವ ಅಷ್ಟೇ ಸೂಕ್ಷ್ಮವಾದ ಕಲಾಭಿಜ್ಞತೆಯನ್ನೂ ನಮಗೆ ಪರಿಚಯ ಮಾಡುತ್ತವೆ.ಈ ಏಕವ್ಯಕ್ತಿ ಪ್ರದರ್ಶನದ ಕೆಲವು ಭಾಗಗಳನ್ನು ಈ ಹಿಂದೆ ಹಿರಿಯ ರಂಗಕರ್ಮಿ ಭಾಗೀರಥಿಬಾಯಿ ಕದಂ ನಿರ್ವಹಿಸಿದ್ದರು ಎಂಬುದನ್ನೂ ಇಲ್ಲಿ ನೆನಪಿಕೊಳ್ಳಬಹುದು.–ಸಂ..





ಸೇವಾಗ್ರಾಮದಲ್ಲಿ

ಅವತ್ತೊಂದು ದಿನ ರಾತ್ರಿ, ನಾನು ಈಚೆ ಮಲಗಿದ್ದೆ. ಆಚೆ ಕಣ್ಣಿಂದ ಮರೆಯಾದರೂ ಕಿವಿಗೆ ಕೇಳುವಷ್ಟು ದೂರದಲ್ಲಿದ್ದರು ಬಾ ಮತ್ತು ಬಾಪೂ. ಓದುತ್ತ ಮಲಗಿದವಳಿಗೆ ಅವರ ಮೆಲುಮಾತು ಕೇಳುತಿತ್ತು. ಆಕೆ ಅವರ ಪಾದ ಒತ್ತುತ್ತಿದ್ದಿರಬೇಕು. ಒತ್ತುತ್ತ ಬೆಳಗಿಂದ ನಡೆದ ಎಲ್ಲದರ ವರದಿಯನ್ನೂ ಒಪ್ಪಿಸುತಿದ್ದಿರಬೇಕು.

ಇದ್ಯಾವ ಬಗೆಯ ದಾಂಪತ್ಯ!

ಒಂದೆ ಎರಕ ಹೊಯ್ದಂಥ ಮನಸ್ಸುಗಳು. ಆದರೂ ತಂತಮ್ಮ ಮನೋಸ್ವಾತಂತ್ರ್ಯ ಬಿಟ್ಟುಕೊಡದವರು.

ಗಾಂಧೀಜಿ ಎಂಬ ಪತಿಯನ್ನು ಜಗತ್ತಿಗೆ ಬಿಟ್ಟುಕೊಟ್ಟು, ದೊಡ್ಡ ದೊಡ್ಡ ಭಿನ್ನಾಭಿಪ್ರಾಯಗಳ ಘರ್ಷಣೆಯಲ್ಲಿಯೂ ದಾಂಪತ್ಯ ಉಳಿಸಿಕೊಂಡರು ಬಾ, ತನ್ನ ಆಯ್ಕೆಗಳನ್ನು ಎಲ್ಲಿಯೂ ಕಳೆದುಕೊಳ್ಳದೆ!

***

‘ಮಲಕೊ, ಇಷ್ಟು ಬೇಗ ಎದ್ದು ಏನು ಮಾಡಲಿಕ್ಕಿದೆ ನಿಂಗೆ?’

ಮುಂಜಾನೆಯೆ ಎದ್ದು ಚುರುಕಾಗಿ ಪುಟುಪುಟು ಹೆಜ್ಜೆಯಲ್ಲಿ ಕೆಲಸ ಮಾಡುತಿದ್ದ ಬಾ ಅವರನ್ನು

ಮೆಲ್ಲ ಕೇಳಿದೆ

‘ಇದೆಲ್ಲ ಹೇಗೆ ಸಾಧ್ಯವಾಯಿತು ಬಾ?’

‘ನಾನೇನು, ನನ್ನ ಪಾತ್ರವೇನು– ಸ್ಪಷ್ಟ ಪಡಿಸಿಕೊಂಡೆ, ಅಷ್ಟೆ.’ ನಕ್ಕರು ಬಾ. ಜೊತೆ ಯಾತ್ರಿಕನ ಬಗೆಗಿನ ಆತ್ಮವಿಶ್ವಾಸದ ನಗೆಯದು.

‘ಮತ್ತೆ, ಆ ಪಥ್ಯ, ವೈದ್ಯ, ರಾಶಿ ರಾಶಿ ಗಾಂಧಿಯನ್ ಸಿದ್ಧಾಂತಗಳು, ವಿಧಾನಗಳು– ಏನನಿಸುತ್ತೆ ನಿಮಗೆ?’

ಬಾ–ಗೆ ದೊಡ್ಡ ನಗೆ. ಇದೆಂತಹ ಮರುಳು ಪ್ರಶ್ನೆ ಎಂಬಂತೆ! ಅವರ ಆ ದೀರ್ಘ ಉಪವಾಸಗಳಲ್ಲಿ ಆಕೆ ಉಳಿದುಕೊಂಡರು ಹೇಗೆ? –ಕೇಳಲೆ?

ಬೇಡ, ಬೇಡ.

೧೯೪೨. ಬಾಪೂ ಬದಲಿಗೆ ಬಾ ಭಾಷಣ ಮಾಡುತಿದ್ದಾರೆ. ಪೋಲೀಸರು ಅವರನ್ನು ತಡೆದರು.

ಜೀವನ ಸಂಗಾತಿ ಜೊತೆಗಿನ ಕಟ್ಟಕೊನೆಯ ಪಥವದು

ಅದೇ ಕೆಲಸಮಯದಲ್ಲೇ

ಬಾ

ಕಣ್ಮರೆಯಾದರು.

ಜಯಪ್ರಕಾಶ್ ನಾರಾಯಣ- ಪ್ರಭಾವತಿ

ಯಾವುದೋ ಪ್ರಯಾಣಕ್ಕೆ ಹೊರಟಿದ್ದಾರೆ ಜೈಪ್ರಕಾಶ್ ನಾರಾಯಣ್, ಹೆಂಡತಿ ಪ್ರಭಾವತಿ ಬೇಕಾದ ವಸ್ತುಗಳನ್ನು ಪ್ಯಾಕ್ ಮಾಡುತ್ತಿದ್ದಾಳೆ

ಜೈಪ್ರಕಾಶ್ : ಇದೆಲ್ಲ ಬೇಡ. ಇಷ್ಟೆಲ್ಲ ಬೇಡ. ಬೇಡ ಅಂದರೆ ಬೇಡ.

ಪ್ರಭಾವತಿ : ಬೇಕು. ಈಗ ನಿಮಗೆ ತಿಳಿಯುವುದಿಲ್ಲ. ಸುಮ್ಮನಿರಿ.

ಪೆಟ್ಟಿಗೆಗೆ ಹಾಕಿಯಾಯ್ತು.

ಆತನಿಗೆ ಸಿಟ್ಟು ಬಂದಾಯ್ತು.

ಆತನ ಸಿಟ್ಟಿನ ಕುರಿತು ಭಯಂಕರ ತಮಾಷೆ ಮಾಡುತಿದ್ದಳು ಪ್ರಭಾವತಿ; ಜೈಪ್ರಕಾಶರನ್ನು ಅರಿವುಗೊಳಿಸಿ ಕಾಪಾಡಿದ ಚೇತನ ಆಕೆ.

“ಸಿಟ್ಟು ಮಾಡಲಿ, ತೊಂದರೆ ಇಲ್ಲ. ದೊಡ್ಡ ಮನುಷ್ಯ. ದೇಶಕ್ಕೆ ಜನರಿಗೆ ಬೇಕಾದವ. ಸುಮ್ಮನೆ ಬೈಸಿಕೋ” ಎಂದು ನನಗೆ ನಾನೇ ಹೇಳಿಕೊಂಡು, ಪೆಟ್ಟಿಗೆ ಹೊತ್ತು ಆತನ ಸಿಟ್ಟನ್ನೂ ಹೊತ್ತು ಅವನೊಂದಿಗೆ ಹೊರಡುತ್ತಿದ್ದೆ...’ಎನ್ನುವಳು ಹೋದಲ್ಲಿ ಕೊನೆಗೆ ಅವೆಲ್ಲವೂ ಬೇಕೇ ಆದಾಗ ಎಲ್ಲಿ ಪತಿಮಹಾಶಯನ ಸಿಟ್ಟು? ಮಟಾಮಾಯ!

ಮತ್ತೊಮ್ಮೆ ಅದೇ ಪುನರಾವರ್ತನ!

‘ಆತನ ಮನಸ್ಸಿನಲ್ಲಿ ಎಷ್ಟು ನೋವಿದೆ ಗೊತ್ತೆ? ಆತನನ್ನು ಪ್ರೀತಿಸುವ, ಬೆಲೆ ಕೊಡುವ ಜನ ಅವನ ಹೊರೆ ಇಳಿಯುವಂತೆ ನೋಡಿಕೋಬೇಕು ಕಮಲಾದೇವೀ’ –ಎನ್ನುತಿದ್ದ ಅವಳು, ಸಕಲಾರ್ಥದಲ್ಲಿಯೂ ಸಹಧರ್ಮಿಣಿ.


... ಪಟ್ನಾದಲ್ಲಿ ಅವರು ನೆಲೆಸಿದ ಮೇಲೆ ಆಗಾಗ ಅವರಲ್ಲಿಗೆ ಹೋಗುತ್ತಿದ್ದೆ. ಆಗಲೇ ನನಗಾಕೆ ಕಾಣಿಸತೊಡಗಿದ್ದು.

ಜಯಪ್ರಕಾಶ್‌ಗೆ ಆಕೆಯಷ್ಟು ಆಪ್ತಳು ಬೇರೆ ಯಾರ್ಯಾರೂ ಇರಲಿಲ್ಲ. ಅವಳ ಬಳಿ ಆತ ತನ್ನ ಮನಸು ಪೂರ್ತಿ ಬಿಚ್ಚಿಡುತ್ತಿದ್ದರು. ಅಂಥ ವಿಶ್ವಾಸ. ಅಕ್ಷರಶಃ ಪ್ರಭಾವತಿ ಆಕೆ. ಆಕೆಯ ಮೊಗ ತುಂಬ –ಜತೆಗಾರನ ಪ್ರೀತಿವಿಶ್ವಾಸದ ಫಲವೋ, ಬಲವೋ– ಸದಾ ಸಂತೋಷದ ಪ್ರಭೆ.

ಅದು ಗಾಂಧೀಜಿಯವರೊಡನೆ ದೀರ್ಘ ಒಡನಾಟದಿಂದ ಆಕೆ ಪಡೆದ ಭಾಗ್ಯವೂ ಇರಬಹುದೇನೋ.

ಜಯಪ್ರಕಾಶ್ ಗಾಂಧೀಜಿಯವರಷ್ಟೇ ಶ್ರೇಷ್ಠ ಚೇತನ ಎಂಬ ಅರಿವಿತ್ತು, ಗ್ರಹಿಕೆ ಇತ್ತು ಆಕೆಗೆ...

ಅವರ ಚಂದದ ಅನ್ಯೋನ್ಯ ಜಗಳ–ರಾಜಿ ದಾಂಪತ್ಯ ಕಂಡಾಗೆಲ್ಲ




ಜೆಪಿ-ಪ್ರಭಾವತಿಯವರೊಂದಗೆ ಯೂಸುಫ್ ಮೆಹರಲಿ ಮತ್ತು ರಾಮಮನೋಹರ ಲೋಹಿಯಾ : ಒಂದು ಅಪರೂಪದ ಚಿತ್ರ

ನನ್ನ ಕಂಠ ಬಿಗಿದು, ಕಣ್ಣು ಹನಿಗೂಡೋದು. . .
ಒಳಗೊಳಗೇ.

ಇನ್ನೊಬ್ಬ ಲೋಹಿಯಾ-ಇರಲಾರ!

ರಾಜಕೀಯದಲ್ಲಿ ನನಗಿಂತ ತಡವಾಗಿ ಬಂದವ
ವರ್ಣನೆಗೆ ಸುಲಭಕ್ಕೆ ಸಿಕ್ಕದವ
ಆತನ ಪರಿಚಯವಾಗಿದ್ದಾದರೂ ಹೇಗೆ!
ಸಣ್ಣದೊಂದು ಸಭೆ, ಮಾತಿನ ಮೋಹದ ಭಾಷಣಕಾರ, ಏನೋ ಬೇಡದ್ದೇ ಅಪ್ರಾಸಂಗಿಕ
ಉದ್ಧರಿಸುತಿದ್ದಾನೆ,
ನನಗೆ ನಗೆ ತಡೆಯಲಿಲ್ಲ. ಸುತ್ತ ನೋಡಿದರೆ
ಮಗ್ನ ಸಭಿಕರ ಮಧ್ಯೆ ಒಂದು ಜೋಡಿ ಕಣ್ಣು
ನಗೆ ಚಿಮ್ಮಿಸುತ್ತಿದೆ, ನನ್ನ ನಗೆಗೆ ಜತೆನೀಡಿದಂತೆ!
ಮುಂದೊಂದು ದಿನ ಗೆಳೆಯರೊಬ್ಬರು 'ಹೊಸಬ'ನ ಪರಿಚಯ ಮಾಡಿಸ ಹೊರಟರೆ
ಉಕ್ಕುನಗೆ ನಮಗೆ, ಗೆಳೆಯರಿಗೆ ಇರುಸುಮುರುಸಾಗುವಷ್ಟು!
ನಾವಿಬ್ಬರು ಪರಿಚಿತರಲ್ಲ ಎಂದು ಗೆಳೆಯರಿಗೆ ಇನ್ನಿಲ್ಲಂತೆ ಹೇಳಿದೆ
ನಮ್ಮ ನಗೆ ಅದನ್ನು ನಂಬಲು ಬಿಟ್ಟೀತು ಎಂತು?
ಲೋಹಿಯಾ ನಾನೂ ಭೇಟಿಯಾದ ಆ ಮುಹೂರ್ತವಾದರೂ ಎಂಥದು!
ಅಂದಿನಿಂದ ಸ್ಪಂದನ ಪ್ರತಿಸ್ಪಂದನಕ್ಕೆ ಲಗತ್ತಾದ ಜಕ್ಕವಕ್ಕಿಗಳಾದೆವು
ಅವನೆಂದರೆ ನನಗೆ ಚಂದಕೌತುಕ, ಪ್ರೀತಿ, ನಿರೀಕ್ಷೆ
ಹುರುಪೆಬ್ಬಿಸುವ ವಿಚಾರಗಳನ್ನು ಹುಟ್ಟುಹಾಕುವ ದಿಟ್ಟನಾತ, ತಾಜಾ ಚಿಂತನೆಯವ,
ಹೊಸ ಕನಸುಗಳ ಹುಲ್ಲುಗಾವಲಲ್ಲಿ ಸ್ವಚ್ಛಂದ ಅಂಡಲೆಯುವ ಪ್ರಸನ್ನಮುಖಿ
ಪಾದರಸದಂತೆ ಚುರುಕು ಛಕಛಕ
ಮನಸ್ಸಿಗೇನೋ ಬಂತೂ ಅಂದರೆ
ಅತ್ತಿತ್ತ ನೋಡದೆ ಅದನ್ನು ಕೈಗೂಡಿಸಿಕೊಳ್ಳಲು ಧುಮುಕಿದ ಎಂತಲೇ.
ಸುತ್ತಣ ವಾತಾವರಣ ಅಡಿಮೇಲಾಗಿರಲಿ ಬೇಕಾದರೆ
ನಿಂತ ನೆಲ ಬಿಡದಾತ.
೧೯೪೨ ಯ ಬಳಿಕ ಸಣ್ಣಗೆ ಒಂದು ಬದಲಾವಣೆ ಕಂಡೆನೆ?
ಕೆಂಪುಕೋಟೆ, ಅಲ್ಲಿ ಒಂದೆಡೆ ಜಯಪ್ರಕಾಶ್ ನಾರಾಯಣ್, ಇನ್ನೊಂದೆಡೆ ಲೋಹಿಯಾ
ಬಂದಿಯಾಗಿದ್ದಾರೆ.
ದಿನವಿಡೀ ಇರುಳಿಡೀ ಕಣ್ಣೆವೆ ಹೊಡೆಯಲೂ ಬಿಡದೆ ಬ್ರಿಟಿಷ್ ಅಧಿಕಾರಿಗಳು.
ವಿಚಾರಣೆಯ ಹೆಸರಲ್ಲಿ,
ಪ್ರಶ್ನೆಗಳ ದಾಳಿ ನಡೆಸಿದ್ದಾರೆ.
ಬಂಧನ ಸ್ಥಿತಿಯಲ್ಲಿಯೇ ಈರ್ವರೂ ಸಂಸ್ಕೃತ ಶ್ಲೋಕಗಳ, ಕಾದಂಬರಿಗಳ
ಮೂಲಕ ಗುಪ್ತ
ಸಂದೇಶ ಕೊಟ್ಟುಕೊಳ್ಳುತ್ತ
ಅಲ್ಲಿಂದ ಹೊರಬರುವಷ್ಟರಲ್ಲಿ ಜೀವಕೊರಳ ಗೆಳೆಯರಾಗಿದ್ದಾರೆ. . .
ಎಲ್ಲ ತಿಳಿದದ್ದು ನನಗೆ ಲೋಹಿಯಾನಿಂದಲೇ!
ಅಸಾಮಾನ್ಯ ಪ್ರಜ್ವಲ ಚೇತನ ಆತನದು.
ಮೃದು –ಕಠಿಣ; ಸಭ್ಯ ಸಂಕೋಚದವ, ಜೊತೆಗೆ ಅಷ್ಟೇ ಖಡಕ್ ಖಂಡತುಂಡ.
ಮಾತಿಗೆ ನಿಂತನೆಂದರೆ, ಅದ್ಭುತ ಮತ್ತು ನಿಖರ. ಹಲವು ಭಾಷೆಗಳಲ್ಲಿ ಪ್ರಭುತ್ವ ಬೇರೆ!
ಈ ಶಕ್ತಿ ಒಮ್ಮೊಮ್ಮೆ ಇಲ್ಲದವರ ಧ್ವನಿ, ಒಮ್ಮೊಮ್ಮೆ ಸುಮ್ಮನೆ ಸೋರಿಹೋಗುವ ಬಂಗಾರದ ಗನಿ.
ಮಾತಿನ ಬಲೆಯಲ್ಲಿ ಸಿಕ್ಕಿಬಿದ್ದು, ಅದೂ ಕೆಲಸಲ ಪಾರ್ಲಿಮೆಂಟಿನಲ್ಲಿ,
ಅಮುಖ್ಯಗಳ ಕುರಿತು
ಉದ್ದಾನುದ್ದ ವಾದಿಸುತ್ತಲೇ ಇರುತಿದ್ದ
ಸಹಿಸಲಾಗದೆ ಉಗ್ರವಾಗಿ ಆಕ್ಷೇಪಿಸಿದೆ, ಎಚ್ಚರಿಸಿದೆ, ಇದೆಲ್ಲ ಕೂಡದೆಂದೆ ನಾನು.
'ಹೇಳು ಹಾಗಾದರೆ, ಏನು ಚರ್ಚಿಸಬೇಕು?'
'ನ್ಯಾಶನಲ್ ಅಕಾಡೆಮಿಗಳ ರೂಪರೇಷೆ,
ಹೊಣೆಗೆ ರಾಜಕಾರಣಿಗಳಲ್ಲ, ಪ್ರಾಜ್ಞ ಶಿಕ್ಷಣವೇತ್ತರು. . .ಮಂಡಿಸಬಲ್ಲೆಯ?'
ಸವಾಲು ಸ್ವೀಕರಿಸಿದವ, ಹಗಲು ರಾತ್ರಿ ಅಧ್ಯಯನದಲ್ಲಿ ಮುಳುಗಿ
ಪಾರ್ಲಿಮೆಂಟಿನಲ್ಲಿ ಎಡೆಕೊಡದೆ ಇಡೀ ಇಡೀ ಚರ್ಚೆಯ ಬಿರುಸೆಬ್ಬಿಸಿದ,
ಸದಸ್ಯರು ದಂಗು!
ನನಗೋ! ಸಂತಸ, ಅಚ್ಚರಿ, ಮೇರೆ ಮೀರಿ!
ಅಸಾಧ್ಯ ಪ್ರಸಂಗಗಳನ್ನೂ ಸಾಧ್ಯ ಮಾಡಿಕೊಳ್ಳಬಲ್ಲ ಈ ಧೀರನಿಗೆ
ಅಪಾರ ಪರಿಶ್ರಮಿಗೆ
ಎಷ್ಟು ರಾಜಕೀಯ ಬಂಧನ, ಎಷ್ಟು ಬಾರಿ ಜೈಲುವಾಸ!
ನನ್ನಲ್ಲಿ ಈಗಲೂ ಉಳಿದೇ ಬಿಟ್ಟಿರುವ ತೀವ್ರ ನೋವಿದು.
ಆತನೂ ಇದರಿಂದ ಬಹಳ ನೊಂದಿದ್ದ.
೧೯೫೪ಳ, ಹೋಗಿಹೋಗಿ ಸ್ವತಂತ್ರ ಭಾರತದಲ್ಲೇ,
ನಾಗರಿಕ ಪ್ರತಿಭಟನೆಯ ನೆಪ, ಬಂಧಿಯಾದ.
ನೈನಿ ಸೆಂಟ್ರಲ್ ಜೈಲಿನಿಂದ ಈ ದೇಶದ ರಾಷ್ಟ್ರಾಧ್ಯಕ್ಷರಿಗೆ ಆತ ಬರೆದ ಪತ್ರ
'ಜೈಲಿನಲ್ಲಿ ಇರೋದು ನನಗೆ ಬೇಕಿಲ್ಲ.
ಸೆರೆಮನೆ ನನಗೆ ಯಾವತ್ತೂ ಇಷ್ಟದ್ದಲ್ಲ.
ಈಗಂತೂ ಅದರ ದ್ವೇಷಿ ನಾನು
ಅದು ಅನ್ಯಾಯದ ವಿರುದ್ಧ ನ್ಯಾಯ ಸಾಧಿಸಲಾಗದ
ನನ್ನ ಪೌರುಷಹೀನತೆಯನ್ನು ನೆನಪಿಸುತ್ತದೆ
ಲಜ್ಜೆಗೊಂಡು ತಲೆತಗ್ಗಿಸುವಂತೆ ಮಾಡುತ್ತದೆ.
ಬ್ರಿಟಿಷರ ಕಾಲದಲ್ಲಿ ಕೊನೇಪಕ್ಷ ನಮ್ಮ ನವಪೀಡಕರ ಪಾಪ ತೊಳೆವ,
ಜೈಲುವಾಸದಿಂದ ಶಕ್ತಿ ಸಂಚಯವಾಗುವ ತೃಪ್ತಿಯಾದರೂ ಇತ್ತು.
ಅಂಥ ಸಮಾಧಾನವೂ ಇನ್ನಿಲ್ಲ.'
ವಿಷಾದಪೂರ್ಣ ತಪ್ಪೊಪ್ಪಿಗೆಯಲ್ಲಿ ಪತ್ರ ಮುಗಿಸುತ್ತ,
'ನಮ್ಮ ರಾಷ್ಟ್ರಜೀವನದ ಸಖೇದ ದುರಂತಗಳಲ್ಲಿ ಇದೂ ಒಂದು' ಎಂದು ಸ್ವತಃ ಅದನ್ನು
ನಿರ್ವಚಿಸಿದ್ದ.
. . .ಪಾರ್ಲಿಮೆಂಟಿನಲ್ಲಿ ನ್ಯಾಶನಲ್ ಅಕಾಡೆಮಿಗಳ ಕುರಿತು ಮಾಡಿದ ಅಂದಿನ ಆ ಭಾಷಣವೇ
ಆತನ ಸತತ ಅನುರಣಿಸುವ
ಹಂಸಗೀತೆಯಾಗಿ ಬಿಟ್ಟಿತು.
ಅದರಲ್ಲಿ ನನ್ನ ಗದರಿಕೆ ತನಗೊಂದು ಮಾರ್ಗದರ್ಶಕ ತಾರೆಯಾಯಿತು ಎಂದು ಹೇಗೆ
ಬಹಿರಂಗವಾಗಿ ಹೇಳಿಕೊಂಡಿದ್ದ!
ಮತ್ತೆ ಕೆಲವೇ ವಾರ–
ಅಸ್ತಂಗತನಾದ.
ದೇಶದ ರಾಜಕೀಯ ಬದುಕಿನಲ್ಲಿ ಅಗಾಧ ಖಾಲಿತನ ಸೃಷ್ಟಿಸಿ,
ನನ್ನ ಮನದಲ್ಲಿಯೂ ಮಾಯದ ಗಾಯದ ಆಳಗುರುತನ್ನು ಮೂಡಿಸಿ.
ಇನ್ನೊಬ್ಬ ಲೋಹಿಯಾ– ಇರಲಾರ,
ಇರಲು ಸಾಧ್ಯವಿಲ್ಲ.



ಎಲ್ಲಿ ಹೋದೆ ಯೂಸುಫ್ ಮೆಹರಅಿ?

ಆಗಸ್ಟ್ ೮, ೧೯೪೨. ಗಾಂಧೀಜಿ ಇದು ಬಹಿರಂಗ ಕ್ರಾಂತಿ ಎನ್ನುತ್ತಾ ಮಾಡಿದ ಭಾಷಣ, ಒಂದು ಕ್ಲಾಸಿಕ್. "ನನಗೆ ಸ್ವಾತಂತ್ರ್ಯ ಬೇಕು. ಈ ಕೂಡಲೇ ಇದೇ ರಾತ್ರಿ. ಬೆಳಗಾಗುವುದರೊಳಗೆ ಸ್ವಾತಂತ್ರ್ಯಕ್ಕಾಗಿ ಕಾಯಲಿಕ್ಕಾಗದು. ಪ್ರತಿಯೊಬ್ಬ ಪುರುಷ, ಮಹಿಳೆ, ತಾನಿರುವುದು ಉಣ್ಣುವುದು, ತಿನ್ನೋದು–ಎಲ್ಲವೂ ಸ್ವಾತಂತ್ರ್ಯದ ಗಳಿಕೆಗಾಗಿ. ಅಗತ್ಯವಿದ್ದರೆ ಸಾಯಲೂ ಸಿದ್ಧ– ಅಂತಿರಬೇಕು. ಪ್ರತಿಜ್ಞೆ ಮಾಡಿ, ಸ್ವಾತಂತ್ರ್ಯ ಸಿಗೋವರೆಗೂ ವಿರಮಿಸೆವು. ತಮ್ಮ ಜೀವ ಕಳೆದುಕೊಂಡವರು ನಿಜವಾಗಿ ಜೀವಿಸಿದಂತೆ. ತಮ್ಮನ್ನು ಉಳಿಸಿಕೊಳ್ಳಲು ಹವಣಿಸುವವರು ಸತ್ತಂತೆ–ಸ್ವಾತಂತ್ರ್ಯ ಹೇಡಿಗಳಿಗಾಗಿಯೋ ದುರ್ಬಲ ಹೃದಯರಿಗಾಗಿಯೋ ಅಲ್ಲ.
ಇಲ್ಲೊಂದು ಮಂತ್ರವಿದೆ–
ಇದೋ ನಿಮಗಿದು ನನ್ನ ಮಂತ್ರ, ಹೃದಯದಲ್ಲಿ ಕೆತ್ತಿಕೊಳ್ಳಿ–
ಮಾಡು ಇಲ್ಲವೇ ಮಡಿ. ಡು ಆರ್ ಡೈ.
ಇಂಡಿಯಾಕ್ಕೆ ಸ್ವಾತಂತ್ರ್ಯ ತಂದುಕೊಡುತ್ತೇವೆ ಇಲ್ಲ ಸಾಯುತ್ತೇವೆ.
ಇವತ್ತಿನಿಂದ ನಾವೆಲ್ಲರೂ ಸ್ವತಂತ್ರರು. ಸರಕಾರವನ್ನು ಭಂಗಗೊಳಿಸಿ ನಮಗೆ ನಾವೇ ನೇತಾರರು."
ಸ್ವಾತಂತ್ರ್ಯದ ಗಂಟೆ ಬಾರಿಸತೊಡಗಿತು.
ಯುಸೂಫ್ ಮೆಹರಲಿಯ ಮನೆಯಲ್ಲಿ ನಾವೆಲ್ಲ ಸೇರಿದೆವು. "ಈ ರಾತ್ರಿ ಅಮೂಲ್ಯ ಸಮಯ–ಏನು ಅಗತ್ಯವಿದೆಯೋ ಈ ಹೊತ್ತು ಅದನ್ನು ಮಾಡಿಬಿಡಬೇಕು" ನ್ಯಾಶನಲ್ ಕಾರ್ಯಕಾರಿ ಸಮಿತಿ, ಗಾಂಧೀಜಿಯ ನೇತೃತ್ವದಲ್ಲಿ ಎಲ್ಲ ಸಹಕಾರ ಕೊಡಲು ಸಿದ್ಧವಾಯ್ತು.
ಎಲ್ಲಿದ್ದೀಯೋ ಯೂಸುಫ್ ಮೆಹರಲಿ?
'ಲಿವ್ ಡೇಂಜರಸ್ಲೀ' – ಎನ್ನುತಿದ್ದವ
ಬೆಳಗಿನ ಹೊತ್ತು ನಿನ್ನನ್ನು ನೋಡಬೇಕೆಂದರೆ ಕೊಳೆಗೇರಿಗೆ ಹೋಗಬೇಕಿತ್ತಲ್ಲ. . . ಅಲ್ಲಿ, ಆ ಜನರೊಡನೆ ಕುಳಿತು ಸುಖ ದುಃಖಕ್ಕೆ ಕಿವಿಯಾಗುತ್ತಿದ್ದ ನೀನು. . .
ಅದನ್ನು ನೋಡಲೆಂದೇ ಹೋಗುವ ನಾವು.
ಜೀವಂತ ಇರುವಾಗಲೇ ದಂತಕತೆಯಾಗಿ ಬಿಟ್ಟ ಪರಮಾಪ್ತ ಗೆಳೆಯ.. .ಆಯುಷ್ಯದ ಅರ್ಧದಲ್ಲೇ ಎದ್ದು ಹೊರಟು ಬಿಟ್ಟೆಯಲ್ಲ! . . . ನನ್ನೊಳಗೆ ನಿರಂತರ ವೇದನೆಯ ಶಾಶ್ವತವಾದೊಂದು ಖಾಲಿತನ ನಿರ್ಮಿಸಿ.
ನಮ್ಮನ್ನೆಲ್ಲ ಸೇರಿಕೊಂಡು ಯುತ್ ಲೀಗ್ ಕಟ್ಟುವುದಷ್ಟೇ ನೀನು ಜನ್ಮವೆತ್ತಿದ ಉದ್ದೇಶವಾಗಿತ್ತೆ,
ದೇವರೆ!

ಗುರುದೇವ ಟ್ಯಾಗೋರ್‌ರೊಂದಿಗೆ ವಾಯುವಿಹಾರ

ಅವತ್ತೊಮ್ಮೆ, ಟಾಗೋರರ ಶಾಂತಿನಿಕೇತನಕ್ಕೆ,
ಗುರುದೇವರನ್ನು ನೋಡಲೆಂದೇ
ಎಷ್ಟೋ ದಿನದ ಆಸೆ,
ನಾನೂ ಹೋದೆ.
ಅಲ್ಲಿ ಅವರ ಸೊಸೆ ಪ್ರತಿಮಾದೇವಿ, ನನಗೆ ಜೊತೆ.
ಒಂದು ಸಂಜೆ ಟಾಗೋರರಿಂದ ಪುಟ್ಟ ಸಂದೇಶ ಚೀಟಿ.
'ಬೆಳಗಿನ ವಾಕಿಂಗ್‌ಗೆ ಜೊತೆಗೆ ಬರಬಹುದೆ?'
ಪ್ರತಿಮಾ ಹೇಳಿದಳು "ಆದೀತೆ ನಿಮಗೆ, ಸೂರ್ಯ ಮೂಡುವ ಮುಂಚೆ ಅವರಿಗೆ ಬೆಳಗಾಗುತ್ತದೆ! ವಾಕಿಂಗ್ ಹೊರಟುಬಿಡುತ್ತಾರೆ"
ಅದು ಹೌದೇ!
ಸೂರ್ಯನಿಗಿನ್ನೂ ಪೂರ್ತಿ ಎಚ್ಚರಾಗಿಲ್ಲ.
ಹಕ್ಕಿಗಳು ಸೇರಿ ಏಳಯ್ಯ ಬೆಳಗಾಯಿತೋ ಹಾಡಲು ಶ್ರುತಿ ಸರಿಮಾಡಿಕೊಳ್ಳುತ್ತಿವೆಯಷ್ಟೆ.
ದೂರದಿಂದಲೇ ಕಂಡೆ ಅವರನ್ನು,
ಎತ್ತರದ ನಿಲುವು.
ಕೊಂಚ ಬಾಗಿದ ಬೆನ್ನು.
ಹಿಂದೆ ಕೈಕಟ್ಟಿಕೊಂಡು ತನ್ನ ಮನೆ ಮುಂದೆ ಕಾಯುತ್ತ ನಿಂತಿದ್ದಾರೆ
ನಾನು ಬರುತ್ತಲೂ ಪೂರ್ವದತ್ತ ಹೆಜ್ಜೆ ಹಾಕತೊಡಗಿದರು.
"ಅಡೆತಡೆಯಿಲ್ಲದ ಏರುತಗ್ಗುಗಳಿಲ್ಲದ ಬಯಲು ನನಗಿಷ್ಟ!"
ಅರರೆ!
"ನಾನು ಸಂಪೂರ್ಣ ವಿರುದ್ಧ. ಏಕೆಂದರೆ, ಪರ್ವತಾವಳಿಯ ತಪ್ಪಲಿನವಳು ನಾನು."
– 'ಥಿಯೇಟರ್ ಹೇಗೆ ನಡೆಯುತ್ತಿದೆ!'
ಹೇಳಿದೆ.
ಅವರ ಕಣ್ಣುಗಳಲ್ಲಿ ಸಂತೋಷ
– 'ಶಾಂತಿನಿಕೇತನ ತೆರೆಯಲು ಏನು ಪ್ರೇರಣೆ?'... ಮೆಲ್ಲ ಕೇಳಿದೆ.
'ಹ್ಞಾಂ. ಶಾಲೆ ತುಸುವೂ ರುಚಿಸಲಿಲ್ಲ ನನಗೆ. ಕಳ್ಳ ಬೀಳುತ್ತಿದ್ದೆ. ಕೊನೆಗೆ ಬಿಟ್ಟೇಬಿಟ್ಟೆ. ದೊಡ್ಡವನಾಗುತ್ತಲೂ ಹೊಸತೇ ಬಗೆಯ ಶಾಲೆ ಸ್ಥಾಪಿಸಬೇಕಂತ ಕಂಡಿತು... ಔಪಚಾರಿಕ ಶಾಲೆಗಳಿಂದ ಮಕ್ಕಳ ಸೃಜನಶೀಲತೆ ಹಾರಿ ಹೋಗುತ್ತದೆಂದಲ್ಲ. ಬದಲು ಅವರಲ್ಲಿ ಅರಳಬಹುದಾದ ಏನಾದರೂ ಪ್ರತಿಭೆ ಇದ್ದರೆ ಅದನ್ನು ಸಂಗೋಪಿಸಬೇಕು ಅಂತ'
'ಶಿಕ್ಷಣ, ಹೇಗಿರಬೇಕು?'
'ಗಾಳಿ ಬೆಳಕು ಶಬ್ದ ಪ್ರತಿಧ್ವನಿ ಎಲ್ಲದಕ್ಕೂ ತೆರೆದಿರಬೇಕು. ಪುರಾತನ ನಲಂದಾ ಹೇಗಿತ್ತು? ಹಾಗೆ, ದೇಶದ ಸಾಂಸ್ಕೃತಿಕ ನೈತಿಕ ಸಂಪತ್ತು ತೆರೆದುಕೊಳ್ಳಬೇಕು. ನಮ್ಮ ಮಕ್ಕಳ ಮನಸಿನ ಬೇರು ಇರೋದೇ ಅಲ್ಲಿ. ಬೇರು ಒಮ್ಮೆ ಗಟ್ಟಿಯಾಗಲಿ. ಆಮೇಲೆ, ಪಶ್ಚಿಮ ಬಿಟ್ಟು ಪಶ್ಚಿಮೋತ್ತರ ಸಂಸ್ಕೃತಿಯನ್ನೂ ಜೀರ್ಣಿಸಿಕೊಂಡು ನಾವಾಗಿ ಉಳಿಯಬಹುದು. ಪೂರ್ವ–ಪಶ್ಚಿಮಗಳೆರಡೂ ಸಮಾನವಾಗಿ ಕಲೆಯ ಬೇಕು... ವಿಶ್ವಭಾರತಿ ಹುಟ್ಟಿದ್ದು ಹೀಗೆ, ಈ ಆಸೆಯಲ್ಲಿ.'
– ಪ್ರಪಂಚ ಸಂಸ್ಕೃತಿಯ ಹಂಬಲವನ್ನು ಆಂತರ್ಯದಲ್ಲಿಟ್ಟುಕೊಂಡು ಹುಟ್ಟಿದ ಅಂತಹ ವಿಶ್ವಭಾರತಿ, 'ದೇಶಿಕೋತ್ತಮ' – ಪ್ರಶಸ್ತಿ ನೀಡಿ ನನ್ನನ್ನು ಗೌರವಿಸಲಿದೆಯೆಂಬ ಊಹನೆಯಾದರೂ ಇತ್ತೆ ನನಗೆ?
ಆ ದಿನವನ್ನು ಈಗ ನೆನೆದರೂ ಪುಲಕಗೊಳ್ಳುತ್ತೇನೆ.
ಹ್ಞಾಂ. ಪ್ರಶಸ್ತಿ ಪ್ರದಾನದ ಸಮಾರಂಭಕ್ಕೆ ಜಾಮಿನೀ ರಾಯ್ ಆಗಮಿಸ ಬೇಕಿತ್ತು. ಎಂತಹ ಕಲಾವಿದ ಆತ! ಜಾನಪದ ಜನ–ಜಲ ವನ ಸಂಪತ್ತು ಆತನ ಕುಂಚದಿಂದಲೇ ಹೊಮ್ಮಬೇಕು–ವಿಶೇಷವಾಗಿ ಮಹಿಳೆಯರ ಚಿತ್ರ, ಉದಾ: 'ಕುಳಿತ ಹೆಂಗಸರು' ಅಂತೊಂದು ಚಿತ್ರದಲ್ಲಿ ಚಕ್ಕಳಮಕ್ಕಳ ಹಾಕಿ ಆರಾಮಾಗಿ ಒಂದಷ್ಟು ಮಂದಿ ಹೆಂಗಸರು ಕುಳಿತಿದ್ದಾರೆ. ಯಾವುದನ್ನೋ ಕಾಯುತ್ತಿರುವಂತೆ ಕಾಣುತ್ತಿದ್ದಾರೆ. ಏನೋ ನಿರೀಕ್ಷೆಯ ಬೆಳಕೊಂದು ಅವರ ಕಣ್ಣಲ್ಲಿದೆ. . . .ಒಮ್ಮೆ ನೋಡಿದರೆ ಮತ್ತೆ ಮರೆಯದ ಚಿತ್ರವಿದು.
ಂಥ ದೊಡ್ಡ ಮನುಷ್ಯ ಸಮಾರಂಭಕ್ಕೆ ಬರಲಿದ್ದಾರೆ ಅಂತ ಹಿಗ್ಗಿದೆ ನಾನು; ಅವರಿಗಾಗಿ ಕಾತರದಿಂದ ಕಾದೆ. ಕಾದದ್ದೆ ಬಂತು.
ತೀವ್ರ ಅನಾರೋಗ್ಯ ಅಂತ, ಆತ ಬರಲೇ ಇಲ್ಲ.
ಹ್ಹ, ಆ ನಿರಾಸೆ ಇನ್ನೂ ಕೂಡ ಹೇಗೆ ಒಳಗೇ ಇದೆ, ಮಾಸದೆ! ನೋವು ನಿರಾಸೆ ನೆನಪುಗಳು ಉಳಿವ ಮತ್ತು ಮಸಳಿಸುವ ಗೂಢವೇ ಅರ್ಥವಾಗುವುದಿಲ್ಲ.

ಪಂಡಿತ್ ರಮಾದೇವಿ ಮತ್ತು ಮಗಳು ಮನೋರಮಾ

ಅಂದ ಹಾಗೆ, ಮೀರಜ್ ಆಸ್ಪತ್ರೆಯಲ್ಲಿ ಒಂದು ದಿನ,
'ಇಬ್ಬರು ಹೊಸಬರು ಬಂದಿದ್ದಾರೇ' ಅಂತ.
ಯಾರು?
ಪಂಡಿತಾ ರಮಾಬಾಯಿ ಮತ್ತು ಅನಾರೋಗ್ಯದಿಂದ ಬಳಲುತಿದ್ದ ಅವರ ಮಗಳು, ಮನೋರಮಾ!
ಅಮ್ಮನಿಗೋ ಕೇಳಿ ಪುಲಕಪುಲಕ. 'ಹೋಗು, ಈಗಲೇ ಹೋಗು, ಅವರನ್ನು



ಮಹಿಳಾ ಸುಧಾರಣಾ ಚಳುವಳಿಯ ಪಂಡಿತ್ ರಮಾಬಾಯಿ



೧೯೪೦ರ ದಶಕದಲ್ಲಿನ ಮಹಿಳಾ ಸಮ್ಮೇಳನವೊಂದರಲ್ಲಿ ಕಮಲಾದೇವಿ(ಮಧ್ಯದಲ್ಲಿ)

ಮಾತಾಡಿಸು'– ಒತ್ತಾಯಿಸಿದಳು.
ಅವರು ನಮ್ಮೂರಿನವರು ಎಂಬುದು ಬಿಟ್ಟು ಹೆಚ್ಚಿಗೆ ಸಲಿಗೆ ನನಗಿಲ್ಲ. ಏನಂತ ಮಾತಾಡಿಸಲಿ ನಾನು?
ಯಾವ ದೊಡ್ಡ ಜನ ನಾನೆಂತ ಅವರ ಬಾಗಿಲು ತಟ್ಟಲಿ? ಅವರಿಗೆ ತೊಂದರೆಯಾದರೆ? ನಾನಾ ಮುಜುಗರ.
ಅವರನ್ನು ನೋಡಬೇಕು ಅಂತಲೂ ಇನ್ನಿಲ್ಲದ ಆಸೆ,
ಅಂತೂ ಸಂಕೋಚ ಆಚೆಗಿಟ್ಟು ಹೋದೆ.
ರಮಾಬಾಯಿಯೇ ಬಾಗಿಲು ತೆರೆದರು. ಕಾಂತಿಯುತ ಗೌರವರ್ಣ, ಸವುಳು ಸವುಳಾಗಿ ತೆಳ್ಳಗೆ ಎತ್ತರ, ತಾಯಿಯಲ್ಲ, ಮನೋರಮಾಳ ಅಕ್ಕ ಎನ್ನಬೇಕು, ಹಾಗಿದ್ದರು.
ಪ್ರೀತಿಯಿಂದ ಮಾತು ಸುರುಮಾಡಿ, ನನ್ನ ಚಳಿ ಓಡಿಸಿದರು. ನೋಡಿದರೆ ನನಗೆ ಅವರೊಡನೆ ಮಾತಾಡಲು ವಿಷಯ ಇದೆ!
'ನಿಮ್ಮ 'ದಿ ಹೈ ಕಾಸ್ಟ್ ಹಿಂದೂ ವಿಮೆನ್' ಪುಸ್ತಕ ಓದಿದವಳಿಗೆ ನಿಮ್ಮನ್ನೊಮ್ಮೆ ನೋಡಿ ಮಾತಾಡಬೇಕಂತ ಬಹಳ ಇತ್ತು.' . .ಅಂತೆಲ್ಲ ಹೇಳಿದೆ.
ಮರಾಠಿಯಲ್ಲಿ, ಅವರ ಮಾತೃಭಾಷೆಯಲ್ಲಿ.
ಮುಂದೆ, ಖೇಡ್‌ಗಾಂವ್‌ನಲ್ಲಿನ ಅವರ ಆಶ್ರಮಕ್ಕೂ ಹೋಗಿದ್ದೆ ನಾನು, ಅಲ್ಲಂತೂ! ತಾಯಿ ಸಂತಳಂತಿದ್ದರೆ, ಮಗಳು ಬೈಬಲಿನಲ್ಲಿ ಬರುವ ಮಾರ್ಥಾಳಂತೆಯೆ ಕಂಡಳು ನನಗೆ!
ಆದರೆ ಅದೇ ಕೊನೆಯ ಭೇಟಿಯಾಯ್ತು.
ಇಬ್ಬರೂ ಅತ್ಯಲ್ಪ ಕಾಲದ ಅಂತರದಲ್ಲಿಯೆ ತೀರಿಕೊಂಡರು.

ವಿದೇಶ ಪ್ರವಾಸದ ಹೊತ್ತಿನಲ್ಲಿ

ವಿಶ್ವಪರ್ಯಟನದ ವೇಳೆ,
ತರುಣ ವಯಸ್ಸಿನಲ್ಲಿ ಒಬ್ಬಳೇ ಹಡಗು ಹತ್ತಿ ಹೊರಟ ಎಲೆ ಪಯಣಿಗಳೆ ಹಡಗಿನಿಂದ ಹೊರಬರುತ್ತಲೇ ಬಂಧಿಸಲು ಹೊರಟ ಸೇನಾಧಿಕಾರಿಗಳನ್ನು,
ರೈಲಿನಲ್ಲಿ ನಿನ್ನ ಜಾಗಬಿಟ್ಟು ಏಳಬೇಕೆಂದ ಅಧಿಕಾರಿಯ ದಾರ್ಷ್ಟ್ಯವನ್ನು,
ಜರ್ಮನಿಯಲ್ಲಿ ಕ್ರಾಂತಿಕಾರಿ ವೀರೇಂದ್ರನಾಥ ಚಟ್ಟೋಪಾಧ್ಯಾಯರೊಂದಿಗೆ ಇದ್ದೆ ಎಂಬ ಕಾರಣಕ್ಕೆ
ಉದ್ದಕ್ಕೂ ಕಣ್ಣಿಟ್ಟ ಪಾಸ್‌ಪೋರ್ಟ್ ಕಸಿ., ಸರಕಾರಗಳನ್ನು,
. . . .ಇನ್ನೂ ಇನ್ನೂ ಇನ್ನೂ ಎಷ್ಟೆಲ್ಲವನ್ನು ಎದುರಿಸಿದೆ.
ತರುಣಿ ನೀನಾಗ, ಅಪ್ರತಿಮ ಸುಂದರಿ ಎಂದು ಹೆಸರು ಪಡೆದವಳು ಬೇರೆ, ಹೇಗೆ, ಹೇಗೆ ಅವೆಲ್ಲವನ್ನು ದಾಟಿ ಬಂದೆ?
ಯುವತಿ ನಗುತಿದ್ದಾಳೆ. ಭಯವೆಂದರೆ ಏನಂದೇ ತಿಳಿಯದೆ ಬೆಳೆದ ಫಲವಿರಬಹುದೆ, ನೋಡು; ಎಂದು ನನ್ನನ್ನೇ ಕೇಳುತಿದ್ದಾಳೆ. ಲಾಟೀನು ಹಿಡಿದು ಎಲ್ಲಂದರೆಲ್ಲಿಗೆ ಒಬ್ಬಂಟಿಯಾಗಿ ಹೋಗುತಿದ್ದ ನನ್ನಮ್ಮ ಗಿರಿಜಾಬಾಯಿ, ಮಾಪಿಳ್ಳೆಯ ದೋಣಿಯಲ್ಲಿ ರಾತ್ರಿಯಿಡೀ ಮಲಗಿ ಒಂಟಿಯಾಗಿ ಪಯಣಿಸುತಿದ್ದ ಅಜ್ಜಿ. . . ನೆನಸಿಕೋ. ಅವರೆಲ್ಲ ತೀರಿಕೊಂಡರು ಎನ್ನುತ್ತಿ, ಎಲ್ಲಿ? ಅವರೆಲ್ಲಿ ತೀರಿಕೊಂಡರು, ಮರುಳಿ ನೀನು – ಎನ್ನುತಿದ್ದಾಳೆ.

ನಾನು ನಿನ್ನ ಕಾಲಿಗೆರಗಬೇಕು .

ಅಲ್ಲಿ ಅಗೋ... ಅಜ್ಜಿ ನಗುತ್ತಿದ್ದಾರೆ... ಮಾರ್ಗರೆಟ್ ಕಸಿನ್ಸ್, ಆ್ಯನಿಬೆಸೆಂಟ್. . . ಅಮ್ಮ... ಆನಾ, ... ಅಗೋ ಅಲ್ಲಿ ಯಾರದು, ಓ! ಆ ರಾಜಸ್ಥಾನೀ ಕಲಾಕಾರ... ನಿನ್ನ ಹೆಸರೇನಪ್ಪಾ... ಮರೆತೆಬಿಟ್ಟೆನಲ್ಲ! ಯಾಕೆ ಅಮ್ಮಾ ಎನ್ನುತ್ತಿ. ನಾನೇನು ಅಂಥದ್ದು ಮಾಡಿದೆನಪ್ಪ... ಕಾಲಿಗೆರಗಬೇಡ... ಸತ್ಯಕ್ಕೂ ನೋಡಿದರೆ ನಾನು ನಿನ್ನ ಕಾಲಿಗೆರಗಬೇಕು...

ನಾನೂ ಬರುತ್ತೇನೆ...ನೀವೆಲ್ಲಿದ್ದೀರಿ ಬಾಪೂ!

ನಾನೂ ಬರುತ್ತೇನೆ ಎಲ್ಲಿದ್ದೀರಿ?
. . .ಗಾಂಧೀಜಿ, ನಾನು ನನ್ನ ಪ್ರತಿಜ್ಞೆ ಪೂರೈಸಿದೆ... ನನ್ನ ಹಾದಿಗೆ ಹೊರಳಿದೆ...
ಯಶಸ್ವಿಯಾದೆನೆ ಇಲ್ಲವೆ... ನೀವು ಕೇಳುವುದಿಲ್ಲ... ನನಗದು ತಿಳಿದೂ ಇಲ್ಲ.
ಯಾಕೆಂದರೆ
ನಾವು ಕಣಸಿದ ಇಂಡಿಯಾ,
ಎದುರೆದುರೇ ಮೇಣದಂತೆ ಕರಗಿ ಹೋಗುತ್ತಿದೆ,
ಹೌಹಾರಿಸುತ್ತಿದೆ
ದಣಿವು, ತುಂಬ ದಣಿದಿರುವೆ, ದಣಿವು ಆವರಿಸಿದೆ
ನಾನೂ ಬರುತ್ತೇನೆ... ನೀವಿದ್ದಲ್ಲಿ. ಬಾಪೂ...
ಎಲ್ಲಿದ್ದೀರಿ...?

–ತೆರೆ–




(ಮಣಿಪಾಲದಲ್ಲಿ ವಾಸವಿರುವ ವೈದೇಹಿಯವರು ಸಾಹಿತ್ಯದ ಬಹುಪಾಲು ಎಲ್ಲ ಪ್ರಕಾರಗಳಲ್ಲಿ ಸಾಧನೆ ಮಾಡಿರುವ ಕನ್ನಡದ ಹಿರಿಯ ಲೇಖಕಿ)


ದ.ಕ. ಎಂಬ ಭಾಷಾ ಬಾಂಧವ್ಯದ ಪ್ರಯೋಗಶಾಲೆ

-ಬಿ.ಎ.ವಿವೇಕ ರೈ



ಕರ್ನಾಟಕ-ರಾಷ್ಟ್ರದ ಬಹುತೇಕ ಇತರೆಲ್ಲ ರಾಜ್ಯಗಳಂತೆಯೇ- ಬಹುಭಾಷೆಗಳ ನಾಡು. ಅವುಗಳಲ್ಲಿ ಕೆಲವು ಸ್ಥಳೀಯವಾಗಿಯೇ ಹುಟ್ಟಿ ಕನ್ನಡದೊಂದಿಗೇ ಬೆಳೆದ ಭಾಷೆಗಳಾದರೆ ಇನ್ನು ಕೆಲವು ಐತಿಹಾಸಿಕ ಕಾರಣಗಳಿಂದಾಗಿ ವಲಸೆ ಬಂದ ಜನರ ಮೂಲಕ ಇಲ್ಲಿ ನೆಲೆಗೊಂಡವು. ಇನ್ನುಕೆಲವು ಪ್ರಾದೇಶಿಕ ವ್ಯತ್ಯಾಸಗಳ ಮೂಲಕವೋ, ಪರಸ್ಪರ ಪ್ರಭಾವಗಳಿಂದಲೋ ಹೊಸ ಚಹರೆಗಳೊಂದಿಗೆ ಹುಟ್ಟಿದವು. ಆದರೆ ಈ ಎಲ್ಲ ಭಾಷೆಗಳೂ ನಾಡಿನ ಬಹುಜನರ ಭಾಷೆಯಾದ ಕನ್ನಡದೊಂದಿಗೆ ಸೋದರಿಕೆಯಲ್ಲಿ ಬಾಳಿ ಸಮೃದ್ಧಗೊಂಡವವು ಮತ್ತು ಕನ್ನಡವನ್ನೂ ಸಮೃದ್ಧಗೊಳಿಸಿದಂಥವು. ಆದರೆ ಇತ್ತೀಚಿನ ಜಾಗತೀಕರಣದ ಪರಿಣಾಮವಾಗಿ ಈ ಭಾಷಾ ಬಾಂಧವ್ಯಕ್ಕೆ ತೊಡಕುಗಳನ್ನುಂಟು ಮಾಡುವ ಪ್ರಯತ್ನಗಳೂ ನಡೆದಿವೆ. ಇಂತಹ ಸಂದರ್ಭದಲ್ಲಿ, ರಾಜ್ಯದ ಬಹುಭಾಷಾ ವೈವಿಧ್ಯಕ್ಕೆ ಹೆಸರಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಬಹುಭಾಷಾ ಪರಂಪರೆ ನಡೆದು ಬಂದ ದಾರಿಯನ್ನೂ, ಅದರ ಶಕ್ತಿ-ಸೌಂದರ್ಯಗಳನ್ನು ನಿರೂಪಿಸುವ ಲೇಖನವೊಂದು ಇಲ್ಲಿದೆ.-ಸಂ.





ಮಂಜೇಶ್ವರ ಗೋವಿಂದ ಪೈ ಪಂಜೆ ಮಂಗೇಶರಾಯ ಕಯ್ಯಾರ ಕಿಂಞಣ್ಣ ರೈ


೨೦೦೩ ಮಾರ್ಚ್‌ನಲ್ಲಿ ಜಪಾನಿನ ಟೋಕಿಯೊ ಫೌಂಡೇಶನ್‌ನಲ್ಲಿ ನನ್ನ ಉಪನ್ಯಾಸ :' ಸಾಂಸ್ಕೃತಿಕ ಅನನ್ಯತೆ ಮತ್ತು ಸಮುದಾಯಗಳ ಕೊಳು-ಕೊಡೆ : ದಕ್ಷಿಣ ಕನ್ನಡದ ಮಾದರಿ '. ನನ್ನ ಉಪನ್ಯಾಸದಲ್ಲಿ ನಾನು ಪ್ರಧಾನವಾಗಿ ಪ್ರಸ್ತಾವಿಸಿದ್ದು ದಕ್ಷಿಣಕನ್ನಡದ ಬಹುಭಾಷಾ ವೈವಿಧ್ಯ ಮತ್ತು ಅವುಗಳ ನಡುವಿನ ಸಹಯೋಗದ ಬಗ್ಗೆ. ಕನ್ನಡ, ತುಳು, ಕೊಂಕಣಿ, ಬ್ಯಾರಿ , ಮರಾಠಿ, ಮಲೆಯಾಳಂ ಹಾಗೂ ಅವುಗಳ ಉಪಭಾಷೆಗಳು ಒಂದು ಸಣ್ಣ ಪ್ರದೇಶದಲ್ಲಿ ಹೇಗೆ ಜೀವಂತವಾಗಿವೆ ಮತ್ತು ಅನ್ಯೋನ್ಯತೆಯ ಬದುಕನ್ನು ನಡೆಸುತ್ತವೆ ಎನ್ನುವುದನ್ನು ನನ್ನ ಅನುಭವದಿಂದ ವಿವರಿಸಿದೆ. ನಾನು ಹೇಳುತ್ತಿದ್ದದ್ದು ಇಂಗ್ಲಿಷ್‌ನಲ್ಲಿ. ಜಪಾನೀ ಭಾಷೆಯನ್ನು ಮಾತ್ರ ಬಲ್ಲ ಅಲ್ಲಿನ ಕೇಳುಗರಿಗೆ ಅವರ ಹೆಡ್ ಫೋನ್ ಮೂಲಕ ಅದು ಕೇಳುತ್ತಿದ್ದದ್ದು ಜಪಾನೀ ಭಾಷೆಯಲ್ಲಿ. ಅವರು ಜಪಾನೀ ಭಾಷೆಯಲ್ಲಿ ಪ್ರಶ್ನೆ ಕೇಳುತ್ತಿದ್ದದ್ದು ನನಗೆ ನನ್ನ ಹೆಡ್‌ಫೋನ್‌ನಲ್ಲಿ ಕೇಳುತ್ತಿದ್ದದ್ದು ಇಂಗ್ಲಿಷ್ ಭಾಷೆಯಲ್ಲಿ . ಆದರೆ ನನ್ನ ತವರು ಜಿಲ್ಲೆಯಲ್ಲಿ 'ಹೆಡ್ ಫೋನ್' ಇಲ್ಲದೆ, ಕೇವಲ 'ಹೆಡ್' ಮೂಲಕವೇ ಅನೇಕ ಭಾಷೆಗಳನ್ನು ನನ್ನಂತವರು ಕೇಳಿ ಅರ್ಥಮಾಡಿಕೊಳ್ಳಬಲ್ಲೆವು ಎನ್ನುವ ವಿಚಾರವನ್ನು ಮಾನವರಿಕೆ ಮಾಡಿಕೊಳ್ಳುವುದೇ ಜಪಾನಿಯರಿಗೆ ದೊಡ್ಡ ಸವಾಲಾಗಿತ್ತು.

ಐತಿಹಾಸಿಕವಾಗಿ 'ತುಳುನಾಡು' ಎಂದು ಕರೆಯಲಾಗುತ್ತಿದ್ದ ಪ್ರದೇಶವು ಸ್ಥೂಲವಾಗಿ ಈಗಿನ ದಕ್ಷಿಣ ಕನ್ನಡ, ಉಡುಪಿ ಮತ್ತು ಕಾಸರಗೋಡು ಜಿಲ್ಲೆಗಳನ್ನು ವ್ಯಾಪಿಸಿತ್ತು. ಸುಮಾರು ಎರಡು ಸಾವಿರ ವರ್ಷಗಳ ಪ್ರಾಚೀನತೆ ಇರುವ 'ತುಳು' ಎನ್ನುವ ದ್ರಾವಿಡ ಭಾಷೆಯು ಪರಂಪರಾಗತ ತುಳುನಾಡಿನ ಆಡುಭಾಷೆಯಾಗಿತ್ತು. ಆದರೆ ಈ ಪ್ರದೇಶವನ್ನು ಸುಮಾರು ಕ್ರಿಶದ ಆರಂಭದ ಕಾಲದಿಂದ ಆಳಲು ತೊಡಗಿದ ಆಲೂಪರು , ಮುಂದೆ ಆಡಳಿತ ನಡೆಸಿದ ಹೊಯ್ಸಳರು, ವಿಜಯನಗರದ ಅರಸರು ಮತ್ತು ಕೆಳದಿಯ ನಾಯಕರು ಕನ್ನಡದ ಅರಸರಾಗಿದ್ದುದರಿಂದ ಇಲ್ಲಿ ಕನ್ನಡವು ಆಡಳಿತ ಭಾಷೆಯಾಗಿತ್ತು ಎನ್ನುವುದಕ್ಕೆ ಆಯಾ ಕಾಲದ ಶಾಸನಗಳು ದಾಖಲೆಗಳು ಸಾಕ್ಷಿಯಾಗಿವೆ . ವಿಜಯನಗರ ಕಾಲದಿಂದ ಇಲ್ಲಿ ಸ್ಥಳೀಯವಾಗಿ ಆಡಳಿತ ನಡೆಸಿದ ಆಶ್ರಿತರ ಹಾಗೆ ಇದ್ದ ಜೈನ ಅರಸರಾದ ಭೈರರಸ , ಬಂಗ . ಚೌಟ , ಅಜಿಲ ಮುಂತಾದವರ ಭಾಷೆ ತುಳು ಆಗಿದ್ದರೂ ಅವರ ಶಾಸನಗಳು ಕನ್ನಡದಲ್ಲಿ ದೊರೆಯುತ್ತವೆ . ಹೀಗೆ ಆಡುಭಾಷೆಯಾಗಿ ತುಳು ಮತ್ತು ಆಡಳಿತಭಾಷೆಯಾಗಿ ಕನ್ನಡ – ಈ ರೀತಿಯ ದ್ವಿಭಾಷಿಕತ್ವವು ಈ ಪ್ರದೇಶದಲ್ಲಿ ಐತಿಹಾಸಿಕವಾಗಿ ನಡೆದುಕೊಂಡು ಬಂದ ಪದ್ಧತಿಯಾಗಿತ್ತು . ಇದರ ಜೊತೆಗೆ ಸ್ಥಳೀಯವಾಗಿ ಹುಟ್ಟಿಕೊಂಡ ಮತ್ತು ವಲಸೆ ರೂಪದಲ್ಲಿ ಇಲ್ಲಿಗೆ ಬಂದ ಸಮುದಾಯಗಳು ತಮ್ಮದೇ ಆದ ಆಡುಭಾಷೆಗಳನ್ನು ಉಳಿಸಿಕೊಂಡ ಕಾರಣ , ಈ ಪ್ರದೇಶವು ' ಬಹುಭಾಷಾ ಪ್ರದೇಶ ' ವಾಗಿ ರೂಪುಗೊಂಡಿತು . ಸ್ಥಳೀಯವಾಗಿ ಹುಟ್ಟಿಕೊಂಡ ಮುಸ್ಲಿಂ ವ್ಯಾಪಾರೀ ಸಮುದಾಯದ ಬ್ಯಾರಿಗಳ ಬ್ಯಾರಿಭಾಷೆ , ಕ್ರಿಶ ೧೬ನೇ ಶತಮಾನದಲ್ಲಿ ಗೋವಾದಿಂದ ಬಂದ ಗೌಡ ಸಾರಸ್ವತ ಬ್ರಾಹ್ಮಣ (ಜಿ ಎಸ್ ಬಿ) ಮತ್ತು ರೋಮನ್ ಕ್ಯಾಥೋಲಿಕ್ ಕ್ರೈಸ್ತರ ಕೊಂಕಣಿ ಭಾಷೆಯ ಎರಡು ಪ್ರಭೇದಗಳು , ೧೭ನೇ ಶತಮಾನದ ವೇಳೆಗೆ ವಲಸೆ ಬಂದ ಸಾರಸ್ವತ ಬ್ರಾಹ್ಮಣರ ಕೊಂಕಣಿ , ೧೮ನೇ ಶತಮಾನದ ಆರಂಭದಲ್ಲಿ ಬಂದ ಚಿತ್ಪಾವನ್ ಬ್ರಾಹ್ಮಣರ ಚಿತ್ಪಾವನಿ ಮತ್ತು ಕರ್ಹಾಡ ಬ್ರಾಹ್ಮಣರ ಮರಾಠಿ ಮತ್ತು ಕರ್ಹಾಡಿ, ಮರಾಠಿ ನಾಯ್ಕರ ಮರಾಠಿ, ಮರಾಠ ಕ್ಷತ್ರಿಯರ ಮರಾಠಿ, ಮಂಗಳೂರು ದಕ್ಷಿಣಭಾಗದಲ್ಲಿ ನೆಲೆನಿಂತ ಬೋವಿಯವರ ಮೋಯ ಮಲೆಯಾಳಂ, ಮಂಗಳೂರು-ಕಾಸರಗೋಡು ಪರಿಸರದ ಪದ್ಮಶಾಲಿ , ಮುಕಾರಿ, ಮಲೆಯಾಳಿ ಬಿಲ್ಲವ, ಪಾಟಾಳಿ, ಕುಂಬಾರ ಮುಂತಾದವರ ಮಲೆಯಾಳಂನ ವಿಭಿನ್ನ ಪ್ರಭೇದಗಳು ಬಹುರೂಪಿ ಭಾಷೆಗಳ ಆಡುಂಬೊಲವಾಗಿ ಕರಾವಳಿಯನ್ನು ಸಮೃದ್ಧಗೊಳಿಸಿದವು. ಇದರ ಜೊತೆಗೆ ಈ ಪ್ರದೇಶಕ್ಕೆ ೧೬ನೇ ಶತಮಾನದಲ್ಲಿ ಬಂದ ಹವ್ಯಕ ಬ್ರಾಹ್ಮಣರ ಹವ್ಯಕ ಕನ್ನತಿ, ಕೋಟ ಬ್ರಾಹ್ಮಣರ ಕೋಟಕನ್ನಡ , ಸುಳ್ಯಪರಿಸರದ ಗೌಡರ ಗೌಡಕನ್ನಡ (ಅರೆಭಾಷೆ) , ಕೋಟೆಯವರ ಕನ್ನಡ : ಹೀಗೆ ಕನ್ನಡದ ಹಲವು ಸಾಮಾಜಿಕ ಉಪಭಾಷೆಗಳು ಕಾಲಕಾಲಕ್ಕೆ ಈ ಪ್ರದೇಶದಲ್ಲಿ ಸೇರ್ಪಡೆಯಾಗಿವೆ. ತುಳುಭಾಷೆಯನ್ನೇ ತಾಯ್ನುಡಿಯಾಗಿ ಉಳ್ಳ ಸುಮಾರು ನಲ್ವತ್ತಕ್ಕೂ ಹೆಚ್ಚಿನ ಸಮುದಾಯಗಳು ಇಲ್ಲಿ ಕ್ರಿಯಾಶೀಲವಾಗಿವೆ. ಕೊಂಕಣಿ ಭಾಷೆಯ ಸಾಮಾಜಿಕ ಪ್ರಭೇದಗಳನ್ನು ಆಡುವ ಖಾರ್ವಿ , ಕುಡುಬಿ , ರಾಜಾಪುರಿ ಸಹಿತ ಸುಮಾರು ನಲವತ್ತರಷ್ಟು ಸಮುದಾಯಗಳ ತಾಯ್ನುಡಿ 'ಕೊಂಕಣಿ'. ಕೋಟವನ್ನು ಕೇಂದ್ರವನ್ನಾಗಿ ಉಳ್ಳ ಸಮಸ್ತ ಕುಂದಾಪುರ ಪರಿಸರವನ್ನು ಒಳಗೊಂಡ 'ಕುಂದಾಪುರ ಕನ್ನಡ/ ಕುಂದಗನ್ನಡ' ಒಂದು ಪ್ರಾದೇಶಿಕ ಭಾಷೆಯಾಗಿ ಕನ್ನಡದ ಅನನ್ಯತೆಯನ್ನು ಪ್ರಕಟಿಸುತ್ತದೆ. ಹಾಗೆ ನೋಡಿದರೆ ಪರಂಪರಾಗತ ದಕ್ಷಿಣಕನ್ನಡದ ಪ್ರದೇಶದಲ್ಲಿ ಎಲ್ಲ ಭಾಷೆಗಳ ಸಾಮಾಜಿಕ ಪ್ರಭೇದಗಳನ್ನು ಲೆಕ್ಕ ಹಾಕಿದರೆ ಅವುಗಳ ಸಂಖ್ಯೆ ನೂರನ್ನು ದಾಟುತ್ತದೆ.

ತುಳು ತಾಯ್ನುಡಿ ಆಗಿರುವ ನಾನು ಕನ್ನಡವನ್ನು ಕಲಿತದ್ದು ಪ್ರಾಥಮಿಕ ಶಾಲೆಗೆ



ಕೆದಂಬಾಡಿ ಜತ್ತಪ್ಪ ರೈ ಬಿ.ಎಂ. ಇದಿನಬ ಹಾ.ಮ. ನಾಯಕ



ಬಲಿಪ ನಾರಾಯಣ ಭಾಗವತ ಅಮೃತ ಸೋಮೇಶ್ವರ ಮಂದಾರ ಕೇಶವ ಭಟ್ಟ

ಸೇರಿದ ಮೇಲೆ ನನ್ನ ಆರನೆಯ ವಯಸ್ಸಿನಲ್ಲಿ. ೧೯೫೬ರಲ್ಲಿ ಪುತ್ತೂರು ಬಳಿಯ ಪುಣಚದ ಪರಿಯಾಲ್ತಡ್ಕ ಶಾಲೆಗೆ ನಾನು ಸೇರಿದಾಗ ಕನ್ನಡ ಕಲಿಸುತ್ತಿದ್ದ ನನ್ನ ಮಾಸ್ತ್ರುಗಳು ಪರಸ್ಪರ ಮಾತಾಡುತ್ತಿದ್ದದ್ದು ಹವ್ಯಕ ಕನ್ನಡವನ್ನು, ತರಗತಿಯ ಕನ್ನಡವನ್ನು ಅಲ್ಲ. ಪ್ರಾಥಮಿಕ ಶಾಲೆಯ ನನ್ನ ಸಹಪಾಠಿಗಳಲ್ಲಿ ತುಳು ಹವ್ಯಕ ಕನ್ನಡ, ಬ್ಯಾರಿ, ಕೊಂಕಣಿ ಮತ್ತು ಮರಾಠಿ ಭಾಷೆ ಮಾತಾಡುವವರು ಇದ್ದರು. ನಾವು ಮನೆಗೆ ಸಾಮಾನು ತರುತ್ತಿದ್ದ, ನನ್ನ ಚಡ್ಡಿ ಅಂಗಿ ಬಟ್ಟೆ ತೆಗೆದು ಹೊಲಿಸುತ್ತಿದ್ದ ಯು.ಟಿ.. ಪರಿಯ ಕುಞ್ಞಿ ಅವರ ಅಂಗಡಿಯಲ್ಲಿ ಇದ್ದವರು ಮಾತಾಡುತ್ತಿದ್ದ ಬ್ಯಾರಿ ಭಾಷೆಯನ್ನು ಕೇಳುತ್ತಾ ಅದನ್ನು ಅರ್ಥಮಾಡಿಕೊಳ್ಳಲು ತೊಡಗಿದೆ. ಅವರು ತಮ್ಮೊಳಗೆ ಬ್ಯಾರಿಭಾಷೆಯನ್ನೂ ನನ್ನ ಜೊತೆಗೆ ತುಳುವಿನಲ್ಲೂ ಮಾತಾಡುತ್ತಿದ್ದರು. ನಮ್ಮ ಮನೆಯ ಕೃಷಿ ಕೆಲಸಕ್ಕೆ ಬರುತ್ತಿದ್ದ ಮರಾಠಿ ನಾಯ್ಕರು ತಮ್ಮ ನಡುವೆ ಅವರದ್ದೇ ಆದ ಮರಾಠಿಯನ್ನೂ ನಮ್ಮ ಜೊತೆಗೆ ತುಳುವನ್ನೂ ಮಾತಾಡುತ್ತಿದ್ದರು. ನಾನು ಪುತ್ತೂರಿನಲ್ಲಿ ಹೈಸ್ಕೂಲ್‌ನಲ್ಲಿ ಓದುತ್ತಿದ್ದಾಗ ನಮ್ಮ ವಠಾರದಲ್ಲಿ ಜಿಎಸ್‌ಬಿಯವರ ಮನೆಗಳು ಬಹಳ ಇದ್ದುವು. ಅವರೆಲ್ಲ ಕೊಂಕಣಿ ಮಾತಾಡುವುದನ್ನು ಕೇಳಿ, ಅವರ ಮಕ್ಕಳ ಜೊತೆಗೆ ಮಾತಾಡುತ್ತಾ ಕೊಂಕಣಿ ಅರ್ಥ ಆಗುವಷ್ಟು ಕಲಿತೆ. ಅವರಲ್ಲಿ ದೊಡ್ಡವರು ನಮ್ಮ ಜೊತೆಗೆ ಕೆಲವೊಮ್ಮೆ ಕನ್ನಡದಲ್ಲಿ, ಕೆಲವೊಮ್ಮೆ ತುಳುವಿನಲ್ಲಿ ಮಾತಾಡುತ್ತಿದ್ದರು. ನಾನು ಪುತ್ತೂರು ಫಿಲೋಮಿನಾ ಕಾಲೇಜಿನಲ್ಲಿ ವಿದ್ಯಾರ್ಥಿ ಆಗಿದ್ದಾಗ ನನ್ನ ಸಹಪಾಠಿ ಕ್ರಿಶ್ಚಿಯನ್ ವಿದ್ಯಾರ್ಥಿಗಳು ತಮ್ಮ ನಡುವೆ ಮಾತಾಡುತ್ತಿದ್ದ ಕೊಂಕಣಿಯು ಜಿಎಸ್‌ಬಿ ಅವರ ಕೊಂಕಣಿಗಿಂತ ಬೇರೆ ಇತ್ತು. ಕ್ರಿಶ್ಚಿಯನ್ ಕೊಂಕಣಿಯ ಕೆಲವು ವಿಶಿಷ್ಟ ಪದಗಳನ್ನು ಹೆಕ್ಕಿಕೊಂಡ . ಸರಳವಾಗಿ ಯೋಗಕ್ಷೇಮ ವಿಚಾರಿಸಲು ಅದು ಸಾಕಾಯಿತು .

ಕರಾವಳಿಯಲ್ಲಿ ಬಹುಭಾಷಾ ತಾಯ್ನುಡಿಯವರಿಗೆ ಕನ್ನಡವನ್ನು ಶಾಲೆಗಳ ಹೊರಗೆ ಕಲಿಯಲು ನೆರವಾದದ್ದು ಯಕ್ಷಗಾನ. ಬಾಲ್ಯದಿಂದಲೇ ಯಕ್ಷಗಾನ ಬಯಲಾಟಗಳನ್ನು ನೋಡುತ್ತಿದ್ದ ಮತ್ತು ತಾಳಮದ್ದಲೆಗಳ ಸಂಭಾಷಣೆಗಳನ್ನು ಕೇಳುತ್ತಿದ್ದ ನನ್ನಂಥವರಿಗೆ ಅವುಗಳಿಂದ ಸಾಹಿತ್ಯಕ ಎನ್ನಬಹುದಾದ ಕನ್ನಡದ ಅರಿವು ವಿಶೇಷವಾಗಿ ಆಯಿತು. ಯಕ್ಷಗಾನದಲ್ಲಿ ಕನ್ನಡವನ್ನು ಲೀಲಾಜಾಲವಾಗಿ ಮಾತಾಡುತ್ತಿದ್ದ ಬಹಳ ಮಂದಿಯ ತಾಯ್ನುಡಿ 'ಕನ್ನಡ' ಆಗಿರಲಿಲ್ಲ. ತುಳು, ಮಲೆಯಾಳ, ಮರಾಠಿ, ಚಿತ್ಪಾವನಿ, ಕರ್ಹಾಡ, ಕೊಂಕಣಿ, ಬ್ಯಾರಿ ಭಾಷೆಯವರ ಹಾಗೆಯೆ ಹವ್ಯಕ ಕನ್ನಡದವರೂ ಸಾಕಷ್ಟು ಸಂಖ್ಯೆಯಲ್ಲಿ ಇರುತ್ತಿದ್ದರು ಮತ್ತು ಈಗಲೂ ಇದ್ದಾರೆ. ಉದಾಹರಣೆಗೆ ನನಗೆ ಪರಿಚಯದ ತೆಂಕು ತಿಟ್ಟಿನ ಹಳೆಯ ಕಾಲದ ಹಿರಿಯರ ಕೆಲವು ಹೆಸರುಗಳನ್ನಷ್ಟೇ ಉಲ್ಲೇಖಿಸುತ್ತಿದ್ದೇನೆ. ಇಂತಹ ಕೆಲವು ಸಾವಿರ ಹೆಸರುಗಳು ಇವೆ. ತುಳು ತಾಯ್ನುಡಿಯ ಅಳಕೆ ರಾಮಯ್ಯ ರೈ, ಬೋಳಾರ ನಾರಾಯಣ ಶೆಟ್ಟಿ, ಮಲ್ಪೆ ಶಂಕರನಾರಾಯಣ ಸಾಮಗ, ರಾಮದಾಸ ಸಾಮಗ, ಅಗರಿ ಶ್ರೀನಿವಾಸ ಭಾಗವತ, ಕದ್ರಿ ವಿಷ್ಣು, ದಾಮೋದರ ಮಂಡೆಚ್ಚ, ಅರುವ ಕೊರಗಪ್ಪ ಶೆಟ್ಟಿ ಮುಂತಾದವರು; ಮಲೆಯಾಳಂ ತಾಯ್ನುಡಿಯ ಬಣ್ಣದ ಮಾಲಿಂಗ, ಚಂದ್ರಗಿರಿ ಅಂಬು, ಕುಂಬಳೆ ಸುಂದರ ರಾವ್, ಕುಂಬಳೆ ಕುಟ್ಯಪ್ಪು ಮುಂತಾದವರು; ಕರ್ಹಾಡ ಭಾಷೆಯ ಬಲಿಪ ನಾರಾಯಣ ಭಾಗವತರು ಹಾಗೂ ಬಲಿಪ ಮನೆತನದ ಕಲಾವಿದರು, ಪೆರ್ಲ ಕೃಷ್ಣ ಭಟ್;ಚಿತ್ಪಾವನಿಯ ಎಂ. ಪ್ರಭಾಕರ ಜೋಶಿ; ಮರಾಠಿಯ ಮಂದಾರ ಕೇಶವ ಭಟ್; ಕೊಂಕಣಿಯ ಕ್ರಿಶ್ಚಿಯನ್ ಬಾಬು ಮತ್ತು ಮಿಜಾರು ಅಣ್ಣಪ್ಪ, ಬ್ಯಾರಿ ಭಾಷೆಯ ಜಬ್ಬಾರ್ ಸಮೋ ಇತ್ಯಾದಿ ನೂರಾರು ಕಲಾವಿದರು ಕನ್ನಡವನ್ನು ಕರಾವಳಿಯಲ್ಲಿ ಕಟ್ಟಿ ಬೆಳೆಸಿದವರು ಇದ್ದಾರೆ . ಅದೇ ರೀತಿ ತುಳು ಯಕ್ಷಗಾನದಲ್ಲಿ ಕನ್ನಡ ಮತ್ತು ತುಳುವೇತರ ಭಾಷೆಗಳ ಕಲಾವಿದರು ಪಾಲುಗೊಂಡು ಭಾಷಾ ಸೌಹಾರ್ದವನ್ನು ಮೆರೆದಿದ್ದಾರೆ . ಶೇಣಿ ಗೋಪಾಲಕೃಷ್ಣ ಭಟ್ಟರಂತಹ ಹವ್ಯಕ ಕನ್ನಡ ತಾಯ್ನುಡಿಯ ಮೇರು ಕಲಾವಿದರು ಕನ್ನಡ ಮತ್ತು ತುಳು ಭಾಷೆಗಳನ್ನು ಜನಪ್ರಿಯಗೊಳಿಸುವುದರ ಜೊತೆಗೆ 'ಬಪ್ಪನಾಡು ಕ್ಷೇತ್ರ ಮಹಾತ್ಮೆ ' ಯಕ್ಷಗಾನದಲ್ಲಿ ಬಪ್ಪಬ್ಯಾರಿಯ ಪಾತ್ರದಲ್ಲಿ ಬ್ಯಾರಿ ಭಾಷೆಯನ್ನು ಆಡಿ, ಆ ಭಾಷೆಗೆ ಯಕ್ಷಗಾನದಲ್ಲಿ ಮಾನ್ಯತೆಯನ್ನು ತಂದುಕೊಟ್ಟಿದ್ದಾರೆ .


ಕರಾವಳಿಯಲ್ಲಿ ಕನ್ನಡೇತರ ಮಾತೃಭಾಷೆಯವರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ತಮ್ಮ ವಿಶಿಷ್ಟ ಕೃತಿಗಳ ಮೂಲಕ ಅಪೂರ್ವ ಕೊಡುಗೆಗಳನ್ನು ಕೊಟ್ಟಿದ್ದಾರೆ. ತುಳು ತಾಯ್ನುಡಿಯ ಕಯ್ಯಾರ ಕಿಞ್ಞಣ್ಣ ರೈ, ಪಾ ವೆಂ ಆಚಾರ್ಯ, ನಿರಂಜನ, ಕು ಶಿ ಹರಿದಾಸ ಭಟ್ಟ, ಕೆ ಟಿ ಗಟ್ಟಿ, ವಿಶುಕುಮಾರ್, ಎಚ್ ನಾಗವೇಣಿ ಮುಂತಾದವರು; ಕೊಂಕಣಿ ತಾಯ್ನುಡಿಯ ಗುಲ್ವಾಡಿ ವೆಂಕಟ ರಾವ್, ಮಂಜೇಶ್ವರ ಗೋವಿಂದ ಪೈ, ಪಂಜೆ ಮಂಗೇಶ ರಾವ್, ಎಂ ಎನ್ ಕಾಮತ್, ಗೋಪಾಲಕೃಷ್ಣ ಪೈ ಮುಂತಾದವರು; ಮಲೆಯಾಳಂ ಉಪಭಾಷೆಗಳ ಅಮೃತ ಸೋಮೇಶ್ವರ, ನಾ ದಾಮೋದರ ಶೆಟ್ಟಿ ಇತರರು ; ಬ್ಯಾರಿ ಭಾಷೆಯ ಬೊಳುವಾರು ಮಹಮ್ಮದ್ ಕುಞ್ಞಿ ಫಕೀರ್ ಅಹಮ್ಮದ್ ಕಟ್ಪಾಡಿ , ಸಾರಾ ಅಬೂಬಕ್ಕರ್ ಬಿ ಎಂ ಹನೀಫ್, ಬಿ ಎಂ ಬಶೀರ್ ಹಾಗೂ ಕನ್ನಡ ಕಾವ್ಯಗಳ ವಾಚನದ ಮೂಲಕ ಕನ್ನಡ ಜಾಗೃತಿ ಮೂಡಿಸಿದ ಬಿ ಎಂ ಇದಿನಬ್ಬ ಮುಂತಾದವರು;

ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ತಮ್ಮ ಕನ್ನಡ ಸಾಹಿತ್ಯ ಕೃತಿಗಳಿಗಾಗಿ ಪ್ರಶಸ್ತಿ ಪಡೆದ ಬ್ಯಾರಿ ತಾಯ್ನುಡಿಯ ಬೊಳುವಾರು ಮಹಮ್ಮದ್ ಕುಞ್ಞಿ ಮತ್ತು ಕೊಂಕಣಿ ತಾಯ್ನುಡಿಯ ಗೋಪಾಲಕೃಷ್ಣ ಪೈ , ಕೇಂದ್ರ ಸಾಹಿತ್ಯ ಅಕಾಡೆಮಿಯ ಅನುವಾದ ಪ್ರಶಸ್ತಿ ಪಡೆದ ಮಲೆಯಾಳಂ ತಾಯ್ನುಡಿಯ ನಾ ದಾಮೋದರ ಶೆಟ್ಟಿ ಕರಾವಳಿಯ ನೆಲದ ಹೆಸರನ್ನು ತಮ್ಮ ಭಾಷಿಕ ಬಹುತ್ವದ ಮೂಲಕ ಸ್ಥಾಪಿಸಿದವರು. ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾಷಾ ಸಮ್ಮಾನ್ ಗೌರವಕ್ಕೆ ಪಾತ್ರರಾದ ಮೂವರು ಹಿರಿಯ ಸಾಹಿತಿಗಳು ಮೂರು ಭಿನ್ನ ತಾಯ್ನುಡಿಯವರು : ಮಂದಾರ ಕೇಶವ ಭಟ್ಟ (ಮರಾಠಿ) , ಕೆದಂಬಾಡಿ ಜತ್ತಪ್ಪ ರೈ ತುಳು) , ಅಮೃತ ಸೋಮೇಶ್ವರ (ಮೋಯ ಮಲೆಯಾಳಂ) .

ಕನ್ನಡಿಗರು ಮತ್ತು ಇತರ ತುಳುವೇತರರು ತುಳುವಿನಲ್ಲಿ ಸಾಹಿತ್ಯ ರಚನೆ ಸಂಶೋಧನೆ ಮಾಡಿದ್ದಾರೆ. ಹವ್ಯಕ ಕನ್ನಡದ ಸೇಡಿಯಾಪು ಕೃಷ್ಣ ಭಟ್, ಪಡಾರು ಮಹಾಬಲೇಶ್ವರ ಭಟ್, ವಸಂತಕುಮಾರ ಪೆರ್ಲ, ಮಹಾಲಿಂಗ ಭಟ್, ಪಾದೆಕಲ್ಲು ವಿಷ್ಣು ಭಟ್; ಕನ್ನಡ/ಕೋಟ ಕನ್ನಡದ ಬಡಕಬೈಲ್ ಪರಮೇಶ್ವರಯ್ಯ, ಎ ವಿ ನಾವಡ, ಪಿ ಎಸ ರಾವ್; ಗೌಡ ಕನ್ನಡದ ಪುರುಷೋತ್ತಮ ಬಿಳಿಮಲೆ; ಅಮೃತ ಸೋಮೇಶ್ವರ (ಮೋಯ ಮಲೆಯಾಳಂ) , ಪ್ರಭಾಕರ ಶಿಶಿಲ (ಮಲೆಯಾಳಂ) ; ಬ್ಯಾರಿ ಭಾಷೆಯ ಎಂ. ಎಸ್. ಇಬ್ರಾಹಿಂ , ಹಂಝು ಮಲಾರ್ , ಅಬೂಬಕ್ಕರ್, ಮಹಮ್ಮದ್ ಬಡ್ಡೂರ್ ; ಕೊಂಕಣಿ ಭಾಷೆಯ ಕ್ಯಾಥರಿನ್ ರೊಡ್ರಿಗಸ್ , ಆಳ್ವಾರಿಸ್; ಮರಾಠಿ ಭಾಷೆಯ ಮಂದಾರ ಕೇಶವ ಭಟ್ ; ಚಿತ್ಪಾವನಿ ಭಾಷೆಯ ಪ್ರಭಾಕರ ಜೋಶಿ –ಹೀಗೆ ಬಹಳ ಮಂದಿ ಲೇಖಕರು ಇದ್ದಾರೆ.

ಕನ್ನಡ ಪ್ರದೇಶದಿಂದ ದಕ್ಷಿಣಕನ್ನಡಕ್ಕೆ ಬಂದು ತುಳು ಕಲಿತು ಕೇಶವ ಕುಡ್ಲ ಎನ್ನುವವರು ತುಳುವಿನಲ್ಲಿ ಎಷ್ಟು ಪ್ರೀತಿ ಮತ್ತು ಪ್ರಾವೀಣ್ಯವನ್ನು ಹೊಂದಿದ್ದಾರೆ ಎಂದರೆ ಅವರು ಡಿ.ಕೆ. ಚೌಟರ ಎರಡು ತುಳು ನಾಟಕಗಳನ್ನು ಜಾನಕಿ ಬ್ರಹ್ಮಾವರ ಅವರ ಎರಡು ತುಳು ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದ ಮಾಡಿ, ತುಳು–ಕನ್ನಡ ಬಾಂಧವ್ಯದ ಮಾದರಿ ಆಗಿದ್ದಾರೆ. ಬ್ಯಾರಿ ಭಾಷೆಯ ಮಹಮ್ಮದ್ ಕುಳಾಯಿ ಅವರು ಡಿ..ಕೆ. ಚೌಟರ 'ಮಿತ್ತಬೈಲ್ ಯಮುನಕ್ಕೆ' ತುಳು ಕಾದಂಬರಿಯನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಮಲೆಯಾಳಂ ತಾಯ್ನುಡಿಯ ನಾ. ದಾಮೋದರ ಶೆಟ್ಟರು ಡಿ. ಕೆ. ಚೌಟರ ತುಳು ನಾಟಕವನ್ನು'ಮೂರು ಹೆಜ್ಜೆ ಮೂರು ಲೋಕ ' ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ .

ಕನ್ನಡದಿಂದ ತುಳುವಿಗೆ ಅನುವಾದ ಆದ ಒಂದು ಉನ್ನತ ಪರಂಪರೆ ಇದೆ. ಈ ನಿಟ್ಟಿನಲ್ಲಿ ಕೆದಂಬಾಡಿ ಜತ್ತಪ್ಪ ರೈ ಮುಖ್ಯ ಹೆಸರು. ಅವರು ಕನ್ನಡದಿಂದ ತುಳುವಿಗೆ ಅನುವಾದ ಮಾಡಿದ ಕೃತಿಗಳು : ಕುವೆಂಪು ಅವರ ಬೆರಳ್ಗೆ ಕೊರಳ್, ಯಮನ ಸೋಲು, ಬೊಮ್ಮನಹಳ್ಳಿಯ ಕಿಂದರಿ ಜೋಗಿ; ಕಾರಂತರ 'ಚೋಮನ ದುಡಿ' ; ನಿರಂಜನರ 'ಚಿರಸ್ಮರಣೆ ' . ಪ್ರೇಮಾನಂದ ಕಿಶೋರ್ – ಕಾರ್ನಾಡರ 'ಯಯಾತಿ'; ಜಾನಕಿ ಬ್ರಹ್ಮಾವರ –ಕುವೆಂಪು ' ರಕ್ತಾಕ್ಷಿ '; ಕಾತ್ಯಾಯಿನಿ ಕುಂಜಿಬೆಟ್ಟು




ಡಿ.ಕೆ. ಚೌಟ   ಸಾರಾ ಅಬೂಬಕರ್   ಜಾನಕಿ ಬ್ರಹ್ಮಾವರ

– ಕಂಬಾರರ 'ಮಹಮ್ಮಾಯಿ' ಮತ್ತು ಕಾರ್ನಾಡರ 'ನಾಗಮಂಡಲ ' . ನರೇಂದ್ರ ರೈ ದೇರ್ಲ – ತೇಜಸ್ವಿ ಅವರ 'ಕರ್ವಾಲೊ ' .

ತುಳು ಭಾಷೆಗೆ ಶೈಕ್ಷಣಿಕ ವಲಯದಲ್ಲಿ ಮೊತ್ತಮೊದಲಾಗಿ ಅವಕಾಶ ಕಲ್ಪಿಸಿದ ಒಂದು ಸನ್ನಿವೇಶವನ್ನು ನಾನು ದಾಖಲಿಸಬೇಕು. ಮಂಗಳೂರು ವಿವಿ ಸ್ಥಾಪನೆ ಆಗುವ ಮೊದಲು ಮೈಸೂರು ವಿವಿಯ ಸ್ನಾತಕೋತ್ತರ ಕೇಂದ್ರ ಮಂಗಳೂರಲ್ಲಿ ಇದ್ದಾಗ ನಾನು ಅದರ ಕನ್ನಡ ವಿಭಾಗದಲ್ಲಿ ಅಧ್ಯಾಪಕ ಆಗಿದ್ದೆ. ಆಗ ಮೈಸೂರು ವಿವಿಯ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಡಾ. ಹಾ ಮಾ ನಾಯಕರು ನನ್ನಲ್ಲಿ ಮಂಗಳೂರು ಕೇಂದ್ರದ ಕನ್ನಡ ಎಂಎ ಸಿಲೆಬಸ್‌ನಲ್ಲಿ ತುಳು ಭಾಷೆ ಸಾಹಿತ್ಯ ಜಾನಪದಕ್ಕೆ ಸಂಬಂಧಿಸಿದ ಎರಡು ಪತ್ರಿಕೆಗಳನ್ನು ಸೇರಿಸುವ ಸೂಚನೆಯನ್ನು ಕೊಟ್ಟರು. ನಾನು ತಯಾರಿಸಿ ಕೊಟ್ಟ ಸಿಲೆಬಸ್‌ನ್ನು ಮೈಸೂರು ವಿವಿ ಅಂಗಸಂಸ್ಥೆಗಳಿಂದ ಅಂಗೀಕರಿಸಿದ ಪರಿಣಾಮವಾಗಿ ೧೯೭೬ರಿಂದ ಕನ್ನಡ ಎಂಎಯಲ್ಲಿ 'ತುಳುವ ಅಧ್ಯಯನ' ಸೇರ್ಪಡೆ ಆಯಿತು. ೧೯೮೦ರಲ್ಲಿ ಮಂಗಳೂರು ವಿವಿ ಆದಮೇಲೆ ಕೂಡ ಅದು ಮುಂದುವರಿಯಿತು. ತುಳುವರ ಯಾವುದೇ ಹಕ್ಕೊತ್ತಾಯ ಇಲ್ಲದೆ ಹಾ ಮಾ ನಾಯಕರ ಈ ಭಾಷಾ ಬಂಧುತ್ವದ ಉಪಕ್ರಮ ತುಳು ಶೈಕ್ಷಣಿಕ ಬೆಳವಣಿಗೆಯಲ್ಲಿ ಐತಿಹಾಸಿಕವಾದುದು. ೧೯೭೦ರ ದಶಕದಲ್ಲಿ ನಾನು 'ತುಳು ಜನಪದ ಸಾಹಿತ್ಯ' ವಿಷಯದ ಬಗ್ಗೆ ಪಿಎಚ್‌ಡಿ ಪದವಿಗಾಗಿ ಮೈಸೂರು ವಿವಿಯಲ್ಲಿ ಸಂಶೋಧನೆ ನಡೆಸಲು ವಿಷಯವನ್ನು ಸೂಚಿಸಿ ಮಾರ್ಗದರ್ಶಕರಾಗಿ ಬೆಂಬಲ ಕೊಟ್ಟವರು ಹಾ ಮಾ ನಾಯಕರು.


ಎಂ ವೀರಪ್ಪ ಮೊಯಿಲಿ ಅವರು ಕರ್ನಾಟಕದ ಮುಖ್ಯಮಂತ್ರಿ ಆಗಿದ್ದಾಗ ೧೯೯೪ರಲ್ಲಿ ತುಳು, ಕೊಡವ ಮತ್ತು ಕೊಂಕಣಿ ಭಾಷೆಗಳಿಗೆ ಮೂರು ಸಾಹಿತ್ಯ ಅಕಾಡೆಮಿಗಳನ್ನು ಸ್ಥಾಪಿಸಿದರು. ನನ್ನನ್ನು ತುಳು ಸಾಹಿತ್ಯ ಅಕಾಡೆಮಿಯ ಮೊದಲನೆಯ ಅಧ್ಯಕ್ಷನಾಗಿ ನೇಮಕ ಮಾಡಿದರು. ಆಗ ನಾನು ಮಂಗಳೂರು ವಿವಿ ಕನ್ನಡ ವಿಭಾಗದ ಮುಖ್ಯಸ್ಥ ಆಗಿದ್ದೆ. ಹಗಲೆಲ್ಲಾ ವಿವಿಯಲ್ಲಿ ಕನ್ನಡ ಪಾಠ ಮಾಡಿ, ಸಂಜೆ ಮಂಗಳೂರಿಗೆ ಬಂದು ತುಳು ಅಕಾಡೆಮಿಯ ಕೆಲಸ ನಿರ್ವಹಿಸುತ್ತಿದ್ದೆ. ತುಳು ತಾಯ್ನುಡಿ ಆಗಿದ್ದು ತುಳು ಜಾನಪದದ ಬಗ್ಗೆ ಪಿಎಚ್ ಡಿ ಮಾಡಿ, ಕನ್ನಡ ಎಂಎ ವಿದ್ಯಾರ್ಥಿಗಳಿಗೆ ಕನ್ನಡ ಸಾಹಿತ್ಯದ ಅಧ್ಯಾಪನ ಮಾಡುತ್ತಿದ್ದ ನನಗೆ, ಈ ಜವಾಬ್ದಾರಿ ನನ್ನ ಬಾಲ್ಯದಿಂದ ಅಂತರ್ಗತವಾಗಿದ್ದ ಬಹುಭಾಷಿಕತ್ವದ ಇನ್ನೊಂದು ಹಂತವಾಗಿತ್ತು. ಆಗ ನಾನು ಆರಂಭಿಸಿದ ಒಂದು ಯೋಜನೆ – ಯುವ ಪೀಳಿಗೆಯವರಿಗೆ ತುಳುವಿನಲ್ಲಿ ಗುಣಮಟ್ಟದ ಸಾಹಿತ್ಯ ನಿರ್ಮಾಣ ಮಾಡಲು ತರಬೇತಿ ಕೊಡುವುದು. ಇದಕ್ಕಾಗಿ ಕಾವ್ಯ, ಕತೆ ಕಾದಂಬರಿ, ನಾಟಕ, ಅನುವಾದ ರಂಗಗಳಲ್ಲಿ ಕಮ್ಮಟಗಳನ್ನು ಏರ್ಪಡಿಸಿದೆ. ಇಂತಹ ಕಮ್ಮಟಗಳಲ್ಲಿ ಸಂಪನ್ಮೂಲವ್ಯಕ್ತಿಗಳಾಗಿ ತುಳು ಲೇಖಕರ ಜೊತೆಗೆ ಕನ್ನಡದ ಅನುಭವಿ ಸಾಹಿತಿಗಳನ್ನು ಆಹ್ವಾನಿಸಿದ ಕನ್ನಡ ಲೇಖಕರು ತುಳು ಬರಹಗಾರರ ನಿರ್ಮಾಣದ ಕಾಯಕದಲ್ಲಿ ಭಾಗವಹಿಸಿ ಮಾರ್ಗದರ್ಶನಕೊಟ್ಟ ವಿದ್ಯಮಾನವು ಕನ್ನಡ–ತುಳು ಬಂಧುತ್ವದ ಒಂದು ವಿಶಿಷ್ಟ ಮಾದರಿ. ತುಳು ಕತೆ ಕಾದಂಬರಿ ರಚನಾ ಕಮ್ಮಟ : ಗಿರಡ್ಡಿ ಗೋವಿಂದರಾಜ, ಬಿ ದಾಮೋದರ ರಾವ್, ಬೊಳುವಾರು ಮಹಮ್ಮದ್ ಕುಞ, ಕೆ ಟಿ ಗಟ್ಟಿ , ವಸಂತ ಶೆಟ್ಟಿ.

ತುಳು ಕಾವ್ಯ ರಚನಾ ಕಮ್ಮಟ : ನಿರ್ದೇಶಕರು –ಸುಬ್ರಾಯ ಚೊಕ್ಕಾಡಿ. ಸಂಪನ್ಮೂಲ ವ್ಯಕ್ತಿ : ಕೆ ಕುಶಾಲಪ್ಪ ಗೌಡ, ಅಮೃತ ಸೋಮೇಶ್ವರ. ತುಳು ನಾಟಕ ಕಮ್ಮಟ : ಸಿ ಎನ್ ರಾಮಚಂದ್ರನ್, ಬಿ ಅರ್. ನಾಗೇಶ್, ವೈದೇಹಿ , ಸದಾನಂದ ಸುವರ್ಣ , ನಾ ದಾಮೋದರ ಶೆಟ್ಟಿ, ಐ ಕೆ ಬೊಳ್ವಾರು . ತುಳು ಅಕಾಡೆಮಿ ನಡೆಸಿದ 'ವಿಶುಕುಮಾರ್ ಸಂಸ್ಮರಣೆ' ಕಾರ್ಯಕ್ರಮದಲ್ಲಿ ಹಾ ಮಾ ನಾಯಕ, ಎಂ ಪಿ ಪ್ರಕಾಶ್, ಮಾವಿನಕೆರೆ ರಂಗನಾಥನ್ , ವಡ್ಡರ್ಸೆ ರಘುರಾಮ ಶೆಟ್ಟಿ, ಆರ್ ಜಿ ಹಳ್ಳಿ ನಾಗರಾಜ್ ಭಾಗವಹಿಸಿದ್ದರು. ಅಕಾಡೆಮಿಯು ೧೯೯೭ರಲ್ಲಿ ಉಳ್ಳಾಲದಲ್ಲಿ ನಡೆಸಿದ ಮೊದಲನೆಯ 'ಅಬ್ಬಕ್ಕ ಉತ್ಸವ' ಕಾರ್ಯಕ್ರಮದಲ್ಲಿ ಶಿವರಾಮ ಕಾರಂತರು ಅತಿಥಿಯಾಗಿ ಭಾಗವಹಿಸಿ ಉಪನ್ಯಾಸ ಕೊಟ್ಟಿದ್ದರು.



ಪ್ರಭಾಕರ ಜೋಷಿ ಬೊಳುವಾರು ಮಹಮ್ಮದ್ ಕುಂಞ ಪುರುಷೋತ್ತಮ ಬಿಳಿಮಲೆ

ಭಾಷಾ ಅಕಾಡೆಮಿಗಳು ಸ್ಥಾಪನೆ ಆದ ಬಳಿಕ ತುಳು ಕೊಂಕಣಿ ಕೊಡವ ಬ್ಯಾರಿ ಭಾಷೆಗಳು ಕನ್ನಡದ ಸಹಯೋಗ ಮತ್ತು ಬೆಂಬಲದೊಂದಿಗೆ ತಮ್ಮ ಬೆಳವಣಿಗೆಯ ನಕಾಶೆಗಳನ್ನು ಹಾಕಿಕೊಂಡು ವಿಸ್ತರಣೆಗೊಳ್ಳುತ್ತಿವೆ. ಈ ಎಲ್ಲ ಭಾಷೆಗಳು ಕನ್ನಡ ಲಿಪಿಯನ್ನೇ ಬಳಸಿಕೊಂಡು ಕರ್ನಾಟಕದ ಬಹುತ್ವವನ್ನು ಸಕಾರಾತ್ಮಕವಾಗಿ ಬೆಳೆಸುತ್ತಿವೆ. ಇಂತಹ ಭಾಷೆಗಳ ಅಭಿವೃದ್ಧಿಗೆ ಸಂಬಂಧಪಟ್ಟಂತೆ ನಮ್ಮ ದೇಶದಲ್ಲಿ ಮಾರ್ಗದರ್ಶಿಯಾದ 'ಭಾಷಾ ಯೋಜನೆ ಎಂಬುದು ಇಲ್ಲ. ಹಿಂದಿನ ಸೋವಿಯೆತ್ ಯೂನಿಯನ್‌ನಲ್ಲಿ ಇಂತಹ ಅನೇಕ ಮೌಖಿಕ ಭಾಷೆಗಳಿಗೆ ಅವುಗಳ ಆಡುಭಾಷೆಯ ಅನನ್ಯತೆಯನ್ನು ಉಳಿಸಿಕೊಂಡು ,ಅವುಗಳನ್ನು ಆಧುನಿಕ ಕಾಲದ ಅಗತ್ಯಗಳಿಗೆ ಅಳವಡಿಸುವ ಭಾಷಾ ಯೋಜನೆಯ ಕೆಲಸಗಳು ನಡೆದಿವೆ. ಸಂಸ್ಕೃತಿಯ ಬಹುತ್ವದಲ್ಲಿ ಇಂತಹ ಭಾಷೆಗಳ ಬೆಳವಣಿಗೆ ಮತ್ತು ಅಂತರ್ ಸಂವಹನದ ಸಾಧ್ಯತೆಗಳನ್ನು ಶೋಧಿಸುವುದು ಮುಖ್ಯವಾಗುತ್ತದೆ . ಕರಾವಳಿಯಲ್ಲಿ ಬಹುಭಾಷಾ ಅಸ್ತಿತ್ವವು ಬಹುತ್ವದ ಸಂವಹನಕ್ಕೆ ಸರಿಯಾದ ಅಡಿಪಾಯವನ್ನು ಹಾಕಿಕೊಟ್ಟಿದೆ . ಭಾಷೆಗಳು ಜೀವಂತವಾಗಿರುವುದೇ ಕ್ರಿಯಾಶೀಲ ಬದುಕಿನಲ್ಲಿ ಮತ್ತು ಅನ್ಯಸಂಸ್ಕೃತಿಗಳನ್ನು ಗೌರವಿಸುವುದರಲ್ಲಿ, ಅರ್ಥಮಾಡಿಕೊಳ್ಳುವುದರಲ್ಲಿ ಮತ್ತು ಸಮಾನತೆಯ ನೆಲೆಯಲ್ಲಿ ಸಂವಹನ ಮಾಡುವುದರಲ್ಲಿ.



(ಮಂಗಳೂರಿನ ನಿವಾಸಿಯಾದ ಲೇಖಕರು ವೃತ್ತಿಯಿಂದ ಕನ್ನಡ ಅಧ್ಯಾಪಕರಾಗಿದ್ದವರು; ಕನ್ನಡ ಮತ್ತು ತುಳು ಸಾಹಿತ್ಯಗಳ ಹಿರಿಯ ವಿದ್ವಾಂಸರು)

ಸಾಹಿತ್ಯ ಬೋಧನೆ ಮತ್ತು ಅಧ್ಯಯನಗಳ ಅವನತಿ

-ಓ.ಎಲ್. ನಾಗಭೂಷಣ ಸ್ವಾಮಿ

"ಅಂಕಗಳು, ಸರ್ಟಿಫಿಕೇಟುಗಳೇ ಮುಖ್ಯವಾಗಿರುವಾಗ ನಗೆಪಾಟಲಿಗೆ ಈಡಾಗುವ ವಿಚಾರಸಂಕಿರಣಗಳ ಸರಣಿಗಳು, ಪುನರ್ಮನನ, ಓರಿಯೆಂಟೇಶನ್ ಇತ್ಯಾದಿಗಳು ಏನೇ ಕಸರತ್ತು ಮಾಡಿದರೂ ಫಲವಿಲ್ಲ. ಇವುಗಳ ಜೊತೆಗೆ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಾಪಕರುಗಳ ಆಯ್ಕೆಯಲ್ಲಿ ಸ್ವಜನಪಕ್ಷಪಾತ, ಜಾತಿ ಮೋಹ, ಸಾಮಾಜಿಕ ನ್ಯಾಯವನ್ನು ಪಾಲಿಸುತ್ತಿದ್ದೇವೆ ಅನ್ನುವ ಕಪಟನಾಟಕ ಇವೆಲ್ಲವೂ ನಡೆಯುತ್ತವೆ. ಪರೀಕ್ಷೆಗಳನ್ನು ಸಾಧ್ಯವಾದಷ್ಟೂ ವೈಜ್ಞಾನಿಕವಾಗಿ ಸುಲಭಗೊಳಿಸುವ ಕ್ರಮವೂ ಜಾರಿಗೆ ಬಂದಿದೆ. ಭಾಷೆಯನ್ನು ಬಳಸುವಲ್ಲಿ ಪರಿಣತಿ ಪಡೆಯಬೇಕಾದ ವಿದ್ಯಾರ್ಥಿಗಳು, ಯೋಚನಾಕ್ರಮವನ್ನು, ವಿಮರ್ಶೆಯ ಧೈರ್ಯವನ್ನು ಬೆಳೆಸಿಕೊಳ್ಳುವುದು ಅಗತ್ಯವಾಗಿರುವ ಸಾಹಿತ್ಯವಿದ್ಯಾರ್ಥಿಗಳು ಕೇವಲ ಮಾಹಿತಿ ಪ್ರಧಾನವಾದ ಹೆಚ್ಚು ಬರವಣಿಗೆಯ ಅಗತ್ಯವಿರದ, ಬೋಧನೆ ಕಲಿಕೆಯ ಸಾವಕಾಶಕ್ಕೆ ಅವಕಾಶವಿರದ ಸೆಮಿಸ್ಟರ್ ಪದ್ಧತಿಯ ಬೋಧನೆ, ವಸ್ತುನಿಷ್ಠ ಪ್ರಶ್ನೆಗಳಿಗೆ ಉತ್ತರ ಗೊತ್ತು ಮಾಡಿಕೊಳ್ಳುವಲ್ಲಿ ಕಳೆದು ಹೋಗುತ್ತಾರೆ."



ಪ್ರಸ್ತುತ ವಿಷಯವನ್ನು ಬರೆಯಲು ಹೊರಟರೆ ಮುದಿ ಮೇಷ್ಟರ ಸ್ವಗತದ ಹಾಗೆ ಕಂಡೀತು ಅನ್ನುವ ಆತಂಕದ ಜೊತೆಗೇ ಈ ವಿಷಯ ಎಷ್ಟು ಸಿಕ್ಕುಬಿದ್ದಿದೆಯೆಂದರೆ ಇದಕ್ಕೆ ಪರಿಹಾರವೇ ಇಲ್ಲ, ಇಡೀ ಶಿಕ್ಷಣ ವ್ಯವಸ್ಥೆ ಪೂರಾ ನಾಶವಾಗಲಿ ಅನ್ನುವ ಭಾವನೆ ಹುಟ್ಟಿ, ಈ ಬಗ್ಗೆ ಬರೆಯುವುದು ಕೂಡ ವ್ಯರ್ಥ ಮೈಪರಚಿಕೊಳ್ಳುವ ಹತಾಶ ಅಸಹಾಯಕ ಕೆಲಸ ಅನ್ನಿಸುತ್ತದೆ. ಸುಮಾರು ನಲವತ್ತು ವರ್ಷದ ಹಿಂದೆ ಕಾಲೇಜಿನಲ್ಲಿ ಓದುತ್ತಿದ್ದಾಗಲೂ ಇದ್ದ ಅಧ್ಯಾಪಕರೆಲ್ಲ ಪರಮಶ್ರೇಷ್ಠರು, ವಿದ್ಯಾರ್ಥಿಗಳೆಲ್ಲ ಸದ್ಗುಣ ಸಂಪನ್ನರಾಗಿದ್ದರು ಅನ್ನುವ ಭ್ರಮೆಯೇನೂ ಬೇಕಾಗಿಲ್ಲ. ವ್ಯತ್ಯಾಸವೇನೆಂದರೆ ಆಗಲೇ ಕಡಮೆ ಸಂಖ್ಯೆಯಲ್ಲಿದ್ದ 'ಒಳ್ಳೆಯ' ಮೇಷ್ಟರು, 'ಒಳ್ಳೆಯ' ವಿದ್ಯಾರ್ಥಿಗಳ ಸಂಖ್ಯೆ ಈಗ 'ಅಪಾಯದ ಅಂಚಿನಲ್ಲಿರುವ' ಜೀವಿಗಳ ವರ್ಗದಲ್ಲಿ ಪರಿಗಣಿಸಬೇಕಾದ ಮಟ್ಟಕ್ಕೆ ಕುಸಿದಿದೆ ಅನಿಸುತ್ತದೆ.

ಸಾಹಿತ್ಯವನ್ನು 'ಅಧಿಕೃತ'ವಾಗಿ ಓದಿ, 'ಅಧಿಕೃತ'ವಾಗಿ ಸಂಶೋಧನೆ ನಡೆಸಿ, 'ಅಧಿಕೃತ' ಪ್ರಾಧ್ಯಾಪಕರಾದವರಿಗಿಂತ ಬೇರೆಯ ಕ್ಷೇತ್ರಗಳಲ್ಲಿ ದುಡಿಯುತ್ತ ಸೂಕ್ಷ್ಮವಾಗಿ ಓದುವ, ಇಷ್ಟಪಟ್ಟ ಲೇಖಕನ ಬಗ್ಗೆಯೋ, ವಿಷಯದ ಬಗ್ಗೆಯೋ ಚಿಂತಿಸುವ, ಬರೆಯುವ, ಮಾತನಾಡುವ ಜನರನ್ನು ಕಂಡಾಗ ಸಂತೋಷವಾಗುತ್ತದೆ–ಹೊಳೆಯ ನೀರೆಲ್ಲ ಹೆಂಡವಾಗಿರುವಾಗ ದೂರದಲ್ಲಿರುವ ಸಿಹಿನೀರ ಬಾವಿಗಳನ್ನ ಕಂಡಷ್ಟು ಸಂತೋಷವಾಗುತ್ತದೆ. ವಿಷಾದವೂ ಆಗುತ್ತದೆ–ಇಂಥ ಒಳ್ಳೆಯ ಮನಸುಗಳನ್ನು ಸಾಹಿತ್ಯಾಧ್ಯಯನ ಮತ್ತು ಸಂಶೋಧನಯ ವ್ಯವಸ್ಥೆ ಒಳಗೊಳ್ಳಲಾಗದೆ ದೂರ ಇರಿಸಿದೆಯಲ್ಲ ಅನ್ನುವ ವಿಷಾದ.

ಈ ಅವನತಿಗೆ ಕಾರಣವಾಗಿರುವ ಲಕ್ಷಣ ಅಥವ ಅವಲಕ್ಷಣಕ್ಕೆ ಐದು ಮುಖಗಳಿವೆ: ಉನ್ನತ ಹಂತದಲ್ಲಿ ಬೋಧಿಸುವ ಶಿಕ್ಷಕ ವರ್ಗ, ವಿದ್ಯಾರ್ಥಿ ಸಮೂಹ, ಪಠ್ಯ ಮತ್ತು ಪರೀಕ್ಷಾ ಕ್ರಮ, ವಿಶ್ವವಿದ್ಯಾಲಯಗಳ ವ್ಯವಸ್ಥೆ, ಸಾಹಿತ್ಯ ಕುರಿತು ಒಟ್ಟಾರೆಯಾಗಿ ಬದಲಾಗಿರುವ ನಿಲುವು ಇವು ಆ ಐದು ಮುಖಗಳು. ಹಾಗಾಗಿ ಸಾಹಿತ್ಯ ಶಿಕ್ಷಣ ಕುರಿತು ಯಾವುದೇ ಮಾತಾಡಿದರೂ ಎದುರಿಗಿರುವವರು ಮತ್ತೊಂದು ನೆಲೆಗೆ ಜಿಗಿದು ಮತ್ತೊಂದು ಮುಖದ ಅವಲಕ್ಷಣ ಖಂಡಿಸುತ್ತ ಸ್ವಸಮರ್ಥನೆಯಲ್ಲಿ ತೊಡಗುವುದನ್ನೂ ಕಾಣುತ್ತಿದ್ದೇವೆ.

ಸಾಹಿತ್ಯ ಬೋಧನೆಯ ಅವನತಿಯ ಜವಾಬ್ದಾರಿಯನ್ನು ಹಂಚಲು ಹೊರಟರೆ ಅದರ ದೊಡ್ಡ ಪಾಲು ಶಿಕ್ಷಕರ ಸಮುದಾಯದ್ದೇ ಆಗುತ್ತದೆ. ಸಾಹಿತ್ಯ ಶಿಕ್ಷಕರಲ್ಲಿ ಬಹು ಸಂಖ್ಯೆಯ ಜನಕ್ಕೆ ಆತ್ಮವಿಶ್ವಾಸದ ಕೊರತೆ, ತಾವು ಮಾಡುತ್ತಿರುವ ಕಸುಬು ವ್ಯಕ್ತಿ ಮತ್ತು ಸಮಾಜಕ್ಕೆ ಅಗತ್ಯವಾದದ್ದೆಂಬ ನಂಬಿಕೆಯ ಗೈರುಹಾಜರಿ, ಸಾಹಿತ್ಯವನ್ನು ಕೇಂದ್ರವಾಗಿಟ್ಟುಕೊಂಡು ಬೇರೆ ಬೇರೆಯ, ಕೊನೆಯ ಪಕ್ಷ ಮಾನವಿಕ ವಿಷಯಗಳತ್ತ ಮನಸ್ಸು, ಬುದ್ಧಿಯನ್ನು ವಿಸ್ತರಿಸಿಕೊಳ್ಳುವ ಕುತೂಹಲದ ಅಭಾವ, ಸತತ ಅಧ್ಯಯನದ ಬಗ್ಗೆ ನಿರ್ಲಕ್ಷ್ಯ, ರಂಜನೀಯವಾಗಿ ಪಾಠಮಾಡಿದರೆ ಸಾಕೆಂಬ ಅಲ್ಪತೃಪ್ತಿ, ಸಾಧ್ಯವಾದ ಮಟ್ಟಿಗೂ 'ಕೆಲಸ'ದ ಹೊರೆಯನ್ನು ಕಡಮೆ ಮಾಡಿಕೊಳ್ಳುವ ಅಪೇಕ್ಷೆ, ಬೋಧನೆಯ ವಿಷಯವನ್ನು ಕುರಿತು ಸಹೋದ್ಯೋಗಿಗಳೊಡನೆ ಚರ್ಚಿಸುವುದೇ ಅನಗತ್ಯ, ಹಾಗೆ ಚರ್ಚಿಸಿದರೆ ತಮ್ಮ ಹಿರಿಮೆಗೆ ಭಂಗವೆಂಬ ಭ್ರಮೆ ಇವೆಲ್ಲ ಕಾಣುತ್ತವೆ. ರಿಯಲ್ ಎಸ್ಟೇಟು, ಚೀಟಿ ವ್ಯವಹಾರ, ಶೇರು ಮಾರುಕಟ್ಟೆ, ಸರ್ಕಾರದಿಂದ ಬರಬೇಕಾದ ಬಾಕಿ, ಪ್ರಿನ್ಸಿಪಾಲರು ಮತ್ತು ಶಿಕ್ಷಣ ಇಲಾಖೆಯನ್ನು ಕುರಿತ ಟೀಕೆ ಇವೇ ಅಧ್ಯಾಪಕ ಕೋಣೆಯ ಆಸಕ್ತಿಯ ವಿಷಯಗಳು. ವಿದ್ವತ್ತು ಎಂದರೆ ಯಾವ ಕಲ್ಪನೆ ಮೂಡುತ್ತದೋ ಅದರ ಬಗ್ಗೆ ಅಗಾಧ ತಿರಸ್ಕಾರ, ಅಂಥದೆಲ್ಲ ನಮ್ಮ ವಿದ್ಯಾರ್ಥಿಗಳಿಗೆ ಅನಗತ್ಯವೆಂಬ ಹುಂಬ ತೀರ್ಮಾನ ಇವೂ ಕಾಣುತ್ತವೆ. 'ವಿದ್ಯಾರ್ಥಿಗಳು ಬರೆಯಲು ಬಾರದವರು, ಓದಲು ಬಾರದವರು, ಅದು ಹೇಗೋ ಪಾಸಾಗಿ ನಮ್ಮ ತಲೆ ತಿನ್ನುವುದಕ್ಕೆ ಬಂದಿದ್ದಾರೆ,' ಅನ್ನುವ ಧೋರಣೆಯೂ ಶಿಕ್ಷಕರಲ್ಲಿ ಇದೆ. ತಾವು ಮಾಡುತ್ತಿರುವ ಪಾಠ ತಮಗೆ ಸುಪರಿಚಿತವೇ ಆಗಿದ್ದರೂ ಪ್ರತಿ ವರ್ಷದ ವಿದ್ಯಾರ್ಥಿಗಳಿಗೂ ಅದು ಹೊಸತು ಅನ್ನುವ ಅರಿವಿನ ಕೊರತೆ, ಪ್ರತಿ ತರಗತಿಯಲ್ಲೂ ಹೊಸದೇ ಮನಸುಗಳೊಡನೆ ವ್ಯವಹರಿಸುತ್ತಿದ್ದೇವೆ, ಎಳೆಯ ಮನಸುಗಳ ಭಾವನೆಗೆ ಪುಷ್ಟಿಯನ್ನು, ಪ್ರಬುದ್ಧತೆಯನ್ನು ತರುವ ಮುಖ್ಯವಾದ ಕೆಲಸವನ್ನು ಸಾಹಿತ್ಯ ಬೋಧನೆಯ ಮೂಲಕ ಮಾಡುತ್ತಿದ್ದೇವೆ ಅನ್ನುವ ಎಚ್ಚರವೂ ಕಾಣುವುದಿಲ್ಲ. ಉದ್ಯೋಗದ ಅಗತ್ಯಕ್ಕೆ ಪಿಎಚ್‌ಡಿ ಮಾಡಿರುವವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆಯೇ ಹೊರತು ಸಂಶೋಧನೆಗೆ ಮಾರ್ಗದರ್ಶನ ಮಾಡುವ ಸಾಮರ್ಥ್ಯವಿರುವವರು ತೀರ ಕಡಮೆ. ಮುಖ್ಯವಾದ ಸಂಗತಿ ಎಂದರೆ ಸಾಹಿತ್ಯ ಬೋಧನೆ ಎನ್ನುವುದು ಮಿಕ್ಕ ವಿಷಯಗಳ ಹಾಗಲ್ಲ; ಕೃತಿಯೊಂದನ್ನು, ಆ ಮೂಲಕ ಬದುಕನ್ನು ಪ್ರಶ್ನಿಸುವ, ಸುಲಭ ಉತ್ತರವನ್ನ ಒಲ್ಲದೆ, ಹುಡುಕಾಟದಲ್ಲಿ ತೊಡಗುವ ಸಾಮರ್ಥ್ಯವನ್ನು ಬೆಳೆಸುವ ಕೆಲಸ. ಸದ್ಯದಲ್ಲಿ ಸಾಹಿತ್ಯಬೋಧನೆಯೂ ಶಿಕ್ಷಕ ಸಮುದಾಯಕ್ಕೆ ಗೊತ್ತಿರುವ ಉತ್ತರವನ್ನು ಬರೆಸಿದರೆ ಸಾಕು ಅನ್ನುವ ಮಟ್ಟಕ್ಕೆ ಇಳಿದಿರುವಂತೆ ತೋರುತ್ತದೆ. ಆತ್ಮವಿಶ್ವಾಸ, ಅಧ್ಯಯನ, ತಮ್ಮ ಮನಸನ್ನು ವಿಸ್ತರಿಸಿಕೊಳ್ಳುವ ಕುತೂಹಲ, ಮನುಷ್ಯ ಮನಸುಗಳೊಡನೆ ವ್ಯವಹರಿಸುವ ರೋಚಕ ಅವಕಾಶವನ್ನು ಬಳಸಿಕೊಳ್ಳಲಾಗದ ಅಸಾಮರ್ಥ್ಯ ಇವೆಲ್ಲ ಒಟ್ಟಾರೆಯಾಗಿ ಅವನತಿಗೆ ಕುಮ್ಮಕ್ಕು ಕೊಟ್ಟಿವೆ.

ಕೊರೋನಾ ಕಾಲದಲ್ಲಿ ಪಾಠ ಪ್ರವಚನಗಳನ್ನು ಆನ್‌ಲೈನಿನಲ್ಲಿ ಮಾಡುವ ಕ್ರಮ ಜಾರಿಗೆ ಬಂದಿದೆ. ಹಾಗಾಗಿ ಕನ್ನಡ ಸಾಹಿತ್ಯವನ್ನು ಕುರಿತ ಪಾಠಗಳನ್ನು ಹೇಗೆ ನಿರ್ವಹಿಸಲಾಗುತ್ತಿದೆ ಎಂಬುದನ್ನು ಈಗ ಯಾರು ಬೇಕಾದರೂ ನೋಡಬಹುದು. ಇಂಥ ಕೆಲವು ಪಾಠಗಳನ್ನು ಕೇಳಿದಾಗ, ನೋಡಿದಾಗ ಕನ್ನಡ ಸಾಹಿತ್ಯವನ್ನು ಪಾಠಮಾಡುತ್ತಿರುವ ಬಹಳಷ್ಟು ಅಧ್ಯಾಪಕರಲ್ಲಿ ಹೊಸ ತಂತ್ರಜ್ಞಾನವನ್ನು ಬಳಸುವ ಕೌಶಲದ ಕೊರತೆ, ತಾವು ಪಾಠ ಮಾಡುತ್ತಿರುವ ಕೃತಿ, ಲೇಖಕ, ವಿಷಯದ ಬಗ್ಗೆ ತಿಳಿವಳಿಕೆಯ ಕೊರತೆ, ತಾವು ಹೇಳುತ್ತಿರುವ ವಿಷಯ ಕುರಿತು ಈಗಾಗಲೇ ಕನ್ನಡದಲ್ಲಿ ನಡೆದಿರುವ ಕೆಲಸದ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿಯ ಸೂಚನೆಯನ್ನೂ ಕೊಡಲಾಗದ ದೌರ್ಬಲ್ಯ, ಯುವ ಮನಸ್ಸುಗಳಲ್ಲಿ ಸಾಹಿತ್ಯದ ಬಗ್ಗೆ ಉತ್ಸಾಹ ಮೂಡುವಂತೆ ಮಾಡಲಾಗದ ಅಸಾಮರ್ಥ್ಯಗಳು ಎದ್ದು ಕಂಡವು. ಉನ್ನತ ಹಂತದಲ್ಲಿ ಕನ್ನಡದ ಬೋಧನೆಗೆ ಇರುವ ಬಹು ಮುಖ್ಯ ತೊಡಕು ಕನ್ನಡ ಅಧ್ಯಾಪಕರೇ ಅನ್ನಿಸುವ ಭಾವವೂ ಮೂಡಿತು.

ಹಾಗೆ ಶಿಕ್ಷಕರನ್ನೇ ದೂರುವುದು ತಪ್ಪು, ಶಿಕ್ಷಕರು ಹೀಗಿರುವುದಕ್ಕೆ 'ವ್ಯವಸ್ಥೆ'ಯೂ ಕಾರಣ ಅನ್ನುವುದೂ ನಿಜ. ಯುಜಿಸಿ ವೇತನ ಪಡೆಯುವ ಶಿಕ್ಷಕರು, ಅನುದಾನರಹಿತ ಹುದ್ದೆಗಳಲ್ಲಿ ಕೆಲಸ ಮಾಡುವವರು, ಅತಿಥಿ ಉಪನ್ಯಾಸಕರಾಗಿ ದುಡಿಯುವವರು, ಆಡಳಿತ ಮಂಡಲಿ ನೇಮಿಸಿಕೊಂಡವರು ಹೀಗೆ ಶಿಕ್ಷಕರಲ್ಲೂ ಹಲವು ಹತ್ತು ಪ್ರಭೇದಗಳನ್ನು ಕಲ್ಪಿಸಿಕೊಂಡು, ತೀರ ಅಲ್ಪ ಸಂಖ್ಯಾತರಾಗಿರುವ ಯುಜಿಸಿ ವೇತನ ಪಡೆಯುವವರನ್ನು ಹೊರತುಪಡಿಸಿ ಮಿಕ್ಕ ಬಹುಸಂಖ್ಯಾತರಿಗೆ ಉದ್ಯೋಗದ ಅನಿಶ್ಚಿತತೆ, ತಿಂಗಳಿಗೊಮ್ಮೆ ಸಂಬಳ ದೊರೆಯದ ಹೀನಾಯ ಸ್ಥಿತಿಗಳೂ ಇವೆ. ವಿಷಯದಲ್ಲಿ

ಆಸಕ್ತಿ–ಅಧ್ಯಯನಗಳಿಗೆ ಮನಸಾದರೂ ಹೇಗೆ ಬರುತ್ತದೆ ಎಂದು ಇಂಥ ಅಧ್ಯಾಪಕರು ಕೇಳುವ ಪ್ರಶ್ನೆಯಲ್ಲೂ ಅರ್ಥವಿದೆ.

ಇಪ್ಪತ್ತನೆಯ ಶತಮಾನದ ಆರಂಭ ಕಾಲದಲ್ಲಿ ಚಾರಿತ್ರಿಕ ಕಾರಣಗಳಿಂದಾಗಿ ಉನ್ನತ ಶಿಕ್ಷಣ ಪಡೆಯಲು ಬರುತ್ತಿದ್ದ ವಿದ್ಯಾರ್ಥಿವರ್ಗದಲ್ಲಿ ಜಾತಿ ಮತ್ತು ಅಂತಸ್ತುಗಳ ವಿಚಾರದಲ್ಲಿ ಬಹುಮಟ್ಟಿಗೆ ಏಕರೂಪತೆ ಇರುತ್ತಿತ್ತು. ಇಪ್ಪತ್ತನೆಯ ಶತಮಾನದ ಮಧ್ಯಭಾಗದಿಂದ ಆರಂಭಿಸಿ ಎಪ್ಪತ್ತರ ದಶಕದ ಮಧ್ಯಭಾಗದ ಹೊತ್ತಿಗೆ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳ ಮತ್ತು ವೈವಿಧ್ಯ ಕಂಡುಬಂದವು. ಜಾತಿ, ಕುಟುಂಬ, ಕಸುಬು, ಅಂತಸ್ತುಗಳಲ್ಲಿ ವೈವಿಧ್ಯಮಯ ಹಿನ್ನೆಲೆ ಇದ್ದ ಸಮೂಹಕ್ಕೆ ಭಾಷೆಯ ಕಲಿಕೆ, ಸಾಹಿತ್ಯದ ಕಲಿಕೆ ಎರಡೂ ಅರ್ಥಪೂರ್ಣವಾಗುವ ಹಾಗೆ ಮಾಡುವ ಸವಾಲನ್ನು ಎದುರಿಸುವಲ್ಲಿ ಶಿಕ್ಷಣ ವ್ಯವಸ್ಥೆ ವಿಫಲವಾಯಿತು ಅನಿಸುತ್ತದೆ. ಎಂಬತ್ತರ ದಶಕದಿಂದ ಕಾಲೇಜುಗಳ ಸಂಖ್ಯೆ, ವಿದ್ಯಾರ್ಥಿಗಳ ಸಂಖ್ಯೆ ದೊಡ್ಡ ಪ್ರಮಾಣದಲ್ಲಿ ಹೆಚ್ಚಿತು. 'ಬುದ್ಧಿವಂತರು', 'ಪ್ರತಿಭಾವಂತರು,' ತಕ್ಕಮಟ್ಟಿಗೆ 'ಸ್ಥಿತಿವಂತರು' ಅನಿಸಿಕೊಂಡವರು ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯಗಳನ್ನು ಆಯ್ಕೆಮಾಡಿಕೊಳ್ಳುತ್ತ, ವಿದೇಶಗಳತ್ತ ಮುಖ ಮಾಡುತ್ತ, ಹಿಂದುಳಿದ ಜಾತಿಗಳವರು, 'ದಡ್ಡರು' ಎಂದು ಪರಿಗಣಿತರಾದವರು, ಸ್ಥಿತಿವಂತರಲ್ಲದವರು ಮಾನವಿಕ ವಿಷಯಗಳಿಗೆ, ಸಾಹಿತ್ಯದ ವಿಶೇಷ ಅಧ್ಯಯನಕ್ಕೆ ಬರತೊಡಗಿದರು. ಉದಾರೀಕರಣ, ಜಾಗತೀಕರಣಗಳು ತೊಡಗಿದ ಮೇಲಂತೂ 'ಮೇಲು' ಜಾತಿಯ, ಅನುಕೂಲಸ್ಥ ಮನೆಗಳ ವಿದ್ಯಾರ್ಥಿಗಳ ಶೇಕಡಾವಾರು ಒಂದಂಕಿಗೆ ಇಳಿಯಿತು ಮಾತ್ರವಲ್ಲ, ಭಾಷೆಯನ್ನು ಐಚ್ಛಿಕವಾಗಿ ಅಧ್ಯಯನ ಮಾಡುವವರಲ್ಲಿ ವಿದ್ಯಾರ್ಥಿನಿಯರ ಸಂಖ್ಯೆ ಅಗಾಧ ಪ್ರಮಾಣದಲ್ಲಿ ಹೆಚ್ಚಾಯಿತು. ಈಗಿನ ಯಾವುದೇ ವಿಶ್ವವಿದ್ಯಾಲಯದಲ್ಲಿ ಸಾಹಿತ್ಯದ ಅಧ್ಯಯನಕ್ಕೆ ಬರುವ ವಿದ್ಯಾರ್ಥಿಗಳಲ್ಲಿ ಹೆಣ್ಣು ಮಕ್ಕಳೇ ಶೇಕಡಾ ಐವತ್ತಕ್ಕಿಂತ ಹೆಚ್ಚು ಇರುತ್ತಾರೆ. ಸಾಹಿತ್ಯದ ಉನ್ನತ ಅಧ್ಯಯನಕ್ಕೆ ಬೇಕಾಗುವ ಪೂರ್ವಸಿದ್ಧತೆ ದೊರೆಯದ ಬಹಳ ಕಠಿಣವಾದ ಪರಿಸರ, ಕಾಲೇಜುಗಳಲ್ಲಿ, ಸಾಹಿತ್ಯಾಸಕ್ತಿ ಇರದ ಅಧ್ಯಾಪಕರ ಕೈಯಲ್ಲಿ ತರಬೇತಿ ಪಡೆದು ಪರೀಕ್ಷೆಯಲ್ಲಿ ಮಾತ್ರ ಅತಿ ಹೆಚ್ಚು ಅಂಕ ಗಳಿಸಿ ಬಂದಿರುತ್ತಾರೆ. ಸಾಹಿತ್ಯವನ್ನೇ ಆರಿಸಿಕೊಳ್ಳುವುದಕ್ಕೆ ಕಾರಣ ಅದು ಸುಲಭವೆಂದೋ, ಹೆಚ್ಚು ಖರ್ಚನ್ನು ಬೇಡುವುದಿಲ್ಲವೆಂದೋ, ಅಥವಾ ಹೆಣ್ಣುಮಕ್ಕಳು ಹೇಗೋ ಒಂದು ಎಂಎ ಮಾಡಿದರೆ ಸಾಕಲ್ಲ ಅನ್ನುವ ಹಿರಿಯರ ಧೋರಣೆಯೋ ಇಂಥ ಇತರ ಕಾರಣಗಳೇ ಪ್ರಧಾನ ಪಾತ್ರವಹಿಸುತ್ತವೆ. ಸಾಹಿತ್ಯ ಸರೋವರಕ್ಕೆ ಬಲವಂತವಾಗಿಯೋ ವಿಧಿ ಇಲ್ಲದೆಯೋ ಬರುವ ವಿದ್ಯಾರ್ಥಿ ಕುದುರೆಗಳಿಗೆ ಸಾಹಿತ್ಯದ ನೀರು ಕುಡಿಸುವ ಅಪೇಕ್ಷೆಗಿಂತ ತೊಂದರೆ ಯಾಕೆಂದು ಉದಾರವಾಗಿ ಅಂಕ ನೀಡಿ ಪದವಿ ನೀಡಿ ಕಳಿಸುವ ಪದ್ಧತಿ ರೂಢವಾಗಿ ದಶಕಗಳೇ ಕಳೆದಿವೆ. ಕನ್ನಡ ಓದುವುದಕ್ಕೆ ಬರಲ್ಲ, ತಪ್ಪಿಲ್ಲದೆ ಬರೆಯುವುದಕ್ಕೆ ಬರಲ್ಲ, ಅಕ್ಷರ ಮಾಲೆಯನ್ನು ಕಲಿಸಬೇಕಾಗಿದೆ ಎಂದು ಸ್ನಾತಕೋತ್ತರ ತರಗತಿಗಳಲ್ಲಿ ಪಾಠ ಮಾಡುವ ಅಧ್ಯಾಪಕರು ಹೇಳುತ್ತಾರೆ. ಆದರೆ ಅದೇ ವಿದ್ಯಾರ್ಥಿಗಳು ಎರಡು ವರ್ಷದ ಅವಧಿಯಲ್ಲಿ ಬಂಗಾರದ ಪದಕ ಪಡೆಯುವಷ್ಟು, ಸಂಶೋಧನಾ ಪ್ರಬಂಧ ಸಲ್ಲಿಸಿ ಡಾಕ್ಟರು ಆಗುವಷ್ಟು ಪರಿಣತರೂ ಆಗುವ ಪವಾಡ ನೋಡುತ್ತಿದ್ದೇವೆ. ಸಂಶೋಧನೆ ನಡೆಸಲು ಎಂಥ ನೂಕುನುಗ್ಗಲು ಇದೆಯೆಂದರೆ ಸಂಶೋಧಕ ವಿದ್ಯಾರ್ಥಿಗಳ ಸಂಖ್ಯೆಗೆ ಸಾಕಾಗುವಷ್ಟು ಪ್ರಮಾಣದ ಮಾರ್ಗದರ್ಶಕರು ದೊರೆಯದ ಸ್ಥಿತಿಯೂ ಇದೆ.

ವ್ಯವಸ್ಥೆ–ಶಿಕ್ಷಣ, ಪಠ್ಯ, ಪರೀಕ್ಷೆ: ಪರಿಸ್ಥಿತಿ ಹೀಗಿರುವುದಕ್ಕೆ ವಿದ್ಯಾರ್ಥಿಗಳು ಖಂಡಿತ ಕಾರಣರಲ್ಲ. ಪ್ರಯಾಣದ ಶ್ರಮ, ಕಷ್ಟ ಇದು ಯಾವುದನ್ನೂ ಅನುಭವಿಸದೆ ತಲುಪಬೇಕಾದ ಊರು ತಲುಪಿದರೆ ಸಾಕು ಅನ್ನುವ ಮನೋಧರ್ಮ ವಿದ್ಯಾರ್ಥಿಗಳಲ್ಲಿದೆ, ಹಾಗೆ ತಲುಪಿಸುವ ತವಕ ಅಧ್ಯಾಪಕರಲ್ಲಿದೆ, ಇದಕ್ಕೆ ಕುಮ್ಮಕ್ಕು ನಮ್ಮ ಶಿಕ್ಷಣ ವ್ಯವಸ್ಥೆಯಲ್ಲೇ ಇದೆ. ಕಾಲೇಜಿನಲ್ಲಿ ಮೇಷ್ಟರಾಗಿ ಆಯ್ಕೆಯಾಗಲು ಪಿಎಚ್‌ಡಿಯನ್ನು ಕಡ್ಡಾಯ ಮಾಡಿತಲ್ಲ ಯುಜಿಸಿ, ಅಂದಿನಿಂದ ಮೇಷ್ಟುಗಳ ಆಯ್ಕೆ, ಸಂಶೋಧನೆ ಎರಡೂ ಅರ್ಥಹೀನವಾದವು. ಕನ್ನಡದಲ್ಲಿ ಇದುವರೆಗೆ ಸುಮಾರು ಎಂಟರಿಂದ ಹತ್ತು ಸಾವಿರ 'ಸಂ–ಪ್ರಬಂಧ'ಗಳಿಗೆ ಪಿಎಚ್‌ಡಿ ದೊರೆತಿದೆ. ವಿದ್ಯಾರ್ಥಿಗಳು, ಅಧ್ಯಾಪಕರು, ಸಾಹಿತ್ಯಾಸಕ್ತರು ಮತ್ತೆ ಮತ್ತೆ ನೋಡಲು, ಪರಾಮರ್ಶಿಲು ಬಯಸುವ ಸಂಪ್ರಬಂಧಗಳ ಸಂಖ್ಯೆ ಹತ್ತು–ಹದಿನೈದನ್ನು ಮೀರಲಾರದು. ಯಾವುದೇ ಅರ್ಥದಲ್ಲಿ ಒಳ್ಳೆಯ ಅಧ್ಯಾಪಕರಾಗಲು ಪಿಎಚ್‌ಡಿ ಯಾಕೆ ಅಗತ್ಯವೆನ್ನುವುದು ಅರ್ಥವಾಗುವುದಿಲ್ಲ. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಅತಿ ಸುಲಭದ ಪರೀಕ್ಷೆಯೆಂದರೆ ಪಿಎಚ್‌ಡಿ. ಏನನ್ನೇ ಆಗಲಿ, ಹೇಗೇ ಬರೆಯಲಿ, ಸುಮಾರು ಮುನ್ನೂರು ಪುಟ ಬರೆದು ಬಿಸಾಕಿದರೆ ಪಿಎಚ್‌ಡಿ ಗ್ಯಾರಂಟಿ. ಯಾವುದೇ ಕನ್ನಡ ಪಿಎಚ್‌ಡಿ ಪ್ರಬಂಧ ತಿರಸ್ಕಾರಗೊಂಡ ಉದಾಹರಣೆ ನನಗೆ ತಿಳಿದಿಲ್ಲ. ತೀರ ತೀರ ಅಪರೂಪಕ್ಕೆ ನಾಲ್ಕಾರು ಪ್ರಬಂಧಗಳನ್ನು ಮರು ಮಂಡಿಸಿ ಎಂದು ಹೇಳಿರಬಹುದು, ಅದಕ್ಕೂ ಪ್ರಬಂಧದ ಗುಣಮಟ್ಟಕ್ಕೂ ಸಂಬಂಧವಿರದೆ ಬೇರೆಯ ಕಾರಣಗಳೇ ಇದ್ದಾವು. ಇನ್ನು ಆಯ್ಕೆಯ ವಿಷಯಕ್ಕೆ ಬಂದಾಗ ಎಂಫಿಲ್, ಸೆಟ್, ಇತ್ಯಾದಿ ಇತ್ಯಾದಿ ಹಲವು ಹತ್ತು ಆಯ್ಕೆಯ ಪರೀಕ್ಷೆಗಳು, ಸಂದರ್ಶನ ಇತ್ಯಾದಿಗಳೆಲ್ಲ ಇದ್ದರೂ ಯಾಕೆ ಗುಣಮಟ್ಟದ ಬೋಧನೆ, ಸಂಶೋಧನೆ ಮಾಡಬಲ್ಲ ಅಧ್ಯಾಪಕರು ಆಯ್ಕೆಯಾಗುತ್ತಿಲ್ಲ. ಅಧ್ಯಾಪಕರನ್ನು ಆಯ್ಕೆ ಮಾಡುವ ವಿಧಾನದಲ್ಲೇ ದೋಷವಿದೆ ಎಂದು ಯಾಕೆ ಅನಿಸುತ್ತಿಲ್ಲ. ಅಂಕಗಳು, ಸರ್ಟಿಫಿಕೇಟುಗಳೇ ಮುಖ್ಯವಾಗಿರುವಾಗ ನಗೆಪಾಟಲಿಗೆ ಈಡಾಗುವ ವಿಚಾರಸಂಕಿರಣಗಳ ಸರಣಿಗಳು, ಪುನರ್ಮನನ, ಓರಿಯೆಂಟೇಶನ್ ಇತ್ಯಾದಿಗಳು ಏನೇ ಕಸರತ್ತು ಮಾಡಿದರೂ ಫಲವಿಲ್ಲ. ಇವುಗಳ ಜೊತೆಗೆ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಾಪಕರುಗಳ ಆಯ್ಕೆಯಲ್ಲಿ ಸ್ವಜನಪಕ್ಷಪಾತ, ಜಾತಿ ಮೋಹ, ಸಾಮಾಜಿಕ ನ್ಯಾಯವನ್ನು ಪಾಲಿಸುತ್ತಿದ್ದೇವೆ ಅನ್ನುವ ಕಪಟನಾಟಕ ಇವೆಲ್ಲವೂ ನಡೆಯುತ್ತವೆ. ಪರೀಕ್ಷೆಗಳನ್ನು ಸಾಧ್ಯವಾದಷ್ಟೂ ವೈಜ್ಞಾನಿಕವಾಗಿ ಸುಲಭಗೊಳಿಸುವ ಕ್ರಮವೂ ಜಾರಿಗೆ ಬಂದಿದೆ. ಭಾಷೆಯನ್ನು ಬಳಸುವಲ್ಲಿ ಪರಿಣತಿ ಪಡೆಯಬೇಕಾದ ವಿದ್ಯಾರ್ಥಿಗಳು, ಯೋಚನಾಕ್ರಮವನ್ನು, ವಿಮರ್ಶೆಯ ಧೈರ್ಯವನ್ನು ಬೆಳೆಸಿಕೊಳ್ಳುವುದು ಅಗತ್ಯವಾಗಿರುವ ಸಾಹಿತ್ಯವಿದ್ಯಾರ್ಥಿಗಳು ಕೇವಲ ಮಾಹಿತಿ ಪ್ರಧಾನವಾದ ಹೆಚ್ಚು ಬರವಣಿಗೆಯ ಅಗತ್ಯವಿರದ, ಬೋಧನೆ ಕಲಿಕೆಯ ಸಾವಕಾಶಕ್ಕೆ ಅವಕಾಶವಿರದ ಸೆಮಿಸ್ಟರ್ ಪದ್ಧತಿಯ ಬೋಧನೆ, ವಸ್ತುನಿಷ್ಠ ಪ್ರಶ್ನೆಗಳಿಗೆ ಉತ್ತರ ಗೊತ್ತು ಮಾಡಿಕೊಳ್ಳುವಲ್ಲಿ ಕಳೆದು ಹೋಗುತ್ತಾರೆ.

ವಿದ್ವತ್ತು ಬೆಳೆಯಲು ಅಗತ್ಯವಾದ ಗ್ರಂಥಸಂಪಾದನೆ, ಛಂದಸ್ಸು, ವ್ಯಾಕರಣ, ಸಾಹಿತ್ಯ ಸಿದ್ಧಾಂತ, ಸಾಹಿತ್ಯ ಚರಿತ್ರೆ, ಭಾಷಾಶಾಸ್ತ್ರ ಇಂಥ ವಿಷಯಗಳು ಎಂಎ ತರಗತಿಗಳಲ್ಲಿ ಕಣ್ಮರೆಯಾಗಿ ಅಥವ ಬಹುತೇಕ ಕಣ್ಮರೆಯಾಗಿ ದಶಕಗಳೇ ಕಳೆದಿವೆ. ಹಳಗನ್ನಡ, ನಡುಗನ್ನಡದ ಪಠ್ಯಗಳು ನೆಪಕ್ಕೆ ಅಲ್ಲಲ್ಲಿ ಒಂದಷ್ಟಿಷ್ಟು ಉಳಿದುಕೊಂಡಿವೆ. ನನ್ನ ಕಿವಿಗೆ ಬಿದ್ದ ಮಾತುಗಳನ್ನು ಇಟ್ಟುಕೊಂಡು ಹೇಳುವುದಾದರೆ ಶಾಸ್ತ್ರವಿಷಯಗಳು 'ಕಷ್ಟ', 'ಇಂದಿನ ಸಂದರ್ಭಕ್ಕೆ ಅನಗತ್ಯ,' 'ವಿದ್ಯಾರ್ಥಿಗಳಿಗೆ ತಕ್ಕ ಪೂರ್ವಸಿದ್ಧತೆ ಇಲ್ಲ' ಎಂಬ ಪ್ರತಿಪಾದನೆಗಳಿವೆ; ಸಾಹಿತ್ಯ ಸಿದ್ಧಾಂತಗಳ ವಿಷಯಕ್ಕೆ ಬಂದರೆ ಇಂಗ್ಲಿಶ್ ಎಂದೆಂದಿಗೂ ಕಷ್ಟದ ವಿಷಯವೇ ಆದ್ದರಿಂದ ಮತ್ತು ದೇಸೀಚಿಂತನೆಯ ಕವಚದ ರಕ್ಷಣೆಯಲ್ಲಿ ವಿದೇಶೀ ಸಿದ್ಧಾಂತಗಳನ್ನು ಯಾಕೆ ಕಲಿಯಬೇಕು ಅನ್ನುವ ಪ್ರಶ್ನೆ ಹುಟ್ಟುತ್ತದೆ. ಸಂಸ್ಕೃತವು ಶೋಷಣೆಗೆ ಕಾರಣವಾದ ಭಾಷೆ, ಇತ್ಯಾದಿ ಕಾರಣಗಳಿಗೆ ವರ್ಜ್ಯವಾಗಿ ಯಾವುದೋ ಕಾಲವಾಯಿತು. ತತ್ವಶಾಸ್ತ್ರಕ್ಕೂ ಸಾಹಿತ್ಯ ಸಿದ್ಧಾಂತಗಳಿಗೂ ಸಂಬಂಧವಿದೆ ಅನ್ನುವ ಕಲ್ಪನೆಯೂ ನಮ್ಮ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಂದ ಮಾಯವಾಗಿದೆ. ವಿದ್ವತ್ತು ಬೆಳೆಯಬೇಕೆಂದರೆ ಎಲ್ಲೆಲ್ಲಿಂದಲೋ ಹೆಕ್ಕಿಕೊಂಡ ಪಾರಿಭಾಷಿಕ ಪದಗಳನ್ನು ಮನಸೋ ಇಚ್ಛೆ ಬಳಸುವುದರಿಂದ ಬೆಳೆಯುತ್ತದೆಯೇ? ಚಿಂತನೆಗೆ, ಪ್ರಶ್ನೆಗೆ, ಅನ್ವೇಷಣೆಗೆ ಅವಕಾಶ ನೀಡದ ಪಠ್ಯಕ್ರಮ, ಬೋಧನಾ ವಿಧಾನ, ಅಂಥ ಮನೋಧರ್ಮವೂ ಇರದ ಬಹುಸಂಖ್ಯಾತ ಪ್ರಾಧ್ಯಾಪಕರು ಇವೆಲ್ಲ ಸೇರಿ ಕಗ್ಗಂಟಾಗಿದೆ.

ಎರಡು ದಶಕಗಳಲ್ಲಿ ಏಕರೂಪ ಶಿಕ್ಷಣದ ಭ್ರಮೆ ಪ್ರಬಲಿಸಿದೆ. ಇದಕ್ಕೆ ಕುಮ್ಮಕ್ಕು ಕೊಡುವ ಹಾಗೆ ವಿಶ್ವವಿದ್ಯಾಲಯಗಳ ಸ್ವಾಯತ್ತತೆಯನ್ನು ಸಂಪೂರ್ಣ ಹಾಳುಗೆಡವುವ ಸ್ಥಿತಿಗೆ ತಲುಪಿದ್ದೇವೆ. ವಿಶ್ವವಿದ್ಯಾಲಯಗಳ ಸಾಹಿತ್ಯ ವಿಭಾಗದ ಪಠ್ಯಕ್ರಮವನ್ನು ರೂಪಿಸುವಲ್ಲಿ ವಿದ್ಯಾರ್ಥಿ ಸಮುದಾಯದ ಅಗತ್ಯಗಳನ್ನು ಆಧರಿಸಿ ಪಠ್ಯಗಳನ್ನು ನಿಗದಿ ಮಾಡುವ ಬದಲಾಗಿ ವಿಶ್ವವಿದ್ಯಾಲಯವು ಇರುವ ಪ್ರದೇಶದ ಲೇಖಕರು, ವಿಭಾಗದ ಅಧ್ಯಾಪಕವರ್ಗದ ಪರಿಚಿತರು, ಇತ್ಯಾದಿ ಕಾರಣಗಳಿಗೆ ಪಠ್ಯ ನಿಗದಿಯಾಗುವುದೂ ಇದೆ. ಇದು ಈಗಿನ ರೋಗವಲ್ಲ, ಎಪ್ಪತ್ತರ ದಶಕದಲ್ಲೂ ಈ ಮಾತು ಇತ್ತು. ಆದರೆ ಈಗ ಕನ್ನಡ ಸಾಹಿತ್ಯ ಬೆಳವಣಿಗೆಯ ಸಮಗ್ರ ಚಿತ್ರಣವಿರಲಿ ಹಕ್ಕಿ ನೋಟವೂ ವಿದ್ಯಾರ್ಥಿಗಳಿಗೆ ದೊರಕದಂಥ ಪಠ್ಯಕ್ರಮವನ್ನು ನಮ್ಮ ವಿಶ್ವವಿದ್ಯಾಲಯಗಳು ಯಶಸ್ವಿಯಾಗಿ ರೂಪಿಸಿವೆ. ಹಾಗೆಯೇ ವಿಶ್ವವಿದ್ಯಾಲಯದ ಜೀವಂತಿಕೆಯ ಪ್ರತಿನಿಧಿಗಳಾಗಬೇಕಾದ ಕುಲಪತಿಗಳ ಆಯ್ಕೆಯ ಬಗ್ಗೆ ಸಾಕ್ಷಿಗಳಿರದ ಗುಟ್ಟು ಎಲ್ಲರಿಗೂ ಗೊತ್ತು. ಯಾರು ಹೆಚ್ಚು ರೇಟು ಕೋಟು ಮಾಡುತ್ತಾರೋ ಅವರಿಗೆ ಹುದ್ದೆ. ಅಂಥ ಕುಲಪತಿಗಳು ವಿಶ್ವವಿದ್ಯಾಲಯದ ಆವರಣಕ್ಕೆ ಕಾಂಪೌಂಡು ಹಾಕಿಸುವ, ಅನಗತ್ಯ ಕಟ್ಟಡಗಳನ್ನು ಕಟ್ಟಿಸುವ, ಅಧ್ಯಾಪಕರ ಆಯ್ಕೆಯ, ಇಂಥ ಹಲವು ಸಂದರ್ಭಗಳಲ್ಲಿ ಹೂಡಿದ ಬಂಡವಾಳವನ್ನೂ ಲಾಭವನ್ನೂ ಗಳಿಸುವ, ರಾಜಕೀಯ ನೇತಾರರ ಆಪ್ತರಾಗಿ ಬೆಳೆಯು ಮಹತ್ವಾಕಾಂಕ್ಷಿಗಳಾಗಿರುತ್ತಾರೆ. ಕಾಲೇಜಿನ, ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು ತಮಗೆ ಶಿಕ್ಷಣ ಇಲಾಖೆಯ ಗುಮಾಸ್ತರೂ ಗೌರವ ಕೊಡುವುದಿಲ್ಲ ಎಂದು ಗೊಣಗುವುದನ್ನು ಕೇಳಿದ್ದೇನೆ. ಹಾಗೆ ಗೌರವ ಕಳೆದುಕೊಂಡದ್ದು ಸ್ವಯಂಕೃತಾಪರಾಧವೆಂಬ ಅರಿವು ಬಂದಿಲ್ಲವೆಂಬುದು ಮಾತ್ರ ಸತ್ಯ ವಿಶ್ವವಿದ್ಯಾಲಯವು ಸರ್ಕಾರದ ಇನ್ನೊಂದು ಇಲಾಖೆಯಾಗಿ ಸಂಪೂರ್ಣ ಪರಿವರ್ತನೆಯಗುವ ಹಂತದಲ್ಲಿ ನಾವಿದ್ದೇವೆ

ಏನು ಬರೆದಿದ್ದಾರೆ, ಹೇಗೆ ಬರೆದಿದ್ದಾರೆ, ಅದರ ಪರಿಣಾಮವೇನು ಅನ್ನುವ ಮೂಲಭೂತ ಪ್ರಶ್ನೆಗಳನ್ನು ಇಟ್ಟುಕೊಂಡೇ ಸಾಹಿತ್ಯ ಚಿಂತನೆ ಮತ್ತು ಸಂಶೋಧನೆ ನಡೆಯಬೇಕು. ನಮ್ಮ ಸುತ್ತಲ ಸಮಾಜವು ಜಾತಿ ಕುರುಹುಗಳಿಗೆ ಅಗತ್ಯಕ್ಕಿಂತ

ಹೆಚ್ಚು ಬೆಲೆ ಕೊಡುತ್ತ ಈ ಪ್ರಶ್ನೆಗಳಿಗೆ ಬದಲಾಗಿ 'ಯಾರು ಬರೆದಿದ್ದಾರೆ,' ಅನ್ನುವ ಸಂಗತಿಗೇ ಹೆಚ್ಚು ಮಹತ್ವ ನೀಡಿ ಮಾತಾಡುವ ಬರೆಯುವ ಪರಿಪಾಠ ಬೆಳೆದಿದೆ. ಶ್ರೇಷ್ಠತೆಯ ವ್ಯಸನವೆಂಬ ಮಾತಿನ ದುರ್ಬಳಕೆ ನಡೆಯುತ್ತಿರುವುದು ವಿಷಾದನೀಯ. ಶ್ರೇಷ್ಠತೆಯ ವ್ಯಸನವು ಖಂಡಿತ ಕೆಟ್ಟದ್ದು. ಹಾಗೆಂದು ನಮ್ಮ ಕಸುಬಿನ ವಲಯದಲ್ಲಿ ಶ್ರೇಷ್ಠವಾದದ್ದನ್ನು ಸಾಧಿಸಬೇಕೆಂಬ ಅಪೇಕ್ಷೆಯೇ ತಪ್ಪು ಎಂಬ ಧೋರಣೆ ಬೆಳೆದರೆ ಅಂಥ ಸಮಾಜದಲ್ಲಿ ಸಾಮಾನ್ಯ ಮಟ್ಟದ ವಿದ್ವತ್ತೂ ಹುಟ್ಟಲಾರದು, ಸಾಹಿತ್ಯವೂ ಸೃಷ್ಟಿಯಾಗಲಾರದು.


ನಾವು ರೂಢಿಸಿ ಕಾಪಾಡಿಕೊಂಡು ಬಂದಿರುವ ಶಿಕ್ಷಣ ಪದ್ಧತಿಯಿಂದ ಸಂಪೂರ್ಣವಾಗಿ ನಾಶವಾಗದೆ ಜೀವಂತಿಕೆಯನ್ನು ಉಳಿಸಿಕೊಂಡ ಅಧ್ಯಾಪಕರೂ ವಿದ್ಯಾರ್ಥಿಗಳೂ ಇದ್ದಾರೆ, ತೀರ ಕಡಮೆ ಸಂಖ್ಯೆಯಲ್ಲಿ. ಅವರು ವಿಶ್ವವಿದ್ಯಾಲಯಗಳ ಸಂರಕ್ಷಿತ ವಿದ್ವತ್ ಸಾಹಿತ್ಯವಲಯಗಳಿಂದ ದೂರವಾಗಿ, ಇತರ ಕಸುಬುಗಳಲ್ಲಿ ಇದ್ದು ಆಸಕ್ತಿಯಿಂದ, ತೀವ್ರ ಪ್ಯಾಶನ್‌ನಿಂದ ಸಾಹಿತ್ಯದಲ್ಲಿ, ಸಂಶೋಧನೆಯಲ್ಲಿ ತೊಡಗಿಕೊಂಡವರು. ಸಾಮಾಜಿಕ ಮಾಧ್ಯಮಗಳಲ್ಲಿ ನಿಜಕ್ಕೂ ಒಳ್ಳೆಯ ಬರಹ ಮಾಡುವ ಲೇಖಕರನ್ನು ಕಂಡಿದ್ದೇನೆ. ಅಂಥ ಆಸಕ್ತರ ಹಲವು ಗುಂಪುಗಳು ಬೇರೆ ಬೇರೆ ಊರುಗಳಲ್ಲಿ ಸಾಹಿತ್ಯದ ಚಟುವಟಿಕೆಯಲ್ಲಿ ಸಕ್ರಿಯವಾಗಿರುವುದನ್ನೂ ಕಂಡಿದ್ದೇನೆ. ಅಂದರೆ ಅರ್ಥ ಇಷ್ಟೇ: ನಮ್ಮ ಉನ್ನತ ಶಿಕ್ಷಣ ಸಾಹಿತ್ಯದ ವಿಷಯದಲ್ಲಂತೂ ಸಂಪೂರ್ಣ ವಿಫಲವೇ ಆಗಿದೆ.

ಪೋಲೀಸು, ಕೋರ್ಟು, ಸೈನ್ಯಗಳ ಹಾಗೆ ಶಿಕ್ಷಣ ಮತ್ತು ಧರ್ಮ ಕೂಡ ಜನಸಮುದಾಯವನ್ನು ಹತೋಟಿಯಲ್ಲಿಟ್ಟುಕೊಳ್ಳಲು ಬಳಕೆಯಾಗುವ ಉಪಕರಣಗಳು. ಮೊದಲ ಮೂರು ಹಿಂಸಾತ್ಮಕವಾದರೆ ಶಿಕ್ಷಣ ಮತ್ತು ಧರ್ಮಗಳು 'ಸಂಸ್ಕೃತಿ' ಎಂಬ ಹಿತವಾದ ಹೆಸರಿನ ಮರೆಯಲ್ಲಿ ಜನರನ್ನು ನಿಯಂತ್ರಿಸಲು ಬಳಕೆಯಾಗುತ್ತವೆ, ಈಗ ಇರುವ ಸ್ಥಿತಿಯೇ ಸ್ಥಿರವಾಗಿ ಉಳಿಯಲಿ, ಈಗಿನ ವ್ಯವಸ್ಥೆಯನ್ನು ಒಪ್ಪುವ ಹಾಗೆ ಎಳವೆಯಿಂದಲೇ ಸಸಿ ಮಕ್ಕಳನ್ನು ನಮ್ಮ ಇಷ್ಟದ ಹಾಗೆ ಬಗ್ಗಿಸೋಣ ಎಂಬ ಅಪೇಕ್ಷೆಯಿಂದ ರೂಪುಗೊಂಡಿರುತ್ತವೆ. ಆದರೆ ಸಂವೇದನಾಶೀಲರಾದ ಜನ ಶಿಕ್ಷಣದಿಂದ ಬದಲಾವಣೆಯನ್ನು ಬಯಸುತ್ತಾರೆ, ಇರುವ ಸ್ಥಿತಿಯನ್ನು ಬದಲಾಯಿಸುವ ಚೈತನ್ಯ ಮತ್ತು ಶಕ್ತಿ ಶಿಕ್ಷಣದಿಂದ ದೊರೆಯಬೇಕೆನ್ನುವ ಹಂಬಲ ಹೊಂದಿರುತ್ತಾರೆ. ಶಿಕ್ಷಣವು ವ್ಯವಸ್ಥೆಯಾಗಿ ಸ್ಥಿರತೆಯನ್ನು ಕಾಪಾಡುವ, ಆದರ್ಶವಾಗಿ ಬದಲಾವಣೆಯ ಚೈತನ್ಯವನ್ನು ತುಂಬುವ ವಿರುದ್ಧ ದಿಕ್ಕಿನ ಸೆಳೆತಗಳಿಗೆ ಒಳಗಾಗಿದೆ.

ಶಿಕ್ಷಣದ ಹಾಗೆಯೇ ಸಾಹಿತ್ಯ ಶಿಕ್ಷಣವೂ ಹಲವು ಸೆಳೆತಗಳಿಗೆ ಸಿಕ್ಕಿ ತೊಳಲುತ್ತಿದೆ. ಬ್ರಿಟಿಶರ ಶಿಕ್ಷಣ ಪದ್ಧತಿಯನ್ನು ನಮ್ಮ ದೇಶದಲ್ಲಿ ಒಪ್ಪುವ ಮೊದಲು ಸಾಹಿತ್ಯಕ್ಕೂ ಮತಧರ್ಮಕ್ಕೂ ಬೆಸುಗೆ ಬಿದ್ದಿತ್ತು. ಒಂದೊಂದು ಮತದವರೂ ತಮ್ಮ ಮತದ ಕವಿ ಕೃತಿಗಳನ್ನು ಮಾತ್ರ ಗಮನಿಸುತ್ತ, ಮೆಚ್ಚುತ್ತ, ಅನ್ಯ ಮತದ ಲೇಖಕರ ಕೃತಿಗಳನ್ನು ಹೀಗಳೆಯುವುದಿತ್ತು. ಬ್ರಿಟಿಶ್ ಶಿಕ್ಷಣ ಪದ್ಧತಿ ಧರ್ಮ ನಿರಪೇಕ್ಷವಾಗಿ ಎಲ್ಲ ಮತದ ವಿದ್ಯಾರ್ಥಿಗಳೂ ಎಲ್ಲ ಮತದವರ ಕೃತಿಗಳನ್ನೂ ಓದಿ ತಿಳಿಯುವ ಅವಕಾಶ ಕಲ್ಪಿಸಿತು. ಒಂದೇ ಶತಮಾನದ ಅವಧಿಯೊಳಗೆ ಮತ್ತೆ ಸಾಹಿತ್ಯಕ್ಕಿಂತ ಸಾಹಿತಿಯ ಜಾತಿ/ಮತವನ್ನು ಮುಖ್ಯವಾಗಿ ಎಣಿಸತಕ್ಕದ್ದು ಅನ್ನುವಂಥ ವಾತಾವರಣ ಪ್ರಬಲಿಸುತ್ತಿದೆ. ಇದು ಸಮುದಾಯದ ಬದುಕಿನಲ್ಲಿ ಆದ ಬದಲಾವಣೆಯೋ ಸಾಹಿತ್ಯ ಶಿಕ್ಷಣದ ಕ್ರಮದ ದೋಷವೋ? ಸಾಹಿತ್ಯದ ಶಿಕ್ಷಣ ನಗಣ್ಯವೆನಿಸುವಷ್ಟು ಅಲ್ಪ ಪ್ರಮಾಣದ ವಿದ್ಯಾರ್ಥಿಗಳಲ್ಲಿ ಮಾತ್ರ ಇಂಥ ಧರ್ಮನಿರಪೇಕ್ಷ ಮನೋಧರ್ಮ ಬೆಳೆಸಿದ್ದು ಯಾಕೆ? ಸಮುದಾಯವಾಗಿ ನಮ್ಮ ದೇಶದ ಜನ ಇನ್ನೂ ಜಾತಿಯ ಸ್ಥಿರತೆಯನ್ನು ಅಪೇಕ್ಷೆ ಪಡುತ್ತಿದ್ದಾರೋ? ಅಸಮ ಸಮಾಜವೇ ತಮ್ಮ ಹಿತ ಕಾಪಾಡುತ್ತದೆಂದು ನಂಬಿದ್ದಾರೋ? ಹೌದು ಎನ್ನುವುದಾದರೆ ಶಿಕ್ಷಣದ ಆದರ್ಶಕ್ಕೂ ಜನ ಸಮುದಾಯ ಸುಪ್ತವಾಗಿ ಬಿಗಿದಪ್ಪಿರುವ ಜಾತಿವ್ಯವಸ್ಥೆಯ ಪರವಾದ ನಿಲುವೇ ಶಿಕ್ಷಣ, ಸಾಹಿತ್ಯ ಶಿಕ್ಷಣಗಳ ವೈಫಲ್ಯಕ್ಕೆ ಕಾರಣವಾಗಿರಬಹುದು.

ಸಾಹಿತ್ಯ ಎಂದೂ ಹೊಟ್ಟೆ ತುಂಬಿಸುವ ಕಸುಬು ಆಗಿರಲಿಲ್ಲ, ಆಗುವುದಕ್ಕೆ ಸಾಧ್ಯವೂ ಇಲ್ಲ. ಅರ್ಥವಿರದ, ತರ್ಕವಿರದ, ಯಾವ ಚೌಕಟ್ಟಿಗೂ ನಿಲುಕದ ಕ್ಷಣಕ್ಷಣವೂ ಬದಲಾಗುವ ಬದುಕನ್ನು ಅರಿಯುವುದಕ್ಕೆ ಸಾಹಿತ್ಯ ಶಿಕ್ಷಣ ಒಂದು ದಾರಿ. ಕಥೆ, ಕವಿತೆ, ಕಾದಂಬರಿ ಓದಿಸಿ, ಚೆನ್ನಾಗಿದೆ ಚೆನ್ನಾಗಿಲ್ಲ ಎಂದು ಹೇಳುವುದು ಮಾತ್ರವಲ್ಲ ಮನುಷ್ಯ ಮನಸ್ಸು ಭಾಷೆಯ ಮೂಲಕ ಕಟ್ಟಿಕೊಡುವ ವಾಸ್ತವವನ್ನು ಅಧ್ಯಯನ ಮಾಡುತ್ತ ಆ ಮೂಲಕ ಬದುಕನ್ನು ಅರಿಯುವ ಕೆಲಸ. ಈ ಕೆಲಸದಲ್ಲಿ ತೊಡಗಿರುವಾಗ ಶಿಕ್ಷಕ ವ್ಯಕ್ತಿಯ, ವಿದ್ಯಾರ್ಥಿ ವ್ಯಕ್ತಿಯ, ಒಟ್ಟಾರೆ ಸಮುದಾಯದ ಪ್ರಬುದ್ಧತೆ ಸಾಧಿತವಾಗಬೇಕು ಅನ್ನುವುದು ಅಪೇಕ್ಷೆ. ಸಾಹಿತ್ಯವನ್ನು ಕೇಂದ್ರವಾಗಿರಿಸಿಕೊಂಡು ಅರಿವಿನ ವೃತ್ತ ಬದುಕಿನ ಯಾವುದೇ ಮತ್ತು ಎಲ್ಲ ವಿಷಯಗಳನ್ನು ಒಳಗೊಳ್ಳುವುದು ಹೇಗೆ ಅನ್ನುವ ಶೋಧ ಸಾಹಿತ್ಯ ಶಿಕ್ಷಣದ, ಸಂಶೋಧನೆಯ ಮೂಲ ಪ್ರಚೋದನೆಯಾದಾಗ ಅದು ಕನಸು.

ವಾಸ್ತವ ಏನೆಂದರೆ ಎಲ್‌ಕೆಜಿಯಿಂದ ಹಿಡಿದು ಪಿಎಚ್‌ಡಿ ವರೆಗೆ 'ಹೊನಲಿನ ದಿಕ್ಕಿಗೆ ಸಾಗುವ ಕೊಳೆತ ಕಸಕಡ್ಡಿ'ಗಳ ತಯಾರಿ ನಡೆಯುತ್ತಿದೆ; 'ನದಿಗೆದುರೀಸುವ ಜೀವಂತ ಮತ್ಸ್ಯ'ಗಳು ಅಕಸ್ಮಾತ್ ಕಂಡು ಭರವಸೆ ಹುಟ್ಟಿಸುತ್ತವೆ. ಎಸ್.ವಿ. ಪರಮೇಶ್ವರ ಭಟ್ಟರ ನಾಲ್ಕು ಸಾಲಿನ ಪದ್ಯವೊಂದರ ಈ ಮಾತುಗಳು ಸಾಹಿತ್ಯ ಶಿಕ್ಷಣದ ವರ್ತಮಾನಕ್ಕೂ ಹೊಂದುತ್ತವೆ ಅನಿಸುತ್ತದೆ.



(ಮೈಸೂರು ನಿವಾಸಿಯಾದ ಲೇಖಕರು ನಿವೃತ್ತ ಇಂಗ್ಲಿಷ್ ಅಧ್ಯಾಪಕರಾಗಿದ್ದು ಕನ್ನಡದ ಹಿರಿಯ ಸಾಹಿತ್ಯ ಚಿಂತಕರೂ, ಅನುವಾದಕರೂ ಆಗಿದ್ದಾರೆ)


ಸತ್ಯಜಿತ್ ರೇ: ಒಂದು ಶತಮಾನೋತ್ಸವ ನೆನಪು

–ಪಿ.ಶೇಷಾದ್ರಿ



ತಮ್ಮ ಮೊದಲ ಚಿತ್ರ 'ಪಥೇರ್ ಪಾಂಚಾಲಿ' (೧೯೫೫)ಯ ಮೂಲಕ ಜಗತ್ತಿನ ಗಮನ ಸೆಳೆದು ಮುಂದಿನ ನಾಲ್ಕು ದಶಕಗಳುದ್ದಕ್ಕೂ ಅನನ್ಯ ರೀತಿಯ ೨೯ ಕಥಾ ಚಿತ್ರಗಳನ್ನೂ, ಐದು ಸಾಕ್ಷ್ಯ ಚಿತ್ರಗಳನ್ನೂ, ಒಂದು ಕಿರು ಚಿತ್ರವನ್ನೂ ಜಾಗತಿಕ ಚಿತ್ರರಂಗಕ್ಕೆ ಅಮೂಲ್ಯ ಕೊಡುಗೆಗಳನ್ನಾಗಿ ನೀಡಿದ ಸತ್ಯಜಿತ್ ರೇ ಚಿತ್ರಗಳನ್ನು ನೋಡದಿರುವುದೆಂದರೆ ಭೂಮಿಯ ಮೇಲೆ ಹುಟ್ಟಿ ಸೂರ್ಯ ಚಂದ್ರರನ್ನು ನೋಡದಿರುವ ಹಾಗೆ ಎನ್ನುತ್ತಾರೆ ಜಗತ್ತಿನ ಮತ್ತೋರ್ವ ಮಹಾನ್ ಚಲನಚಿತ್ರಕಾರ ಅಕಿರ ಕುರೋಸಾವ. ಅಷ್ಟು ಸಹಜ, ನೈಸರ್ಗಿಕ ಮತ್ತು ಸರಳ ಸೌಂದರ್ಯಗಳ ರಚನೆಗಳು ರೇ ಚಿತ್ರಗಳು. 'ಪಥೇರ್ ಪಾಂಚಾಲಿ' ತ್ರಿವಳಿಯ ಮೂರೂ ಚಿತ್ರಗಳು, 'ಚಾರುಲತಾ',' ಜಲಸಾ ಘರ್', 'ತೀನ್ ಕನ್ಯಾ', 'ಮಹಾನಗರ್' 'ಜನ ಅರಣ್ಯ', 'ಅಶಾನಿ ಸಂಕೇತ್', 'ಸೀಮಾಬದ್ಧ', 'ಪ್ರತಿದ್ವಂದ್ವಿ' ಮುಂತಾದ ಸಮಕಾಲೀನ ಸಾಮಾಜಿಕ ವಸ್ತುಗಳನ್ನು ಮಾನವ ಸಂಬಂಧಗಳ ಸಹಜ ಮತ್ತು ಸೂಕ್ಷ್ಮ ಹೆಣಿಗೆಯ ಮೂಲಕ ಅವುಗಳ ಸಕಲ ಆಯಾಮಗಳೊಂದಿಗೆ ಚಿಂತನಾರ್ಹವಾಗಿ ಪ್ರಸ್ತುತಪಡಿಸುವ ಚಿತ್ರಗಳ ಜೊತೆಗೇ 'ಗೋಪಿ ಗಂಯೇ ಬಘಾ ಬಂಯೇ', 'ಸೋನಾರ್ ಕೆಲ್ಲಾ', 'ಜೈ ಬಾಬಾ ಫೇಲೂನಾಥ್' ನಂತಹ ಶುದ್ಧ ಮನರಂಜನಾತ್ಮಕ ಮಕ್ಕಳ ಚಿತ್ರಗಳನ್ನೂ ನಿರ್ಮಿಸಿದ ರೇ ಸಿತಾರ್ ವಾದಕ ರವಿಶಂಕರ್ ಹಾಗೂ ನೃತ್ಯಗಾರ್ತಿ ಬಾಲಸರಸ್ವತಿ ಅವರನ್ನು ಕುರಿತು ಅದ್ಭುತ ಸಾಕ್ಷ್ಯ ಚಿತ್ರಗಳನ್ನೂ ನಿರ್ಮಿಸಿ ಚಲನಚಿತ್ರ ಮಾಧ್ಯಮದ ಸಕಲ ಸಾಧ್ಯತೆಗಳನ್ನೂ ಸೂರೆಗೈದ ಮಹಾನ್ ಕಲಾವಿದರಾಗಿದ್ದಾರೆ.

ರೇಖಾ ಚಿತ್ರ, ವರ್ಣ ಚಿತ್ರ ರಚನೆ, ಕಥೆ–ಕಾದಂಬರಿ ಬರಹ, ಛಾಯಾಗ್ರಹಣ ಹೀಗೆ ಹಲವು ಇತರ ಮಾಧ್ಯಗಳಲ್ಲೂ ಪರಿಶ್ರಮ ಹೊಂದಿದ್ದ ರೇ ಅವರು ಚಲನಚಿತ್ರಗಳಿಗಿರುವ ಬಹುತೇಕ ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನಲ್ಲದೆ ಭಾರತ ಸರ್ಕಾರದ ಅತ್ಯುನ್ನತ ನಾಗರಿಕ ಪ್ರಶಸ್ತಿ ಭಾರತ ರತ್ನದ ಗೌರವಕ್ಕೂ ಪಾತ್ರರಾದವರು. ಅವರ ಶತಮಾನೋತ್ಸವದ ಸಂದರ್ಭದಲ್ಲಿ ಅವರ ಮೊದಲ ಚಿತ್ರ 'ಪಥೇರ್ ಪಾಂಚಾಲಿ'ಯ ತಯಾರಿಯ ಕಥೆ ಮತ್ತು ಪರಿಚಯದ ಮೂಲಕ ಇಲ್ಲಿನ ಲೇಖನ ಅವರನ್ನು ಸಾಂಕೇತಿಕವಾಗಿ ನೆನೆಯುವ ಪ್ರಯತ್ನ ಮಾಡಿದೆ.–ಸಂ.



ಇದೊಂದು ಸ್ವಾತಂತ್ರ್ಯ ಪೂರ್ವದ ಕಥೆ. ಒಂದು ಬಂಗಾಲಿ ಕುಟುಂಬ.

ಹರಿಹರ ವೃತ್ತಿಯಿಂದ ಅರ್ಚಕ, ಪ್ರವೃತ್ತಿಯಿಂದ ಕವಿ. ಆತನ ಪತ್ನಿ ಸರ್ಬೋಜಯ, ಮಗ ಅಪು, ಮಗಳು ದುರ್ಗಾ. ಇವರ ಜೊತೆಯಲ್ಲಿ ದೂರದ ಸಂಬಂಧಿ ಅಜ್ಜಿ, ಹೆಸರು ಇಂದಿರಾ. ಆ ಊರಿಗೆ ಬರಗಾಲ ಬಂದಿದೆ. ಮನೆಯಲ್ಲಿ ಕಿತ್ತು ತಿನ್ನುವ ಬಡತನ. ಹರಿಹರ ಉದ್ಯೋಗ ಅರಸಿ ಪರ ಊರಿಗೆ ಹೋಗಿದ್ದಾನೆ.

ಒಂದು ದಿನ,

ಸರ್ಬೋಜಯ ಎಂಟು ವರ್ಷದ ಮಗ ಅಪುವಿಗೆ ಊಟ ಕಲಸಿ ತಿನ್ನಿಸುತ್ತಿದ್ದಾಳೆ. ನಾಯಿಯೊಂದು ತನಗೊಂದು ತುತ್ತು ಸಿಕ್ಕೀತೆ ಎಂದು ಆಸೆಗಣ್ಣಿಂದ ಈ ಕ್ರಿಯೆಯನ್ನೇ ನೋಡುತ್ತಿದೆ. ಅಪು ಬಿದಿರು ಕಡ್ಡಿಯ ಬಿಲ್ಲು ಹಿಡಿದು ನಾಯಿಯ ಮೇಲೆ ಬಾಣ ಹೂಡುತ್ತಾ ಅಂಗಳದಲ್ಲೆಲ್ಲಾ ಆಡ್ಡಾಡುತ್ತಿದ್ದಾನೆ. ತಾಯಿ ಅವನ ಹಿಂದೆ ಹಿಂದೆ ತಿರುಗುತ್ತಾ, 'ಅಪೂ, ಇನ್ನೊಂದ್ ಸ್ವಲ್ಪ ಇದೆ. ಅನ್ನ ಬಿಡಬಾರದು ಮರೀ.. ಬಾ ತಗೋ' ಎಂದು ರಮಿಸುತ್ತಿದ್ದಾಳೆ. ಆಕೆಯ ಮಾತುಗಳನ್ನು ಕಿವಿ ಮೇಲೆ ಹಾಕಿಕೊಳ್ಳದ ಅಪೂ ಬಿಟ್ಟ ಬಾಣದ ಹಿಂದೆ ಓಡುತ್ತಿದ್ದಾನೆ. ಇದರಿಂದ ರೋಸಿ ಹೋದ ಅಮ್ಮ, ಕೊನೆಗೆ ಮಿಕ್ಕ ಅನ್ನವನ್ನು ಒಂದೆಡೆ ಸುರಿಯುತ್ತಾಳೆ. ನಾಯಿ ಗಬಗಬನೆ ತಿನ್ನತೊಡಗುತ್ತದೆ. ಅಪು ಮನೆಯ ಅಂಗಳದಿಂದ ಹೊರಗೆ ಆಡಲು ಹೋಗಲು ಹೊರಬಾಗಿಲನ್ನು ತೆರೆಯಲು ಹೋಗುತ್ತಾನೆ. ಅದೇ ಸಮಯಕ್ಕೆ ಪಕ್ಕದ ಮನೆಯಾಕೆ ಬಾಯಿ ತುಂಬ ಕವಳ ಮೆಲ್ಲುತ್ತಾ ಇಬ್ಬರು ಹುಡುಗಿಯರೊಂದಿಗೆ ಒಳಕ್ಕೆ ಹೆಜ್ಜೆಯಿಡುತ್ತಾಳೆ. ಹೊರಗೆ ಹೋಗಿದ್ದ ಮಗಳು ಊಟಕ್ಕೆ ಬಂದಿರಬೇಕೆಂದು ಭಾವಿಸಿದ ತಾಯಿ 'ದುರ್ಗಾsss' ಎನ್ನುತ್ತಾಳೆ.

'ಎಲ್ಲಿ ದುರ್ಗಾ?' ಒಳಬಂದ ಹೆಂಗಸು ದರ್ಪದಲ್ಲಿ ಕೇಳುತ್ತಾಳೆ.

ಅದನ್ನು ಕೇಳಿ ತಾಯಿಗೆ ಆಶ್ಚರ್ಯ. ಹೆಂಗಸಿನ ಪಕ್ಕ ಇದ್ದ ಚಿಕ್ಕಹುಡುಗಿ, 'ನಾನು ಜಗಲಿಯಲ್ಲಿರುವ ದುರ್ಗಾಳ ಆಟದ ಡಬ್ಬ ತರಲೇ?' ಎಂದು ಕೇಳುತ್ತಾಳೆ. 'ಹೋಗು' ಎನ್ನುವ ಹೆಂಗಸು ಸರ್ಬೋಜಯಳತ್ತ ತಿರುಗಿ, 'ಹೀಗಾ ಮಕ್ಕಳನ್ನು ಬೆಳೆಸೋದು?' ಎಂದು ಆರೋಪಿಸುತ್ತಾಳೆ. ಸರ್ಬೋಜಯಳಿಗೆ ಏನು ನಡೆಯುತ್ತಿದೆ ಎಂದು ಗೊತ್ತಾಗುವುದಿಲ್ಲ.

'ಏನಾಯಿತು?' ಕೇಳುತ್ತಾಳೆ.

'ದುರ್ಗಾ ಕಳ್ಳಿ, ಇವಳ ಮಣಿಸರ ಕದ್ದಿದ್ದಾಳೆ'

'ದುರ್ಗಾ ಕದ್ದಳಾ!'

'ಹುಂ, ಯಾಕ್ ಅನುಮಾನಾನ? ಅವಳು ಕಳ್ಳತನದಲ್ಲಿ ಚನ್ನಾಗಿ ಪಳಗಿದ್ದಾಳೆ'

ಅಷ್ಟರಲ್ಲಿ ಒಳಗೆ ಹೋಗಿದ್ದ ಹುಡುಗಿ ದುರ್ಗಾಳ ಆಟದ ಡಬ್ಬ ಹಿಡಿದು ಬರುತ್ತಾಳೆ. ಹೆಂಗಸು ಡಬ್ಬದ ವಸ್ತುಗಳನ್ನು ಕೆದಕುತ್ತಾ, ಎತ್ತಿ ಬಿಸಾಕುತ್ತಾ, 'ಪಾಪ ಈ ಹುಡುಗಿ, ಚಿಕ್ಕಪ್ಪ ತಂದುಕೊಟ್ಟಿದ್ದ ಸರಾನ ತೋರಿಸಿದರೆ, ಅವಳು ಎಷ್ಟು ಚೆನ್ನಾಗಿ ಲಪಟಾಯಿಸಿದ್ದಾಳೆ!'

ಅದೇ ಸಮಯಕ್ಕೆ ದುರ್ಗಾ ಮನೆಯ ಹೊರಗಿನಿಂದ ಕಾಂಪೌಂಡ್ ಗೋಡೆ ಹತ್ತಿ ಒಳಗೆ ಜಿಗಿಯಬೇಕೆನ್ನುವಾಗ ಅಪು ಅವಳಿಗೆ ಬರಬೇಡವೆನ್ನುವಂತೆ ಸಂಜ್ಞೆ ಮಾಡುತ್ತಾನೆ. ದುರ್ಗಾ ಅಲ್ಲೇ ನಿಂತು ಇದನ್ನು ನೋಡುತ್ತಾಳೆ.

ಹೆಂಗಸಿಗೆ ಆ ಡಬ್ಬದಲ್ಲಿ ಸರ ಸಿಗುವುದಿಲ್ಲ. ಸರ್ಬೋಜಯ ಹೆಂಗಸಿನತ್ತ ನೋಡುತ್ತಾ, 'ದುರ್ಗಾ ಎಲ್ಲೋ ಹೋಗಿದ್ದಾಳೆ. ಅಲ್ಲ, ಅವಳೇ ಕದ್ದಿದ್ದಾಳೆ ಎಂದು ಹೇಗೆ ಹೇಳ್ತೀರಿ?'

ಸರ್ಬೋಜಯಳ ಈ ಮಾತಿಗೆ ಹೆಂಗಸು ಜೋರಿನಲ್ಲಿ, 'ಅಂದರೆ ನಾನು ಸುಳ್ಳು ಹೇಳುತ್ತಿದ್ದೀನಿ ಅಂತಾನ?' ದಬಾಯಿಸುತ್ತಾಳೆ.

ಅಷ್ಟರಲ್ಲಿ ತಾಯಿಯ ಕಣ್ಣಿಗೆ ದುರ್ಗಾ ಬೀಳುತ್ತಾಳೆ. 'ದುರ್ಗಾ, ಬಾ ಇಲ್ಲಿ' ಕರೆಯುತ್ತಾಳೆ. ದುರ್ಗಾ ನಿಧಾನವಾಗಿ ಬಂದು ನಿಲ್ಲುತ್ತಾಳೆ.

'ನೀನು, ತನೂ ಮಣಿಸರ ಕದ್ದಿದ್ದೀಯಾ?'

ದುರ್ಗಾ ಮಾತಿಲ್ಲದೆ ಸುಮ್ಮನೇ ನಿಂತಿದ್ದಾಳೆ.

ತಕ್ಷಣ ಆ ಹೆಂಗಸು ದುರ್ಗಾಳ ರಟ್ಟೆ ಹಿಡಿದು ತನ್ನ ಕಡೆ ಸೆಳೆದುಕೊಂಡು ಹೊಡೆಯಲು ಹೋಗುತ್ತಾಳೆ.

'ಅವಳನ್ನ ಮುಟ್ಟಬೇಡಿ' ತಾಯಿ ಚೀರುತ್ತಾಳೆ. ನಂತರ ಧಾವಿಸಿ ಹೋಗಿ ದುರ್ಗಾಳನ್ನು ಹೆಂಗಸಿನಿಂದ ಬಿಡಿಸಿಕೊಂಡು, ತನ್ನ ಕಡೆಗೆ ಸೆಳೆದುಕೊಳ್ಳುತ್ತಾಳೆ. ದುರ್ಗಾ ಅವುಚಿಕೊಂಡು ತಂದಿದ್ದ ಹಣ್ಣುಗಳು ಕೆಳಗೆ ಬೀಳುತ್ತವೆ.

ಅವನ್ನು ನೋಡಿದ ತಾಯಿ, 'ಈ ಹಣ್ಣುಗಳನ್ನು ಎಲ್ಲಿಂದ ತಂದೆ?' ಗದರುತ್ತಾಳೆ.

ಅಷ್ಟರಲ್ಲಿ ಹೊರಗಿನಿಂದ ಬಂದ ಮುದುಕಿ ಇದನ್ನು ಗಮನಿಸಿ, 'ಏನ್

ವಿಷ್ಯ?' ಕೇಳುತ್ತಾಳೆ. ಯಾರೂ ಉತ್ತರಿಸುವುದಿಲ್ಲ. ಅಪು ಸುಮ್ಮನೆ ನಿಂತು ನೋಡುತ್ತಿದ್ದಾನೆ.

ತಾಯಿ ದುರ್ಗಾಳನ್ನು ಪರೀಕ್ಷಿಸುತ್ತಾ, ಆಕೆಯ ಸೆರಗಿನ ತುದಿಯಲ್ಲಿ ಕಟ್ಟಿಕೊಂಡಿದ್ದ ಗಂಟನ್ನು ಬಿಡಿಸುತ್ತಾಳೆ. ಅದರಿಂದ ಹುಣಿಸೆ ಬೀಜಗಳು ಕೆಳಗೆ ಉದುರುತ್ತವೆ.

'ಕಾಣಿಸ್ತಾ? ಇವಳು, ಕದ್ದಿಲ್ಲ' ಎಂದು ಮಗಳನ್ನು ವಹಿಸಿಕೊಂಡು ತಾಯಿ ಮಾತಾಡುತ್ತಾಳೆ.

ಹೆಂಗಸಿಗೆ ರೇಗುತ್ತದೆ. ಮೂತಿ ಸೊಟ್ಟ ಮಾಡಿ ಹೊರಟವಳು, ಕ್ಷಣ ನಿಂತು ಹೇಳುತ್ತಾಳೆ.

'ಅದಿರಲಿ, ನನ್ನ ಸಾಲ ಯಾವಾಗ ಕೊಡ್ತೀಯಾ? ಬೇಗ ಕೊಡು' ಎಂದು ಎಚ್ಚರಿಸಿ ಹೊರಟವಳು ಮತ್ತೆ ಹಿಂತಿರುಗಿ, 'ಜೊತೆಗೆ ಆ ಮಣಿಸರ ಸಿಕ್ರೆ ಕೊಡೋದನ್ನು ಮರೆಯಬೇಡ' ಎಂದು ಹೇಳಿ ದಿಡ್ಡಿ ಬಾಗಿಲು ದಾಟುತ್ತಾ, 'ತಾಯಿಯಂತೆ ಮಗಳು, ನೂಲಿನಂತೆ ಸೀರೆ! ಎರಡೂ ಕಳ್ಳ ಜೋಡಿಗಳು' ಎಂದು ಗೊಣಗಿಕೊಳ್ಳುತ್ತಾ ನಡೆಯುತ್ತಾಳೆ.

ಇದನ್ನು ಕೇಳಿಸಿಕೊಂಡ ಸರ್ಬೋಜಯಳಿಗೆ ಅವಮಾನವಾದಂತಾಗುತ್ತದೆ. ದುಃಖ ಉಂಟಾಗುತ್ತದೆ. ದುರ್ಗಾ ಆ ಹೆಂಗಸು ಕೆದರಿ ಚಲ್ಲಾಪಿಲ್ಲಿ ಮಾಡಿದ್ದ ತನ್ನ ಆಟದ ಡಬ್ಬದ ವಸ್ತುಗಳನ್ನು ನೆಲದಲ್ಲಿ ಆಯುತ್ತಿದ್ದಾಳೆ. ತಾಯಿ ಇದನ್ನು ನೋಡುತ್ತಾಳೆ.

'ದುರ್ಗಾ!' ಕರೆಯುತ್ತಾಳೆ.

ದುರ್ಗಾ ಅಮ್ಮನ ಕಡೆ ನೋಡುತ್ತಾಳೆ.

'ಬಾ ಇಲ್ಲಿ' ತಾಯಿ ಮತ್ತೆ ಕರೆಯುತ್ತಾಳೆ.

ದುರ್ಗಾ ಅಮ್ಮನನ್ನೇ ನೋಡುತ್ತಿದ್ದಾಳೆ.

ಅಮ್ಮ ಧಾವಿಸಿ ಬಂದು ಮಗಳ ಜಡೆ ಹಿಡಿದು ದರ ದರನೆ ಎಳೆದುಕೊಂಡು ಹೋಗತೊಡಗುತ್ತಾಳೆ. ಅಪು ಕಂಬದ ಮರೆಯಲ್ಲಿ ನಿಂತು ಇದನ್ನೆಲ್ಲಾ ಭಯದಿಂದ ನೋಡುತ್ತಿದ್ದಾನೆ. ಮುದುಕಿ ದುರ್ಗಾಳನ್ನು ಬಿಡಿಸಿಕೊಳ್ಳಲು ಬರುತ್ತಾಳೆ. ಆಕೆ ಮುದುಕಿಯನ್ನು ತಳ್ಳುತ್ತಾಳೆ. ಮುದುಕಿ ಮುಗ್ಗರಿಸುತ್ತಾಳೆ. ಸರ್ಬೋಜಯ ಮಗಳ ಜಡೆ ಹಿಡಿದು ದರ ದರನೆ ಎಳೆದುಕೊಂಡು ಬಂದು ಅಂಗಳದ ಮುಂಬಾಗಿಲಿನಿಂದ ಆಚೆಗೆ ತಳ್ಳಿ ಬಾಗಿಲು ಮುಚ್ಚುತ್ತಾಳೆ. ತಾಯಿ ಅಲ್ಲೇ ಕುಸಿದು ಬಿಕ್ಕುತ್ತಾಳೆ.

ಮುದುಕಿ ಚಲ್ಲಾಪಿಲ್ಲಿಯಾಗಿದ್ದ ದುರ್ಗಾಳ ವಸ್ತುಗಳನ್ನು ಸಂಗ್ರಹಿಸಿ ಅವಳ ಡಬ್ಬಕ್ಕೆ ತುಂಬಿ ಹಾಕುತ್ತಿದ್ದಾಳೆ. ಅಪು ಕಂಬದ ಮರೆಯಿಂದ ನಡೆದು ಚೊಂಬಿನಲ್ಲಿ ನೀರು ತೆಗೆದುಕೊಂಡು ಊಟವಾಡಿ ಮುಸುರೆಯಾಗಿದ್ದ ಬಾಯನ್ನು ತೊಳೆದುಕೊಳ್ಳುತ್ತಾನೆ.

ತಾಯಿ ಬಾಗಿಲ ಬಳಿ ಕುಸಿದಿದ್ದವಳು ಅಳುತ್ತಲೇ ಇದ್ದಾಳೆ. ಮುದುಕಿ ಮನೆಯ ಅಂಗಳದ ಹಗ್ಗದ ಮೇಲೆ ಒಣಗಿ ಹಾಕಿದ್ದ ಬಟ್ಟೆಗಳನ್ನು ತೆಗೆಯುತ್ತಿದ್ದಾಳೆ. ಅಪು ವಿಧೇಯ ವಿದ್ಯಾರ್ಥಿಯಂತೆ ಜಗಲಿಯ ಮೇಲೆ ಕೂತು ಪಾಠ ಓದಿಕೊಳ್ಳುತ್ತಿದ್ದಾನೆ.

ಮುಂಬಾಗಿಲ ಬಳಿ ಕುಸಿದು ಅಳುತ್ತಿದ್ದ ತಾಯಿ ತನ್ನನ್ನು ತಾನು ಸಂಭಾಳಿಸಿಕೊಂಡು ಕಣ್ಣು ಮೂಗೊರೆಸಿಕೊಂಡು ಏಳುತ್ತಾ ಮಗನಿಗೆ ಹೇಳುತ್ತಾಳೆ. 'ಅಪ್ಪೂ, ಹೋಗು ದುರ್ಗಾಳನ್ನು ಊಟಕ್ಕೆ ಕರೆದುಕೊಂಡು ಬಾ'

ಮುಖಕ್ಕೆ ಪುಸ್ತಕ ಅಡ್ಡ ಹಿಡಿದು ಓದುತ್ತಿದ್ದ ಅಪ್ಪು ಅದನ್ನು ಸರಿಸಿ ಅಮ್ಮನತ್ತ ಮುಗುಳ್ನಗೆಯನ್ನು ಬೀರಿ, ತನ್ನ ಬಿಲ್ಲು-ಬಾಣ ಹಿಡಿದು, ಅಕ್ಕನನ್ನು ಹುಡುಕುತ್ತಾ ಮನೆಯ ಆಚೆ ದೌಡಾಯಿಸುತ್ತಾನೆ.

ಇಲ್ಲಿಗೆ 'ಪಾಥೇರ್ ಪಾಂಚಾಲಿ'ಯ ಈ ದೃಶ್ಯ ಮುಗಿಯುತ್ತದೆ. ಇದನ್ನು ಓದುತ್ತಾ ಹೋದಂತೆ ನಿಮ್ಮ ಕಣ್ಣಮುಂದೆ ಚಿತ್ರಪಟ ಚಲಿಸಿರಬಹುದು. ಜೊತೆಗೆ ಸತ್ಯಜಿತ್ ರೇ ಅನ್ನುವ ಮಹಾಪುರುಷನ ಹೆಸರೂ ನೆನಪಿನಲ್ಲಿ ಮೂಡಿರಬಹುದು. ಸುಮಾರು ಅರುವತ್ತೈದು ವರ್ಷಗಳ ಹಿಂದೆ (೧೯೫೫) ತೆರೆಗೆ ಬಂದ ಈ ಚಿತ್ರ ಇಂದಿಗೂ ನವನೂತನ ಅನ್ನಿಸಿಕೊಳ್ಳುವುದು ಇದರ ಕ್ಲಾಸಿಕ್ ಗುಣದಿಂದ.

ಈ ದೃಶ್ಯ ಮುಖ್ಯವಾಗುವುದು ರೇ ಅವರ ಸಿನಿಮಾ ಕಟ್ಟುವಿಕೆಯ ವಿಶಿಷ್ಟ ಕ್ರಮದಿಂದ. ಸುಮಾರು ಏಳೂವರೆ ನಿಮಿಷದ ಅವಧಿಯ ಈ ದೃಶ್ಯ ಸಿನಿಮಾದ ಎಲ್ಲ ತಾಂತ್ರಿಕ ಗುಣಗಳನ್ನೂ ಒಳಗೊಂಡಿದೆ. ಇಲ್ಲಿ ಎಲ್ಲಾ ಪಾತ್ರಗಳಿಗೂ ಅದರದೇ ಆದ ಪ್ರಾಮುಖ್ಯತೆಯಿದೆ. ಇಡೀ ಚಿತ್ರದ ರಸ ಮತ್ತುಲಯ ಇಲ್ಲಿಂದಲೇ ಆರಂಭವಾಗುತ್ತದೆ ಪ್ರತಿಯೊಂದು ಸಣ್ಣ ವಿವರಗಳನ್ನೂ ನಿರ್ದೇಶಕ ರೇ ಸೂಕ್ಷ್ಮವಾಗಿ ಸೆರೆ ಹಿಡಿದಿರುವ ರೀತಿ ಅನನ್ಯವಾದದ್ದು.

ಎಲ್ಲರಿಗೂ ತಿಳಿದಿರುವ ಹಾಗೆ, ಯಾವುದೇ ಒಂದು ಸಿನಿಮಾಗೆ ಅಥವಾ ಕತೆಗೆ ಒಂದು ಆರಂಭ, ಮಧ್ಯ ಮತ್ತು ಅಂತ್ಯ ಇರಬೇಕೆಂಬುದು ಒಂದು ಕ್ರಮ.



ಪಥೇರ್ ಪಾಂಚಾಲಿಯ ಎರಡು ಚಿತ್ರಿಕೆಗಳು

ಅದು ಇಡೀ ಸಿನಿಮಾದ ಕತೆಯಲ್ಲಷ್ಟೇ ಅಲ್ಲ ಸಿನಿಮಾದ ಪ್ರತಿಯೊಂದು ದೃಶ್ಯಕ್ಕೂ ಆರಂಭ-ಮಧ್ಯ-ಅಂತ್ಯ ಇರಬೇಕು ಎನ್ನುವುದು ಇನ್ನೊಂದು ಸೂತ್ರ. ಆ ತಂತ್ರವನ್ನು ಈ ಚಿತ್ರದ ಪ್ರತಿ ದೃಶ್ಯದಲ್ಲೂ ಗುರುತಿಸಬಹುದು. ಮೇಲೆ ಹೇಳಿದ ಸನ್ನಿವೇಶ ಅದಕ್ಕೆ ಒಂದು ಉದಾಹರಣೆಯಷ್ಟೇ.

* * *

ಸತ್ಯಜಿತ್ ರೇ ಹುಟ್ಟಿದ್ದು ಕಲ್ಕತ್ತಾದಲ್ಲಿ. ಇವರಿಗೆ ಮೂರು ವರ್ಷವಿರುವಾಗಲೇ ತಂದೆ ತೀರಿಹೋದರು. ಆಮೇಲೆ ಸಾಕಿ ಸಲುಹಿದವರು ತಾಯಿ. ಚಿಕ್ಕಂದಿನಲ್ಲಿಯೇ ಕಲೆಯಲ್ಲಿ ಆಸಕ್ತಿ ತಾಳಿದ್ದ ಸತ್ಯಜಿತ್ ಪದವಿ ಮುಗಿಸಿದ. ಆನಂತರ ರವೀಂದ್ರನಾಥ್ ಠ್ಯಾಗೋರ್ ಅವರ ಶಾಂತಿನಿಕೇತನದಲ್ಲಿ ಕೆಲವು ವರ್ಷ ಕಲೆ ಅಧ್ಯಯನ ಮಾಡಿದರು. ಪುಸ್ತಕ ಬರೆಯುವುದು, ಪೇಂಟಿಂಗ್ ಮಾಡುವುದು ಇವರ ಆಸಕ್ತಿಗಳಾಗಿದ್ದವು. ಇವರದೇ ಪ್ರಿಂಟಿಂಗ್ ಪ್ರೆಸ್ ಇತ್ತು. ಗ್ರಾಫಿಕ್ ಡಿಸೈನರ್ ಆಗಿದ್ದ ರೇ ತಮ್ಮ ಚಿತ್ರಕ್ಕೆ ತಾವೇ ಪಬ್ಲಿಸಿಟಿ ಡಿಸೈನ್ ಮಾಡಿದ್ದೂ ಉಂಟು. ಜೊತೆಗೆ ಸ್ನೇಹಿತರೊಂದಿಗೆ ಚಿತ್ರಕಲೆ, ರಾಜಕೀಯ, ಸಿನಿಮಾ ಕುರಿತು ಚರ್ಚಿಸುತ್ತಿದ್ದರು. ಇದರ ಫಲವಾಗಿ ೧೯೪೭ರಲ್ಲಿ ಒಂದು ಫಿಲಂ ಸೊಸೈಟಿಯನ್ನು ಪ್ರಾರಂಭಿಸಿದರು. ಅಲ್ಲಿ ಸಿನಿಮಾಗಳನ್ನು ತೋರಿಸುತ್ತಾ, ತಾವೂ ನೋಡುತ್ತಾ, ನಾನೂ ಯಾಕೆ ಸಿನಿಮಾ ಮಾಡಬಾರದು ಎಂದು ಯೋಚಿಸುತ್ತಿದ್ದರು. ಅದೇ ಸಂದರ್ಭದಲ್ಲಿ ಫ್ರೆಂಚ್ ಚಲನಚಿತ್ರ ನಿರ್ದೇಶಕ ಜೀನ್ ರೇನಾರ್ ಭಾರತದಲ್ಲಿ ತನ್ನ ಒಂದು ಸಿನಿಮಾ ಚಿತ್ರೀಕರಣಕ್ಕೆಂದು ಬಂದ. ರೇ ಅವರಿಗೆ ಆತನ ಸಾಂಗತ್ಯ ದೊರೆಯಿತು. ಆ ನಿರ್ದೇಶಕನಿಗೆ ಚಿತ್ರೀಕರಣ ತಾಣಗಳನ್ನು ತೋರಿಸಲು ಜೊತೆಯಲ್ಲಿ ಓಡಾಡಿದರು. ಸಿನಿಮಾ ಆಸಕ್ತಿ ಮತ್ತಷ್ಟು ಹೆಚ್ಚಾಯಿತು.

೧೯೫೦ರಲ್ಲಿ ಯಾವುದೋ ಕೆಲಸದ ಮೇಲೆ ಸತ್ಯಜಿತ್ ರೇ ಇಂಗ್ಲೆಂಡ್‌ಗೆ ಹೋಗಬೇಕಾಯಿತು. ಅಲ್ಲಿದ್ದ ಆರು ತಿಂಗಳು ಸ್ನೇಹಿತರೊಂದಿಗೆ ಯುರೋಪಿಯನ್ ಚಿತ್ರಗಳನ್ನು ನೋಡುತ್ತಿದ್ದರು. ಒಂದು ದಿನ ಡಿ'ಸಿಕಾನ 'ಬೈಸಿಕಲ್ ಥೀವ್ಸ್' ನೋಡಿದರು. ಚಿತ್ರಮಂದಿರದಿಂದ ಹೊರಬಂದ ರೇ ತಮ್ಮ ಜೊತೆ ಇದ್ದವರಿಗೆ ಹೇಳಿದರಂತೆ, 'ನಾನು ಸಿನಿಮಾ ನಿರ್ದೇಶಕನಾಗಲೇಬೇಕು'. 'ಈ ಚಿತ್ರದ ಮಾದರಿಯಲ್ಲೇ ಹೊಸ ಕಲಾವಿದರನ್ನು ಬಳಸಿ, ನಿಜವಾದ ಹೊರಾಂಗಣದಲ್ಲಿ ಚಿತ್ರೀಕರಿಸಿ, ಕಡಿಮೆ ಬಜೆಟ್‌ನ ಒಂದು ಚಿತ್ರ ಮಾಡಬೇಕು'

ಆಗ ಅವರ ಕಣ್ಣಮುಂದೆ ಬಂದದ್ದು ಬಿಭೂತಿಭೂಷಣ್ ಬರೆದ ಕಾದಂಬರಿ 'ಪಾಥೇರ್ ಪಾಂಚಾಲಿ'! ಅದು ಆಗ ನೆನಪಿಗೆ ಬರಲೂ ಒಂದು ಹಿನ್ನೆಲೆಯಿತ್ತು. ಇವರು ಈ ಹಿಂದೆ ಕಲ್ಕತ್ತಾದಲ್ಲಿ ಡಿಸೈನರ್ ಆಗಿದ್ದಾಗ ಇದೇ ಕಾದಂಬರಿ ಆಧರಿಸಿ ಸಚಿತ್ರಕಥಾಮಾಲಿಕೆಗೆ ಚಿತ್ರಗಳನ್ನು ರಚಿಸಿದ್ದರಂತೆ!

ಬಂಗಾಲಿ ಭಾಷೆಯಲ್ಲಿ- 'ಪಾಥೇರ್ ಪಾಂಚಾಲಿ', ಇಂಗ್ಲಿಷ್‌ನಲ್ಲಿ- 'ಸಾಂಗ್ ಆಫ್ ದಿ ಲಿಟ್ಲ್ ರೋಡ್'. ಇದನ್ನೇ ಕನ್ನಡದಲ್ಲಿ-'ಕಿರು ಹಾದಿಯ ಹಾಡು' ಎನ್ನಬಹುದು.

ಈ ಚಿತ್ರದಲ್ಲಿ ಕಡುಬಡತನದಲ್ಲಿ ಸಂಸಾರ ಸಾಗಿಸಲು ಒದ್ದಾಡುವ ಹರಿಹರ ಮತ್ತು ಸರ್ಬೋಜಯ ದಂಪತಿಗಳ ಸಂಕಟಗಳು. ವೃದ್ಧಾಪ್ಯದಲ್ಲೂ ಜೀವನೋತ್ಸಾಹವನ್ನು ಕಳೆದುಕೊಳ್ಳದೇ ಕುಟುಂಬದ ಎಲ್ಲಾ ವಿಚಾರಗಳಲ್ಲಿ ಮೂಗು ತೂರಿಸಿ ಆಗಾಗ್ಗೆ ಸೊಸೆಯ ಕೋಪಕ್ಕೆ ತುತ್ತಾಗುವ ಅಜ್ಜಿ ಇಂದಿರಾ. ಈ ಯಾವ ತಾಪತ್ರಯಗಳಿಗೂ ತಲೆಕೆಡಿಸಿಕೊಳ್ಳದೆ ತಮ್ಮ ಬಾಲ್ಯದ ಸುಂದರ ಘಳಿಗೆಗಳನ್ನು ರಸಮಯವಾಗಿ ಕಳೆಯುವ ಅಪು ಮತ್ತು ದುರ್ಗಾ. ಇವೆಲ್ಲ ತುಂಬಾ ಪರಿಣಾಮಕಾರಿಯಾಗಿ ಮೂಡಿಬಂದಿವೆ.

ಒಂದು ಹಂತದಲ್ಲಿ ಮುದುಕಿ ಇಂದಿರಾ ಕರುಣಾಜನಕ ಸ್ಥಿತಿಯಲ್ಲಿ ಸಾಯುತ್ತಾಳೆ. ಆ ಸಾವು ಈ ಸಂಸಾರದ ಮೇಲೆ ಗಾಢವಾದ ಪ್ರಭಾವವನ್ನು ಬೀರುತ್ತದೆ. ಅಷ್ಟರಲ್ಲಿ ದೊಡ್ಡವಳಾಗುವ ದುರ್ಗಾಳ ಎಳೆತನವೂ ಹೋಗಿ ಆಕೆ ಸಂಕೀರ್ಣವಾದ ವ್ಯಕ್ತಿತ್ವದೊಂದಿಗೆ ನಿಲ್ಲುತ್ತಾಳೆ.



ಪಥೇರ್ ಪಾಂಚಾಲಿಯ ಸ್ಮರಣೀಯ ರೈಲು ಗಾಡಿ ದೃಶ್ಯ

ಮಳೆಯಲ್ಲಿ ನೆನೆಯುವುದು ಯಾವ ಮಕ್ಕಳಿಗೆ ಇಷ್ಟವಾಗುವುದಿಲ್ಲ?. ಅಪು ಮತ್ತು ದುರ್ಗಾ ಕೂಡ ಇಂಥ ಒಂದು ಮಳೆಗೆ ಮೈ ಒಡ್ಡುತ್ತಾರೆ. ಇದು ದುರ್ಗಾಳ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರಿ ಅವಳನ್ನು ಕಾಯಿಲೆ ಮಲಗಿಸುತ್ತದೆ. ಶಿಥಿಲಗೊಂಡ ಮನೆ ಮತ್ತು ಕ್ರೌರ್ಯಕ್ಕೆ ತಿರುಗಿದ ಪ್ರಕೃತಿ ದುರ್ಗಾಳನ್ನು ಆ ಸಂಸಾರದಿಂದ ಕಸಿದುಕೊಳ್ಳುತ್ತವೆ. ದುರ್ಗಾಳ ಸಾವು ಅಪುವಿನ ಮೇಲೆ ಗಾಢ ಪ್ರಭಾವವನ್ನು ಬೀರುತ್ತದೆ. ಅಪು ಈಗ ಮೊದಲಿನ ಸಣ್ಣ ಹುಡುಗನಲ್ಲ, ಪಾಠ ಕಲಿತವನು! ಸಿನೆಮಾದ ಅಂತ್ಯದಲ್ಲಿ ಹರಿಹರ ಮನೆಗೆ ಹಿಂತಿರುಗುತ್ತಾನೆ. ದುರ್ಗಾಳ ಸಾವಿನ ಸುದ್ದಿ ಅವನಿಗೂ ಆಘಾತವಾಗುತ್ತದೆ. ಬದುಕಲಸಾಧ್ಯವಾದ ಆ ಮನೆಯನ್ನು, ಹಳ್ಳಿಯನ್ನು ತ್ಯಜಿಸಿ ತನ್ನ ಸಂಸಾರವನ್ನು ವಾರಣಾಸಿಗೆ ಕೊಂಡೊಯ್ಯುತ್ತಾನೆ. ಇದಿಷ್ಟು ಕತೆ.

ಕತೆಯೇನೋ ಸಿದ್ಧವಾಗಿತ್ತು. ಆದರೆ ಹಣ ಹೂಡುವ ನಿರ್ಮಾಪಕರು? ಅದರಲ್ಲೂ ನಿರ್ದೇಶಕನೊಬ್ಬನ ಮೊದಲ ಚಿತ್ರಕ್ಕೆ ಬಂಡವಾಳ ಹೂಡುವವರು ದೊರಕುವುದು ತ್ರಾಸದ ವಿಚಾರವೇ. ರೇ ಅವರಿಗೂ ಇದೇ ಅನುಭವವಾಯಿತು. ನಿರ್ಮಾಪಕರಿಗೆ ತಮ್ಮ ಈ ಸಿನಿಮಾದ ಬಗೆಗಿನ ಕಲ್ಪನೆಯನ್ನು ವಿವರಿಸುವುದಕ್ಕಾಗಿ ಚಿತ್ರಗಳು, ಸಂಭಾಷಣೆ ಮುಂತಾದ ವಿವರಗಳನ್ನೊಳಗೊಂಡ ಸಣ್ಣ ನೋಟ್‌ಬುಕ್‌ವೊಂದನ್ನು ಜೊತೆಗಿಟ್ಟುಕೊಂಡಿರುತ್ತಿದ್ದರು. ಮತ್ತೊಂದು ಪುಸ್ತಕದಲ್ಲಿ ಚಲನಚಿತ್ರದ ನಾಟಕೀಯ ಕ್ಷಣಗಳ ರೇಖಾಚಿತ್ರಗಳನ್ನು ಬಿಡಿಸಿಟ್ಟುಕೊಂಡಿದ್ದು ವಿವರಿಸುತ್ತಿದ್ದರು. ನಿರ್ಮಾಪಕರಿಗೆ ಈ ತಯಾರಿ ಇಷ್ಟವಾಗುತ್ತಿತ್ತಾದರೂ ಯಾರೂ ಹಣ ಹೂಡಲು ಮುಂದೆ ಬಂದಿರಲಿಲ್ಲ.

ಆ ಕಾಲದಲ್ಲಿ ಬಹುತೇಕ ಚಲನಚಿತ್ರಗಳನ್ನು ಸ್ಟುಡಿಯೋಗಳಲ್ಲಿ ಚಿತ್ರೀಕರಿಸಲಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಈ ಚಿತ್ರದ ಹೊರಾಂಗಣ ಚಿತ್ರೀಕರಣದ ವಿರುದ್ಧ ಅನೇಕರು ಮೂಗು ಮುರಿದರು. ಹಾಗೂ ಹೀಗೂ ಒಬ್ಬ ನಿರ್ಮಾಪಕ ಸಿಕ್ಕ. ಆದರೆ ಮೊದಲ ಹಂತದ ಚಿತ್ರೀಕರಣ ನಡೆದಿರುವಾಗಲೇ ಅರ್ಧದಲ್ಲಿಯೇ ಕೈ ಎತ್ತಿದ. ಆಗ ಸತ್ಯಜಿತ್ ರೇ ಅವರೇ ತಮ್ಮ ಪತ್ನಿಯ ಒಡವೆಗಳನ್ನು ಒತ್ತೆಯಿಟ್ಟು, ತಮ್ಮ ಬೆಲೆಬಾಳುವ ಪುಸ್ತಕಗಳನ್ನು ಮಾರಾಟಮಾಡಿ ಹಣ ಹೊಂದಿಸಿ ಮುಂದುವರಿಸಲು ಪ್ರಯತ್ನಿಸಿದರು. ಅದೂ ಸಾಕಾಗದಿದ್ದಾಗ ಅಂದಿನ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಗಳ ಸಹಾಯ ಯಾಚಿಸಿದರು. ಹಣ ಕೊಡಲು ಒಪ್ಪಿದ ಅವರು ಒಂದು ಕಂಡೀಷನ್ ಕೂಡ ಹೇರಿದರು. ನಿಮ್ಮ ಚಿತ್ರದ ಅಂತ್ಯ ಸಂತೋಷಕರವಾಗಿರಬೇಕು, ಈಗಿರುವಂತೆ ದುಃಖಾಂತ್ಯವಾಗಬಾರದು. ಇದಕ್ಕೆ ಕಾದಂಬರಿಕಾರರ ಕುಟುಂಬದವರು ಒಪ್ಪುವುದಿಲ್ಲ ಎಂಬ ಕಾರಣ ಕೊಟ್ಟು ರೇ ಬಚಾವಾದರು.

ಪಾತ್ರವರ್ಗದ ಆಯ್ಕೆ ಆರಂಭವಾಯಿತು. ಅಪು ಪಾತ್ರಕ್ಕೆ ಬೇಕಾದ ಎಂಟು ವರ್ಷದ ಬಾಲ ಕಲಾವಿದ ಸಿಗಲಿಲ್ಲ. ಶಾಲೆಗಳಿಗೆ ಹೋಗಿ ಹುಡುಕಿದರು, ಪತ್ರಿಕೆಗಳಲ್ಲಿ ಪ್ರಕಟಣೆ ಕೊಟ್ಟರು. ಆಡಿಷನ್‌ಗೆ ಬಂದಿದ್ದ ಗುಂಪಿನಲ್ಲಿ ಒಬ್ಬ ಹುಡುಗ ಪರವಾಗಿಲ್ಲ ಅನ್ನುವಂತಿದ್ದ. ರೇಗೆ ಏನೋ ಅನುಮಾನ ಬಂತು. ಹತ್ತಿರ ಹೋಗಿ ತೀಕ್ಷ್ಣವಾಗಿ ಪರೀಕ್ಷಿಸಿದರು. ಅವರ ಅನುಮಾನ ನಿಜವಾಯಿತು. ಆತ ಹುಡುಗನಾಗಿರಲಿಲ್ಲ; ಹುಡುಗಿ! ನಟನೆಯ ಆಸೆಯಿಂದ ತಮ್ಮ ಮಗಳನ್ನು ಕ್ಷೌರಿಕರ ಬಳಿ ಕರೆದುಕೊಂಡು ಹೋಗಿ ಬಾಯ್‌ಕಟ್ ಮಾಡಿಸಿಕೊಂಡು ಬಂದಿದ್ದರು ಪೋಷಕರು! ಕೊನೆಗೆ ಅಪು ಸಿಕ್ಕಿದ್ದು ರೇ ಪತ್ನಿಗೆ. ಅವರ ಪಕ್ಕದ ಮಹಡಿಯಲ್ಲಿ ಆಡುತ್ತಿದ್ದ ಮಕ್ಕಳ ಗುಂಪಿನಲ್ಲಿ! ಆತನೇ ಬಾಲಕ ಸುಬೀರ್ ಬ್ಯಾನರ್ಜಿ.

ಈ ಚಿತ್ರದಲ್ಲಿ ಕಾಣಿಸಿಕೊಳ್ಳುವ ಮತ್ತೊಂದು ಪ್ರಮುಖ ಪಾತ್ರ ಅಜ್ಜಿ ಇಂದಿರಾಳದ್ದು. ಈ ಪಾತ್ರ ಮಾಡಿದ್ದು ಎಂಬತ್ತು ವರ್ಷದ ರಂಗಭೂಮಿಯ ನಟ ಚುನಿಬಾಲ ದೇವಿ. ಚಿತ್ರೀಕರಣ ಮುಗಿಯುವವರೆಗೂ ಆಕೆ ತೊಂದರೆ ಕೊಡಲಿಲ್ಲ, ಏಕೆಂದರೆ ಮಧ್ಯಾಹ್ನ ಟೀ ಹೊತ್ತಿನಲ್ಲಿ ಆಕೆಗೆ ಒಂದಿಷ್ಟು ಹೊಗೆಸೊಪ್ಪು ಕೊಟ್ಟು ಸಂಭಾಳಿಸಲಾಗುತ್ತಿತ್ತು. ಅದೊಂದೇ ಆಕೆ ಚಂಚಲಳಾಗದಂತೆ ಉಳಿಸಿಕೊಳ್ಳಲು ಇದ್ದ ಮಾರ್ಗ. ಆಕೆಯ ದಿನದ ಸಂಭಾವನೆ ಇಪ್ಪತ್ತು ರೂಪಾಯಿ. ದುರದೃಷ್ಟವಶಾತ್ ಚಿತ್ರದ ಬಿಡುಗಡೆಗೆ ಮುಂಚೆಯೇ ಆಕೆ ಕಣ್ಮುಚ್ಚಿದಳು.

ಕಳೆದ ಶತಮಾನದಇಪ್ಪತ್ತರ ದಶಕದ ಬಂಗಾಲದ ಗ್ರಾಮೀಣ ಬದುಕನ್ನು ಕಟ್ಟಿಕೊಡುವ ಈ ಸಿನಿಮಾ ಭಾವನಾತ್ಮಕವಾಗಿ ವೀಕ್ಷಕರನ್ನು ಸೆರೆ ಹಿಡಿಯುತ್ತದೆ. ಮಾನವ ಸಂಬಂಧಗಳ ಸೂಕ್ಷ್ಮತೆ ಮತ್ತು ಅವನ ಬದುಕಿನ ವಿಭಿನ್ನ ತಿರುವುಗಳನ್ನು ನಮ್ಮ ಮುಂದಿಡುವ ಮೂಲಕ ಚಿಂತನೆಗೆ ಹಚ್ಚುತ್ತದೆ.. ಚಿತ್ರದುದ್ದಕ್ಕೂ ನಾಟಕೀಯತೆ ಇಲ್ಲದ, ಸಹಜ ಮತ್ತು ಬದುಕಿನ ವಿವಿಧ ಮುಖಗಳನ್ನು ಅನಾವರಣಗೊಳಿಸುತ್ತಾ ಸಾಗುತ್ತದೆ. ಮಕ್ಕಳು ಮಿಠಾಯಿಗಾಗಿ ಕಾತರಿಸುವುದು, ಶ್ರೀಮಂತರ ಮನೆ ಮದುವೆಯಲ್ಲಿ ಸಿಹಿ ತೆಗೆದುಕೊಳ್ಳುವುದು, ಐಸ್‌ಕ್ಯಾಂಡಿ ತಿನ್ನುವುದು, ಹೊಲದಲ್ಲಿ ಕಬ್ಬಿನ ಜಲ್ಲೆ ಜಗಿಯುವುದು, ಉಗಿಬಂಡಿಯ ಹಿಂದೆ ಓಡುವುದು– ಹೀಗೆ ಸಣ್ಣ ಸಣ್ಣ ಸಂಗತಿಗಳು ಗಾಢವಾಗಿ ಇದರಲ್ಲಿ ಚಿತ್ರಿತವಾಗಿವೆ.

ಚಿತ್ರದುದ್ದಕ್ಕೂ ರವಿಶಂಕರ್ ಅವರು ನೀಡಿದ ಅದ್ಭುತ ಹಿನ್ನೆಲೆ ಸಂಗೀತ ಚಿತ್ರವನ್ನು ಇನ್ನಷ್ಟು ಪರಿಣಾಮಕಾರಿಯಾಗಿಸಿದೆ. ಸುಬ್ರತೋ ಮಿತ್ರಾ ಅವರ ಛಾಯಾಗ್ರಹಣದ ನೆಳಲು–ಬೆಳಕಿನ ಸಮ್ಮಿಶ್ರಣದಲ್ಲಿ ಮೂಡಿಬಂದಿರುವ ಚಿತ್ರದ ಎಲ್ಲಾ ಚಿತ್ರಿಕೆಗಳು ಕಲಾತ್ಮಕವಾಗಿದ್ದು ನೋಡುಗರ ಮೆಚ್ಚುಗೆಗೆ ಪಾತ್ರವಾಗಿವೆ. ರೇ ಅವರು ಈ ಚಿತ್ರ ಮಾಡಲು ಪ್ರಭಾವ ಬೀರಿದ್ದು ಇಟಲಿಯ ನವ–ವಾಸ್ತವವಾದ (Neorealism) ಎಂದು ಹೇಳಲಾಗುತ್ತದೆ. ಆದರೆ ಸತ್ಯಜಿತ್ ಭಾರತೀಯ ರಸ ಸಿದ್ಧಾಂತವನ್ನು ಇಲ್ಲಿ ಸಮರ್ಥವಾಗಿ ಬಳಸಿದ್ದಾರೆ. ಇದನ್ನು ಬರಿಯ ಪಾತ್ರಗಳಿಗಷ್ಟೇ ಸೀಮಿತಗೊಳಿಸಿಲ್ಲ, ಕಲಾತ್ಮಕವಾಗಿ ಪ್ರೇಕ್ಷಕರಿಗೂ ದಾಟಿಸಿದ್ದಾರೆ.

ಚಿತ್ರದಲ್ಲಿ ಒಂದು ಅದ್ಭುತವಾದ ದೃಶ್ಯವಿದೆ. ಹಿನ್ನೆಲೆಯಲ್ಲಿ ಉಗಿಬಂಡಿ, ಅದರ ಮುಂದೆ ಬಿಳಿಯ ಹೂಗಳಿರುವ (ಕಾಷ್ ಹೂ) ಜೊಂಡು. ಇದೊಂದು ಅಪರೂಪದ ಗಿಡವಾಗಿದ್ದು ವರ್ಷದಲ್ಲಿ ಎರಡು ತಿಂಗಳು ಮಾತ್ರ ಹೂ ಬಿಡುತ್ತಿತ್ತು. ಚಿತ್ರೀಕರಣ ಆರಂಭವಾಗಿದ್ದೇ ಅಪು ಮತ್ತು ದುರ್ಗಾ ರೈಲನ್ನು ನೋಡುವ ದೃಶ್ಯದಿಂದ. ಅದನ್ನು ಭಾನುವಾರಗಳಂದು ಮಾಡುವುದು ಎಂದು ತೀರ್ಮಾನಿಸಲಾಗಿತ್ತು. ಒಂದು ಭಾನುವಾರ ಮುಗಿದು ಎರಡನೇ ಭಾನುವಾರ ಹೋದಾಗ ಅಲ್ಲಿ ಹೂಗಳೇ ಇಲ್ಲ. ಎಲ್ಲಾ ಬಟಾಬಯಲು. ಹಸು–ಎಮ್ಮೆಗಳು ಅದನ್ನು ಮೇದು ಹಾಕಿದ್ದವಂತೆ! ಮುಂದುವರಿದ ಶಾಟ್‌ಗಾಗಿ ಇನ್ನೊಂದು ಸೀಸನ್‌ವರೆಗೆ ಕಾಯಬೇಕಾಯಿತು.

ಪಾಥೇರ್ ಪಾಂಚಾಲಿ 'ಅಪೂ ಟ್ರಿಲಜೀ'ಯ, (ಮೂರು ಚಿತ್ರಗಳ ಸರಣಿ) ಮೊದಲ ಚಿತ್ರ. ಆನಂತರ ಬಂದವು, 'ಅಪರಾಜಿತೋ' (೧೯೫೬) ಮತ್ತು 'ಅಪುರ್ ಸಂಸಾರ್' (೧೯೫೯).

* * *

ಹಾಗೆ ನೋಡಿದರೆ, ಸತ್ಯಜಿತ್ ರೇ ಅವರ ಈ ಚಿತ್ರ ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲ್ಪಡಲು ಬಹು ಮುಖ್ಯ ಕಾರಣ ಮೇರಿ ಸೆಟನ್ ಎಂಬ ಚಲನಚಿತ್ರ ಕಲಾಭಿಜ್ಞ, ಬ್ರಿಟಿಷ್ ಮಹಿಳೆ. ಆ ವರ್ಷದ ಕ್ಯಾನೆ ಚಲನಚಿತ್ರೋತ್ಸವಕ್ಕೆ ಪಥೇರ್ ಪಾಂಚಾಲಿ ಸಿನೆಮಾ ಕಳುಹಿಸಲು ಅಂದಿನ ಭಾರತದ ಮಂತ್ರಾಲಯ ತಯಾರಿರಲಿಲ್ಲ. ಆ ಸಮಯಕ್ಕೆ ಬ್ರಿಟಿಷ್ ಚಲನಚಿತ್ರ ಸಂಸ್ಥೆಯವರು ತಮ್ಮ ನ್ಯಾಷನಲ್ ಫಿಲಂ ಥಿಯೇಟರ್‌ನಲ್ಲಿ ಪ್ರದರ್ಶಿಸಲು ಸೂಕ್ತವಾದ ಭಾರತೀಯ ಸಿನೆಮಾ ಯಾವುದು ಎಂದು ಮೇರಿ ಅವರನ್ನು ಕೇಳಿದರು. ಮೇರಿ 'ಪಾಥೇರ್ ಪಾಂಚಾಲಿ'ಯನ್ನು ಸೂಚಿಸಿದರು. ಅವರೇ ಹೇಳುವಂತೆ, ಇದರ ಹಿಂದೆ ಇದ್ದ ಉದ್ದೇಶ, ಬ್ರಿಟಿಷ್ ಚಲನಚಿತ್ರ ಸಂಸ್ಥೆಯಿಂದ ಗುರುತಿಸಲ್ಪಟ್ಟಾಗ ಪಾಥೇರ್ ಪಂಚಾಲಿಗೆ ಕ್ಯಾನ್ ಭಾಗ್ಯ ದೊರಕಬಹುದು ಎಂಬುದು! ಅದು ನಿಜ ಕೂಡ ಆಯಿತು.

೧೯೫೬ನೇ ಇಸವಿಯಲ್ಲಿ ಪ್ರತಿಷ್ಠಿತ ಕ್ಯಾನೆ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ನಡೆದಿತ್ತು. ಪ್ರಪಂಚದ ಬೇರೆ ಬೇರೆ ದೇಶಗಳಿಂದ ಚಲನಚಿತ್ರಗಳು ಸ್ಪರ್ಧಾ ಕಣದಲ್ಲಿವು. ಇವುಗಳ ನಡುವೆ ಭಾರತದ 'ಪಾಥೇರ್ ಪಾಂಚಾಲಿ'ಯೂ ಇತ್ತು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತೀಯ ಸಿನಿಮಾಗಳ ಬಗ್ಗೆ ಅಷ್ಟೇನೂ ಒಲವಿರದಿದ್ದ ದಿನಗಳು ಅವು. ಅಂದು ಜ್ಯೂರಿಗಳು ಬೆಳಗ್ಗೆಯಿಂದ ನಾಲ್ಕು ಚಿತ್ರಗಳನ್ನು ನೋಡಿದ್ದರು. ಅವು ಮುಗಿದಾಗಲೇ ರಾತ್ರಿ ತಡವಾಗಿತ್ತು. ಅಂದಿನ ಶೆಡ್ಯೂಲ್ ಪ್ರಕಾರ ನೋಡಲು ಇನ್ನೂ ಒಂದು ಚಿತ್ರ ಬಾಕಿ ಉಳಿದಿತ್ತು. ಎಲ್ಲರೂ ಸುಸ್ತಾಗಿದ್ದರು. ಅಲ್ಲದೆ ಅದು ಭಾರತದಿಂದ ಬಂದ ಚಿತ್ರ ಬೇರೆ. ಒಂದು ರೀತಿಯ ತಾತ್ಸಾರ. ಮುಕ್ಕಾಲುಪಾಲು ಜನ ನೋಡಲು ಉತ್ಸಾಹ ತೋರಿಸಲಿಲ್ಲ. ಮೂರು–ನಾಲ್ಕು ಜನ ಮಾತ್ರ ನೋಡಲು ಕುಳಿತರು. ಚಿತ್ರ ಮುಗಿದಾಗ ಮಧ್ಯರಾತ್ರಿ ದಾಟಿತ್ತು. ಯಾರೂ ಮಾತನಾಡಲಿಲ್ಲ.



ಚಿತ್ರೀಕರಣ ತಂಡದೊಡನೆ ಸತ್ಯಜಿತ್ ರೇ

ಬೆಳಗ್ಗೆ, ಉಳಿದ ಜ್ಯೂರಿಗಳು ಬಂದಾಗ ಚಿತ್ರ ನೋಡಿದ್ದ ಕೆಲವರು ಇತರರಿಗೆ ಹೇಳಿದರು. ನೀವು 'ಪಾಥೇರ್ ಪಾಂಚಾಲಿ' ಯನ್ನು ಮಿಸ್ ಮಾಡಿಕೊಂಡಿದ್ದೀರಿ, ಮತ್ತೊಮ್ಮೆ ಸ್ಕ್ರೀನ್ ಮಾಡೋಣ. ಎಲ್ಲರೂ ನೋಡಲೇಬೇಕಾದ ಚಿತ್ರ ಎಂದು ವಿಶೇಷ ಪ್ರದರ್ಶನಕ್ಕೆ ಏರ್ಪಾಟು ಮಾಡಿದರು. ಮತ್ತೆ ಎಲ್ಲರೂ ನೋಡಿದರು, ಮೆಚ್ಚಿದರು. ಆ ಚಿತ್ರಕ್ಕೆ ಆ ವರ್ಷ 'ಅತ್ಯುತ್ತಮ ಮಾನವೀಯ ಸಂಬಂಧಗಳ ಚಿತ್ರ' ಎಂಬ ಪ್ರಶಸ್ತಿ ಲಭ್ಯವಾಯಿತು.


* * *

ಸತ್ಯಜಿತ್ ರೇ 'ನಾನೇಕೆ ಚಿತ್ರ ನಿರ್ಮಿಸುತ್ತೇನೆ' ಎಂಬ ತಮ್ಮ ಪುಟ್ಟ ಟಿಪ್ಪಣಿಯೊಂದರಲ್ಲಿ ಹೀಗೆ ಬರೆಯುತ್ತಾರೆ: "ನಾನು ಯಾಕಾಗಿ ಚಿತ್ರ ತಯಾರಿಸುತ್ತೇನೆ ಎಂದು ಯಾರಾದರೂ ಕೇಳಿದರೆ ಉತ್ತರ ಹೇಳುವುದು ನನಗೆ ಸುಲಭವಲ್ಲ. ಅದಕ್ಕೆ ಸರಿಯಾದ ಅಥವಾ ಒಳ್ಳೇ ಕಾರಣಗಳು ಇಲ್ಲ ಎಂಬುದಲ್ಲ, ಕಾರಣಗಳು ಅನೇಕ ಇದ್ದಾವೆ ಎಂಬುದೇ! ಚಿತ್ರ ತಯಾರಿಸುವುದರಲ್ಲಿ ನನಗೆ ಪ್ರೀತಿ ಎಂಬುದೇ ಈ ಪ್ರಶ್ನೆಗೆ ನಿಜವಾದ ಉತ್ತರ ಎನ್ನಿಸುತ್ತದೆ. ಚಿತ್ರ ನಿರ್ಮಾಣದ ಹಂತಹಂತದಲ್ಲೂ, ಕ್ಷಣಕ್ಷಣದಲ್ಲೂ ನನಗೆ ಸವಿ ಕಾಣುತ್ತದೆ. ನನ್ನದಕ್ಕೆ ನಾನೇ ಚಿತ್ರಲೇಖನ ಬರೆದುಕೊಳ್ಳುತ್ತೇನೆ. ಸಂಭಾಷಣೆ ರಚಿಸಿಕೊಳ್ಳುತ್ತೇನೆ. ಹಾಗೆ ಮಾಡುವುದರಲ್ಲೇ ನನಗೆ ಖುಷಿ. ರಚನೆ, ನಟರ ಆಯ್ಕೆ, ಅಭಿನಯ, ನಿರ್ದೇಶನ, ಗ್ರಹಣ, ಸಂಕಲನ ಹೀಗೆ ಒಂದೊಂದೂ ನಿಜವಾಗಿ ರೋಮಾಂಚಕಾರಿ; ಇವೆಲ್ಲ ಕೂಡಿ ಹೊಸದಾದ ಒಂದು ಸ್ವತಂತ್ರ 'ಬದುಕು' ನಿರ್ಮಿತವಾಗುತ್ತದೆ."

"ನಿಜವಾದ ರಚನಾತ್ಮಕ ಕ್ರಿಯೆಗಳಷ್ಟೇ ಅಲ್ಲದೆ, ಬೇರೆ ಕಾರಣಗಳಿಗಾಗಿ ಕೂಡ ಚಿತ್ರ ನಿರ್ಮಾಣ ರೋಮಾಂಚಕಾರಿ ಎನ್ನಿಸುತ್ತದೆ. ಅದು ನನ್ನನ್ನು ನನ್ನ ದೇಶದ ನನ್ನ ಜನರ ಸಮೀಪಕ್ಕೆ ಕೊಂಡೊಯ್ಯುತ್ತದೆ. ಒಂದೊಂದು ಚಿತ್ರವೂ ಆತ್ಮಶಿಕ್ಷಣಕ್ಕೆ ದಾರಿ ತೋರಿಸುತ್ತದೆ. ನನ್ನ ಸುತ್ತ ಇರುವ ಬದುಕಿನ ಅಪರಂಪಾರ ವೈವಿಧ್ಯವನ್ನು ಕಾಣಿಸಿಕೊಡುತ್ತದೆ; ಈ ದೃಶ್ಯ-ಶಬ್ದಗಳ, ಈ ಪರಿಸರದ ತಲೆತಿರುಗಿಸುವಂಥ ವಿರೋಧ ವೈವಿಧ್ಯಗಳು ಯಾವ ನಿರ್ಮಾತೃವಿಗಾದರೂ ಇದೊಂದು ಸವಾಲು. ಇವುಗಳನ್ನು ಎತ್ತಿ ಸಂಗತಗೊಳಿಸಿ ಹೊಸ ಕಲಾಸೃಷ್ಟಿಯಾಗಿ ಕಟ್ಟಿ ನಿಲ್ಲಿಸುವುದು."

"ನನ್ನ ಮೊದಲ ಚಿತ್ರ 'ಪಥೇರ್ ಪಾಂಚಾಲಿ'ಗೆ ಮೊದಲು ನನಗೆ ಗೊತ್ತಿದ್ದ ಬಂಗಾಲದ ಜೀವನ ಮೇಲುಮೇಲಿನದ್ದು. ಈಗ ಮಾತ್ರ ಅದು ನನಗೆ ಕಿಂಚಿತ್ತಾದರೂ ಗೊತ್ತು ಎನ್ನಬಲ್ಲೆ; ಅದರ ನೆಲ, ಋತುಗಳು, ಗಿಡಗಳು, ಕಾಡುಗಳು, ಹೂಗಳು; ಹೊಲದಲ್ಲಿ ದುಡಿವ ಹೆಂಗಸರು, ಬಾವಿಯ ಬಳಿ ಹರಟುವ ಹೆಂಗಸರು, ಮಳೆ ಬಿಸಿಲಲ್ಲಿ ಆಡುವ ಮಕ್ಕಳು; ಪ್ರಪಂಚದ ಎಲ್ಲ ಕಡೆ ಆಡುವ ಹಾಗೇ ಆಡುವ ಮಕ್ಕಳು. ಈಗ ನನಗೆ ಕಲ್ಕತ್ತಾ ಗೊತ್ತು. ಪ್ರಪಂಚದ ಯಾವುದೇ ನಗರದ ಹಾಗೆ ಇದಿಲ್ಲ. ಆದರೆ ಇಲ್ಲೂ ಜನ ಲಂಡನ್, ನ್ಯೂಯಾರ್ಕ್, ಟೋಕಿಯೋಗಳಲ್ಲಿ ಹೇಗೋ ಹಾಗೇ ಹುಟ್ಟುತ್ತಾರೆ, ಬದುಕುತ್ತಾರೆ, ಪ್ರೇಮಿಸುತ್ತಾರೆ. ಈ ವೈಶಿಷ್ಟ್ಯ ಮತ್ತು ಸಾಂಗತ್ಯ- ಇದು ನನ್ನನ್ನು ಬೆರಗುಗೊಳಿಸುತ್ತದೆ. ಈ ಬೆರಗನ್ನೇ ನನ್ನ ಚಿತ್ರಗಳಲ್ಲಿ ಕಾಣಿಸಲು ಯತ್ನಿಸುತ್ತೇನೆ."

ಬದುಕಿರುವವರೆಗೂ ಸಿನಿಮಾವನ್ನೇ ಉಸಿರಾಡುತ್ತಾ, ಅತ್ಯುತ್ತಮ ಚಲನಚಿತ್ರಗಳನ್ನು ತಯಾರಿಸುತ್ತಾ, ಭಾರತದ ಚಿತ್ರಜಗತ್ತಿಗೆ ಅಂತಾರಾಷ್ಟ್ರೀಯ ಮನ್ನಣೆ ದೊರಕಿಸಿಕೊಟ್ಟ ಸತ್ಯಜಿತ್ ರೇ ಅಂತಹ ಮಹಾನ್ ಮಾಂತ್ರಿಕನಿಗೆ ಈ ಶತಮಾನೋತ್ಸವ ಸಂದರ್ಭದಲ್ಲಿ ನಾವು ಕೊಡುವ ಗೌರವ ಎಂದರೆ ಮತ್ತೆ ಅವರ ಚಿತ್ರಗಳನ್ನು ವೀಕ್ಷಿಸುವುದು.



(ಲೇಖಕರು ಇತ್ತೀಚಿನ ವರ್ಷಗಳಲ್ಲಿ ಕನ್ನಡ ಚಿತ್ರರಂಗದಲ್ಲಿ ಸಮಾನಂತರ ಚಿತ್ರ ಪರಂಪರೆಯನ್ನು ಆರಂಭಿಸಿರುವ ಹಲವು ಪ್ರಶಸ್ತಿ ಪುರಸ್ಕೃಥ ಚಿತ್ರಗಳ ನಿರ್ದೇಶಕರು)

'ಸಿಂಗ' ಎಂಬ ನಾಯಿ ಹೇಳಿದ ಕತೆ!

(ಕೃಷ್ಣಮೂರ್ತಿ ಹನೂರರ ಹೊಸ ಕಿರು ಕಾದಂಬರಿ 'ಕಾಲಯಾನದಿಂದ ಆಯ್ದ ಒಂದು ಭಾಗ)

ಹೆಣ ಎತ್ತುತ್ತಿದ್ದವರ ಮುಂದೆ ಸಿಂಹನಾದಗೈಯ್ಯುತ್ತಿದ್ದ ಸಿಂಗನ ಸದ್ದು ಕೇಳಿ ತಿರುತಿರುಗಿ ಎಚ್ಚರವಾಗುತ್ತಿದ್ದ ಲಕ್ಷ್ಮವ್ವ ಈ ಸಿಂಗನನ್ನು ನಾಳೆಯಿಂದ ಸ್ಮಶಾನದಲ್ಲಿ ಇರಗೊಡಬಾರದೆಂದು ತೀರ್ಮಾನಿಸಿದಳು. ಲಾಡಸಾಬನಿಗೂ ಒಮ್ಮೆ ಎಚ್ಚರವಾಗಿ ಆ ಹೊತ್ತೇ ಮಣ್ಣು ಮಾಡಿದ ಸಮಾಧಿಯತ್ತ ಅದೇನೋ ಸದ್ದಾಗಲು ಎದ್ದು ಕೂತು ಅತ್ತ 'ಯಾರಲೇ ಅವ್ನಾ' ಅಂತ ಒಂದು ಕ ಿ ೂ ಗ ಿ ಂ ಹಾಕಬೇಕೆಂದುಕೊಂಡನಾದರೂ ಅವನ ಗಂಟಲಿಗೆ ಹಾಗೆ ಕೂಗುವ ಶಕ್ತಿಯೇ ಇರಲಿಲ್ಲವಲ್ಲ!



ಇದರ ಮೇಲೆ ಲಗಾಟಿಗೆ ಬಂದ ಯೋಚನೆಯೆಂದರೆ, ಸಮಾಧಿಯ ಮೇಲೆ ಸರಿಯಾಗಿಯೇ ಮಣ್ಣು ಕವುಚಿದ್ದೆನಲ್ಲ, ಅದಲ್ಲದೆ ಗುಂಡಿಯನ್ನೂ ನಾಲ್ಕು ಅಡಿ ತೋಡಿದ್ದೆ. ನಾಯಿ, ನರಿಗಳು ಅಷ್ಟು ಆಳದ ಗುಂಡಿಯನ್ನು ಕೆರೆದು ಹೆಣ ಎತ್ತಲು ಸಾಧ್ಯವೇ ಇಲ್ಲ. ಇಷ್ಟುದಿನ ಯಾವ ಸಮಾಧಿಯ ದೇಹವನ್ನೂ ನರಿ ನಾಯಿಗಳು ಎತ್ತಿಲ್ಲ. ಈ ಸಿಂಗ ಊರ ತುಡುಗುಣಿ ನಾಯಿಗಳ ಮೇಲೆ ಜಗಳ ತೆಗೆದಿರಬೇಕು ಅಷ್ಟೆ ಅಂದುಕೊಳ್ಳುವಲ್ಲಿ ತಿರುಗಿ ಮಂಪರು ನಿದ್ದೆ ಕವಿಯಿತು. ಲಗಾಟಿಯ ಬೆನ್ನಿಗೊತ್ತಿ ನಿದ್ದೆಯಲ್ಲಿರುತ್ತಿದ್ದ ಸಿಂಗ ಸ್ಮಶಾನದ ಗೋಡೆಯ ಯಾವ ದಿಕ್ಕಿನಲ್ಲಿ ಹಾವು, ಹಲ್ಲಿ, ಇರುವೆ ಸುಳಿದರೂ ಹತ್ತಾರು ಸರ್ತಿ ಬೊಗಳಿ ಬೆದರಿಕೆ ಹಾಕುತ್ತಿದ್ದರೆ, ಆವತ್ತು ರಾತ್ರಿ ಹೆಣ ಎತ್ತುತ್ತಿದ್ದವರ ಮುಂದೆ ಎಷ್ಟು ಹಾರಾಡಿದರೂ ಪ್ರಯೋಜನ ಕಾಣಲಿಲ್ಲ.

ಸಿಂಗ ಬೊಗಳುತ್ತಿರುವಲ್ಲಿಯೇ ಇಬ್ಬರು ಗುಂಡಿಯಿಂದ ಹೆಣ ಎತ್ತಿ ಗೋಡೆಯಿಂದಾಚೆಗೆ ಸಾಗಿಸಿ ಟೆಂಪೋಗೆ ಹಾಕಿದರು. ಸ್ಮಶಾನದ ಗೋಡೆಯನ್ನು ಬಿಟ್ಟು ಟೆಂಪೋ ಸದ್ದಿಲ್ಲದೆ ಊರಾಚೆಯ ಹೈವೇಗೆ ಬಂದಿತು. ಒಳಗೆ ಕೂತವರು ಹೆಣವನ್ನು ಅಲ್ಲಿ ಎದುರು ಬಂದು ನಿಂತ ಅಂಬ್ಯುಲೆನ್ಸ್‌ಗೆ ವರ್ಗಾವಣೆ ಮಾಡಿದರು. ಈ ವ್ಯವಹಾರವನ್ನು ಕಣ್ಣಾರೆ ಕಂಡ ಸಿಂಗನು ಎಷ್ಟೋ ದೂರ ಅಂಬ್ಯುಲೆನ್ಸಿನ ಹಿಂದೆಯೇ ನಾಗಾಲೋಟ ಹೊಡೆದು ಅಲ್ಲೆಲ್ಲೋ ಸುಸ್ತಾಗಿಬಿಟ್ಟಿತು. ಸುಧಾರಿಸಿಕೊಂಡು ಮತ್ತೆ ವಾಹನ ಹೋದ ದಿಕ್ಕಿಗೆ ಓಟ ಆರಂಭಿಸಿತು.

ಮೂರನೇ ದಿನ ದೊಡ್ಡವರ ಸಮಾಧಿಯ ಕಡೆ ಹಾಲು, ತುಪ್ಪ, ಬಿಡಲು ಬಂದವರು ನೋಡಿದರೆ ಹೆಣ ಹೂಳುವಲ್ಲಿ ತೆಗೆದ ಗುಂಡಿ ಹೇಗೆ ಇದ್ದಿತೋ ಹಾಗೇ ಇದೆ. ದೇಹ ಮಾತ್ರ ಇಲ್ಲ. ಹಾಲು ತುಪ್ಪ ಎರೆಯಲು ಬಂದವರಿಗೆ, ಅಲ್ಲೇ ಬೆಂಕಿ ಹಚ್ಚಿ ಅದೇ ತುಪ್ಪ ಸುರಿದಂತಾಯಿತು. ಮೂರು ದಿನದ ಹಿಂದಿನ ಶೋಕವು ಈಗ ಮಾಯವಾಗಿ ಸಿಟ್ಟು ಏರಿಬಿಟ್ಟಿತು. ತಂದ ಹಾಲು ತುಪ್ಪ ಚೆಲ್ಲಿ, ಕಾರು ಏರಿ ರಸ್ತೆಯಲ್ಲಿ ಅದೆಷ್ಟು ಸ್ಪೀಡನಲ್ಲಿ ಕಾರು ಹೋಯಿತೋ, ಅದೇ ದಿಕ್ಕಿನಿಂದ ಪೊಲೀಸು ವಾಹನ ಅದೇ ವೇಗದಲ್ಲಿ ಸ್ಮಶಾನದತ್ತ ಬಂದಿತು.

ಲಕ್ಷ್ಮವ್ವ, ಈ ಪೊಲೀಸರು ಲಾಕಪ್ಪಿನಲ್ಲಿ ಏಟು ತಿಂದು ಸತ್ತವನನ್ನು ತಂದಿರಬೇಕೆಂದುಕೊಂಡರೆ, ಮೂರುದಿನದ ಹಿಂದೆ ಹೂತ ಹೆಣ ಎಲ್ಲಿ ಅಂದರು. ಲಕ್ಷ್ಮವ್ವ ರಾತ್ರಿಯೆಲ್ಲ ಸ್ಮಶಾನದ ಅಂಚಿನಲ್ಲಿ ನಾಯಿ ಬೊಗಳುತ್ತಿತ್ತು ಅಂದಳು. ನಾಯಿ ಬೊಗಳುವುದಕ್ಕೂ, ಹೆಣ ಎದ್ದು ಹೋಗುವುದಕ್ಕೂ ಏನು ಸಂಬಂಧ ಅಂದವರು ದೂರದಲ್ಲಿ ಕಟ್ಟೆಯ ಮೇಲೆ ಕೂತಿದ್ದ ಲಗಾಟಿಯನ್ನು ಹಿಡಿದು ಇವನಿಗೆ ನಾಲ್ಕು ಬಾರಿಸಿದರೆ ಹೆಣ ಹೋದ ಗುರುತು ಈಚೆ ಬರುವುದೆಂದರು.

ಹೂತ ಹೆಣವನ್ನು ಯಾರು ತಾನೇ ಎತ್ತುವರು? ಇಂಥ ಕುಕೃತ್ಯವು ಈ

ಲಗಾಟಿಯವರು ಆಮೇಲೆ ತಿರುಗಿ ಇನ್ನೇನೋ ನೆನಪಾದವರಂತೆ ಮುದುಕಿಯ ಹೆಣ ಎತ್ತಿಕೊಂಡು ಸೀದಾ ಸ್ಮಶಾನದ ತೊಟ್ಟಿಯ ಬಳಿ ಹೋದರು. ಮೈಮೇಲಿನ ಸೀರೆ ತೆಗೆದರೆ ಅದೇ ಭಿಕ್ಷುಕನೊಬ್ಬ ಮುದುಕಿ ನಡುವಿನ ಮೇಲೆ ತನ್ನ ಹೆಗಲ ವಲ್ಲಿ ಮುಚ್ಚಿದ. ಮುದುಕಿ ದೇಹ, ಸೀರೆ ತುಂಬ ವಾಸನೆ ಹೊಡೆಯುತ್ತಿತ್ತು. ನಾನೇ ಎರಡು ಸರ್ತಿ ಸೀನಿದೆ. ವಾಸ್ತವವಾಗಿ ವೃದ್ಧೆಯ ಶವವು ಬೆಳಗಾಗುವಲ್ಲೇ ಬಂದಿತ್ತು. ಲಾಡಸಾಹೇಬರು ಇನ್ನೇನು ಅದನ್ನ ಮೈ ತೊಳೆಸಿ ಗಂಧದ ಕಡ್ಡಿ ಹಚ್ಚಿ, ಹೂಳಬೇಕು ಅಂದುಕೊಳ್ಳುವಷ್ಟರಲ್ಲಿ ಕಾರಿನಲ್ಲಿ ಬಂದವರು, ದೊಡ್ಡವರ ಸಾವಿನ ಮೆರವಣಿಗೆ ಬರುತ್ತಿದೆಯೆಂದೂ, ಬೇಗ ಸಮಾಧಿಯಾಗಬೇಕೆಂದೂ ಸೂಚನೆಕೊಟ್ಟರು. ಹಾಗಾಗಿ ಹೆಂಗಸಿನ ದೇಹವನ್ನು ಲಾಡಸಾಹೇಬರು ಒಂದು ಮರದ ಕೆಳಗೆ ತಂದು ಹಾಕಿದರು. ಅವರಿಗಾದರೋ ಆ ಶವದ ಯಾವ ಸಂಗತಿಯೂ ಗೊತ್ತಿರಲಿಲ್ಲ. ಆದರೆ ನನಗೆ ಗೊತ್ತಿತ್ತು. ಆ ಕಥೆಯನ್ನು ಮುಂದೆ ನನ್ನ ಒಂದೆರಡು ದಿನಚರಿಯ ನೆನಪುಗಳೊಡನೆ ಹೇಳುವುದು ಸೂಕ್ತವೆನಿಸುತ್ತಿದೆ.

ಬದ್ಮಾಷನ ನೇತೃತ್ವದಲ್ಲೇ ನಡೆದಿರಬೇಕು ಅಂದ ಪೊಲೀಸರು ಲಗಾಟಿಯ ಅಂಗಿಯ ಕಾಲರು ಪಟ್ಟಿ ಹಿಡಿದು ಕೇಳ ಹೊರಟರೆ ಅವನು ಅಂಗಿಯನ್ನೇ ತೊಟ್ಟಿಲ್ಲವಲ್ಲ! ತೋಳು ಹಿಡಿದು ಜಡಿದು ಸತ್ತವರ ದೇಹ ತಿನ್ನುವುದಕ್ಕೆ ನೀನೇನು ಹಿಡಿಂಬನಾ, ಬಕಾಸುರನಾ ಹೇಳು ಹೆಣ ಎಲ್ಲಿ ಹೋಯಿತು ಅಂದರು.

ಲಗಾಟಿ ಮಾತೇ ಇಲ್ಲದೆ ಮೇಲೆ ಕೆಳಗೆ ನೋಡುತ್ತ ನಿಂತ. ನಿನ್ನ ಬಾಯನ್ನು ಬೇರೇ ಜಾಗದಲ್ಲಿ ಬಿಡಿಸುತ್ತೇವೆ ಬಾ ಅಂದು ಅವನ ತೋಳು ಹಿಡಿದು ವ್ಯಾನಿಗೆ ಎಳೆದೊಯ್ದರು.

ಲಾಡಸಾಬ ಯಜಮಾನರ ಹಿಂದೆಯೇ ಸಿಂಗನು ಓಡಿಬರುತ್ತ, ಹೆಣ ಎತ್ತಿದ್ದು ಅದನ್ನು ಹೂತ ದಿನವೇ, ಅದಕ್ಕೆ ನಾನೇ ಸಾಕ್ಷಿ. ನಾನು ಹೆಣ ಹೊತ್ತ ವ್ಯಾನನ್ನು ಫಾಲೋ ಮಾಡಿ ಬಂದಿದ್ದೇನೆ. ಅದು ಎಲ್ಲಿಯವರೆಗೆ ಯಾವ ಸಿಟಿಗೆ ಸೇರಿತು ಎಂಬುದೂ ಗೊತ್ತು. ಸ್ಮಶಾನದಿಂದ ಹೆಣ ಎತ್ತಿದವರು ಕಪ್ಪು ಮುಸುಕು ಹಾಕಿದ್ದರು. ಆದರೆ ವ್ಯಾನಿಗೆ ಶವ ವರ್ಗಾಯಿಸಿಕೊಂಡು ಹೋದವರು ಮುಸುಕುಧಾರಿಗಳಾಗಿರಲಿಲ್ಲ. ಹಾಗಾಗಿ ಅವರು ಯಾರೆಂದು ಮುಖಚಹರೆ ಪತ್ತೆ ಹಚ್ಚಬಲ್ಲೆ. ಇಷ್ಟೆಲ್ಲ ಆಗುವಾಗ ಹೆಣ ಎತ್ತಲು ಬಂದವರು ನನಗೆ ಬ್ರೆಡ್ಡು, ಬಿಸ್ಕತ್ತು ಆಮಿಷವನ್ನು ಒಡ್ಡಲು ನೋಡಿದರು. ಅದನ್ನು ನಾನು ಸ್ವೀಕರಿಸುವ ಮೈಂಡೇ ಮಾಡಲಿಲ್ಲ. ಬಲವಾಗಿ ಬೊಗಳುತ್ತಲೇ ಇದ್ದೆ. ಬೊಗಳುವಾಗ ನನ್ನ ಮೇಲೆ ದಂಡ ಪ್ರಯೋಗ ಮಾಡಲು ಬಂದರು. ಆದರೇನು, ಹೆದರಲಿಲ್ಲ.

ಇತ್ತ ನಮ್ಮ ಯಜಮಾನರಾದ ಲಾಡಸಾಬ ಲಗಾಟಿಯವರು ನಿದ್ದೆಯಲ್ಲಿದ್ದವರು ಎದ್ದು ಬರದೇ ಹೋದದ್ದು ತಪ್ಪು. ಬಂದಿದ್ದರೆ ಶತ್ರುಗಳನ್ನು ಹೇಗಾದರೂ ಹಿಡಿಯಬಹುದಿತ್ತು. ಆದರೆ ಹಾಗೆ ಯಜಮಾನರು ಎದ್ದು ಬರದೇ ಹೋದದ್ದಕ್ಕೆ ಕಾರಣವೂ ಉಂಟು. ಅದನ್ನು ಹೇಳುವೆ...

...ಆ ಹೊತ್ತು ಕಾಂಪೌಂಡು ಬದಿಯಲ್ಲಿ ಹಾಕಿದ ಆ ದೊಡ್ಡವರ ದೇಹವಲ್ಲದೆ ಇಲ್ಲೇ ಹತ್ತಿರದ ಬಸ್‌ಸ್ಟಾಪಿನ ಬಳಿ ಸತ್ತ ಮುದುಕಿಯ ಹೆಣವೊಂದನ್ನು ಭಿಕ್ಷುಕರು ಹೊತ್ತು ತಂದಿದ್ದರು. ತಂದರೆಂದರೆ ಹೇಗೆ? ಚಟ್ಟ, ವ್ಯಾನು, ಜನ ಯಾರೂ ಇಲ್ಲ. ಯಾವಾಗಲೋ ರಾತ್ರಿ ಸತ್ತು ಬಿದ್ದವಳನ್ನು ಅವಳ ಹೊದಿಕೆಯಲ್ಲೇ ಸುತ್ತಿ ಮುಂದೊಬ್ಬ ಹಿಂದೊಬ್ಬ ಹೆಗಲು ಕೊಟ್ಟು ತಂದರು. ಅದೇನೋ ಬೇರೆ ವಸ್ತುವೆಂದು ತಿಳಿದು ಸ್ಮಶಾನದ ಗೇಟಿನಲ್ಲೇ ನಾನು ಅಡ್ಡಹಾಕಿ ಬೊಗಳಿ, ಗಲಾಟೆ ಮಾಡಿದೆ. ಆಮೇಲೆ ಅಸಾಧ್ಯ ಕೊಳೆ ಮೆತ್ತಿದ ಬೆಡ್‌ಷೀಟಿನಿಂದ ಹೆಣ ಇಳಿಸಿದಾಗ ನನ್ನ ತಪ್ಪಿನ ಅರಿವು ನನಗಾಯಿತು.

ಭಿಕ್ಷುಕರೇ ಮುದುಕಿಯ ಶವಸಂಸ್ಕಾರಕ್ಕೆಂದು ಅರ್ಧಡಜನ್ ಬಾಳೇಹಣ್ಣು, ಗಂಧದ ಕಡ್ಡಿ, ತೆಂಗಿನಕಾಯಿ ತಂದಿದ್ದರು. ನಮ್ಮ ಲಗಾಟಿ ಯಜಮಾನರೊಂದಿಗೆ

ಅವರು ಹೇಳಿದ್ದೆಂದರೆ ಇದು ಬೀದಿ ಹೆಣ, ನಾವು ಬೀದಿ ಜನ. ಸತ್ತ ಹೆಣಕ್ಕೆ ಗತಿಯಿಲ್ಲವಂತ ತಂದೆವು. ನಿಮಗೆ ಗುಳಿ ತೋಡಲು ಕೊಡುವಷ್ಟು ಕಾಸು ನಮ್ಮಲ್ಲಿಲ್ಲ. ಸನಿಕೆ, ಗುದ್ದಲಿ ಕೊಟ್ಟರೆ ಸಾಕು, ನಾವೇ ತೋಡಿಕೊಳ್ಳುತ್ತೇವೆ ಅಂದರು. ಅವರೊಂದಿಗೆ ಸೇರಿ ನಮ್ಮ ಸಾಹೇಬರೂ ಗುಂಡಿ ತೋಡಿದರು. ಅದರೊಂದಿಗೆ ಲಗಾಟಿಯವರು ಹೋಗಿ ಲಕ್ಷ್ಮಮ್ಮನವರ ಬಳಿ ಅದೇನೋ ಮಾತಾಡಿದರು. ಅವರು ಒಂದು ಮಡಕೆಯಲ್ಲಿ ಹಿಡಿಯಕ್ಕಿ ಕೊಟ್ಟರು. ಯಜಮಾನರು ತಂದು ಅದನ್ನು ಸಮಾಧಿಯ ಗುಂಡಿಬಳಿ ಮೂರುಕಲ್ಲು ಇಟ್ಟು ಅನ್ನ ಬೇಯಿಸಿದರು.

ಲಗಾಟಿಯವರು ಆಮೇಲೆ ತಿರುಗಿ ಇನ್ನೇನೋ ನೆನಪಾದವರಂತೆ ಮುದುಕಿಯ ಹೆಣ ಎತ್ತಿಕೊಂಡು ಸೀದಾ ಸ್ಮಶಾನದ ತೊಟ್ಟಿಯ ಬಳಿ ಹೋದರು. ಮೈಮೇಲಿನ ಸೀರೆ ತೆಗೆದರೆ ಅದೇ ಭಿಕ್ಷುಕನೊಬ್ಬ ಮುದುಕಿ ನಡುವಿನ ಮೇಲೆ ತನ್ನ ಹೆಗಲ ವಲ್ಲಿ ಮುಚ್ಚಿದ. ಮುದುಕಿ ದೇಹ, ಸೀರೆ ತುಂಬ ವಾಸನೆ ಹೊಡೆಯುತ್ತಿತ್ತು. ನಾನೇ ಎರಡು ಸರ್ತಿ ಸೀನಿದೆ. ವಾಸ್ತವವಾಗಿ ವೃದ್ಧೆಯ ಶವವು ಬೆಳಗಾಗುವಲ್ಲೇ ಬಂದಿತ್ತು. ಲಾಡಸಾಹೇಬರು ಇನ್ನೇನು ಅದನ್ನ ಮೈ ತೊಳೆಸಿ ಗಂಧದ ಕಡ್ಡಿ ಹಚ್ಚಿ, ಹೂಳಬೇಕು ಅಂದುಕೊಳ್ಳುವಷ್ಟರಲ್ಲಿ ಕಾರಿನಲ್ಲಿ ಬಂದವರು, ದೊಡ್ಡವರ ಸಾವಿನ ಮೆರವಣಿಗೆ ಬರುತ್ತಿದೆಯೆಂದೂ, ಬೇಗ ಸಮಾಧಿಯಾಗಬೇಕೆಂದೂ ಸೂಚನೆಕೊಟ್ಟರು. ಹಾಗಾಗಿ ಹೆಂಗಸಿನ ದೇಹವನ್ನು ಲಾಡಸಾಹೇಬರು ಒಂದು ಮರದ ಕೆಳಗೆ ತಂದು ಹಾಕಿದರು. ಅವರಿಗಾದರೋ ಆ ಶವದ ಯಾವ ಸಂಗತಿಯೂ ಗೊತ್ತಿರಲಿಲ್ಲ. ಆದರೆ ನನಗೆ ಗೊತ್ತಿತ್ತು. ಆ ಕಥೆಯನ್ನು ಮುಂದೆ ನನ್ನ ಒಂದೆರಡು ದಿನಚರಿಯ ನೆನಪುಗಳೊಡನೆ ಹೇಳುವುದು ಸೂಕ್ತವೆನಿಸುತ್ತಿದೆ.

* * *

'...ನಮ್ಮ ಅಲ್ಲಾಭಕ್ಷರು ನೌಕರಿ ಮಾಡುತ್ತಿದ್ದ ಲಕ್ಷ್ಮಿವೆಂಕಟೇಶ್ವರ ಸರ್ವೀಸಸ್ ಸೆಂಟರಿಗೆ ನಾನು ಹೆಚ್ಚು ಹೋದವನಲ್ಲ. ಅಲ್ಲಿಯ ರಾಡಿ, ಕೆಸರು ನನಗೆ ತಡೆಯಲಾಗುತ್ತಿರಲಿಲ್ಲ. ನಮ್ಮ ವಾಸ್ತವ್ಯವು ಇದೇ ಶಿವಸ್ಥಾನಕ್ಕೆ ವರ್ಗಾಯಿಸಿದ ನಂತರ ನನಗೆ ಕೊಂಚ ಸಮಾಧಾನವೆನಿಸಿತು. ಮೂರುತಿಂಗಳ ಕೂಸಾಗಿದ್ದ ನನ್ನನ್ನು ಜೇವರ್ಗಿಯಿಂದ ಲಾಡಸಾಬರು ಬಗಲಲ್ಲೇ ಹೊತ್ತು ತಂದಿದ್ದರು. ಶಿವಸ್ಥಲಕ್ಕೆ ಬರುವ ಹೊತ್ತಿಗೆ ನಾನು ಬೆಳೆದು ದೊಡ್ಡವನಾಗಿ ಬುದ್ಧಿ ಬಂದಿತ್ತು. ಒಂದು ಕೊರತೆ ಅಂದರೆ ನಾವೆಲ್ಲ ಇದ್ದ ಜಾಗದಲ್ಲಿ ನನಗೆ ಭೋಜನ ಪ್ರಸಾದವಾಗುತ್ತಿದ್ದುದು ರಾತ್ರಿಯ ಒಂದು ಹೊತ್ತು ಮಾತ್ರ. ಬೆಳಗಿನ ಉಪಾಹಾರ, ಒಂದು ದಿನ ಇದ್ದರೆ ಇನ್ನೊಂದು ಹೊತ್ತು ಇಲ್ಲವೇ ಇಲ್ಲ. ಇದರಿಂದ ನಾನು ಬೆಳಗಿನ ಆಹಾರ ಸಂಪಾದನೆಗೆ ಶಿವಸ್ಥಾನ ಬಿಟ್ಟು ಸಿಟಿಯ ಕಡೆ ಆಗಮಿಸುತ್ತಿದ್ದೆ. ಆಗಲೇ ನನಗೆ ಯಲಾ ಈ ಬೆಂಗಳೂರು ಬೀದಿಗಳು ಬಂದ ಟೈಮಿನಲ್ಲಿ ನಾನಿದ್ದ ಬೀದಿಯ ಬಚ್ಚಲು ಸುತ್ತಿನ ಗುಡಿಸಲಂತಲ್ಲದೆ ಹೀಗೂ ಮಹಲುಗಳು, ಬಜಾರು ಮಳಿಗೆಗಳು ಇರುತ್ತವೆ ಎಂಬುದರ ಅರಿವಾಯಿತು.

ರಾತ್ರಿಯೆಲ್ಲ ಶಿವಸ್ಥಾನದಲ್ಲಿ ಅಲ್ಲಾಭಕ್ಷರು ನಿದ್ರಾವಶರಾಗಿರುವಲ್ಲಿ ನಾನು ಎಚ್ಚರವಿದ್ದು ಡ್ಯೂಟಿ ಮಾಡಿ ಪ್ರಾತಃಕಾಲದಲ್ಲಿ ಆಹಾರಾನ್ವೇಷಣೆಗಾಗಿ ಹೋಗುತ್ತಿದ್ದ ಸಂದರ್ಭದಲ್ಲಿ ದಾರಿಯ ಉದ್ದಕ್ಕೂ ಮಟನ್ ಸ್ಟಾಲ್, ಚಿಕನ್ ಸ್ಟಾಲ್ ಇಂಥವು ಅನೇಕ ಕಾಣಿಸುತ್ತಿದ್ದು ಅಲ್ಲೇನಾದರೂ ಪದಾರ್ಥ ದೊರೆಯಬಹುದೇನೋ ಅಂದು ತುಸುಹೊತ್ತು ನಿಲ್ಲುತ್ತಿದ್ದೆ. ಅಲ್ಲಿ ನನ್ನ ಸಮಾಜ ಬಂಧುಗಳು ಕೆಲವರು ಅಷ್ಟು ಹೊತ್ತಿಗೇ ತುಂಬಿರುತ್ತಿದ್ದರು. ಕಾರು, ಬೈಕಿನಲ್ಲಿ ಬರುತ್ತಿದ್ದ ಜನ ಬುಟ್ಟಿಗಟ್ಟಲೇ ಪದಾರ್ಥ ಕೊಂಡೊಯ್ಯುವಲ್ಲಿ ನಮ್ಮತ್ತ ಒಂದು ತುಂಡನ್ನಾದರೂ ಎಸೆಯಬಾರದೇ ಅಂದು ನಾವು ನಾಲಿಗೆಯಲ್ಲಿ ನೀರೂರಿಸಿ ಕಾಯ್ದಿರುತ್ತಿದ್ದೆವು. ಊಹ್ಞು ಏನೂ ಕಾಣೆ. ಅಲ್ಲಿ ನೇತಾಡುವ ಹತ್ತಾರು ಚರ್ಮರಹಿತ ಕುಕ್ಕುಟ ಶರೀರದಲ್ಲಿ ಒಂದನ್ನಾದರೂ ನಮ್ಮತ್ತ ಹಾಕಬಾರದೇ ಅನ್ನಿಸುತ್ತಿತ್ತು. ಎಲ್ಲಾದರೂ ಉಂಟೆ? ಮಾಂಸ ಕತ್ತರಿಸುತ್ತಿದ್ದ ಆ ಹಲಾಲುದಾರನು ಅಲ್ಲೇ ನಿಂತ ಕಸ್ಟಮರ್ಸ್ 'ಆ ಪೀಸು ಬೇಡಕಣ್ರೀ' ಅಂದರೆ ಅಂಥ ಯಾವುದೋ ಮೂಳೆಯನ್ನು ನಮ್ಮತ್ತ ಎಸೆಯುತ್ತಿದ್ದನಷ್ಟೇ. ನಮ್ಮಲ್ಲೇ ಯಾರಾದರೊಬ್ಬರು ಬಲಾಢ್ಯರು ನಮ್ಮನ್ನೆಲ್ಲ ಅತ್ತಿತ್ತ ತಳ್ಳಿ ಆ ಚೂರನ್ನು ಅಪಹರಿಸಿ ದೂರ ಕೊಂಡೊಯ್ದು ಕುಳಿತು ತಿನ್ನುವ ಪ್ರಯತ್ನ ಮಾಡುತ್ತಿದ್ದರು. ಆದರೇನು, ಅದರಲ್ಲಿ ಮಾಂಸದ ಲವಲೇಶದ ಶಿಲ್ಕು ಇರಲಾರದೆಂದು ಆ ಬಂಧುವು ತಿನ್ನುವ ಧಾಟಿಯಲ್ಲೇ ನನಗೆ ಅರಿವಾಗುತ್ತಿತ್ತು.

ಇನ್ನು ಈ ಮಟನ್ ಸ್ಟಾಲ್‌ಗಳ ಮುಂದೆ ನಿಂತು ಪ್ರಯೋಜನವಿಲ್ಲವೆಂದು ಆ ಮುಂದಿನ ಬೇಕರಿಗಳತ್ತ ಹೋದರೆ ಅಲ್ಲಿ ಬ್ರೆಡ್ಡು, ಬನ್ನು, ಬೆಣ್ಣೆಬಿಸ್ಕತ್ತಿನಂಥ ನಯವಾದ ಜನ ಬರುತ್ತಿದ್ದರು. ಯಾರೋ ಕರುಣೆ ಇದ್ದವರು ಒಂದು ಬನ್ನು ಕೊಂಡು ನಮ್ಮತ್ತ ನಾಲ್ಕುಚೂರು ಮಾಡಿ ಎಸೆದು ಹೋಗುತ್ತಿದ್ದರು. ಅದು ನಮ್ಮ ಗುಂಪಿನ ಯಾರ ನಾಲಿಗೆಯ ತುದಿಗೂ ಸಾಲುತ್ತಿರಲಿಲ್ಲ. ಮತ್ತೆ ಕೆಲವರು ಪೊಟ್ಟಣ ಬಿಚ್ಚಿ ತಾವೇ ತಿಂದುಕೊಂಡು ಹೋಗುತ್ತಿದ್ದರೇ ಶಿವಾಯಿ ಅಷ್ಟುದೂರ ಹಿಂಬಾಲಿಸುತ್ತಿದ್ದ ನಮ್ಮತ್ತ ಅವರ ಕಣ್ಣೇ ಕಾಣುತ್ತಿರಲಿಲ್ಲ. ಹಾಗೆ ಇನ್ನಷ್ಟು ದೂರ ಹಿಂಬಾಲಿಸಿದರೆ ಗದರುತ್ತಿದ್ದರು. ಅಂಥ ವೇಳೆ ಅಲ್ಲಿಗೆ ಒಬ್ಬ ಕುಷ್ಠರೋಗಿ ಸೈಕಲ್ ಚಕ್ರದ ಗಾಡಿಯಲ್ಲಿ ಕುಳಿತು ಕೈಯ್ಯಲ್ಲಿ ಪೆಡಲು ಮಾಡಿಕೊಂಡು ಬಂದ. ಆದರೆ ಅಂಗಡಿ ಕಡೆ ಬಂದ ಸುಂದರಿಯರು, ಯುವಕರು, ಹಿರಿಯರು, ವಯಸ್ಕ ಮಹಿಳೆಯರು ನಮ್ಮತ್ತ ಓರೆ ನೋಟ ಬೀರಿ ಮುಖ ಸಿಂಡರಿಸಿ ಬೇಕರಿಯವರಿಗೆ 'ನೀವು ಈ ಬೆಗ್ಗರ್‍ಸನ, ಡಾಗ್ಸನ್ನೆಲ್ಲ ಸೇರಿಸಬಾರ್‍ದು, ನಿಮ್ಮ ಬಿಸಿನೆಸ್ ಡೌನಾಗುತ್ತೆ...' ಅನ್ನುತ್ತಿದ್ದರು. ಅವರ ಮುಖ್ಯ ಕಂಪ್ಲೆಂಟು ಕುಷ್ಠರೋಗಿಯ ಮೇಲಿದ್ದಿತು.

ರೋಗಿಯು ಬೇಸರದಿಂದ ಗಾಡಿಯನ್ನು ಮುಂದೆ ಪೆಡಲು ಮಾಡುವ ಪ್ರಯತ್ನ ಮಾಡಿದರೆ ಅದು ಕೊಂಚ ಏರುದಾರಿಯಾಗಿದ್ದಿತು. ಅಷ್ಟು ಹೊತ್ತಿಗೆ ನಮ್ಮೊಂದಿಗೆ ನಿಂತಿದ್ದ ಹುಡುಗನು ರೋಗಿಯ ಗಾಡಿ ತಳ್ಳಿಕೊಂಡು ಹೊರಟ. ನಾನೂ ಕೂಡ ಇನ್ನು ಈ ಬೇಕರಿಯ ಮುಂದೆ ನಿಂತರೆ ಫಾಯಿದೆಯಾಗದೆಂದು ಅವರ ಹಿಂದೆಯೇ ಜಾಗ ಖಾಲಿ ಮಾಡಿದೆ.

ಅಷ್ಟುದೂರ ಹೋಗುತ್ತ ರೋಗಿಯು ಗಾಡಿ ತಳ್ಳುತ್ತಿದ್ದ ಹುಡುಗನ ಕಡೆ ತಿರುಗಿ 'ಯಾವೂರು ಕಂದ' ಅನ್ನಲು, ಹುಡುಗ 'ಸಿಂದ್ಯಾವೂರು ತಾತ' ಅಂದ. ಇಬ್ಬರೂ ತಂತಮ್ಮ ಊರು, ಕೇರಿ ಅರಿಯದವರಾಗಿ ಒಬ್ಬರಿಗೊಬ್ಬರು ಮುಖನೋಡಿಕೊಳ್ಳುತ್ತ ನಕ್ಕರು. ಹುಡುಗ ಗಾಡಿಯನ್ನು ಆ ಏರುದಾರಿಯಲ್ಲಿ ತಳ್ಳುತ್ತಿರಲು, ಅವರು ಆ ರಸ್ತೆಯ ಜನ, ದನ, ಬಸ್ಸು, ಕಾರು, ರಿಕ್ಷಾಗಳ ನಡುವೆ ಮರೆಯಾದರು. ನಾನೂ ನನ್ನ ಆಹಾರಾನ್ವೇಷಣೆಯ ದಾರಿ ಹಿಡಿದೆ. ಒಮ್ಮೆ ನಾನು ಒಂದು ಭಾರಿ ಕಲ್ಯಾಣ ಮಂದಿರದ ಮುಂದೆ ಠಳಾಯಿಸಿದೆ.

ಹೊಳೆಹೊಳೆಯುವ ಕಾರುಗಳಲ್ಲಿ ಅಷ್ಟೇ ದೊಡ್ಡ ದೊಡ್ಡ ಜನ ಸಂಸಾರ ಸಮೇತ ಇಳಿಯುತ್ತಿದ್ದರು. ಅವರೆಲ್ಲರ ಮುಖದ ತುಂಬ ನಗುವೇ! ಹೆಂಗಸರಂತೂ ಕೆಂಪು ತುಟಿ, ಬಿಳಿಯ ಹಲ್ಲಿನ ಬಾಯಿತುಂಬ ನಗುತ್ತಿದ್ದರು. ಆದರೆ ನನಗೆ ಅಲ್ಲಿ ಬಹಳ ಹೊತ್ತು ನಿಲ್ಲಲಾಗಲಿಲ್ಲ. ಅವರ ಮೈಮುಡಿಯಿಂದ, ವಸ್ತ್ರದಿಂದ ಒಂದು ಬಗೆಯ ಚೊಂಗುಚೊಂಗು ವಾಸನೆ ಹೊಮ್ಮುತ್ತಿತ್ತು. ನನಗೆ ಎರಡು ಮೂರು ಭಾರಿ ಸೀನುವಂತಾಯಿತು. ಸರಿ ಎಲ್ಲೆಲ್ಲಿಂದಲೋ ದೊಡ್ಡ ಜನ ಬಂದಂತೆ, ನಮ್ಮ ಸಮಾಜ ಬಂಧುಗಳೂ ಆತುರಾತುರದಲ್ಲಿ ಛತ್ರದ ಹಿಂಭಾಗಕ್ಕೆ ನಡೆಯುತ್ತಿದ್ದರು. ನಾನೂ ಸಹ ನಮಗೆ ಅತ್ತಕಡೆ ಭೋಜನ ಏರ್ಪಾಡಾಗಿರಬೇಕೆಂದು ವೇಗದಲ್ಲಿ ನಡೆದೆ. ಅಲ್ಲಿ ಅಂಥದೇನೂ ಇರಲಿಲ್ಲ. ಭಾರಿ ಭಾರಿ ತೊಟ್ಟಿಗಳಿದ್ದವು. ಅದರ ಸುತ್ತ ನಮ್ಮ ಸಮಾಜ ಬಂಧುಗಳು ಮತ್ತು ನಮ್ಮದೇ ವಾರಿಗೆಯ ಹುಡುಗರು, ಹೆಂಗಸರು ನೆರೆದಿದ್ದರು. ಎಲ್ಲರೂ ವಿವಾಹ ಭೋಜನದ ನಿರೀಕ್ಷೆಯಲ್ಲಿ ಇದ್ದಂತಿತ್ತು. ನಾನೂ ಬಹಳ ಹೊತ್ತು ಅಲ್ಲೇ ಕಾಯ್ದು ನಿಂತೆ.

ಮಧ್ಯಾಹ್ನ ಸಮೀಪಿಸುತ್ತಿದ್ದಂತೆ ಹತ್ತಾರು ಸ್ತ್ರೀಯರು ದೊಡ್ಡ ದೊಡ್ಡ ಬಾನಿಗಳಲ್ಲಿ ಬಾಳೆ ಎಲೆಯ ರಾಶಿರಾಶಿಯನ್ನು ತಂದು ತೊಟ್ಟಿಗೆ ಸುರಿದರು. ಅಲ್ಲಿದ್ದ ನಾಲ್ಕೈದು ತೊಟ್ಟಿಗಳೂ ಕ್ಷಣಾರ್ಧದಲ್ಲಿ ಪಾಕಶಿಲ್ಕು ಭಂಡಾರಗಳಾಗಿಬಿಟ್ಟವು. ನಮ್ಮ ನಮ್ಮಲ್ಲೇ ಆ ಪಾಕಭರಿತ ತೊಟ್ಟಿಗಳನ್ನು ಹಂಚಿಕೊಂಡೆವು. ನೋಡಿದರೆ ಮೈಸೂರು ಪಾಕು, ಜಿಲೇಬಿ, ಲಾಡು, ಪಾಯಸ, ಚಿತ್ರಾನ್ನ, ಗೋಬಿಮಂಚೂರಿ, ಅನ್ನ ಸಾಂಬಾರು, ಮೊಸರನ್ನದ ಶಿಲ್ಕು ಪದಾರ್ಥಗಳಲ್ಲದೆ ಅರೆಬರೆಯಾಗಿ ತಿಂದುಬಿಟ್ಟ ಜಾಯ್ ಐಸ್‌ಕ್ರೀಮ್ ಬಟ್ಟಲುಗಳೂ ಇದ್ದವು.

ಸಂತೋಷವೆಂದರೆ ನನ್ನ ಸನಿಹವೇ ನಿಂತು ಆನಂದದಿಂದ ಐಸ್‌ಕ್ರೀಮ್ ಬಟ್ಟಲು ಚೀಪುತ್ತಿದ್ದ ಆಂಧ್ರದ ಕರೀಂ ನಗರ ಜಿಲ್ಲೆಯ, ಗಂಗಾಧರಂ ತಾಲ್ಲೋಕಿನಿಂದ ಬೆಂಗಳೂರಿಗೆ ನಮ್ಮಂತೆಯೇ ಗುಳೆ ಬಂದಿದ್ದ ಶ್ರೀ ಅಟವಿಚಂಚು ಬೊಮ್ಮಿಲರಾಜು ಅವರ ಪರಿಚಯವಾಯಿತು. ಅವರೂ ಆ ಎಲೆಗಳ ಶೇಷ ಪದಾರ್ಥಗಳನ್ನು ಸವಿಯುತ್ತ ನನಗೂ ನೀಡಿದರು. ನಿಜವಾಗಿ ನನಗೆ ಆ ಮಸಾಲೆ ಪದಾರ್ಥಗಳಲ್ಲಿ ಇಷ್ಟವಿರಲಿಲ್ಲ. ಯಾಕೆಂದರೆ ನಾನು ಕಂಡಂತೆ ಬೆಂಗಳೂರು ಬೀದಿಗಳಲ್ಲಿ ವಿಹರಿಸುವಾಗ ನನ್ನ ಸಮಾಜ ಬಂಧುಗಳು ನಿತ್ಯ ಈ ಥರದ ಮಸಾಲೆ ಪದಾರ್ಥಗಳನ್ನು ಸೇವಿಸಿ ಮೈ ರೋಮ ಉದುರಿಸಿ, ಕಜ್ಜಿ ಬರಿಸಿಕೊಂಡಿರುವುದು ಗಮನಕ್ಕೆ ಬಂದಿತ್ತು. ಆದರೇನು ಮಾಡುವುದು ಪರಿಚಯವಾದ ಪ್ರಥಮದಲ್ಲೇ ಪ್ರಿಯಮಿತ್ರರಾಗಿ ಬಿಟ್ಟ ಅಟವಿಚಂಚು ಬೊಮ್ಮಿಲರಾಜು ನನ್ನ ಶಿರಸ್ಸು, ಬೆನ್ನು, ಉದರ, ಬಾಲವನ್ನು ಪ್ರೀತಿಯಿಂದ ಸವರಿ, ಅವರ ನನ್ನ ನಡುವೆ ಅದೆಷ್ಟೋ ವರ್ಷಗಳ ಸ್ನೇಹವಿದ್ದಿತೆಂಬುದನ್ನು ಪ್ರದರ್ಶಿಸಿಬಿಟ್ಟರು. ಗತಿಗೆಟ್ಟವರಿಗೆ ಈ ಬಗೆಯ ಅನಿರೀಕ್ಷಿತ ಸ್ನೇಹ, ಪ್ರೀತಿ, ಸಹಾಯ ಅದೆಂಥ ಸಂತೋಷವನ್ನು ತರುತ್ತದೆಂಬುದನ್ನು ಅನುಭವಿಸಿದವರೇ ಬಲ್ಲರು.

ಮಧ್ಯಾಹ್ನ ಕಲ್ಯಾಣಮಂಟಪದ ಹಿಂಭಾಗದ ತೊಟ್ಟಿಗಳ ಸಮೀಪ ನಮ್ಮೆಲ್ಲರ ವಿವಾಹ ಭೋಜನವಾದ ಮೇಲೆ ನಾನು ಅಲ್ಲಿಂದ ಬೀಳ್ಕೊಡುವಲ್ಲಿ ಬೊಮ್ಮಿಲರಾಜು ಅವರು ನಾಳೆ ಪ್ರಾತಃಕಾಲದಲ್ಲಿ ಸಾಧ್ಯವಾದರೆ ಇದೇ ಛತ್ರದ ಅತ್ತಣ ದೊಡ್ಡವರ ಬೀದಿಯ ಕಡೆ ಬರುವಂತೆ ನನಗೆ ತಿಳಿಸಿದರು. ನಾನು ಅವರ ಬಗ್ಗೆ ಸ್ನೇಹ

ಭಾವವನ್ನು ಅಂತರಂಗದಲ್ಲಿ ತುಂಬಿಕೊಂಡವನಾಗಿ ಚಿರಶಾಂತಿಧಾಮಕ್ಕೆ ಬಂದೆನಾದರೂ; ರಾತ್ರಿಯೆಲ್ಲ ಅದೇ ಬೆಳ್ಳಂಬೆಳಿಗ್ಗೆ ನನ್ನನ್ನು ಯಾಕೆ ರಾಜು ಅವರು ಬರಹೇಳಿರುವರೆಂಬ ಕುತೂಹಲವೇ ತುಂಬಿಕೊಂಡಿತು. ಸೂರ್ಯಪರಮಾತ್ಮನು ಇಂದು ಯಾಕಾದರೂ ತಡಮಾಡುತ್ತಿರುವನೋ, ಯಾವ ಘಳಿಗೆಗೆ ಪ್ರಾತಃಕಾಲದ ಕೆಂಪುಹಳದಿ ಕಿರಣಗಳು ತಲೆದೋರುವುವೋ ಅಂದು ಬೆಳಗಿನ ಆರುಘಂಟೆಗೇ ಮಿತ್ರರು ತಿಳಿಸಿದ್ದ ರಾಜ ಬೀದಿಗೆ ಬಂದೆ.

ಅಲ್ಲಿ ನೋಡಿದರೆ ಬೊಮ್ಮಿಲರಾಜು ಅವರು ನಾಲ್ಕು ಚಕ್ರದ ಗಾಡಿ ತಳ್ಳಿಕೊಂಡು ಸಮವಸ್ತ್ರ ಸಮನ್ವಿತರಾಗಿ ಎಡಗೈಯ್ಯಲ್ಲಿ ಗಾಡಿ ತಳ್ಳಿ, ಬಲಗೈಯಲ್ಲಿ ಸೀಟಿ ಊದುತ್ತ ಶಿಸ್ತಿನ ಸಿಪಾಯಿಯಂತೆ ಆಗಮಿಸುತ್ತಿದ್ದರು. ನನಗಾದ ಆನಂದ ಅಷ್ಟಿಷ್ಟಲ್ಲ. ಅವರು ಪ್ರತಿಯೊಂದು ಗೃಹ ಸಮೀಪದಲ್ಲೂ ಸಣ್ಣಗೆ ಸೀಟಿ ಉದುತ್ತ ಗೃಹಿಣಿಯರು ನೀಡಿದ ತ್ಯಾಜ್ಯವನ್ನು ಬಂಡಿಯ ಡ್ರಮ್ಮುಗಳಿಗೆ ತುಂಬುತ್ತ ಮುನ್ನಡೆಯುತ್ತಿದ್ದರು. ನಾನು ಅವರನ್ನು ಹಿಂಬಾಲಿಸಿದೆ.

ವಯಸ್ಕ ಗೃಹಿಣಿಯರು ರಾತ್ರಿ ತಮ್ಮ ಭೋಜನ ಸ್ವೀಕರಿಸಿ ಉದರಕ್ಕೆ ಸೇರಲಾರದ ಪದಾರ್ಥಗಳನ್ನು ಉಳಿಸಿ ಬೆಳಗ್ಗೆ ಅದೆಷ್ಟು ಮೇಲೆತ್ತಿ ಹಾಕುತ್ತಿದ್ದರೋ, ನಮ್ಮ ರಾಜೂ ಅವರೂ ಅಷ್ಟೇ ಕೆಳಗೆ ಟಿಫಿನ್ ಕ್ಯಾರಿಯರ್ ಒಡ್ಡುತ್ತಿದ್ದರು. ಕೆಲವು ಗೃಹಿಣಿಯರು ಈ ಮಡಿ ಮೈಲಿಗೆಯ ಗೊಡವೆಯೇ ಬೇಡವೆಂದು "ಲೇ ಬೊಮ್ಮಾ ಅಕ್ಕೊಳಪ್ಪಾ ಅನ್ನಾನೂ, ಕಸಾನೂ ಅತ್ತಕಡೆ ಕಾಂಪೌಂಡ್ ಮೇಲೆ ಇಟ್ಟಿದೇನೆ ತೆಕ್ಕೊಳಪ್ಪಾ" ಅಂದುಬಿಡುತ್ತಿದ್ದರು. ನಾನಾದರೋ ಅದೆಲ್ಲ ಅಷ್ಟಾಗಿ ಗಮನಕ್ಕೆ ಬಾರದವನಂತೆ ಟಿಫಿನ್ ಕ್ಯಾರಿಯರ್‌ನ ಪಾಕಶೇಷವನ್ನು ಸವಿಯುವ ಪ್ರಾತಃ ಸುವರ್ಣಸಮಯ ಸಮೀಪಿಸುತ್ತಿದೆಯೆಂಬ ಸರ್ವೇಂದ್ರಿಯ ಸಂತೋಷದಲ್ಲಿ ಬೊಮ್ಮಿಲರ ಹಿಂದೆ ಹಾಯುತ್ತಿದ್ದೆ.

ಆಗಾಗ ದೊಡ್ಡ ಮಹಲುಗಳ ಎದುರು ನಿಂತಾಗ ಅಲ್ಲೇ ಪುಟ್ಟ ಬಾಹ್ಯಚೌಕಿಯೊಳಗೆ ಬೆಳ್ಳಿಯ ಚೈನಿನಲ್ಲಿ ಬಂಧಿಸಲ್ಪಟ್ಟಿರುತ್ತಿದ್ದ ನನ್ನ ಸಮಾಜ ಬಂಧುಗಳು; ತ್ಯಾಜ್ಯ ಸಂಗ್ರಹಕ್ಕಾಗಿ ರಾಜಾ ಅವರು ಬಾಗಿಲೆದುರು ಒಂದು ಹೆಜ್ಜೆ ಮುಂದಿಡುತ್ತಿದ್ದಂತೆಯೇ ಅಬ್ಬರಿಸಿ ಬೊಬ್ಬಿರಿಯುತ್ತಿದ್ದರು. ನನ್ನ ಕಂಡರಂತೂ ಅರಮನೆಯ ಐಶ್ವರ್ಯ, ಭಂಡಾರವೆಲ್ಲ ಅನ್ಯಾಕ್ರಾಂತವಾಗುತ್ತಿದೆ ಎಚ್ಚರ, ಎಚ್ಚರವೆಂಬಂತೆ ಖಾಲಿಬಿದ್ದ ಮನೆಯೊಳಗಿನ ವಯಸ್ಕ ಗೃಹಸ್ಥರಿಗೆ ಸೂಚನೆ ಕೊಡುತ್ತಿದ್ದರು. ಇಷ್ಟಾಗಿಯೂ ನಾನು ಮುಂದೆ ಹೋಗಿ ಇನ್ನೂ ಬೊಗಳುತ್ತಿದ್ದ ನನ್ನ ಸಮಾಜ ಸ್ತ್ರೀಯರತ್ತ ಹಿಂತಿರುಗಿ ನೋಡಿದರೆ, ಅವರು ನನ್ನತ್ತ ಕಣ್ಣು ಮಿಟುಕಿಸಿ ಸನಿಹ ಕರೆಯುವಂತೆ ತೋರುತ್ತಿತ್ತು. ನಾವಾದರೋ ನಮ್ಮ ಕರ್ತವ್ಯ ಪೂರೈಸಿದಲ್ಲಿ ಮುಂದಿನ ಗೃಹದತ್ತ ಹೆಜ್ಜೆ ಹಾಕುತ್ತಿದ್ದೆವು.

ಈ ಮಧ್ಯೆ ಅಡವಿಚಂಚು ಬೊಮ್ಮಿಲರಾಜು ಅವರು ಆಗಾಗ ಅವರ ವಾರಿಗೆಯವರಲ್ಲಿ ತಮ್ಮ ಕಥೆ ಹೇಳಿಕೊಳ್ಳುತ್ತಿದ್ದುದನ್ನು ಕೇಳಿದ್ದೆ. ಅವರು ಇದ್ದ ಊರಿನಲ್ಲಿ ಅವರ ಕುಲವೃತ್ತಿಯೇ ಸಣ್ಣಪುಟ್ಟ ಹಾದಿಬೀದಿ ಕಳ್ಳತನವಂತೆ! ಹನ್ನೆರಡನೇ ವಯಸ್ಸಿನಲ್ಲಿ ಅವರ ಬಿಡಾರದಲ್ಲಿ ತಂದೆತಾಯಿಗಳು ಕುಲದೇವತೆ ಕನ್ನಮಾರಿಯನ್ನು ಪೂಜಿಸಿ ಬೊಮ್ಮಿಲರಿಗೆ ದೀಕ್ಷೆ ಕೊಡಿಸಿದರಂತೆ. ಆವತ್ತು ರಾತ್ರಿ ಕುಲಬಾಂಧವರಿಗೆಲ್ಲ ಅದ್ದೂರಿ ಮುದ್ದೆ ಸಾರು, ಹಂದಿ ಬಾಡಿನ ಭೋಜನವಾಯಿತಂತೆ...

"...ಅಲ್ಲಿಂದ ಮಾರ್ಕೇಟು, ಸಂತೆ, ಜಾತ್ರೆ ಜಾಗಗಳಲ್ಲಿ ನಿಂತು ಓಡಾಡುವ ಜನದ ಜೇಬು ಗುರುಗಾಯಿಸುವುದು ಹೇಗೆ? ಅವರು ಜೇಬಿನಲ್ಲಿ ಕಾಸು ಇಡುವ, ಎತ್ತುವ ಥರವನ್ನು ಕಣ್ಣಿಂದ ನೋಡದೆಯೇ, ಚುರುಕಾಗಿ ಕ್ಷಣಾರ್ಧದಲ್ಲಿ ನೋಡಬೇಕು, ಆಮೇಲೆ ಹಿಂದಿಂದೆಯೇ ಠಳಾಯಿಸುವುದು, ಅಷ್ಟು ಹೊತ್ತಿಗೆ ಕಾಸು ಎಗರಿಸಿಬಿಟ್ಟರೆ ತಕ್ಷಣವೇ ಇನ್ನೊಬ್ಬ ಕುಲಬಾಂಧವನಿಗೆ ವರ್ಗಾಯಿಸುವುದು ಹೇಗೆಂದು ಟ್ರೈನಿಂಗು ಕೊಟ್ಟರು. ಒಂದು ವೇಳೆ ಸಿಕ್ಕಿಕೊಂಡರೆ ಮೊದಲ ಸುತ್ತಿನಲ್ಲಿ ಜನಗಳೇ ಏಟು ಹಾಕುವರು. ಪೊಲೀಸರ ಕೈಗೆ ಕೊಡುವುದು ಆಮೇಲೆಯೇ. ಅದರಿಂದ ಮೈ ಏಟು ತಿನ್ನಲು ರೆಡಿಯಾಗಿರಬೇಕೆಂದು ನನ್ನ ಕುಲಬಾಂಧವರೇ ನನ್ನ ಮೈ ಕೈ ತೊಡೆಯ ಭಾಗಗಳನ್ನೆಲ್ಲ ಗುದ್ದಿ ಗುದ್ದಿ ಒರಟು ಬೀಳಿಸುತ್ತಿದ್ದರು. ಆ ಥರದ ಏಟು ತಾಳಲಾರದೆ ಒಂದು ದಿನ ಜಾತ್ರೆಯಲ್ಲಿ ಹಾಕಿದ್ದ ನಮ್ಮ ಟೆಂಟಿನಲ್ಲಿ ನಮ್ಮಪ್ಪನೇ ಕದ್ದು ತಂದು ಹೂತಿಟ್ಟಿದ್ದ ನೋಟಿನ ಡಬ್ಬಿಯನ್ನು ಎಗರಿಸಿ ರಾತ್ರಿಯೆಲ್ಲ ನಡೆಯುತ್ತ ಎಲ್ಲಿಯೋ ಇದ್ದ ಒಂದು ರೈಲ್ವೇಸ್ಟೇಷನ್ನಿನ ಕಡೆ ಬಂದೆ. ಆ ರೈಲು ಎಲ್ಲಿಗೆ ಹೋದರೂ ಸರಿ ಅಂದು ಹತ್ತಿದರೆ ಅದು ಬೆಂಗಳೂರಿಗೆ ಬಂದಿತು. ನಾನು ಆ ಮೊದಲೇ ಬೆಂಗಳೂರು ಹೆಸರನ್ನು ಕೇಳಿದ್ದೆ. ಒಂದೊಂದು ರಾತ್ರಿ ಬ್ಲೇಡು, ಕತ್ತರಿ, ಚಾಕು ಇಟ್ಟು ಕುಲದೇವತೆ ಕನ್ನಮಾರಿಯನ್ನು ಪೂಜಿಸುವಾಗ ಅಪ್ಪನೂ ಕೂಡ ತಾಯೇ ನನ್ನನ್ನು ಬೆಂಗಳೂರಿಗೆ ಕಳಿಸಿ ಅಲ್ಲಿ ದೊಡ್ಡವರ ಜೇಬಿಗೆ ಕೈ ಹಾಕುವ ಅವಕಾಶವನ್ನು ಕರುಣಿಸು ಎಂದು ಬೇಡುತ್ತಿದ್ದ. ಹಾಗೆ ಬೇಡುತ್ತಾ ಎಲೆಲೇ ನಮ್ಮ ಈ ಜುಜುಬಿ ಹಳ್ಳಿಯ ಪೇಟೆ, ಸಂತೆ, ಜಾತ್ರೆಯ ಈರುಳ್ಳಿ ಬೆಳ್ಳುಳ್ಳಿ ಮೆಣಸಿನಕಾಯಿ ಕಳ್ಳತನ ಯಾವುದು? ಬೆಂಗಳೂರು,

ಒಂದು ಬೆಳಗಿನಲ್ಲಿ ಬೊಮ್ಮಿಲರಾಜು ಅವರ ತ್ಯಾಜ್ಯ ಸಂಗ್ರಹ ಮತ್ತು ನಮ್ಮ ಉಪಾಹಾರದ ವೇಳೆ ಒಂದು ದೃಶ್ಯವನ್ನು ನೋಡಿದೆ. ನಾವು ಅದೊಂದು ದೊಡ್ಡ ವೃತ್ತದ ಅದೇ ಮರದ ಕೆಳಗಿನ ಕಟ್ಟೆಯ ಬಳಿ ಆಸೀನರಾಗಿ ಟಿಫಿನ್ ಕ್ಯಾರಿಯರ್ ತೆಗೆದು ಸಂಗ್ರಹವಾದ ಬಗೆಬಗೆಯ ಪದಾರ್ಥಗಳನ್ನು ಸೇವಿಸುತ್ತಿದ್ದೆವು. ಆಗ ಅಲ್ಲೊಬ್ಬರು ವೃದ್ಧ ಸ್ತ್ರೀ ಅತ್ತಿತ್ತ ವಾಲಾಡುತ್ತ ತಮಗೆ ತಾವೇ ಮಾತಾಡುತ್ತ ನಡೆದಾಡುತ್ತಿದ್ದರು. ಉಟ್ಟಿದ್ದ ಸೀರೆ ಚೆನ್ನಾಗಿಯೇ ಇತ್ತು. ನೋಡಿದರೆ ಭಿಕ್ಷುಕರಲ್ಲವೆನಿಸುತ್ತಿತ್ತು. ತಲೆಕೂದಲು ಮಾತ್ರ ಅವರ ಬುದ್ಧಿಮಾಂದ್ಯವನ್ನು, ದಿಕ್ಕು ತಪ್ಪಿದ ಮಾತನ್ನೂ ಸೂಚಿಸುವಂತೆ ಕೆದರಿಕೊಂಡಿತ್ತು.

ಹೈದರಾಬಾದು ಕಡೆ ಹೋಗಬೇಕು. ಒಂದೇ ಒಂದು ಕಳ್ಳತನ ಮಾಡಿದರೂ ಸಾಕು. ಆಮೇಲೆ ಈ ಕಸುಬು ಬಿಟ್ಟು ಮರ್ಯಾದೆ ತರುವ ಬೇರೆ ಉದ್ಯೋಗ ಮಾಡಬಹುದು ಎನ್ನುತ್ತಿದ್ದ. ಅವನ ಮಾತು ಕೇಳಿಸಿಕೊಂಡ ಅವ್ವನೂ, ಅಣ್ಣಂದಿರು ಹೌದು, ಹೌದು ಅದೇ ಒಳ್ಳೆಯದು ಅನ್ನುತ್ತಿದ್ದರು. ನನ್ನ ಅಪ್ಪನು ಹಾಗೆ ನಮ್ಮ ಕುಲದೇವತೆ ಕನ್ನಮಾರಿಯನ್ನು ಬೇಡಿಕೊಂಡಿದ್ದರಿಂದಲೋ ಏನೋ ಅದೃಷ್ಟವಶಾತ್ ನಾನು ಕುಲವೃತ್ತಿ ಶುರುವಿಟ್ಟುಕೊಳ್ಳುವ ಮೊದಲೇ ಇಲ್ಲಿಗೆ ಬಂದುಬಿಟ್ಟೆನಲ್ಲ!

ಬೆಂಗಳೂರಿಗೆ ಬಂದ ಮೂರ್‍ನಾಲ್ಕು ವರ್ಷ ನಾನು ಈ ಭಾರಿ ಭಾರಿ ಛತ್ರಗಳ ಹಿಂದಿನ ತೊಟ್ಟಿಯ ಎಲೆಗಳನ್ನು ಗಾಡಿಗೆ ತುಂಬುತ್ತಿದ್ದೆ. ಆಗಲೇ ಛತ್ರದ ಮದುವೆಗೆ ಬಂದಿದ್ದ ಒಬ್ಬರು ನನ್ನನ್ನು ಮುನಿಸಿಪಾಲಿಟಿಯ ಉದ್ಯೋಗಕ್ಕೆ ಸೇರಿಸಿದರು. ಇದೀಗ ನನ್ನ ತೆಲುಗು ನಾಡಿನ ಆ ಘನಥರದ ಬಿಸಿಲ ಉರಿಯಲ್ಲಿ ನನ್ನ ಅಪ್ಪಂದಿರು, ಅಣ್ಣಂದಿರು ಏನು ಮಾಡುತ್ತಿರುವರೊ ಅಂದು ಬೇಜಾರಾಗುತ್ತಿದೆ. ಅಪ್ಪನೂ ಅಣ್ಣಂದಿರೂ ಮತ್ತು ನನ್ನ ಕುಲಬಾಂಧವರೆಲ್ಲ ಪೊಲೀಸರ ಕೈಗೆ ಸಿಕ್ಕಿ ಬೀಳಲಿ ಅಂತ ನಾನು ನನ್ನ ಕುಲದೈವ ಕನ್ನಮಾರಿಯನ್ನು ಬೇಡುತ್ತಿದ್ದೇನೆ. ಯಾಕೆಂದರೆ ನಿತ್ಯ ಕಳ್ಳತನದ ಕಷ್ಟ ತಪ್ಪಿ ಜೈಲಿನಲ್ಲಿ, ಅದೂ ನೆರಳಿನಲ್ಲಿ ಎರಡು ಹೊತ್ತು ನೆಮ್ಮದಿಯಾಗಿ ಅನ್ನ ಕಾಣುತ್ತಾರಲ್ಲ ಅಂತ. ಅದು ಸರಿ, ಅಪ್ಪ ಅಣ್ಣಂದಿರು ಜೈಲು ಸೇರಿದರೆ ಅವ್ವಂದಿರ ಕಥೆಯೇನು ಅಂತಲೂ ಅನ್ನಿಸುತ್ತದೆ. ಈಗಲೂ ನಾನು ಹೋಗಿ ಅಪ್ಪ ಅವ್ವಂದಿರನ್ನು ಕರೆದುಕೊಂಡು ಬರಲೇ ಅನ್ನಿಸುತ್ತದೆ. ಆದರೆ ಒಂದೂರ ಜಾತ್ರೆ, ಇನ್ನೊಂದೂರ ಪೇಟೆ, ಮತ್ತೊಂದೂರ ಸಂತೆ ಅಂತ ತಿರುಗುವ ನನ್ನ ಬಾಂಧವರನ್ನು ಎಲ್ಲೆಂದು ಹುಡುಕಿ ಕರೆತರಲಿ..." ಎಂದು ಬೊಮ್ಮಿಲರಾಜು ಅವರು ತಮ್ಮ ಸಹೋದ್ಯೋಗಿಗಳೊಡನೆ ತಮ್ಮ ಆತ್ಮಕಥೆ ಹೇಳಿಕೊಳ್ಳುತ್ತಿದ್ದುದನ್ನು ನಾನು ಕೇಳಿಸಿಕೊಂಡಿದ್ದೆ!

ಮುಖ್ಯ ಸಂಗತಿ ಹೇಳುವುದು ಬಿಟ್ಟು ಕೇವಲ ನನ್ನ, ಬೊಮ್ಮಿಲರ ದಿನಚರಿಯನ್ನೇ ಹೇಳತೊಡಗಿದೆನಲ್ಲ! ಸಟೆಯೋ, ದಿಟವೋ ಎಲ್ಲರಿಗೂ ಅವರವರ ಆತ್ಮಕಥೆಯನ್ನು ಹೇಳಿಕೊಳ್ಳುವ ಮೋಹವಿರುವಂತೆ ನನಗೂ ನನ್ನ ದಿನಚರಿಯ ಒಂದೆರಡು ಸಂಗತಿ ಹೇಳುವ ತೆವಲುಂಟಾಯಿತು, ಕ್ಷಮೆಯಿರಲಿ.

ಒಂದು ಬೆಳಗಿನಲ್ಲಿ ಬೊಮ್ಮಿಲರಾಜು ಅವರ ತ್ಯಾಜ್ಯ ಸಂಗ್ರಹ ಮತ್ತು ನಮ್ಮ ಉಪಾಹಾರದ ವೇಳೆ ಒಂದು ದೃಶ್ಯವನ್ನು ನೋಡಿದೆ. ನಾವು ಅದೊಂದು ದೊಡ್ಡ ವೃತ್ತದ ಅದೇ ಮರದ ಕೆಳಗಿನ ಕಟ್ಟೆಯ ಬಳಿ ಆಸೀನರಾಗಿ ಟಿಫಿನ್ ಕ್ಯಾರಿಯರ್ ತೆಗೆದು ಸಂಗ್ರಹವಾದ ಬಗೆಬಗೆಯ ಪದಾರ್ಥಗಳನ್ನು ಸೇವಿಸುತ್ತಿದ್ದೆವು. ಆಗ ಅಲ್ಲೊಬ್ಬರು ವೃದ್ಧ ಸ್ತ್ರೀ ಅತ್ತಿತ್ತ ವಾಲಾಡುತ್ತ ತಮಗೆ ತಾವೇ ಮಾತಾಡುತ್ತ ನಡೆದಾಡುತ್ತಿದ್ದರು. ಉಟ್ಟಿದ್ದ ಸೀರೆ ಚೆನ್ನಾಗಿಯೇ ಇತ್ತು. ನೋಡಿದರೆ ಭಿಕ್ಷುಕರಲ್ಲವೆನಿಸುತ್ತಿತ್ತು. ತಲೆಕೂದಲು ಮಾತ್ರ ಅವರ ಬುದ್ಧಿಮಾಂದ್ಯವನ್ನು, ದಿಕ್ಕು ತಪ್ಪಿದ ಮಾತನ್ನೂ ಸೂಚಿಸುವಂತೆ ಕೆದರಿಕೊಂಡಿತ್ತು.

ಇದ್ದಕ್ಕಿದ್ದಂತೆಯೇ ಅವರ ಬಾಯಿಂದ ಬೈಗುಳ ಬರುತ್ತಿತ್ತು. ಆದರೆ ಅದೇನೂ ನಮ್ಮ ಗ್ರಾಮೀಣ ಮಾದರಿಯದಲ್ಲ. ನಮ್ಮ ಗ್ರಾಮಗಳಲ್ಲಿ ಇತರರು ನಮ್ಮನ್ನು ನಿಂದಿಸಿ ಬೈಯ್ಯುವುದು, ನಾವು ಅವರೆಡೆಗೆ ಅಂತೆಯೇ ಬೊಗಳುವುದರ ಮೂಲಕ ನಿಂದಿಸುವುದನ್ನು ನೆನೆದರೆ ಆ ಸ್ತ್ರೀಮಾತೆಯ ಬೈಗುಳ ಏನೇನೂ ಅಲ್ಲ ಅನಿಸುವಂತಿತ್ತು. ಈ ಸೂಕ್ಷ್ಮದಲ್ಲಿ ನೋಡುವುದಾದರೆ ಅವರು ಒಂದು ಶ್ರೀಮಂತ ನಾಗರಿಕ ಮನೆತನದಲ್ಲಿ ಬೆಳೆದವರೇ ಎಂಬುದು ಖಚಿತವಾಗುವಂತಿತ್ತು. ಅವರು ಯಾರನ್ನು ಕುರಿತು ನಿಂದನೆಯ ಮಾತುಗಳನ್ನಾಡುತ್ತಿದ್ದಾರೆಂಬುದು ಗೊತ್ತಾಗುವಂತೆಯೂ ಇರಲಿಲ್ಲ. ಅಂತರ್ಗತವೇ ಅನಿಸುವ ಅವರ ಸ್ವಗತದಲ್ಲಿ ಇಂಗ್ಲಿಷು ಇದ್ದಿತು. ಒಮ್ಮೊಮ್ಮೆ ಬೈಗುಳ ನಿಂತು ಅವರ ಪಾಡಿಗೆ ಅವರೇ ಆಕಾಶದತ್ತ ನೋಡಿ ಗಂಭೀರವಾಗುತ್ತಿದ್ದರು. ಆಕಾಶಮಾರ್ಗದಿಂದ ಯಾರಾದರೂ ತಮ್ಮನ್ನು ಕರೆದುಕೊಂಡು ಹೋಗಲು ಬರುವರೇ ಎಂಬಂತಿರುತ್ತಿತ್ತು ಅವರ ದೃಷ್ಟಿ. ತಮ್ಮ ಸಾವನ್ನು ನಿರೀಕ್ಷಿಸಿ ಹಾಗೆ ಆಕಾಶದ ಶೂನ್ಯವನ್ನು ನಿಟ್ಟಿಸುತ್ತಿದ್ದರೋ,



ಯಾರಾದರೂ ತಮ್ಮ ಬಳಿಗೆ ಬಂದು ಮಾತಾಡಿಸಲಿ ಅಂತಲೇ ಇದ್ದರೋ ಯಾವುದೂ ಅರಿಯುವಂತಿರಲಿಲ್ಲ. ಇಂಥ ವೇಳೆ ಇದ್ದಕ್ಕಿದ್ದಂತೆಯೇ ಒಂದು ಕಾರು ಬಂದು ಇಳಿದ ಸ್ವಯಂಸೇವಕ ಹುಡುಗರು 'ಬನ್ನಿ ಅಜ್ಜಿ ಕಾರು ಹತ್ಕೊಳಿ, ಇಲ್ಲಿಗೆ ಯಾಕೆ ಬಂದಿರಿ, ಎಷ್ಟು ಹೊತ್ತಿನಲ್ಲಿ ಬಂದಿರಿ, ನಿಮ್ಮನ್ನು ಹುಡುಕಿ ಹುಡುಕಿ ಸಾಕಾಯ್ತಲ್ಲ...' ಅಂದು ತುಸು ಸಿಟ್ಟಿನಿಂದ, ಒಂದಿಷ್ಟು ಸಮಾಧಾನದಿಂದ ಮಾತಾಡಿಸುತ್ತಿದ್ದರು. ವೃದ್ಧೆ ಹಠಕ್ಕೆ ಬಿದ್ದವರಾಗಿ ಕಾರು ಹತ್ತಲು ನಿರಾಕರಿಸಿ, ನಾನು ನನ್ನ ಪಾಡಿಗೆ ವಾಕಿಂಗ್ ಮಾಡಿಕೊಂಡು ಬರುತ್ತೇನೆ. ನನಗೆ ವೃದ್ಧಾಶ್ರಮದ ದಾರಿ ಗೊತ್ತು. ತೊಂದರೆ ಕೊಡಬೇಡಿ, ನೀವು ತಿರುಗಾಟಕ್ಕೆ ಅಡ್ಡಿಯುಂಟುಮಾಡಿದರೆ ನಾನು ಇಲ್ಲೇ ಬಿದ್ದು ಸಾಯುವವಳು ಎಂದು ಬೆದರಿಕೆ ಹಾಕುತ್ತಿದ್ದರು. ಹುಡುಗರು ಅವರ ಮಾತು ಒಪ್ಪಿದವರಂತೆ ಅಸಹಾಯಕರಾದಂತೆ 'ಇಕೊಳಿ ಹಸಿವಾದರೆ ಇದು ತಗೊಳಿ' ಅಂದು ಒಂದೋ ಎರಡೋ ಪೊಟ್ಟಣ ಕೊಟ್ಟು ಕಾರು ಹತ್ತುತ್ತಿದ್ದರು. ವೃದ್ಧೆ ಅಲ್ಲೇ ಪೊಟ್ಟಣ ಬಿಚ್ಚಿ ಒಂದೆರಡು ಗುಕ್ಕ ತಿಂದು ಆಹಾರದ ಮೇಲೇ ಸಿಟ್ಟು ಹತ್ತಿ ಉಪ್ಪಿಟ್ಟಿನ ಪೊಟ್ಟಣವನ್ನು ಅಲ್ಲೇ ಹರಿಯುತ್ತಿದ್ದ ಕಾರಿನ ಮೇಲೋ, ರಿಕ್ಷಾ ಹಿಂಭಾಗಕ್ಕೋ "ನೀನೇ ತಿಂದು ಸಾಯಿ" ಅಂದು ಎಸೆದುಬಿಡುತ್ತಿದ್ದರು.

ಆ ಏರಿಯಾದ ರಿಕ್ಷಾದವರಿಗೆಲ್ಲ ಆ ಹೆಂಗಸಿನ ಕಥೆ ಗೊತ್ತಿದ್ದುದಾಗಿ ಆಮೇಲೆ ಅಲ್ಲಲ್ಲೇ ಡ್ಯೂಟಿಯ ಮೇಲೆ ಓಡಾಡುತ್ತಿದ್ದ ಗೆಳೆಯ ಬೊಮ್ಮಿಲರಿಗೂ, ನನಗೂ ವೃದ್ಧೆಯ ಕಥೆ ಗೊತ್ತಾಯಿತು. ಅವರದೂ ಅದೇ ಪ್ರದೇಶದ ಮಹಲೊಂದರ ಒಳಕಥೆಯಾಗಿತ್ತು.

ನಾನು ನಿತ್ಯ ಭೇಟಿಕೊಡುತ್ತಿದ್ದ ಭವ್ಯ ಮಹಲುಗಳ ನಡುವಣ ಒಂದು ಅರಮನೆಯಲ್ಲಿ ಇದ್ದ ಸ್ತ್ರೀ ಆಕೆ. ಒಂದು ಮಾತನ್ನು ಇಲ್ಲಿ ಮುಖ್ಯವಾಗಿ ಹೇಳಲೇಬೇಕು. ಬೊಮ್ಮಿಲರಾಜು ಅವರು ಭೇಟಿ ನೀಡುತ್ತಿದ್ದ ಆ ಭಾರಿ ಭಾರಿ ಸೌಧಗಳಲ್ಲಿ ಹೊರಗೆ ಕಟ್ಟಿಹಾಕಿದ ನಮ್ಮ ಬಂಧುಗಳದೇ ಆರ್ಭಟ ಶಿವಾಯಿ ಅಲ್ಲಿ ಶಿಶುಮಕ್ಕಳ ಕಲರವ, ಪ್ರಾಯಸ್ಥರ ಗಲಾಟೆ, ಸಂಸಾರಸ್ಥರ ಪ್ರೇಮಕಲಹ, ವಯಸ್ಕರ ಗೊಣಗಾಟ ಇವ್ಯಾವುವೂ ಇರುತ್ತಿರಲಿಲ್ಲವಲ್ಲ! ಯಾವಾಗ ನೋಡಿದರೂ ಮನೆಯ ಒಳಗೆ, ಹೊರಗೆ ಒಂದು ಸುತ್ತೂ ನಡೆಯಲಾಗದ ವೃದ್ಧರು ಇರುತ್ತಿದ್ದರಷ್ಟೆ!

ವೃದ್ಧೆಯ ಏಕಮಾತ್ರ ಪುತ್ರ ವಿದೇಶದಲ್ಲಿ ಅಂತರರಾಷ್ಟ್ರೀಯ ಅತ್ಯುನ್ನತ ಕಂಪನಿಯಲ್ಲಿ ಕೈತುಂಬಿ ಚೆಲ್ಲುವ ಸಂಬಳದ ಹುದ್ದೆ ಅಲಂಕರಿಸಬೇಕಾಗಿ ಬಂದುದರಿಂದ ಈ ವಿಲೇಜ್ ಸಿಟಿ ಬೆಂಗಳೂರನ್ನು ಬಿಡಬೇಕಾಯಿತು. ಪುತ್ರನು ತಾಯಿಯನ್ನು ಕುರಿತು ವ್ಯಾಕುಲಚಿತ್ತನಾದನು. ತಾಯಿಗೂ ಸಹ ಏನೂ ಮಾತಾಡಲಾಗಲಿಲ್ಲ, ಅಸಹಾಯಕರಾದರು. ಅದಾಗ ನವ ವಿವಾಹಿತ ಸೊಸೆ ಪತಿಯೊಡನೆ ಸಮುದ್ರಾಂತರದಲ್ಲಿ ಹಕ್ಕಿಯಂತೆ ಹಾರುವ ಕನಸು ಕಾಣುತ್ತಿದ್ದಾಕೆ, ಬೆಂಗಳೂರಲ್ಲಿ ಇದೀಗ ನೀವು ತರುತ್ತಿರುವ ಮೂರುಕಾಸಿನ ಕೆಲಸ ನಂಬಿಕೊಂಡು ಇರಲು ಸಾಧ್ಯವೇ? ಈಗೇನು ಬೆಂಗಳೂರಲ್ಲಿ ಕಾಸು ಬಿಸಾಕಿದರೆ ಅದೆಂಥಾ ಅನುಕೂಲವಿದೆ. ಎಷ್ಟೊಂದು ಹೈಟೆಕ್ ವೃದ್ಧಾಶ್ರಮಗಳಿವೆಯಲ್ಲ. ನಮಗಿಂತ ಚೆನ್ನಾಗಿ ನೋಡಿಕೊಳ್ಳುವ ಸ್ವಯಂಸೇವಕ ಹುಡುಗ, ಹುಡುಗಿಯರು ಅಲ್ಲಿರುವರಲ್ಲ. ದುಡ್ಡು ಕೊಟ್ಟರೆ ಬೆಂಗಳೂರಲ್ಲಿ ಏನು ಸಿಗುವುದಿಲ್ಲ ಹೇಳಿ ಅಂದು ತಾಯಿಯೋ, ಸಮುದ್ರಾಂತರ ಉದ್ಯೋಗವೋ ಅಂದು ಅತ್ತಿತ್ತ ತುಯ್ದಾಡುತ್ತಿದ್ದ ಗಂಡನ ಮನಸ್ಸನ್ನು ಹೆಂಡತಿ ಒಂದು ತಹಬಂದಿಗೆ ತಂದು ನಿಲ್ಲಿಸಿಬಿಟ್ಟಳು. ಹೊಸ ಹೆಂಡತಿಯ ಮಾತು ಆ ಘಳಿಗೆಗೆ ಆಪ್ಯಾಯಮಾನವೆನಿಸಿ ಪುತ್ರನು ಒಪ್ಪಿ ತಾಯಿಯನ್ನು ಅದೇ ಬೆಂಗಳೂರು ದಕ್ಷಿಣ ದಿಕ್ಕಿನಲ್ಲಿದ್ದ ಸರ್ವಾನುಕೂಲಿತ ವೃದ್ಧಾಶ್ರಮಕ್ಕೆ ದಾಖಲಿಸಿದನು.

ವಯೋಮಾನ ಸಲ್ಲುತ್ತ, ತನ್ನ ಮೇಲಿನ ಪ್ರೀತಿ ಸೊಸೆಯ ಕಡೆಗೆ ಹರಿಯಿತೆನ್ನುವ ಪುತ್ರಮೋಹ ಅಧಿಕವಾಗುತ್ತ, ಅವನನ್ನು ದೂರದೇಶಕ್ಕೆ ಸೆಳೆದೊಯ್ದುಬಿಟ್ಟಳೆಂಬ ಸೊಸೆಯ ಮೇಲಿನ ಸಿಟ್ಟು ಏರುತ್ತ ಅದೇ ತಲೆತುಂಬ ತುಂಬಿ ಮನದಾಳವು ಮಸುಳಿಸುತ್ತ ಮಾತು ತೂಕತಪ್ಪಿ, ದೇಹದ ಹೆಜ್ಜೆತಪ್ಪಿ, ಎಷ್ಟು ಹೊತ್ತಿನಲ್ಲಿ ಅಂದರೆ ಅಂಥವೇಳೆ ಕಾಯುವವರ ಕಣ್ಣು ತಪ್ಪಿಸಿ ಆ ವೃದ್ಧಮಾತೆ ಬೀದಿ ಸುತ್ತುವವರಾದರು.


ವೃದ್ಧಾಶ್ರಮದ ಸ್ವಯಂಸೇವಕರು ಇವರನ್ನು ಹುಡುಕಿ, ತಡಕಿ ಅನ್ನ ನೀಡುವುದು, ನೀರು ಕುಡಿಸುವುದು ವಾಪಸು ಕರೆದುಕೊಂಡು ಹೋಗುವುದು ಈ ಥರದ ಸೇವೆ ಮಾಡಿಯೇ ಮಾಡುತ್ತಿದ್ದರು. ಮಾಡುವುದೇನು, ವೃದ್ಧೆ ಒಂದು ದಿನ ಬಸ್‌ಸ್ಟಾಪಿನ ಬೆಂಚಿನ ಮೇಲೆ ತೀರಿಕೊಂಡಿದ್ದರು. ಅಲ್ಲೇ ಮಲಗಿದ್ದ ಭಿಕ್ಷುಕರು ವೃದ್ಧೆಯನ್ನು ನಮ್ಮ ಶಿವಸ್ಥಾನಕ್ಕೆ ತಂದು ಹಾಕಿ ಹೋದರು! ಲಾಡಸಾಹೇಬರೇ ಏಕಾಂಗಿಯಾಗಿ ಆ ಹೊತ್ತು ಮಧ್ಯಾಹ್ನದ ಮೇಲೆ ಶವಸಂಸ್ಕಾರಗೈದರು.

ಆ ದಿನ ರಾತ್ರಿಯೇ ಲಾಡಸಾಹೇಬರು ಕೊಂಚ ಹೆಚ್ಚು ನಿದ್ದೆ ಮಾಡಿದ್ದರಿಂದ ಶವಾಪಹರಣ ಹಗರಣವಾಯಿತು. ಯಜಮಾನರು ಎದ್ದಿದ್ದರೆ ತಾನೇ ಏನು ಮಾಡಲು ಸಾಧ್ಯವಾಗುತ್ತಿತ್ತು ಎಂಬುದು ನನ್ನ ಮುಖ್ಯ ಪ್ರಶ್ನೆ. ಎಲ್ಲವೂ ನನಗೆ ತಿಳಿದಿದೆ. ನನ್ನ ಮಾತು ಯಾರಿಗೆ ಕೇಳಿಸಲು ಸಾಧ್ಯ? ಈಗ ಆಗಿರುವುದಕ್ಕೆ ಯಾರು ಜವಾಬ್ದಾರರು. ನಮ್ಮ ಲಗಾಟಿ ಸಾಹೇಬರನ್ನು ವೃಥಾ ಬಂಧನದಲ್ಲಿರಿಸಿ ವ್ಯಾನಿಗೆ ಎಳೆದೊಯ್ಯುವುದನ್ನು ನಾನು ಉಗ್ರವಾಗಿ ಪ್ರತಿಭಟಿಸಿ, ಯಜಮಾನರ ಹಿಂದೆಯೇ ವ್ಯಾನು ಏರಲು ಹೋಗುವಲ್ಲಿ ಪೊಲೀಸು ಲಾಠಿಯಿಂದ ಬೆನ್ನಿಗೆ ಬಲವಾಗಿ ಏಟು ಹಾಕಿದರು. ವ್ಯಾನಿಗೆ ಏರುತ್ತಿದ್ದ ನಾನು ಪಲ್ಟಿ ಹೊಡೆದು ಕೆಳಗೆ ಬಿದ್ದೆ. ಬಿದ್ದರೂ ಬಿಟ್ಟನೆ? ವ್ಯಾನಿನ ಹಿಂದೆಯೇ ಸ್ಟೇಷನ್ನಿನತ್ತ ದೌಡಾಯಿಸಿ ಅಲ್ಲಿ ಹೊರಗೆ ಧರಣಿ ಕೂತೆನಲ್ಲ!...'

* * *

ಸ್ಟೇಷನ್ನಿನಲ್ಲಿ ಪೊಲೀಸರು ಕೇಳಿದ ಪ್ರಶ್ನೆಗಳಿಗೆಲ್ಲ ಹೌದೆನ್ನಬೇಕೋ, ಅಲ್ಲವೆನ್ನಬೇಕೋ ಅದೇ ಲಾಡಸಾಬನಿಗೆ ಅರ್ಥವಾಗಲಿಲ್ಲ. ಅವನನ್ನು ಲಾಕಪ್ಪಿನಲ್ಲಿ ತಳ್ಳಿ, ಎಸ್ಸೈ ಉಮೇಶಘಂಟಿ ಅವರು, ಡಿವೈಎಸ್‌ಪಿ ವಾಲೀಕಾರ ಸಾಹೇಬರೆಲ್ಲ ಕ್ರಮವಾಗಿ ಒಂದೊಂದೇ ಪ್ರಶ್ನೆ ಕೇಳುತ್ತ ಸತ್ಯವನ್ನು ಹೊರತರಲು ಪ್ರಯತ್ನಿಸಿದರು. ಇದರಲ್ಲಿ ಪ್ರಥಮ ಪ್ರಶ್ನೆಯೆಂದರೆ ಆ ಹೊತ್ತು ಹೂತ ಹೆಣ ಯಾರದಂತ ನಿನಗೆ ತಿಳಿದಿದೆಯೇ ಎಂತಲೇ ಆರಂಭವಾಗಿದ್ದಿತು. ಲಗಾಟಿಗೆ ತಾನು ಬಂದ ಲಾಗಾಯ್ತಿನಿಂದ ಸ್ಮಶಾನದಲ್ಲಿ ಹೂತ, ಸುಟ್ಟ ನೂರಾರು ಹೆಣಗಳಿಗಿಂತಲೂ ಮಿಗಿಲಾಗಿ ವಿಜೃಂಭಣೆಯಿಂದ ಸಾಲಂಕೃತ ಕುರ್ಜಿನಲ್ಲಿ ಹಿಂದು ಮುಂದಿನ ಹತ್ತಾರು ಕಾರುಗಳಲ್ಲಿ ಆ ದೊಡ್ಡವರ ದೇಹವು ಬಂದಿತೆಂಬುದು ಮಾತ್ರ ಗೊತ್ತಿತ್ತೇ ಶಿವಾಯಿ ಅವರ ನಿಜ ನಾಮಧೇಯವೇನು, ಕುಲಗೋತ್ರವೇನು ಅವರ ಭಾರಿ ವಹಿವಾಟು ಎಂಥದು, ಮೇಲಾಗಿ ಬಂಧು ಬಳಗದವರು ಯಾರು, ಅವರ ದೊಡ್ಡಸ್ತಿಕೆ ಯಾವ ರೀತಿಯದೆಂಬುದು ಗೊತ್ತೇ ಇರಲಿಲ್ಲ. ಶಂಖ ಜಾಗಟೆ ಬಾರಿಸಲು ಹೋದಾಗ ಮಾತ್ರ ಏಟು ಬಿದ್ದುದು ನೆನಪಾಯಿತು. ಅವರು ಯಾರೆಂಬುದು ತನಗೆ ಗೊತ್ತಿಲ್ಲ ಅಂದು ಬರಿದೇ ಅವನು ತಲೆಯಾಡಿಸುವಲ್ಲಿ ಎಸ್ಸೈ ಘಂಟಿಯವರು, ದಿಗ್ಭ್ರಮೆಯಾದರು. ಯಲಾ ಬಾಂಚೋತ್ ಇವನೆಂಥ ಸುಳ್ಳುಗಾರನೆಂದು ತಲೆದೂಗಿದರು. ನೀನೇನು ನ್ಯೂಸ್‌ಪೇಪರ್ ಓದುವುದಿಲ್ಲವಾ, ಈ ರಾಜಾಜಿನಗರ, ಶ್ರೀರಾಮಪುರದ ಫಾಸಲೆ ಯಾಕೆ, ಬೆಂಗಳೂರಾದ ಬೆಂಗಳೂರಲ್ಲಿ ಈಗ ಹುಟ್ಟಿದ ಕೂಸನ್ನು ಕೇಳಿದರೂ ತೊದಲುತ್ತ ಹೇಳುವ ಅವರ ಹೆಸರು ನಿನಗೆ ಗೊತ್ತಿಲ್ಲವೆಂದರೆ ನಂಬುವ ಮಾತೇ ಅಂದು ಅಚ್ಚರಿಯನ್ನು ವ್ಯಕ್ತಪಡಿಸಿ ಪೇಸಿಗಳನ್ನು ಕರೆದು ಲೇಯ್ ಈ ಬಡವಾ ರ್‍ಯಾಸ್ಕಲ್‌ಗೆ ಆ ದಿನ ಸ್ಮಶಾನಕ್ಕೆ ಬಂದ ದೇಹ ಯಾರದು ಅಂತ ರವಷ್ಟು ಗೊತ್ತಾಗಿಸರಿ ಅಂದು ಅಪ್ಪಣೆ ಕೊಟ್ಟರು.

ಚೆಡ್ಡಿ ಮತ್ತೊಂದು ನಡುವಿನ ದಾರ ಮಾತ್ರದಲ್ಲಿರುವ ತನ್ನನ್ನು ಜೀಪಿನಲ್ಲಿ ತಂದು ಈ ಸರಳುಗಳ ಹಿಂದೆ ಯಾಕೆ ಹಾಕಿದ್ದಾರೆಂಬುದೇ ಲಗಾಟಿಗೆ ಬೇಗ ಬೇಗ ಅರ್ಥವಾಗುತ್ತಿಲ್ಲ. ಆದರೆ ಸುತ್ತಮುತ್ತ ಎಲ್ಲ ಮಾತಾಡುತ್ತಿರುವಂತೆ ಮೊನ್ನೆ ಹೂತ ದೊಡ್ಡವರ ಹೆಣ ಯಾರಿಂದಲೋ ಎದ್ದು ಹೋಗಿದೆ ಎಂಬ ಸಮಾಚಾರವು ಅವನಿಗೆ ಅರಿವಾದಂತಾಯಿತು.




(ಮೈಸೂರಿನ ನಿವಾಸಿಯಾದ ಲೇಖಖರು ನಿವೃತ್ತ ಕನ್ನಡ ಪ್ರಾಧ್ಯಾಪಕರಾಗಿದ್ದು, ಕನ್ನಮಡದ ಹಿರಿಯ ಜಾನಪದ ವಿದ್ವಾಂಸರೂ ಮತ್ತು ಕಥೆಗಾರ–ಕಾದಂಬರಿಕಾರರೂ ಆಗಿದ್ದಾರೆ)

'ಹಿರಿಯ ಕಾದಂಬರಿಗಾರ್ತಿ ಶ್ರೀಮತಿ ಗೀತಾ ನಾಗಭೂಷಣ ಅವರ ನಿಧನಕ್ಕೆ 'ಹೊಸ ಮನುಷ್ಯ' ತನ್ನ ತೀವ್ರ ಸಂತಾಪಗಳನ್ನು ವ್ಯಕ್ತಪಡಿಸುತ್ತದೆ.–ಸಂ.

ಪುಸ್ತಕಾವಲೋಕನ

ಪು: **Assasination of Mahatma Gandhi :Trial and Verdict** ಸಂ: ಸುರೇಶ್ ನಂಬತ್ ಪ್ರ: ಟಿಹೆಚ್‌ಜಿ ಪಬ್ಲಿಷಿಂಗ್ ಪ್ರ.ಲಿ.,ಚೆನ್ನೈ ಪು: ೪೫೬ ಬೆ: ರೂ. 699/-

ಇಂದಿನ ರಾಜಕಾರಣದ ಅಂದಿನ ಚರಿತ್ರೆ



ಗಾಂಧಿ ಹತ್ಯೆ ಗಾಂಧಿ ಬದುಕಿನ ಐತಿಹಾಸಿಕತೆಯ ಅಂತಿಮ ಅಧ್ಯಾಯ. ಅವರ ಬದುಕಿನಂತೆಯೇ ಆಧ್ಯಯನಕ್ಕೆ ಯೋಗ್ಯವಾದ ಒಂದು ಐತಿಹಾಸಿಕ ಘಟನೆ. ಏಕೆಂದರೆ ಆ ಹತ್ಯೆಯನ್ನು ಕುರಿತು ನಡೆದ ಮೊಕದ್ದಮೆ ಅವರ ಬದುಕಿನ ಸತ್ಯಗಳನ್ನು ಒಮ್ಮೆ ಮರುಪರಿಶೀಲನೆಗೆ ಒಡ್ಡಿದಂತಹ ಮುಖಾಮುಖಿಯೊಂದನ್ನು ನಮ್ಮ ಮುಂದೆ ಪ್ರಸ್ತುತಪಡಿಸುತ್ತದೆ. ಸದರಿ ಪುಸ್ತಕ ಆ ಮುಖಾಮುಖಿಯ ಒಂದು ಸಮಗ್ರ ಚಿತ್ರ ನೀಡುವ ಪ್ರಯತ್ನ ಮಾಡುತ್ತದೆ. ನಾಥೂರಾಮ ವಿನಾಯಕ ಗೋಡ್ಸೆ ಎಂಬ ಹಂತಕ ಅವರನ್ನು ಗುಂಡೇಟಿನ ಮೂಲಕ ಹತ್ಯೆ ಮಾಡಿದ ನಂತರ ಈ ಹತ್ಯೆಯ ಹಿಂದೆ ಒಂದು ಪಿತೂರಿ ಇತ್ತೆಂದು ಸರ್ಕಾರ, ನಾಥೂರಾಮ ವಿನಾಯಕ ಗೋಡ್ಸೆ, ನಾರಾಯಣ ಡಿ. ಆಪ್ಟೆ, ವಿಷ್ಣು ಕರ್ಕರೆ, ಮದನಲಾಲ್ ಕೆ ಪಹ್ವಾ, ಶಂಕರ್ ಕಿಷ್ಟಯ್ಯ, ಗೋಪಾಲ ವಿನಾಯಕ ಗೋಡ್ಸೆ, ವಿನಾಯಕ ಡಿ. ಸಾವರ್ಕರ್, ಡಾ. ದತ್ತಾತ್ರಯ ಪರಚುರೆ ಮತ್ತು ದಿಗಂಬರ ಬಾಡ್ಗೆ. ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿತು. ಇವರೆಲ್ಲರೂ ಹಿಂದೂ ಮಹಾಸಭಾದ ಪದಾಧಿಕಾರ ಅಥವಾ ಅದರ ಜೊತೆಗೆ ಒಂದಲ್ಲ ಒಂದು ರೀತಿಯ ಸಂಬಂಧ ಹೊಂದಿದವರಾಗಿದ್ದರು.

ಈ ಮೊಕದ್ದಮೆ ಮೊದಲು ಇದಕ್ಕೆಂದೇ ದೆಹಲಿಯಲ್ಲಿ (ಕೆಂಪು ಕೋಟೆ ಆವರಣದಲ್ಲಿ) ರಚಿಸಲಾದ ನ್ಯಾ. ಆತ್ಮಚರಣರ ಏಕ ಸದಸ್ಯ ವಿಶೇಷ ನ್ಯಾಯಾಲಯದಲ್ಲಿ (೧೯೪೮ರ ಮೇನಿಂದ ೧೯೪೯ರ ಫೆಬ್ರುವರಿ), ನಂತರ ಅಂತಿಮವಾಗಿ ಆಗಿನ ಪೂರ್ವ ಪಂಜಾಬ್‌ನ ಉಚ್ಚ ನ್ಯಾಯಾಲಯದ ತ್ರಿಸದಸ್ಯ ನ್ಯಾಯಪೀಠದಿಂದ (೧೯೪೯ರ ಫೆಬ್ರುವರಿಯಿಂದ ೧೯೪೯ರ ಜೂನ್) ಆರೋಪ ವಿಚಾರಣೆ ನಡೆದು ಪಿತೂರಿ ಸಾಬೀತಾಗಿದ್ದರಿಂದ ನಾಥೂರಾಮ ಮತ್ತು ಆಪ್ಟೆಗೆ ಗಲ್ಲು ಶಿಕ್ಷೆ, ಕರ್ಕರೆ, ಗೋಪಾಲ ಗೋಡ್ಸೆ ಮತ್ತು ಮದನ್‌ಲಾಲ್ ಪಹ್ವಾಗೆ ಜೀವಾವಧಿ ಶಿಕ್ಷೆಗಳನ್ನು ಖಚಿತಪಡಿಸಲಾಯಿತು. ವಿಚಾರಣೆಯ ಮೊದಲ ಹಂತವಾದ ವಿಶೇಷ ನ್ಯಾಯಾಲಯವೇ ಬಾಡ್ಗೆಯನ್ನು ಆತ ಮಾಫಿ ಸಾಕ್ಷಿಯಾಗಲು ಒಪ್ಪಿದ್ದರಿಂದ ಆತನನ್ನು ಶಿಕ್ಷೆಯಿಂದ ಮುಕ್ತಗೊಳಿಸಲಾಗಿತ್ತಾದರೆ, ಸಾವರ್ಕರ್‌ರನ್ನು ಸಮರ್ಥನೀಯ ಸಾಕ್ಷ್ಯಗಳ ಕೊರತೆಯಿಂದಾಗಿ ಆರೋಪ ಮುಕ್ತಗೊಳಿಸಲಾಗಿತ್ತು. ನಂತರ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಲ್ಪಟ್ಟ ಮೇಲ್ಮನವಿ ಕುರಿತ ವಿಚಾರಣೆಯ ಹಂತದಲ್ಲಿ ಡಾ. ಪರಚುರೆಯನ್ನು ಆತನ ವಿರುದ್ಧದ ಸಾಕ್ಷ್ಯ ವಿಶ್ವಾಸಾರ್ಹವಲ್ಲದ್ದು ಎಂಬ ಸಂಶಯದ ಮೇಲೆ ಮತ್ತು ಕಿಷ್ಟಯ್ಯನನ್ನು ಆತನೊಬ್ಬ ಬಾಡ್ಗೆಯ ಸಂಬಳದ ಸೇವಕ ಮಾತ್ರನಾಗಿದ್ದು ಈ ಪಿತೂರಿಯಲ್ಲಿ ಅವನದ್ದು ಉದ್ದೇಶಪೂರ್ವಕ ಪಾತ್ರವಿಲ್ಲೆಂಬ ಕಾರಣದ ಮೇಲೆ ಆರೋಪ ಮುಕ್ತಗೊಳಿಸಲಾಯಿತು.

ಇದು ಇಡೀ ಮೊಕದ್ದಮೆಯ ಸಾರಾಂಶ ಆದರೆ ವಿಚಾರಣೆಗಳ ಈ ಪ್ರಕ್ರಿಯೆ ಬಿಚ್ಚಿಟ್ಟ ಆ ಕಾಲದ ಮತ್ತು ಸದ್ಯದ ಈ ಕಾಲಕ್ಕೂ ವಿಸ್ತರಿಸಿ ಚಿಂತನಾರ್ಹಗೊಳಿಸಿರುವ ಹಲವು ರಾಜಕೀಯ ಸತ್ಯಗಳನ್ನು ಈ ಪುಸ್ತಕ ನಮ್ಮ ಮುಂದೆ ತೆರೆದಿಡುತ್ತದೆ. ಇದನ್ನು ವಿಶೇಷ ನ್ಯಾಯಾಲಯದ ಸ್ಥಾಪನೆಯಿಂದ ಹಿಡಿದು ೧೯೬೭ರಲ್ಲಿ ಕೊಲೆ ಕುರಿತು ಬಹಿರಂಗವಾದ ಹೊಸ ಮಾಹಿತಿಯ ಹಿನ್ನೆಲೆಯಲ್ಲಿ ರಚಿತವಾದ ಜೆ.ಎಲ್. ಕಪೂರ್ ವಿಚಾರಣಾ ಆಯೋಗದ ವರದಿಯನ್ನೂ ಒಳಗೊಂಡು ೨೦೧೮ರಲ್ಲಿ ಕೊಲೆ ಮೊಕದ್ದಮೆಯ ವಿಚಾರಣೆಯ ಮರುಪರಿಶೀಲನೆಗೆ ಸಲ್ಲಿಸಲಾದ ಅರ್ಜಿಯೊಂದನ್ನು ಸರ್ವೋಚ್ಚ ನ್ಯಾಯಾಲಯ ತಿರಸ್ಕರಿಸಿದ ಘಟನೆಯವರೆಗಿನ ಎಲ್ಲ ಮಾಹಿತಿಯನ್ನೂ ಅದು 'ದ ಹಿಂದೂ' ಪತ್ರಿಕೆಯಲ್ಲಿ ಪ್ರಕಟವಾದ ವರದಿಗಳ ರೂಪದಲ್ಲಿ ಸಂಕಲಿಸಿ ಮಂಡಿಸಲಾಗಿದೆ. ಇದನ್ನು ಹಲವು ಸಾಂದರ್ಭಿಕ ಸುದ್ದಿ ಚಿತ್ರಗಳು. ರೇಖಾ ಚಿತ್ರಗಳು ಮತ್ತು ಪತ್ರಿಕಾ ವರದಿಗಳ ಛಾಯಾಪ್ರತಿಗಳ ಮೂಲಕ ಹೆಚ್ಚು ಅಥೆಂಟಿಕ್ ಮಾಡಲಾಗಿದೆ. ಈ ಪತ್ರಿಕೆ ಈ ಹಿಂದೆ ಕೂಡ ಗಾಂಧಿಯವರ ಬದುಕಿನ ಕೊನೆಯ ೨೦೦ ದಿನಗಳನ್ನೂ ಹೀಗೆ ತನ್ನ ದಿನವಹಿ ವರದಿಗಳ ರೂಪದಲ್ಲಿ ಸಂಗ್ರಹಿಸಿ ಸಾರ್ವಜನಿಕರಿಗೆ ನೀಡಿತ್ತು ಎಂಬುದನ್ನು ನೆನಪಿಸಿಕೊಳ್ಳಬಹುದು.

ಸಣ್ಣಕ್ಷರಗಳಲ್ಲಿ ೪೫೦ ಪುಟಗಳಿರುವ ಈ ಪುಸ್ತಕದ ಎಲ್ಲ ವಿಶೇಷಗಳನ್ನೂ ಈ ಅವಲೋಕನದ ಪುಟ್ಟ ಬರಹದಲ್ಲಿ ಹೇಳಲಾಗಲಾಗದಿದ್ದರೂ, ಇಂದಿನ ರಾಜಕೀಯ ಸಂದರ್ಭಕ್ಕೆ ಮುಖ್ಯವಾಗಿ ಈ ಇಡೀ ಪುಸ್ತಕ ಪರೋಕ್ಷವಾಗಿಯಾದರೂ ಸೂಚಿಸುವ ಒಂದು ಸತ್ಯವಿದ್ದು ಅದು ಹೀಗಿದೆ ಎನ್ನಬಹುದು: ಇಂದು ಕಾಣುತ್ತಿರುವ ಮೋದಿ ರಾಜ್ಯಭಾರ ವ್ಯವಸ್ಥೆಯನ್ನು ಬಹು ಎಚ್ಚರಿಕೆಯಿಂದ ಪೂರ್ವನಿಯೋಜಿತ ವಿನ್ಯಾಸದೊಂದಿಗೆ ಈ ಮೊಕದ್ದಮೆಯಲ್ಲಿ ನಾಥೂರಾಮ ಗೋಡ್ಸೆ ನಿರ್ವಹಿಸಿದ ಪಾತ್ರದ ಮೂಲಕವೇ ಕಟ್ಟಲಾರಂಭಿಸಲಾಗಿತ್ತು. ಗಾಂಧಿ ಜೀವ ಹತ್ಯೆಯನ್ನು, ಅದೊಂದು ದೇಶ ಉಳಿಸುವ ತನ್ನ ಧಾರ್ಮಿಕ ಕರ್ತವ್ಯವೆಂದು ವಾದಿಸುತ್ತಲೇ ಅದನ್ನು ನೇರವಾಗಿ ಒಪ್ಪಿಕೊಂಡು ಅದು ಪಿತೂರಿಯಿಂದ ಉಂಟಾದುದಲ್ಲ ಎಂದು ಎರಡೂ ಹಂತಗಳ ವಿಚಾರಣೆಯ ಕೊನೆಯವರೆಗೂ ತನ್ನ ಸಹಪಿತೂರಿಗಾರರನ್ನು ರಕ್ಷಿಸುವ ಪ್ರಯತ್ನ ಮಾಡುವ ಮೂಲಕ ತಾನು ಪ್ರತಿನಿಧಿಸುವ ಸಿದ್ಧಾಂತ ಮತ್ತು ರಾಜಕಾರಣವನ್ನು ಏಕವ್ಯಕ್ತಿ ಪ್ರದರ್ಶವಾಗಿ ಒಗ್ಗೂಡಿಸಿ ಅವಕ್ಕೊಂದು ಚೂಪು ನೀಡುವುದು. ಇದಕ್ಕಾಗಿ ಆತ ಬಳಸುವ ಎರಡು ಆಯುಧಗಳೆಂದರೆ ಪದೇ ಪದೇ ಹೇಳುವ, ವಿವರಗಳಿಗೆ ವ್ಯವಧಾನವಿಲ್ಲದೆ ಸ್ಥೂಲ ದೃಷ್ಟಿಗೆ ಮಾತ್ರ ತೆರೆದುಕೊಂಡ ಸಾರ್ವಜನಿಕರು ಸುಲಭವಾಗಿ ನಂಬಹುದಾದ ಎರಡು ಸುಳ್ಳುಗಳನ್ನು: ರಾಷ್ಟ್ರ ವಿಭಜನೆಗೆ ಗಾಂಧೀಜಿಯೇ ಕಾರಣ ಮತ್ತು ಈ ಕಾರಣದ ಹಿಂದಿರುವ ಮುಸ್ಲಿಮರ ಓಲೈಕೆ ಕಾಂಗ್ರೆಸ್ ಅನುಸರಿಸಿಕೊಂಡು ಬಂದ ರಾಜಕಾರಣದ ಫಲವಾಗಿದೆ. ಆತ ವಿಚಾರಣೆಯ ಸಂದರ್ಭದಲ್ಲಿ ನೀಡಿದ ಇನ್ನೊಂದು ಹೇಳಿಕೆಯೂ ಇಂದಿನ ಸಂದರ್ಭದಲ್ಲಿ ಗಮನಾರ್ಹವೆನಿಸುತ್ತದೆ: ಗಾಂಧಿಯನ್ನು ಕೊಂದು ಹಿಂದೂ ಧರ್ಮವನ್ನು ಅವರ ಪ್ರಭಾವದಿಂದ ಮುಕ್ತಗೊಳಿಸಿ ಅದನ್ನು ಕ್ಷಾತ್ರಗೊಳಿಸಬೇಕಿದೆ.

ಗಾಂಧಿಯವರ ಶಾಂತಿ ಮತ್ತು ಅಹಿಂಸೆಯ ನೀತಿಯನ್ನು ಸಾರಾಸಗಟಾಗಿ ತಿರಸ್ಕರಿಸುವ ಗೋಡ್ಸೆ ಹೇಳುವ ಇನ್ನೊಂದು ಮಾತೆಂದರೆ ಇಷ್ಟು ದಿನಗಳ ಗಾಂಧಿ ಆಧ್ಯಯಯನವೂ ಜನಮಧ್ಯದಲ್ಲಿ ಪೂರ್ಣವಾಗಿ ಉತ್ತರಿಸಲಾಗದ 'ಗಾಂಧಿ ತಮ್ಮ ತತ್ವದಲ್ಲಿ ಸೋತಿದ್ದಾರೆ; ಆದರೆ ಅದನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಿದ್ದಾರೆ' ಎಂಬುದು. ಇದು ಯಾವುದನ್ನು ಅಂಬೇಡ್ಕರ್, 'ಗಾಂಧಿ ರಾಜಕಾರಣವನ್ನು ಕಪಟಗೊಳಿಸುವಂತೆ ಪೂರ್ಣ ಸತ್ಯವನ್ನು ಹೇಳುತ್ತಾರೆ' ಎಂಬ ಮಾತಿನ ಮೂಲಕ ಗಾಂಧಿಯ ಮೇಲೆ ಆಪಾದನೆಯ ರೂಪದಲ್ಲಿ ಹೊರಿಸುತ್ತಾರೋ ಆ ಮಾತಿನ ಬಳಿ ನಮ್ಮನ್ನು ಒಯ್ಯುತ್ತದೆ. ಇದರಿಂದ ಗೊತ್ತಾಗುವುದೇನೆಂದರೆ, ಗಾಂಧಿ ತಮ್ಮ ಬದುಕಿನುದ್ದಕ್ಕೂ ಮಾಡುತ್ತಿದ್ದ ಎಲ್ಲವೂ ಸತ್ಯದೊಡನೆಯ ಪ್ರಯೋಗದ ಭಾಗವಾಗಿರುತ್ತಿತ್ತು ಮತ್ತು ಆ ಪ್ರಯೋಗವನ್ನೇ ಅವರು ಧರ್ಮಾಚರಣೆ ಎಂದು ಕರೆಯುತ್ತಿದ್ದರು ಎಂಬುದು ಅವರ ನಂಬಿಕಸ್ಥ ಕಾಂಗ್ರೆಸ್ ನಾಯಕರೂ ಸೇರಿದಂತೆ ಈ ಯಾರಿಗೂ ಅರ್ಥವಾದಂತಿರಲಿಲ್ಲ. ಏಕೆಂದರೆ ಇದು ಅರ್ಥವಾಗದ ಮನಃಸ್ಥಿಯ ಎಲ್ಲರಿಗೂ ಪೂರ್ಣ ಸತ್ಯಗಳಂತೆಯೇ ಕಾಣುವ ತಮ್ಮದೇ ಆದ ಅರ್ಧ ಸತ್ಯಗಳನ್ನು ಸಾಕ್ಷಾತ್ಕರಿಸಿಕೊಳ್ಳುವ ತುರ್ತು ಅಗತ್ಯಗಳು ಇದ್ದವು: ಕಾಂಗ್ರೆಸ್‌ಗೆ ಅಧಿಕಾರ ಗ್ರಹಣ, ಮುಸ್ಲಿಂ ಲೀಗ್‌ಗೆ ಅನ್ಯಾಯದ ಭಯ, ಹಿಂದೂವಾದಿಗಳಿಗೆ ಅಖಂಡ ಭಾರತದ ನಷ್ಟದ ತಲ್ಲಣ ಮತ್ತು ಅಂಬೇಡ್ಕರ್‌ಗೆ ನಿಮ್ನ ವರ್ಗಗಳಿಗೆ ನ್ಯಾಯ.

ಈ ಪುಸ್ತಕದಿಂದ ಗೊತ್ತಾಗುವ ಇನ್ನೊಂದು ಸಂಗತಿ ಎಂದರೆ, ಗಾಂಧಿ ಪ್ರಾರ್ಥನಾ ಸಭೆಯತ್ತ ಬಾಂಬ್ ಎಸೆದು ಬಂಧಿತನಾಗಿದ್ದ ಮದನ್‌ಲಾಲ್ ಪಹ್ವಾನ ವಿಚಾರಲ್ಯಿಂದಲೂ ಮತ್ತು ಹರಕು ಬಾಯಿಯ ಈತನೇ ಬಾಂಬೆಯಲ್ಲಿ ಸೋರಿಕೆ ಮಾಡಿದ್ದ ಮಾಹಿತಿಯಿಂದಲೂ ಗಾಂಧಿ ಹತ್ಯೆಯ ಪಿತೂರಿಯ ಸುದ್ದಿ ಬಾಂಬೆ ಪ್ರಾಂತ್ಯದ ಗೃಹಸಚಿವರಾಗಿದ್ದ ಮೊರಾರ್ಜಿ ದೇಸಾಯಿಯವರಿಂದ ವೈಯಕ್ತಿಕವಾಗಿ ದೇಶದ ಗೃಹ ಮಂತ್ರಿ ಸರ್ದಾರ್ ವಲ್ಲಭಾಯಿ ಪಟೇಲರಿಗೆ ತಲುಪಿದ್ದರೂ ಈ ಹತ್ಯೆಯಯನ್ನು ಸರ್ಕಾರ ತಪ್ಪಿಸಲಾಗಲಿಲ್ಲವೆಂಬುದು. ಹಲವು ಪ್ರಶ್ನೆಗಳನ್ನು ಎತ್ತುವ ಈ ಸಂಗತಿಯನ್ನು ಎರಡೂ ನ್ಯಾಯಾಲಯಗಳ ತೀರ್ಪುಗಳಲ್ಲಿ ಉಲ್ಲೇಖಿಸಲಾಗಿದೆ, ಆದರೆ ಆಗ ಸರ್ಕಾರದ ಬುಡದಿಂದ ತುದಿಯವರೆಗಿನ ವಿವಿಧ ವಲಯಗಳೂ ಸೇರಿದಂತೆ ಸಾರ್ವಜನಿಕ ಜೀವನದ ಆಯಕಟ್ಟಿನ ಸ್ತರಗಳೆಲ್ಲ ಕಡೆಗೆ ವ್ಯಾಪಿಸಿದ್ದ ಮೂಲತಃ ಪಾಕಿಸ್ತಾನ ವಿರೋಧಿಯಾಗಿದ್ದ ಮುಸ್ಲಿಂ ವಿರೋಧಿ ಹಿಂದೂ ಜಾಗೃತಿಯ ದಟ್ಟ ವಾತಾವರಣದ ಮಂಜು ರಾಷ್ಟ್ರದ ಆತ್ಮಸಾಕ್ಷಿಯನ್ನು ಮುಚ್ಚಿಹಾಕಿತ್ತು ಎಂದು ಇದನ್ನು ಅರ್ಥ ಮಾಡಿಕೊಳ್ಳಬುದೇನೋ ತೀಳಿಯದಾಗಿದೆ.

ಈ ಪುಸ್ತಕದ ಒಂದು ಕೊರತೆಯೆಂದರೆ ಆರಂಭದಲ್ಲಿ ಪ್ರಸ್ತಾಪಿಸಿದ ೧೯೬೭ರಲ್ಲಿ ಸ್ಥಾಪಿಸಲ್ಪಟ್ಟ ಜೆ.ಎಲ್ ಕಪೂರ್ ಆಯೋಗದ ಸಾವಿರಕ್ಕೂ ಹೆಚ್ಚು ಪುಟಗಳ ವರದಿಯ ಸಾರಾಂಶ ಇಲ್ಲಿ ಎಷ್ಟು ಹ್ರಸ್ವಗೊಂಡು ಸಂಗ್ರಹಿತವಾಗಿದೆ ಎಂದರೆ, ಸ್ವಾತಂತ್ರ್ಯ ಘೋಷಣೆಯಾದ ನಂತರ ಕಾಂಗ್ರೆಸ್-ಹಿಂದೂ ಮಹಾಸಭಾದ ಮೈತ್ರಿಗೆ ಬೆಂಬಲ

ನೀಡಿದ್ದರೆಂದು ಹೇಳಲಾಗುವ (ಈ ಸುದ್ದಿ ನಾಥೂರಾಮನನ್ನು ಎಷ್ಟು ಸಿಟ್ಟಿಗೆಬ್ಬಿಸಿತ್ತೆಂದರೆ, ಇದಕ್ಕೆ ಕಾರಣರೆಂಬ ಭಾವನೆಯಿಂದ ಆತ ಹಿಂದೂ ಮಹಾಸಭಾದ ಆಗಿನ ಅಧ್ಯಕ್ಷ ಭೂಪಟ್ಕರ್‌ರತ್ತ ಚೂರಿ ಹಿಡಿದು ಧಾವಿಸುವ ಮಾಹಿತಿ ಈ ವಿಚಾರಣೆಗಳ ವೇಳೆಯಲ್ಲಿ ದಾಖಲಾಗಿದೆ) ಸಾವರ್ಕರ್ ಗಾಂಧಿ ಹತ್ಯೆಯ ಪಿತೂರಿಯಲ್ಲಿಯೂ ಭಾಗವಹಿಸಿದ್ದರೆಂಬುದನ್ನು ಪುಷ್ಟೀಕರಿಸುವ ಸಾಕ್ಷ್ಯಗಳನ್ನು ಮೂಲ ವಿಚಾರಣೆಯ ವೇಳೆ ನ್ಯಾಯಾಲಯಕ್ಕೆ ಅಲಭ್ಯ ಮಾಡಲಾಗಿತ್ತೆಂದು ಈ ವರದಿ ತಿಳಿಸುತ್ತದೆಂಬ ಇತಿಹಾಸಕಾರ ಮತ್ತು ವಕೀಲ ಎ.ಜೆ. ನೂರಾಣಿಯವರ ಮಾತಿಗೆ ಪೂರಕವಾದ ಯಾವ ಅಂಶವೂ ಇದರಲ್ಲಿ ಒಳಗೊಂಡಿಲ್ಲ. ಏಕೆ?

ಅದೇನೇ ಇರಲಿ, ಗಾಂಧೀಯವರ ಕೊನೆಯ ದಿನಗಳ ಮನಸ್ಸಿನ ತಲ್ಲಣವನ್ನು ಹೇಳುವ ಗಾಂಧಿಯವರ ಮೊಮ್ಮಗ ಗೋಪಾಲಕೃಷ್ಣ ಗಾಂಧಿಯವರ ಮುನ್ನುಡಿಯುಳ್ಳ ಈ ಪುಸ್ತಕ ರಾಷ್ಟ್ರ ವಿಭಜನೆಯ ಚರಿತ್ರೆಯ ಸೂಕ್ಷ್ಮ ಅಧ್ಯಯನ ಮಾಡಬಯಸುವವರು ಓದಲೇಬೇಕಾದ ಆಕರ ಗ್ರಂಥವಾಗಿದೆ.

–ಡಿ.ಎಸ್. ನಾಗಭೂಷಣ

ಪು: **ಬಾಡಿಗೆ ಮನೆಗಳ ರಾಜಚರಿತ್ರೆ** ಲೇ: **ಕೆ. ಸತ್ಯನಾರಾಯಣ** ಪ್ರ: **ಅಭಿನವ**, ಬೆಂಗಳೂರು (೯೪೪೮೮೦೪೯೦೫) ಪು:**೨೬೪** ಬೆ: **ರೂ. ೩೫೦/-**

ಬಾಡಿಗೆ ಮನೆಗಳ ಕಥನದ ಮುಖೇನ ಆತ್ಮವೃತ್ತಾಂತ



ಇದು ಹಿರಿಯ ಲೇಖಕ ಕೆ. ಸತ್ಯನಾರಾಯಣ ಅವರ ಆತ್ಮವೃತ್ತಾಂತದ ನಾಲ್ಕನೆಯ ಭಾಗ.. ಇದರ ನಾವೇನು ಬಡವರಲ್ಲ, ಸಣ್ಣಪುಟ್ಟ ಆಸೆಗಳ ಆತ್ಮಚರಿತ್ರೆ ಮತ್ತು ವೃತ್ತಿ ವಿಲಾಸ ಇದರ ಮೊದಲ ಮೂರು ಭಾಗಗಳು.ಮೂರು ಇವರ ತಾಯಿ–ತಂದೆ ವಾಸಮಾಡಿದ ಬಾಡಿಗೆಮನೆಗಳು, ಲೇಖಕರು ಆದಾಯ ತೆರಿಗೆ ಅಧಿಕಾರಿಯಾಗಿ ದೇಶದ ಹಲವೆಡೆ ವಾಸ ಮಾಡಿದ ಬಾಡಿಗೆ ಮನೆಗಳ ಚಿತ್ರಣ ಇಲ್ಲಿದೆ. ಸ್ವತಃ ಮನೆಯ ಮಾಲೀಕರಾದಾಗಿನ ಅನುಭವವೂ ಅನಾವರಣಗೊಂಡಿದೆ. ಮನುಷ್ಯ ಬೇರುಗಳ ಮಾತ್ರವಲ್ಲದೇ ಕೊಂಬೆಗಳ ಬಗ್ಗೆ ಯೋಚಿಸುವುದರಿಂದ ಮಗನ ಮನೆಯ ಬಗ್ಗೆಯೂ ಬರೆದಿದ್ದಾರೆ. ಬಾಡಿಗೆ ಮನೆಗಳ ಆಕಾರ, ವಿನ್ಯಾಸಗಳ ಬಗ್ಗೆ ಮಾತ್ರ ಬರೆದಿದ್ದಾರೆ ಎಂದು ಓದುಗರ ನಿರೀಕ್ಷೆ ಇದ್ದರೆ, ಓದುತ್ತಾ ಹೋಗಿ, ನಿಮ್ಮ ಮುಂದೆ ಲೇಖಕರು ಕಂಡು ಅನುಭವಿಸಿದ, ಕಲ್ಪಿಸಿದ ಒಂದು ಕಾಲಘಟ್ಟದ ಸಮಾಜದ ಚರಿತ್ರೆಯೇ ತೆರೆದುಕೊಳ್ಳುತ್ತದೆ. ಅವರೇ ಹೇಳುವಂತೆ "ನೆನಪುಗಳೆಂದರೆ ಏನು? ಕಂಡದ್ದ, ಕೇಳಿಸಿಕೊಂಡದ್ದ ಇಲ್ಲ ಕನವರಿಸಿದ್ದ? ಅದೆಲ್ಲದರ ಅನುಭವ ಓದುಗರಿಗಾಗುತ್ತದೆ. ಈ ರಾಜಚರಿತ್ರೆ ಬರೆಯುವ ಮೊದಲು ವಿ.ಎಸ್ ನೈಪಾಲರ ಂ ಊಂಣಾಜ ಜಿಂಡಿ ಒಡಿ.ಫಿತಿಭಿ ಮತ್ತು ಮಾರ್ಕೆಜ್‌ನ ಖುತುಟಿಂ ಣಂ ಖಿಜಟಟ ಚಿ ಖಿಚಿಟಜ ಕೃತಿಗಳನ್ನು ಮತ್ತೊಮ್ಮೆ ಓದಿದ್ದಾಗಿ ಹೇಳುತ್ತಾರೆ.

ಲೇಖಕರು ಸ್ವತಃ ವಾಸ ಮಾಡಿದ ಮನೆಗಳಲ್ಲದೆ ಇವರ ಹಿರಿಯರು ಒಂದು ಶತಮಾನದಿಂದ ವಾಸಮಾಡಿದ ಮನೆಗಳು ಇವರ ಭಾವಕೋಶದಲ್ಲಿ ಪ್ರವೇಶ ಪಡೆದಿರುವುದರಿಂದ ಆ ಮನೆಗಳ ಬಗ್ಗೆಯೂ ಬರೆದಿದ್ದಾರೆ. ಲೇಖಕರು ಹುಟ್ಟುವಾಗ ಅವರ ತಂದೆ ಪ್ಯಾಲೇಸ್ ಗುಟ್ಟಹಳ್ಳಿಯ ಒಂದು ವಠಾರದಲ್ಲಿದ್ದರಂತೆ. ಅಲ್ಲಿಂದ ಬಾಡಿಗೆಮನೆಗಳ ರಾಜಚರಿತ್ರೆ ಪ್ರಾರಂಭವಾಗುತ್ತದೆ. ಬಾಡಿಗೆ ಮನೆಗಳನ್ನು ಖಾಲಿ ಮಾಡುವಾಗ, ಬೇರೆ ಮನೆಗೆ ಹೋಗುವಾಗ ತಮಗೆ ಯಾವುದೇ ರೀತಿಯ ಉದ್ವೇಗ ಮೂಡಲಿಲ್ಲ, ಆದರೆ ಕಾಲಾನುಕ್ರಮದಲ್ಲಿ ಈ ಮನೆಗಳ ಬಗ್ಗೆ ಒಂದು ಮನೋಧರ್ಮ ರೂಪುಗೊಂಡಿತು ಎನ್ನುತ್ತಾರೆ. ಒಂದು ಮನೆಯೊಡನೆ ಭಾವನಾತ್ಮಕ ಸಂಬಂಧ ಉಂಟಾಗಬೇಕಾದರೆ ನಾವು ಮಾತ್ರವಲ್ಲ, ನಮ್ಮ ಹಿಂದಿನ ತಲೆಮಾರಿನವರೂ ಅಲ್ಲಿ ವಾಸಿಸಿರಬೇಕು, ಅಲ್ಲಿ ಹೆರಿಗೆ, ಮರಣ, ಮದುವೆ ಇವೆಲ್ಲ ಜರುಗಿರಬೇಕು, ಅಲ್ಲಿರುವ ಪ್ರತಿಯೊಂದು ವಸ್ತುಗಳ ಚರಿತ್ರೆಯೂ ಸೇರಿಕೊಂಡಿರುತ್ತದೆ. ಮನೆಯೆಂದರೆ ಅಲ್ಲಿ ನಡೆದ ಸಂಗತಿಗಳು ನೆನಪಾಗುತ್ತವೆ. ಇದರಲ್ಲಿ ಯಾರೋ ಮೂರನೆಯವರು ಹೇಳುವಂತೆ ಲೇಖಕರು ಹೇಳಿದ ಪ್ರಸಂಗವೊಂದಿದೆ. ತಾವು ಚಿಕ್ಕ ಮಗುವಾಗಿದ್ದಾಗ ಲಾಲ್‌ಬಾಗ್‌ಗೆ ಹೋಗಿದ್ದಾಗ ಲೇಖಕರ ಕತ್ತಿಗೆ ಹಾಕಿದ್ದ ಚಿನ್ನದ ಸರ ಕಳೆದು ಹೋಯಿತಂತೆ. "ಆ ಕಾಲದಲ್ಲಿ ಮದುವೆಯಾದ ಎಂಟು ಹತ್ತು ವರ್ಷಗಳಾದರೂ ದಾಂಪತ್ಯ ಕಚ್ಚಿಕೊಂಡಿತು ಎಂದು ಹೇಳುವ ಹಾಗಿರಲಿಲ್ಲವಂತೆ. ಯಾವ ಕಾರಣಕ್ಕಾದರೂ ಸರಿ ಗಂಡ, ಗಂಡನ ಮನೆಯವರು ಹೆಣ್ಣುಮಕ್ಕಳನ್ನು ವಾಪಸ್ ಕಳುಹಿಸಿಬಿಡುತ್ತಿದ್ದರಂತೆ". ಹೀಗಾಗಿ ಅವರ ಅಜ್ಜಿ ಮತ್ತು ತಾಯಿ ಚಿನ್ನದ ಸರ ಕಳೆದುಹೋದ ಬಗ್ಗೆ ನಡುಗಿಹೋಗಿದ್ದರಂತೆ. ಅವರ ತಂದೆಗೆ ಗೊತ್ತಾದಂತೆ ಮನೆಯಲ್ಲಿದ್ದ ಸಣ್ಣಪುಟ್ಟ ಆಭರಣಗಳನ್ನೇ ಕರಗಿಸಿ ಹೊಸ ಸರ ಮಾಡಿಸಿದರಂತೆ.

ಅವರ ತಂದೆಗೆ ಮದ್ದೂರು ತಾಲ್ಲೂಕು ಕೊಪ್ಪದಲ್ಲಿ ಒಂದು ಮನೆಯಿತ್ತು. ಆದರೆ ಚಿಕ್ಕಂದಿನಲ್ಲೇ ತಂದೆಯನ್ನು ಕಳೆದುಕೊಂಡು ದಾಯಾದಿಗಳ ಮಧ್ಯೆ ಬದುಕಿದ ಅವರ ತಂದೆಗೆ ಮನೆಯ ಬಗ್ಗೆ ಯಾವ ಭಾವನೆಗಳೂ ಇರಲಿಲ್ಲವೆನ್ನುತ್ತಾರೆ. ತಾವು ಬಾಲ್ಯದಲ್ಲಿ ಅಲ್ಲಿಗೆ ಹೋಗುತ್ತಿದ್ದಾಗ ತಮ್ಮ ಅಜ್ಜ ತಮ್ಮ ಪಾಡಿಗೆ ತಾವು ಮಾತಾಡಿಕೊಂಡಿರುತ್ತಿದ್ದುದನ್ನು ನೆನಪಿಸಿಕೊಂಡು ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಇತಿಹಾಸವನ್ನೂ, ವರ್ತಮಾನವನ್ನು ಅಭಿನಯಿಸುತ್ತಾ, ಕಾಲವನ್ನೂ ತಾನೇ ರೂಪಿಸಿಕೊಂಡು ಕಟ್ಟಿಕೊಳ್ಳುತ್ತಾನೆಂಬುದು ತಮ್ಮ ಅರಿವಿಗೆ ಬಂದಿತು ಎನ್ನುತ್ತಾರೆ. ಅವರ ತಾಯಿಯ ಮನೆ ಬದಲಿಸುವ ಪ್ರವೃತ್ತಿಯಿಂದಾಗಿ ಒಂದೇ ಊರಿನಲ್ಲೇ ಮೂರು–ನಾಲ್ಕು ಮನೆಗಳನ್ನು ಬದಲಾಯಿಸಿದ್ದಾಗಿ ಹೀಗೆ ಮನೆ ನೋಡುತ್ತಿರುವಾಗ ಗುತ್ತಲಿನಲ್ಲಿ ಒಂದು ಮನೆ ಇಷ್ಟವಾಗಿ, ಅಲ್ಲಿಗೆ ಹೋಗಲಾಗದಿದ್ದರೂ ಆ ಮನೆಯಲ್ಲಿ ಕಾಲ್ಪನಿಕವಾಗಿ ವಾಸ ಮಾಡಿದ್ದರಂತೆ!

ಹಿಂದಿನ ನೆನಪುಗಳ ಕ್ಷಣವನ್ನು ಈಗ ಅನುಭವಿಸಿದಂತೆ ಹಾಗೂ ಈಗಲೇ ನಡೆಯುತ್ತಿರುವಂತೆ ಕಲ್ಪಿಸಿಕೊಂಡು ಬರೆದಿದ್ದಾರೆ. ದಾವಣಗೆರೆಯಲ್ಲಿ ಪ್ರಸಿದ್ಧ ಕಾದಂಬರಿ, ಚಲನಚಿತ್ರಕ್ಕೆ ವಸ್ತುವಾಗಿದ್ದ ಮಂಡಿ ಸಾಹುಕಾರರ ಪ್ರೇಯಸಿಯೋ, ಪತ್ನಿಯೋ ಆಗಿದ್ದ ರಂಗನಾಯಕಿಯ ಮನೆ ನೋಡಲು ತಾವು ಹೋಗಿ, ನೋಡಿ ಆ ಮನೆಯಿಂದ ಹೊರಬಂದಾಗ, ದೂರದಲ್ಲಿ ಮಂಡಿ ಸಾಹುಕಾರರು ಏದುಸಿರು ಬಿಡುತ್ತಾ ಬರುತ್ತಿರುವುದನ್ನೂ, ಬಿಚ್ಚಿದ್ದ ಕೂದಲನ್ನು ಗಂಟು ಹಾಕಿಕೊಳ್ಳುತ್ತಾ ರಂಗನಾಯಕಿ ಮಹಡಿಯಿಂದ ಇಳಿದು ಬಂದು ಪ್ರತೀಕ್ಷೆ ಮಾಡುತ್ತಿರುವುದನ್ನೂ ನೋಡಿದರಂತೆ!

ಅವರಾಗಲೀ ಅವರ ಕುಟುಂಬದವರಾಗಲೀ ಯಾವುದೇ ತಪ್ಪು–ಪಾಪ ಮಾಡದೇ ಇದ್ದರೂ, ಪೂಜೆ, ತೀರ್ಥಯಾತ್ರೆ ಮಾಡಿದ್ದರೂ, ಡಾಕ್ಟರುಗಳಿಗೆ ತೋರಿಸಿ ಚಿಕಿತ್ಸೆ ಕೊಡಿಸಿದ್ದರೂ ತಮ್ಮ ತಾಯಿ ಹದಿನೈದು–ಇಪ್ಪತ್ತೈದು ವರ್ಷಗಳಿಂದ ಅಸ್ತಮಾ ರೋಗದಿಂದ ಬಳಲಿದ್ದಾಗಿ ಬರೆದಿದ್ದು ಅವರದೇ ಮಾತುಗಳೋ ಅಥವಾ ನಮ್ಮ ಸಮಾಜ ಸಾಮಾನ್ಯವಾಗಿ ಹೇಗೆ ಹೇಳಬಹುದೋ ಎಂಬಂತೆ ಹೇಳಿದ್ದಾರೆಯೇ?

ಎಷ್ಟೇ ಕಾರ್ಯದೊತ್ತಡವಿದ್ದರೂ ಕಥೆ, ಕಾದಂಬರಿಗಳನ್ನು ಬರೆಯುತ್ತಿದ್ದುದಾಗಿಯೂ, ಇದು ಕೆಲಸದ ಒತ್ತಡವನ್ನು ನಿವಾರಿಸಿಕೊಳ್ಳಲು ಸಹಾಯವಾಗುತ್ತಿತ್ತು ಎನ್ನುತ್ತಾರೆ. ತಾಯಿ–ತಂದೆಯವರೊಡನೆ ಕಳೆದ ಬಾಲ್ಯದ ಬಾಡಿಗೆ ಮನೆಗಳ ಕಥನ ಆಪ್ತವಾಗಿದ್ದು, ಇವೆಲ್ಲಾ ನಮ್ಮದೇ ಕಥೆ ಎಂದು ಅನಿಸುತ್ತದೆ.

–ಕೆ. ಪದ್ಮಾಕ್ಷಿ

ಪು: **ಮದರಂಗಿ ವೃತ್ತಾಂತ** (೧೯೭೨ರಿಂದ ೨೦೧೦ರವರೆಗಿನ ಸಮಗ್ರ ಕಾವ್ಯ) ಲೇ: **ಎಚ್.ಎಲ್. ಪುಷ್ಪ** ಪ್ರ: **ಕಿರಂ ಪ್ರಕಾಶನ**, ಬೆಂಗಳೂರು (೯೮೪೪೪೬೭೩೫೧) ಪು: ೩೩೬ ಬೆ: ರೂ.೩೦೦/-

ಸಾಮಾಜಿಕ ಕಾಳಜಿಗಳ ವೈವಿಧ್ಯಮಯ ಕಾವ್ಯ



ಕನ್ನಡದ ಮುಖ್ಯ ಕವಯತ್ರಿಯರಲ್ಲೊಬ್ಬರಾದ ಎಚ್ ಎಲ್ ಪುಷ್ಪ ಅವರ ಈವರೆಗಿನ ನಾಲ್ಕು ಕವನ ಸಂಕಲನಗಳಾದ 'ಅಮೃತಮತಿಯ ಸ್ವಗತ', 'ಗಾಜುಗೋಳ', 'ಲೋಹದ ಕಣ್ಣು' ಮತ್ತು 'ಸೋಲಬರಸ್ ಹುಡುಗರು ಹಾಗೂ ಎಕ್ಕದ ಬೀಜ' ಸೇರಿರುವ ಸಮಗ್ರ ಕಾವ್ಯ ಇದು. ವರ್ತಮಾನದ ತಲ್ಲಣಗಳಿಗೆ ಸಂವೇದನಾಪೂರ್ಣ ಪ್ರತಿಕ್ರಿಯೆಯನ್ನು ಅಮೃತಮತಿಯ ರೂಪಕದ ಮೂಲಕ ಆಧುನಿಕ ಸ್ತ್ರೀಸಂವೇದನೆಯ ಕವಿತೆ ಬರೆದು ತಮ್ಮ ವೈಶಿಷ್ಟ್ಯವನ್ನು ಸ್ಥಾಪಿಸಿದ್ದವರು ಪುಷ್ಪ. 'ಅಮೃತಮತಿಯ ಸ್ವಗತ', 'ಆಕೆ ಅವನು ಮತ್ತು ನದಿ', 'ಪ್ರೇಮ ಸಿದ್ಧಾಂತಗಳು' ಮತ್ತು 'ಮದರಂಗಿ ವೃತ್ತಾಂತ' ಎಂಬ ಕವಿತೆಗಳನ್ನು ಪುಷ್ಪ ಅವರ ಮೊದಲ ಸಂಕಲನದ ಪ್ರಾತಿನಿಧಿಕ ಕವನಗಳಾಗಿ ನೋಡಬಹುದು. 'ಪ್ರೇಮ ಸಿದ್ಧಾಂತಗಳ'' ಕವಿತೆಯಲ್ಲಿ ಹೆಣ್ಣನ್ನು ಅವಳ ಸಂಗಾತಿ ಸದಾ ಕುಡಿದ ಸ್ಥಿತಿಯಲ್ಲಿ ನೋಡಬಯಸುತ್ತಾನೆ. ಅವಳಿಗೆ ಯೋಚಿಸುವ ಶಕ್ತಿಯ ಅಗತ್ಯವಿಲ್ಲ. ವಾಸ್ತವದ ಎಚ್ಚರ ಅಗತ್ಯವಿಲ್ಲ.ಅವನ ಅಗತ್ಯಕ್ಕೆ ತಕ್ಕಂತಿದ್ದರೆ ಸಾಕು. ಅವನ ನಿರೀಕ್ಷೆಗಳನ್ನು ಹೇಳುತ್ತಲೇ ಕವಿತೆ ಅವಳ ಆಸೆಗಳನ್ನೂ

ಸೂಚಿಸುವುದರಿಂದ ಕವಿತೆಗೆ ಹಲವು ಆಯಾಮಗಳು ಲಭಿಸಿವೆ.

ಈ ಸಮಗ್ರಕಾವ್ಯ ಸಂಕಲನದ ಶೀರ್ಷಿಕೆಯ ಕವಿತೆ 'ಮದರಂಗಿ ವೃತ್ತಾಂತ' 'ಅಮೃತಮತಿಯ ಸ್ವಗತ'ದ ಒಂದು ಮುಖ್ಯ ಕವಿತೆ. ಹೆಣ್ಣನ್ನು ದೇಹವಾಗಿಯೇ ನೋಡುವ ಗಂಡು ಸಮಾಜ ಕುರಿತ ಸಿಟ್ಟು ವ್ಯಂಗ್ಯ ಇಲ್ಲಿ ವೃತ್ತಾಂತವಾಗಿವೆ. ಇದು ಒಂದು ರೀತಿಯಲ್ಲಿ ಪುಷ್ಪ ಅವರ ಕಾವ್ಯ ವಸ್ತುವಿನ ಪ್ರತಿನಿಧಿಯಾಗಿದೆ. ಹೆಣ್ಣಿನ ಒಳಲೋಕದ ತಳಮಳಗಳು ,ತಲ್ಲಣಗಳು ಇತಿಹಾಸ,ಪುರಾಣಗಳ ಸ್ತ್ರೀ ಪ್ರತಿಮೆಯ ಮೂಲಕ ಇಲ್ಲಿ ಕವಿತೆಗಳಾಗಿವೆ. 'ಕಲ್ಲಾಗುವ ಹುಡುಗಿಯ ಹಾಡು' ಹೀಗೆ ಎಲ್ಲ ಹುಡುಗಿಯರ ಪಾಡನ್ನು ಹೇಳುವ ಕವಿತೆಯಾಗುತ್ತದೆ 'ಅಹಲ್ಯೆಯ ಕಥೆ'. 'ದ್ರೋಪ್ದಿ ಹಾಗೂ ಹೆಜ್ಜೆಗಳು' ಮಹಾಶ್ವೇತಾದೇವಿಯವರ ಕಥೆಯ ಆಶಯ ಕವಿತೆಯಾಗಿದೆ.

'ಲೋಹದ ಕಣ್ಣು' ಸಂಕಲನದ ಮುನ್ನುಡಿಯಲ್ಲಿ ಮೊದಲ ಎರಡು ಸಂಕಲನಕ್ಕಿಂತ ಭಿನ್ನವಾದ ಕವಿತೆಗಳಿರುವುದನ್ನು ವಿಮರ್ಶಕ ಜಿ ಎಸ್ ಆಮೂರ ಗುರುತಿಸುತ್ತಾ, 'ಇಲ್ಲಿಯ ಮಹತ್ವದ ಕವಿತೆಗಳ ಆಧ್ಯಾತ್ಮಿಕ ಗುಣ, ಅಡಿಗರ ನಂತರದ ಕವಿಗಳಲ್ಲಿ ಎಚ್. ಎಸ್. ಶಿವಪ್ರಕಾಶ್‌ರನ್ನು ಬಿಟ್ಟರೆ ಕಾಣಿಸಿಕೊಂಡಿರುವುದು ಅಪರೂಪ' ಎಂದಿದ್ದಾರೆ.

'ದಾರಿ ಕಳೆದುಕೊಂಡಿದೆ ಕವಿತೆ'ಯಲ್ಲಿ ಕವಿತೆಯ ಪೂರ್ವಾಪರಗಳನ್ನು ಶೋಧಿಸುವ ಆಶಯವಿದೆ :**ದಾರಿ ಕಳೆದುಕೊಂಡಿದೆ ಈ ನನ್ನ ಕವಿತೆ/ಹೊದಿಸಿದ್ದಾರೆ ಮುಸುಕು ಆ ಗವಾಕ್ಷಿಗೆ/ಕಳೆದುಹೊದ ಕೀ ಸಿಗುವ ತನಾ/ತಳಮಳಿಸುತ್ತಿದೆ ಗಾಳಿ, ಬೆಳಕಿಲ್ಲದೆ/ ದಾರಿತಪ್ಪಿಸಿಕೊಂಡ ದಾರಿಹೋಕನಂತೆ...** ಈ ಹುಡುಕಾಟ, ಅನ್ವೇಷಣೆ ಪುಷ್ಪ ಅವರ ಹಲವು ಕವಿತೆಗಳಲ್ಲಿದೆ.

ಈ ಸಮಗ್ರ ಸಂಪುಟವನ್ನು ಅವಲೋಕಿಸಿದಾಗ ನಮ್ಮ ಅರಿವಿಗೆ ಬರುವ ಒಂದು ಸಂಗತಿ ಎಂದರೆ ತಮ್ಮ ಮೊದಲ ಮೂರು ಸಂಕಲನಗಳಿಗೆ ಹೋಲಿಸಿದರೆ ಅವರ ನಾಲ್ಕನೇ ಸಂಕಲನ ;'ಸೋಲಬರಸ್ ಹಾಗೂ ಎಕ್ಕದ ಬೀಜ' ಸಂಕಲನದಲ್ಲಿ ಬೇರೆಯದೇ ರೀತಿಯ ಅಭಿವ್ಯಕ್ತಿ ಸಾಧಿಸಿದ್ದಾರೆ. ಪುಷ್ಪ ಅವರ ಸಾಮಾಜಿಕ ಚಿಂತನೆ ಇಲ್ಲಿನ ಹೆಚ್ಚಿನ ಕವಿತೆಗಳ ವಸ್ತು. ಸೋಲಬರಸ್ ಹುಡುಗರ ಹಾಡು ಕಾಶ್ಮೀರದ ಅತಂತ್ರ ಸ್ಥಿತಿಯಲ್ಲಿರುವ ಯುವಕರ ಕುರಿತಾಗಿದೆ : **ಕಾಶ್ಮೀರದ ಮಂಜುಹೊದ್ದ ಕಣಿವೆಗಳಲ್ಲಿ/ಪೆಂಗ್ವಿನ್‌ಗಳಂತೆ ಹರಿದಾಡುತ್ತಿದ್ದಾರೆ/ ಹೊಟ್ಟೆಯ ಮೇಲೆ ಕಾಗಡಾ ಹೊತ್ತು / ಬೇತಾಳದ ನಿಲುವಂಗಿಗಳಲ್ಲಿ ತೋಳು ಬೀಸುತ್ತಾ ಬಸಿರ ಬೇನೆಯಲಿ ಮುದುಕರೂ ಮುದುಕಿಯರೂ/ಮುಟ್ಟಿದರೆ ಮಾಸುವ ಸೇಬುಗಲ್ಲದ ಹುಡುಗರು....**

ಈ ಮುಗ್ಧರು ಭಯೋತ್ಪಾದಕರೆಂಬ ಹಣೆಪಟ್ಟಿ ಧರಿಸಬೇಕಾದ ಸನ್ನಿವೇಷ .ಇಡೀ ಪರಿಸರ ಕೊಳೆತ ಸೇಬುಗಳು ಮುದುಡಿದ ಕೇಸರಿ ಹೂಗಳ ನಡುವೆ, ಈ ಭವಿಷ್ಯದ ಕೂಸುಗಳು ಮುಷ್ಕರ ಕರ್ಫ್ಯೂ ಗುಂಡೇಟುಗಳ ನಡುವೆ ದಾರಿ ತಪ್ಪುತ್ತಿವೆ ಎಂಬುದನ್ನು ಕವಯತ್ರಿ ಇಲ್ಲಿ ಸಮರ್ಥವಾಗಿ ಬಿಂಬಿಸಿದ್ದಾರೆ: **ಎಲ್ಲಿ ಬಿಡುಗಡೆಯ ನಡೆಯಿದೆಯೋ/ ಎಲ್ಲಿ ಸ್ವಾತಂತ್ರ್ಯದ ಚೆಂದದ ಗಾಳಿ ಬೀಸುತದೆಯೋ/ಎಲ್ಲಿ ಕೊಳೆಯದ ಸೇಬಿನ ರಾಶಿಗಳಿವೆಯೋ/ ಎಲ್ಲಿ ಕುಂಕುಮಕೇಸರದ ಪುಟ್ಟ ಹೂಗಳಿವೆಯೊ/ಅಲ್ಲಿ ಭಾರತದ ಮಕುಟಮಣಿಗಳಿದ್ದಾರೆ**

ಕವಿತೆ ಮುಂದುವರೆದು ಗಾಂಧಿಯ ಕನಸಿನ ಭಾರತ ಪುಟ ತೆರೆದು ಬಿಚ್ಚಿಕೊಳ್ಳುತ್ತದೆ. ಎಂಬ ಆಶಾವಾದ ಕವಿಯದು.

ಪುಷ್ಪ ತಮ್ಮ ಇನ್ನೊಂದು ಕವನ ''ಕವಿ ಮತ್ತು ಕಾವ್ಯ'ದಲ್ಲಿ **ಶತಮಾನಗಳಿಂದಲೂ/ ಕೇಳಿಬರುವ ಹಳೆಯ ಮಾತೆಂದರೆ/ದೇಶ ಹಲವಾದರೂ ಭಾಷೆ ಕೆಲವಾದರೂ/ ಒಳಗಿರುವ ಆತ್ಮವೊಂದೇ** ಎಂದು ತಮ್ಮ ಆಶಾವಾದವನ್ನು ವ್ಯಕ್ತಪಡಿಸುತ್ತಾರೆ.'ಮಂಡೇಲಾ ಎಂಬ ಯೂನಿವರ್ಸಿಟಿಗೆ', 'ಶಿವಾಪುರದ ಕಂಬಾರರಿಗೆ ನಮನ', 'ಎಚ್ ಎನ್ ಎಂಬ ನೆನಪಿಗೆ', 'ಮಲ್ಲಿಗೆಯ ಕವಿಯೊಂದಿಗೆ ಒಂದಷ್ಟು ಮಾತು', 'ಕ್ಲಿಯೋಪಾತ್ರಾಳ ಉತ್ಸವ ನೌಕೆ'ಯಂತಹ ವ್ಯಕ್ತಿವಿಚಾರ ಕೇಂದ್ರಿತ ಕವಿತೆಗಳೂ ಈ ಸಂಪುಟದಲ್ಲಿ ನಮ್ಮ ಗಮನ ಸೆಳೆಯುತ್ತವೆ.

ಇನ್ನೊಂದು ಗಮನ ಸೆಳೆವ ಕವಿತೆ 'ಆತ್ಮ ಕಥೆ': '**ಅವಳೇ ಹೊಕ್ಕ ಮನೆಯ ಬಾಗಿಲನು ಬಡಿದು/ ಹೊರಬರುವುದೆಂದರೆ ಲೋಗರ ಕಣ್ಣಲ್ಲಿ ನಿರ್ವಾಣವೇ/ ನಿರ್ಮೋಹವೇ ಅಥವಾ ನಿವೃತ್ತಿಯೇ?/ ತೊಗಲೆಂಬ ಸೂತ್ರದ ಬೊಂಬೆಯ ಮಣಿಸಿ ಆತ್ಮಕ್ಕೆ ಹುಲ್ಲು ತುಂಬುವ ಆಟ...**


ಈ ಸಂಪುಟದಲ್ಲಿ ತೆಲುಗು,ಸಿಂಧಿ,ಕೊಂಕಣಿ, ಸಂತಾಲಿ, ಮಣಿಪುರಿ ಭಾಷೆಗಳಿಂದ ಅನುವಾದಿಸಿದ ಆರು ಕವಿತೆಗಳೂ ಸೇರಿವೆ .

ಕವಯತ್ರಿ ಪುಷ್ಪ ಅವರ ಕಾವ್ಯದ ವಸ್ತು ವೈವಿಧ್ಯಮಯವಾಗಿದೆ, ಸಾಂಪ್ರದಾಯಿಕ ಕಾವ್ಯ ಭಾಷೆಯ ಲಯ, ಪ್ರಾಸಗಳನ್ನೆಲ್ಲ ಬದಿಗಿಟ್ಟು ತಮ್ಮದೇ ಆದ ಸಂಕೀರ್ಣ ಅಭಿವ್ಯಕ್ತಿ ಕ್ರಮವನ್ನು ಈ ಕವಿ ಸಾಧಿಸಿದ್ದಾರೆ. ಇದು ಪುಷ್ಪ ಅವರ ಈವರೆಗಿನ ಕಾವ್ಯ. ಅವರ ಕಾವ್ಯೆ ಹೀಗೆ ವೈವಿಧ್ಯಮಯವಾಗಿ ಬೆಳೆಯಲಿ ಎಂದು ಹಾರೈಸುವೆ.

–ಎಲ್.ಸಿ. ಸುಮಿತ್ರಾ

ಪು: **ಅಜ್ಞಾತನೊಬ್ಬನ ಆತ್ಮ ಚರಿತ್ರೆ**(ಕಾದಂಬರಿ) ಲೇ: **ಕೃಷ್ಣಮೂರ್ತಿ ಹನೂರು** ಪ್ರ: **ಅಭಿರುಚಿ**, ಮೈಸೂರು(೯೭೮೦೫೬೦೦೧೩) ಪು: ೨೩೨ ಬೆ: ರೂ.೨೦೦/-

ಚರಿತ್ರೆಯೊಂದಿಗೆ ಸಲ್ಲದ ಹುಡುಗಾಟಿಕೆ



೨೦೧೨ರಲ್ಲಿ ಮೊದಲು ಪ್ರಕಟವಾದ ಈ ಕೃತಿ ಈಗ ಏಳನೇ ಮುದ್ರಣ ಕಂಡಿದೆ. ನನ್ನ ಆಪ್ತ ಮಿತ್ರರಲ್ಲೊಬ್ಬರಾದ ಇದರ ಲೇಖಕ ಕೃಷ್ಣಮೂರ್ತೀ ಹನ ಇದರ ಮೊದಲ ಮುದ್ರಣಕ್ಕೆ ಮುನ್ನವೇ ನನಗೆ ಇದರ ಹಸ್ತಪ್ರತಿ ಕಳಿಸಿ ನನ್ನ ಅಭಿಪ್ರಾಯ ಕೇಳಿದ್ದರು. ಈ ಕೃತಿ ನನಗೆ ಇಷ್ಟವಾಗಿಲ್ಲವೆಂದು ನಾನು ಅವರಿಗೆ ಆಗ ತಿಳಿಸಿದ್ದೆ. ಆದರೆ ಈ ಕೃತಿ ಕಾರ್ನಾಡ್ ಮತ್ತು ಅನಂತಮೂರ್ತಿಯವರ ಬೆನ್ನುಡಿಗಳ ರೂಪದ ಅರ್ಹತಾ ಪತ್ರಗಳೊಂದಿಗೆ ಪ್ರಕಟವಾಗಿ ವಿಮರ್ಶಕ ಮತ್ತು ಓದುಗರಿಬ್ಬರ ವಲಯದಲ್ಲೂ ಜಯಭೇರಿ ಬಾರಿಸಿತು. ಇದರ ಸದರಿ ಏಳನೇ ಮುದ್ರಣವೇ ಇದಕ್ಕೆ ಸಾಕ್ಷಿ.

ಹನೂರರು ಮೊನ್ನೆ 'ಈಗ ಒಂದಿಷ್ಟು ಬದಲಾವಣೆ ಮತ್ತು ವಿಸ್ತರಣೆ ಮಾಡಿರುವೆ. ಈಗ ನಿಮಗೆ ಇಷ್ಟವಾಗಬಹುದು; ಓದಿ ನೋಡಿ' ಎಂದು ಈ ಏಳನೇ ಮುದ್ರಣವನ್ನು ನನಗೆ ಕಳಿಸಿದ್ದಾರೆ. ಕೃತಿಯ 'ಜಯಭೇರಿ'ಯ ಹಿನ್ನೆಲೆಯಲ್ಲಿ ಎರಡು ದಿನ ಪಟ್ಟಾಗಿ ಕೂತು ಓದಿದೆ. ಆದರೆ ನನ್ನ ಅಭಿಪ್ರಾಯ ಕಿಂಚಿತ್ತೂ ಬದಲಾಗಲಿಲ್ಲ. ಏಕೆಂದು ನನ್ನ ಹಳೆಯ ಅಭಿಪ್ರಾಯಗಳನ್ನೇ ಹೊಸದಾಗಿ ಹೇಳುವುದಾದದರೆ, ಈ ಕಥೆಯ ನಿರೂಪಕನ ವ್ಯಕ್ತಿತ್ವ ಮತ್ತು ಹಲವೆಡೆ ತಾನಿಲ್ಲದೆಡೆಯ ಕಥೆಯನ್ನು ಹೇಳುವ ಮೂಲಕ ಅನುಮಾನಾಸ್ಪದವೂ ಆಗಿರುವ ನಿರೂಪಣೆಯೇ ವಿಶ್ವಾಸಾರ್ಹವೆನಿಸುವುದಿಲ್ಲ. ಎರಡನೆಯ ತರಗತಿಯವರೆಗೆ ಓದಿರುವನೆಂದು ಹೇಳಲಾಗುವ ಕಥಾ ನಾಯಕನೂ ಆದ ಈ ನಿರೂಪಕ ಜೀವನಪೂರ್ತಿ ಲೇಖಕರ ಅಗತ್ಯಗಳ ಹೊರತಾಗಿ ಇನ್ನಾವ ಲಂಗು ಲಗಾಮು ಇಲ್ಲದ ವರ್ಣಾನಾತೀತ ಕ್ರೌರ್ಯ ಮತ್ತು ತೃಣ ಮಾತ್ರವೂ ವಿಚಾರವಿಲ್ಲದೆ ಭಂಡ ಬಾಳನ್ನು ನಡೆಸಿಕೊಂಡು ಬಂದವನಾಗಿ ತನ್ನ ಆತ್ಮ ಚರಿತ್ರೆಯನ್ನು–ಅದನ್ನು ಇನ್ನೊಬ್ಬರು ಹಸನುಗೊಳಿಸಿ ಪ್ರತಿ ಮಾಡಿದ್ದಾರೆಂಬ ತಂತ್ರ ಬಳಕೆಯ ಮತ್ತು ಕೊನೆಯಲ್ಲಿ ಕೃತಕವಾಗಿ ಸೇರಿಸಿದಂತಿರುವ ಅಧ್ಯಾತ್ಮಿಕ ಒಲವಿನ ಅಧ್ಯಾಯದ ಹೊರತಾಗಿಯೂ–ಬರೆಯುವ ದರ್ದು ಇರುವ ಯಾವ ಲಕ್ಷಣಗಳೂ ಈ ನಿರೂಪಣೆಯಲ್ಲಿ ಕಾಣುವುದಿಲ್ಲ.

ಇನ್ನು ಹೈದರ್–ಟಿಪ್ಪು ರಾಜ್ಯಭಾರದಲ್ಲಿ ಈ ಇಬ್ಬರಿಗೂ–ಕೆಲವೊಮ್ಮೆ ದಿವಾನ್ ಪೂರ್ಣಯ್ಯನವರಿಗೂ–ಆಪ್ತ ಸಲಹಾಕಾರನಂತೆ ಚಿತ್ರಿತವಾಗಿರುವ ಈ ಹೆಸರಿಲ್ಲದ ನಿರೂಪಕ ವ್ಯಕ್ತಿತ್ವದ ಹಿನ್ನೆಲೆಯನ್ನು ಲೇಖಕರು ಚಿತ್ರಿಸಿರುವ ಪರಿ ನೋಡಿದರೆ, ಈ ಹೈದರ್–ಟಿಪು–ಪೂರ್ಣಯ್ಯನವರ ಆಡಳಿತ ವೈಖರಿಯನ್ನು ಚರಿತ್ರೆ ನಮಗೆ ಹೇಳುವ ಸಂಗತಿಗೆ ವಿರುದ್ಧವಾಗಿ, ಹುಡುಗಾಟಿಕೆಯ ಮಟ್ಟಕ್ಕೆ ಇಳಿಸಿಬಿಟ್ಟಿದೆ ಎನಿಸದಿರದು. ಇವರ ರಾಜ್ಯಭಾರದಲ್ಲಿ ಎತ್ತಂದರತ್ತ ಕತ್ತಿ ಬೀಸಿ ನಡೆಸುವ ಕೊಲೆ, ಲೂಟಿ, ಹೆಣ್ಣು ಮಕ್ಕಳ ಅಪಹರಣ ಇತ್ಯಾದಿ ದುರ್ವ್ಯವಹಾರಗಳ ಹೊರತಾಗಿ ಇನ್ನೇನೂ ನಡದೇ ಇಲ್ಲವೇನೋ ಎಂಬ ಅಭಿಪ್ರಾಯ ಮೂಡುತ್ತದೆ. ಕಥಾ ನಡಿಗೆಯ ಈ ಎಕಪಕ್ಷೀತೆಯ ಕಾರಣಂದಿಂದ ಕಥೆಯಲ್ಲೇ ಹುಟ್ಟುವ ಅನೇಕ ಪ್ರಶ್ನೆಗಳು, ವಿಸಂಗತಿಗಳು ಉತ್ತರವಿಲ್ಲದೆ ಹಾಗೇ ಉಳಿದುಹೋಗುವುದು ಸಹಜ. ಇಂತಹವು ಇಲ್ಲಿ ಹಲವಿವೆ.

ಲೇಖಕರು ತಮ್ಮ ಮೊದಲ ಮಾತುಗಳಲ್ಲಿ ಹೈದರ್, ಟಿಪ್ಪು ಮತ್ತು ಶ್ರೀರಂಗಪಟ್ಟಗಳೆಂಬುವು ಇಲ್ಲಿ ನಿಮಿತ್ತ ಮಾತ್ರವೆಂದು ಹೇಳುವರಾದರೂ, ಇನ್ನೂ ಪೌರಾಣಿಕವಾಗದಿರುವ ಇತ್ತೀಚಿನ ಚರಿತ್ರೆಯ ಭಿತ್ತಿಯಲ್ಲೇ ತಮ್ಮ ಕಥೆಯನ್ನು ಸ್ಥಿತಗೊಳಿಸಿ ಈ ಮೂರಕ್ಕೂ ಬಹುಮುಖ್ಯ ಪಾತ್ರವಿರುವಂತೆ ಬರವಣಿಗೆಯನ್ನು ವಿನ್ಯಾಸಗೊಳಿಸಿರುವ ಲೇಖಕರು ಚರಿತ್ರೆಗೂ ಜವಾಬ್ದಾರರಾಗಿರಬೇಕಾಗುತ್ತದೆ. ಇಲ್ಲಿ ಕಾಣುವ ಅಪ್ಪಟ ಗಾಂವುಟಿ ಮಾತುಗಾರಿಕೆ ಮತ್ತು ಎಂತಹುದೇ ವೈವಿಧ್ಯಮಯ ಜಾನಪದ ಜ್ಞಾನದ ಪ್ರದರ್ಶನಗಳ ಮೂಲಕ ಯಾರೂ ಮರುಚರಿತ್ರೆ ಬರೆಯಲಾರರು; ಬರೆಯಲಾಗದು ಕೂಡ. ನಮ್ಮ ನಡುವೆ ಅಪಾರ ಜಾನಪದ ತಿಳುವಳಿಕೆಗೆ ಹೆಸರಾದ ಹನೂರರು ಇಲ್ಲಿ ಇಂತಹ ಪ್ರಯತ್ನ ಮಾಡಿದಂತಿದೆ. ಜೊತೆಗೆ ಅವರಿಗೆ ಪ್ರಿಯವಾದ ಅರಮನೆ ಎಂದರೆ ಲೂಟಿ, ಹಾದರ,ಬಡಜನರ ಶೋಷಣೆ, ಯುದ್ಧವೆಂಬ ಅದರ ಸಾರಾ ಸಗಟಾದ ನಂಬಿಕೆಯನ್ನಾಧರಿಸಿದ ಸರಳೀಕೃತ ಇತಿಹಾಶ ಮೀಮಾಂಸೆಯನ್ನು ಮಂಡಿಸಲು ಇದೊಂದು ವೇದಿಕೆಯೂ ಆದಂತಿದೆ. ಆದರೆ ಇಂತಹ ಸರಳ ಭಾವುಕತೆ ಜನಪ್ರಿಯ ಬರವಣಿಗೆಯ ಪಟ್ಟುಗಳನ್ನು ಸೃಷ್ಟಿಸಬಹುದೇ ಹೊರತು ಕಲಾಕೃತಿಯೊಂದನ್ನಲ್ಲ.

–ಡಿಸ್ಸೆನ್

Regd. Newspaper RNI No.KARKAN/2012/47568 Rgd. No. KA/SMG-1209/2019-21

"ಹೊಸ ಮನುಷ್ಯ" ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು

ಹಲ್‌ಕುಲ್ ಮುನಿಸ್ವಾಮಪ್ಪ ಮುನಿವೆಂಕಟಮ್ಮ ಧರ್ಮದತ್ತಿ (ರಿ)

- ಶ್ರೀ ರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರ
- ಶ್ರೀ ಶಾರದಾದೇವಿ ಪದವಿಪೂರ್ವ ಕಾಲೇಜು
- ಸ್ವಾಮಿ ವಿವೇಕಾನಂದ ಶೈಕ್ಷಣಿಕ ಅನುಸಂಧಾನ
- ರಾಷ್ಟ್ರಕವಿ ಕುವೆಂಪು ವಿಚಾರ ವೇದಿಕೆ, ಬೆಂಗಳೂರು
- ಮೆ।। ಎಂ. ಮುನಿಸ್ವಾಮಿ ಅಂಡ್ ಸನ್ಸ್, ಪ್ರಕಾಶಕರು ಮತ್ತು ವಿತರಕರು
- ಎಂ. ಚಂದ್ರಶೇಖರ್ ಪ್ರತಿಷ್ಠಾನ



ಗೊಟ್ಟಿಗೆರೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು - 83